ಭಾನುವಾರ, ನವೆಂಬರ್ 30, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 330 | ಪುಟ 20
www.prajavani.net prajavani.net prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ವಿಮಾನ ಹಾರಾಟ... ದೆಹಲಿಯಲ್ಲಿ ಸೂರ್ಯಾಸ್ತದ ಸಮಯದಲ್ಲಿ ವಿಮಾನವೊಂದು ಹಾರಿದ ದೃಶ್ಯ ಸೆರೆಯಾಗಿದ್ದು ಹೀಗೆ

ರಾಹುಲ್ ನಾಯಕತ್ವ ರಾಂಚಿಯಲ್ಲಿ ಭಾನುವಾರ ನಡೆಯಲಿರುವ ದಕ್ಷಿಣ ಆಫ್ರಿಕಾ ಎದುರಿನ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಭಾರತ ತಂಡವನ್ನು ಮುನ್ನಡೆಸಲಿರುವ ಕೆ.ಎಲ್.ರಾಹುಲ್

ವಿಮಾನಗಳ ಸೇವೆಯಲ್ಲಿ ವ್ಯತ್ಯಯ 8
ಫಲಿತಾಂಶ ಹೆಚ್ಚಿಸುವ ಶಿಕ್ಷಕರಿಗೆ ಪ್ರೋತ್ಸಾಹ ಧನ 7

ಖಾಲಿಯಿವೆ ಬಿ.ಇ ಸೀಟು!

ಕಾಮೆಡ್‌-ಕೆ ಕೋಟಾದ ಸೀಟು ವಿವರ				
150	26,848	8,090	18,758	49
ಕಾಮೆಡ್‌-ಕೆ ಅಡಿ ಬರುವ ಕಾಲೇಜುಗಳು	ಕಾಮೆಡ್‌-ಕೆ ಕೋಟಾ ಸೀಟುಗಳು	ಭರ್ತಿಯಾದ ಸೀಟುಗಳು	ಖಾಲಿ ಇರುವ ಸೀಟುಗಳು	ಸೀಟುಗಳು ಉಳಿದಿರುವ ಕಾಲೇಜುಗಳು

ಖಾಸಗಿ ವಿಶ್ವವಿದ್ಯಾಲಯಗಳಲ್ಲಿ ಹೆಚ್ಚುತ್ತಲೇ ಇದೆ ಎಂಜಿನಿಯರಿಂಗ್ ಸೀಟುಗಳ ಸಂಖ್ಯೆ

ಒಳನೋಟ

• ಎ.ಎಂ.ಸುರೇಶ

ಬೆಂಗಳೂರು: ಯುವ ಸಮೂಹವನ್ನು ಸೂಜಿಗಲ್ಲಿನಂತೆ ಸೆಳೆಯುತ್ತಿರುವ ಎಂಜಿನಿಯರಿಂಗ್ ಶಿಕ್ಷಣ ಈಗ ಕವಲು ಹಾದಿಯಲ್ಲಿದೆ. ಒಂದೆಡೆ ಪ್ರತಿ ವರ್ಷ ಶುಲ್ಕ ಏರುತ್ತಿದ್ದರೆ, ಮತ್ತೊಂದೆಡೆ ಖಾಲಿ ಉಳಿಯುವ ಸೀಟುಗಳ ಸಂಖ್ಯೆ ಹೆಚ್ಚಾಗುತ್ತಿದೆ. ಉದ್ಯೋಗ ಅವಕಾಶಗಳ ಸಂಖ್ಯೆಯೂ ಹೇಳಿಕೊಳ್ಳುವಂತಹ ಸ್ಥಿತಿಯಲ್ಲಿ ಇಲ್ಲ. ಹೀಗಾಗಿ ಇದು ಭವಿಷ್ಯದ ಬಗ್ಗೆ ಹಲವು ಪ್ರಶ್ನೆಗಳನ್ನು ಹುಟ್ಟು ಹಾಕಿದೆ.

ರಾಜ್ಯದಲ್ಲಿ ಒಟ್ಟು 229 ಎಂಜಿನಿಯರಿಂಗ್ ಕಾಲೇಜುಗಳು ಇದ್ದು, ಒಂದೂವರೆ ಲಕ್ಷಕ್ಕೂ ಅಧಿಕ ಸೀಟುಗಳು ಲಭ್ಯ ಇವೆ. ರಾಜ್ಯದ ವಿದ್ಯಾರ್ಥಿಗಳು ಅಷ್ಟೇ ಅಲ್ಲದೆ, ಹೊರ ರಾಜ್ಯದ ವಿದ್ಯಾರ್ಥಿಗಳಿಗೂ ಎಂಜಿನಿಯರಿಂಗ್ ಸೀಟುಗಳನ್ನು ಪಡೆಯಲು ಅವಕಾಶ ಇದೆ. ಇಷ್ಟಾದರೂ ಕೂಡ ಪೂರ್ಣ ಪ್ರಮಾಣದಲ್ಲಿ ಸೀಟುಗಳು ಭರ್ತಿ ಆಗುತ್ತಿಲ್ಲ.

ಸರ್ಕಾರ ಮತ್ತು ಖಾಸಗಿ ಅನುದಾನರಹಿತ ಎಂಜಿನಿಯರಿಂಗ್ ಕಾಲೇಜುಗಳ ಆಡಳಿತ ಮಂಡಳಿಗಳ ಒಕ್ಕೂಟದೊಂದಿಗೆ ನಡೆದ ಒಪ್ಪಂದದ ಪ್ರಕಾರ ಎಂಜಿನಿಯರಿಂಗ್‌ನಲ್ಲಿ ಶೇ 30ರಷ್ಟು ಸೀಟುಗಳನ್ನು ಕಾಮೆಡ್‌–ಕೆಗೆ ನೀಡಲಾಗಿತ್ತು. ಆ ಪ್ರಕಾರ ಈ ವರ್ಷ 26,848 ಸೀಟುಗಳನ್ನು ಕಾಮೆಡ್‌– ಕೆಗೆ ಹಂಚಿಕೆ ಮಾಡಲಾಗಿತ್ತು. ಆದರೆ, ಭರ್ತಿ ಆಗಿರುವುದು 8,090 ಸೀಟುಗಳು ಮಾತ್ರ. ಶೇ 70ರಷ್ಟು ಸೀಟುಗಳು ಖಾಲಿ ಉಳಿದಿವೆ.

ಎಐ ಚಿತ್ರ

> **ಎಲ್ಲಿ ಪ್ಲೇಸ್‌ಮೆಂಟ್ ಆಗುತ್ತೊ, ಅಂತಹ ಕಡೆ ಹೋಗುತ್ತಾರೆ. ಯಾವುದಕ್ಕೆ ಬೇಡಿಕೆ ಇದೆ, ಇಲ್ಲ ಎಂಬುದನ್ನು ಎಐಸಿಟಿಇ, ಉನ್ನತ ಶಿಕ್ಷಣ ಪರಿಷತ್ ಅಧ್ಯಯನ ಮಾಡಿ, ಅದಕ್ಕೆ ತಕ್ಕ ಹಾಗೆ ಸೀಟುಗಳ ಸಂಖ್ಯೆ ನಿಗದಿ ಮಾಡಬೇಕು**
> **ಕೆ.ಸಿ.ರಾಮಮೂರ್ತಿ,** ಅಧ್ಯಕ್ಷರು, ಸಿಎಂಆರ್ ಶಿಕ್ಷಣ ಸಂಸ್ಥೆಗಳ ಸಮೂಹ

ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಮೂಲಕ ಹಂಚಿಕೆಯಾಗುವ ಸರ್ಕಾರಿ ಕೋಟಾದ ಸೀಟುಗಳ ಸಂಖ್ಯೆಯೂ ಇದಕ್ಕೆ ಹೊರತಾಗಿಲ್ಲ. ಸರ್ಕಾರಿ ಕೋಟಾದಡಿ ಒಟ್ಟು 72,506 ಸೀಟುಗಳು ಲಭ್ಯವಿದ್ದವು. ಇಲ್ಲೂ ಕೂಡ ಸುಮಾರು 15 ಸಾವಿರ ಸೀಟುಗಳು ಖಾಲಿ ಉಳಿದಿವೆ. 4

‘ಸೀಟುಗಳ ಹಂಚಿಕೆ: ನಿಯಂತ್ರಣ ಇರಲಿ’

ಪ್ರತಿ ವರ್ಷ ಎಷ್ಟು ಮಂದಿ ಐಎಎಸ್, ಐಪಿಎಸ್, ಐಎಫ್‌ಎಸ್ ಅಧಿಕಾರಿಗಳ ಅಗತ್ಯವಿದೆ ಎಂಬ ಮಾಹಿತಿ ಸರ್ಕಾರಕ್ಕೆ ಇರುತ್ತದೆ. ಅದಕ್ಕೆ ಅನುಗುಣವಾಗಿ ನೇಮಕಾತಿ ನಡೆಯುತ್ತದೆ. ಅದೇ ರೀತಿ ದೇಶದಲ್ಲಿ ಎಷ್ಟು ಮಂದಿ ಎಂಜಿನಿಯರ್‌ಗಳ ಅಗತ್ಯವಿದೆ ಎಂಬುದನ್ನು ಲೆಕ್ಕಾಚಾರ ಮಾಡಿ, ಅದಕ್ಕೆ ತಕ್ಕಂತೆ ಸೀಟುಗಳನ್ನು ಮಂಜೂರು ಮಾಡಬೇಕು ಎಂಬುದು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ವಿಶ್ರಾಂತ ಕುಲಪತಿ ಪ್ರೊ.ಕರಿಸಿದ್ದಪ್ಪ ಅವರ ಅಭಿಪ್ರಾಯ.

ಖಾಸಗಿ ವಿಶ್ವವಿದ್ಯಾಲಯಗಳ ಮೇಲೆ ನಿಯಂತ್ರಣವೇ ಇಲ್ಲ, ಅವರು ಎಷ್ಟು ಸೀಟುಗಳನ್ನು ಬೇಕಾದರೂ ಹೆಚ್ಚಿಸಿಕೊಳ್ಳಬಹುದು. ಒಂದೇ ಬ್ರಾಂಚ್‌ನಲ್ಲಿ 1800 ಮಂದಿಗೆ ಪ್ರವೇಶ ನೀಡಿದರೆ, ಅವರಿಗೆ ಬೇಕಾದ ಪ್ರಯೋಗಾಲಯ, ಅಧ್ಯಾಪಕರನ್ನು ಎಲ್ಲಿಂದ ತರುವುದು? ಅಷ್ಟು ಜನಕ್ಕೆ ಗುಣಮಟ್ಟದ ಶಿಕ್ಷಣ ನೀಡಲು ಸಾಧ್ಯವೇ? ಅವರಿಗೆ ಕೆಲಸ ಸಿಗುತ್ತದೆಯೇ ಎಂಬುದನ್ನು ಸರ್ಕಾರ ಯೋಚಿಸಬೇಕು ಎನ್ನುತ್ತಾರೆ.

ಕೇಂದ್ರ ಸರ್ಕಾರ ಮತ್ತು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ಎಐಸಿಟಿಇ) ಸೀಟುಗಳ ಹೆಚ್ಚಳದ ಮೇಲೆ ನಿರ್ಬಂಧ ಹೇರಬೇಕು. ಅಲ್ಲದೆ ಎಂಜಿನಿಯರಿಂಗ್ ಶಿಕ್ಷಣವನ್ನು ಹೊಸ ದೃಷ್ಟಿಕೋನದಿಂದ ನೋಡಬೇಕು. ಮೊದಲ ಎರಡು ವರ್ಷ ಎಲ್ಲ ಬ್ರಾಂಚ್‌ಗಳ ವಿದ್ಯಾರ್ಥಿಗಳಿಗೆ ಒಂದೇ ರೀತಿಯ ಪಠ್ಯವಿರಬೇಕು. ಕೃತಕ ಬುದ್ಧಿಮತ್ತೆ, ಡೇಟಾ ಸೈನ್ಸ್, ರಸಾಯನ ವಿಜ್ಞಾನ, ಭೌತವಿಜ್ಞಾನ ಇತ್ಯಾದಿ ವಿಷಯಗಳನ್ನು ಎಲ್ಲರೂ ಕಲಿಯುವಂತಾಗಬೇಕು ಎಂಬುದು ಅವರ ಸಲಹೆ.

2028ರಲ್ಲಿ ಮತ್ತೆ ಕಾಂಗ್ರೆಸ್ ಅಧಿಕಾರಕ್ಕೆ ತರುವುದೇ ನಮ್ಮ ಗುರಿ: ಸಿ.ಎಂ, ಡಿಸಿಎಂ

ಹಿಡಿದ ಪಟ್ಟು ಬಿಟ್ಟು ಸದ್ಯ ಒಗ್ಗಟ್ಟು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಸರ್ಕಾರದ ‘ನಾಯಕತ್ವ’ಕ್ಕಾಗಿ ಗುದ್ದಾಟ, ‘ಕೊಟ್ಟ ಮಾತು’ ಕುರಿತ ವಾಗ್ವಾದಗಳಿಂದಾಗಿ ಕಾವೇರಿದ್ದ ರಾಜಕಾರಣ, ಶನಿವಾರ ತಿಳಿಗೊಂಡಿದೆ.

ಮುಖ್ಯಮಂತ್ರಿಯವರ ಅಧಿಕೃತ ಸರ್ಕಾರಿ ನಿವಾಸ ಕಾವೇರಿಯಲ್ಲಿ ಕಾಂಗ್ರೆಸ್ ಪಕ್ಷದ ವರಿಷ್ಠರ ಸೂಚನೆಯಂತೆ ಉಪಾಹಾರ ಕೂಟ ನಡೆಯಿತು. ಸಿದ್ದರಾಮಯ್ಯನವರೇ ಶಿವಕುಮಾರ್ ಅವರಿಗೆ ಅಧಿಕೃತ ಆಮಂತ್ರಣ ಕೊಟ್ಟಿದ್ದರು. ತಮ್ಮ ಮನೆಗೆ ಬರುತ್ತಿದ್ದಂತೆ, ಮನೆ ಬಾಗಲಿಗೆ ಬಂದ ಸಿದ್ದರಾಮಯ್ಯ ಅವರು ಶಿವಕುಮಾರ್ ಅವರನ್ನು ಬರಮಾಡಿಕೊಂಡರು.

ಉಪಾಹಾರ ಸವಿದ ಬಳಿಕ ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಉಭಯ ನಾಯಕರು ಒಗ್ಗಟ್ಟಿನ ಮಂತ್ರ ಪಠಿಸಿದರು. 2028ರಲ್ಲಿ ಮತ್ತೆ ಕಾಂಗ್ರೆಸ್ ಅಧಿಕಾರಕ್ಕೆ ತರುವುದೇ ತಮ್ಮ ಗುರಿ ಎಂದು ಸಾರಿದರು. ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಎರಡೂವರೆ ವರ್ಷ ಪೂರ್ಣಗೊಳಿಸುತ್ತಿದ್ದಂತೆ ‘ಅಧಿಕಾರ ಹಂಚಿಕೆಯ ಸೂತ್ರ’ದ ವಿಷಯ ಮುನ್ನೆಲೆಗೆ ಬಂದಿತ್ತು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಬಣ ಪಠಿಸುತ್ತಿದ್ದ ‘ನಾಯಕತ್ವ ಬದಲಾವಣೆ’ಯ ವಾಂಛೆಗೆ ಪ್ರತಿಯಾಗಿ ಸಂಪುಟ ಪುನರ್‌ರಚನೆಯ ಪ್ರತ್ಯಸ್ತ್ರವನ್ನು ಸಿದ್ದರಾಮಯ್ಯ ಬಣ ಬಿಟ್ಟಿತ್ತು. ಕೆಲವು ದಿನಗಳ ಬಳಿಕ, ಪುನರ್ ರಚನೆಯ ವಿಷಯವನ್ನು ಮುಖ್ಯಮಂತ್ರಿಯೇ ದೃಢಪಡಿಸಿದ್ದರು. ಪುನರ್‌ರಚನೆಯಾದರೆ ಅಧಿಕಾರ ಹಸ್ತಾಂತರ ನನೆಗುದಿಗೆ ಬಿದ್ದೀತು ಎಂದು ಲೆಕ್ಕ ಹಾಕಿದ ಶಿವಕುಮಾರ್ ಬಣದ ಶಾಸಕರು ದೆಹಲಿಗೆ ದೌಡಾಯಿಸಿದ್ದರು. ವರಿಷ್ಠರನ್ನು ಭೇಟಿ ಮಾಡುವ ಯತ್ನವನ್ನೂ ನಡೆಸಿದ್ದರು. ಆದರೆ, ಅದಕ್ಕೆ ದೊಡ್ಡಮಟ್ಟದ ಯಶಸ್ಸು ಸಿಕ್ಕಿರಲಿಲ್ಲ. ಈ ಎಲ್ಲ ಬೆಳವಣಿಗೆಯಿಂದಾಗಿ ಕಾಂಗ್ರೆಸ್‌ನಲ್ಲಿ ಅಂತರ್‌ಕಲಹ ಬಿಗಡಾಯಿಸಿತ್ತು. ಹೀಗಾಗಿ, 15 ದಿನ ಗಳಿಂದ ಕಾಂಗ್ರೆಸ್ ಪಕ್ಷ ಆಂತರಿಕ ಸಂಘರ್ಷವೇ ದೊಡ್ಡ ಸದ್ದು ಮಾಡಿತ್ತು. ಇಷ್ಟು ಸುದೀರ್ಘ ಅವಧಿ ಮೌನಕ್ಕೆ ಶರಣಾಗಿದ್ದ ಕಾಂಗ್ರೆಸ್ ಹೈಕಮಾಂಡ್, ದಿಢೀರನೇ ಮಧ್ಯ ಪ್ರವೇಶಿಸಿ ‘ಉಪಾಹಾರ ಕೂಟ’ ನಡೆಸಿ ಭಿನ್ನಮತ ಶಮನ ಮಾಡಿಕೊಳ್ಳಿ ಎಂದು ಉಭಯ ನಾಯಕರಿಗೂ ಸೂಚಿಸಿತ್ತು.

ಒಟ್ಟಿಗೆ ಸಾಗುವುದೇ ನಮ್ಮ ಒಪ್ಪಂದ: ಸಿದ್ದರಾಮಯ್ಯ

ಇಬ್ಬರೂ ಒಟ್ಟಿಗೆ ಸಾಗುವುದೇ ನಮ್ಮ ನಡುವೆ ಆಗಿರುವ ಒಪ್ಪಂದ. ಈ ಬಗ್ಗೆ ಹೈಕಮಾಂಡಿಗೆ ಮಾಹಿತಿ ನೀಡಲಾಗುವುದು. ಹೈಕಮಾಂಡ್ ಹೇಳಿದಂತೆ ನಾನು ಮತ್ತು ಡಿ.ಕೆ. ಶಿವಕುಮಾರ್ ನಡೆದುಕೊಳ್ಳಲು ತೀರ್ಮಾನಿಸಿದ್ದೇವೆ.

ಅಧಿವೇಶನ ಇರುವುದರಿಂದ ಗೊಂದಲಗಳನ್ನು ತಿಳಿಗೊಳಿಸುವಂತೆ ವರಿಷ್ಠರು ಇಬ್ಬರಿಗೂ ಸೂಚಿಸಿದ್ದಾರೆ. ನಾಳೆಯಿಂದ ಯಾವುದೇ ಗೊಂದಲ ಇರುವುದಿಲ್ಲ. ಈಗಲೂ ಇಲ್ಲ. ಆದರೆ, ಗೊಂದಲ ಸೃಷ್ಟಿಯಾಗಿದೆ. ಕೆಲವು ಮಾಧ್ಯಮಗಳು ಇದನ್ನು ಸೃಷ್ಟಿಸಿವೆ.

ನಮ್ಮಲ್ಲಿ ಯಾವುದೇ ಭಿನ್ನಾಭಿಪ್ರಾಯಗಳಿಲ್ಲ. ಈಗಲೂ ಇಲ್ಲ, ಮುಂದೆಯೂ ಇರುವುದಿಲ್ಲ. ಡಿ. 8ರಿಂದ ಬೆಳಗಾವಿಯಲ್ಲಿ ಅಧಿವೇಶನ ಆರಂಭವಾಗಲಿದೆ. ಅಪಪ್ರಚಾರ, ಸುಳ್ಳು ಆರೋಪ, ಅಪವಾದಗಳನ್ನು ಮಾಡುವುದು ಬಿಜೆಪಿ, ಜೆಡಿಎಸ್‌ನವರ ಚಾಳಿ. ಇವರಿಬ್ಬರನ್ನೂ ಸಮರ್ಥವಾಗಿ ಎದುರಿಸಲು ಅಗತ್ಯವಿರುವ ಕಾರ್ಯತಂತ್ರಗಳನ್ನು ರೂಪಿಸಿಕೊಂಡಿದ್ದೇವೆ. 9

ತಮ್ಮ ಮನೆಯಲ್ಲಿ ನಡೆದ ಉಪಾಹಾರ ಕೂಟದ ಬಳಿಕ ಶಿವಕುಮಾರ್ ಅವರನ್ನು ಬೀಳ್ಕೊಟ್ಟ ಸಿದ್ದರಾಮಯ್ಯ

ಇಬ್ಬರ ನಿಲುವು ಒಂದೇ ಡಿ.ಕೆ.ಶಿವಕುಮಾರ್

ನಾಯಕತ್ವದ ವಿಚಾರದಲ್ಲಿ ನನ್ನ ಮತ್ತು ಸಿದ್ದರಾಮಯ್ಯ ಅವರ ರಾಜಕೀಯ ನಿಲುವು ಒಂದೇ. ಪಕ್ಷದ ವರಿಷ್ಠರು ಹೇಳಿದಂತೆ ಇಬ್ಬರೂ ನಡೆಯುತ್ತೇವೆ. ಸಿದ್ದರಾಮಯ್ಯ ಅವರ ಮೊದಲ ಅವಧಿಯಲ್ಲಿ ಮೊದಲ ಆರು ತಿಂಗಳು ನನ್ನನ್ನು ಮಂತ್ರಿ ಮಾಡದೇ ಇದ್ದಾಗಲೂ ನಾನು ಒಂದೇ ಒಂದು ಮಾತು ಆಡಿರಲಿಲ್ಲ. ಒಟ್ಟಾಗಿ ಕೆಲಸ ಮಾಡುವ ನನ್ನ ನಿರ್ಧಾರ ಅಚಲ.

ರಾಜ್ಯದಲ್ಲಿ 2028ಕ್ಕೆ ಹಾಗೂ ರಾಷ್ಟ್ರ ಮಟ್ಟದಲ್ಲಿ 2029ರಲ್ಲಿ ಪಕ್ಷವನ್ನು ಮತ್ತೆ ಅಧಿಕಾರಕ್ಕೆ ತರುವುದೇ ನಮ್ಮ ಗುರಿ. ಇಷ್ಟು ದಿನ ಒಗ್ಗಟ್ಟಿನಿಂದ ಕೆಲಸ ಮಾಡಿಕೊಂಡು ಹೋಗುತ್ತಿದ್ದೇವೆ. ಮುಂದಿನ ಒಂದೆರಡು ದಿನಗಳಲ್ಲಿ ನನ್ನ ಮನೆಗೆ ಭೋಜನಕೂಟಕ್ಕೆ ಸಿದ್ದರಾಮಯ್ಯ ಬರಲಿದ್ದಾರೆ. ಕೊಟ್ಟ ಮಾತಿನಂತೆ ಜನರ ಸೇವೆ ಮಾಡುತ್ತಿದ್ದೇವೆ. ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಸರ್ಕಾರ ರಚನೆಯಾಗಿದ್ದು, ಹೈಕಮಾಂಡ್ ತೀರ್ಮಾನದಂತೆ ಕೆಲಸ ಮಾಡುತ್ತಿದ್ದೇವೆ. 9

72 ಭಯೋತ್ಪಾದಕ ಶಿಬಿರ ಸ್ಥಳಾಂತರ

ಜಮ್ಮು (ಪಿಟಿಐ): ಆಪರೇಷನ್ ಸಿಂಧೂರ 2.0 ಕಾರ್ಯಾಚರಣೆಗೆ ಭಾರತ ಸನ್ನದ್ಧವಾಗಿರುವ ಬೆನ್ನಲ್ಲೇ, ಪಾಕಿಸ್ತಾನವು ಗಡಿಭಾಗದಲ್ಲಿನ 72ಕ್ಕೂ ಹೆಚ್ಚು ಭಯೋತ್ಪಾದಕ ಶಿಬಿರಗಳನ್ನು ಸ್ಥಳಾಂತರಿಸಿದೆ ಎಂದು ಬಿಎಸ್‌ಎಫ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ವಿವರ ಪುಟ 9

‘ದಿತ್ವಾ’ ಅಬ್ಬರ: ಶ್ರೀಲಂಕಾ ತತ್ತರ

ಮೃತರ ಸಂಖ್ಯೆ 153ಕ್ಕೆ ಏರಿಕೆ • 20,000 ಮನೆಗಳಿಗೆ ಹಾನಿ

ಕೊಲಂಬೊ (ಪಿಟಿಐ/ಎಎಫ್‌ಪಿ): ‘ದಿತ್ವಾ’ ಚಂಡಮಾರುತದಿಂದ ತತ್ತರಿಸಿರುವ ದ್ವೀಪ ರಾಷ್ಟ್ರ ಶ್ರೀಲಂಕಾದಲ್ಲಿ, ಭಾರಿ ಮಳೆ ಮತ್ತು ಪ್ರವಾಹಕ್ಕೆ ಸಿಲುಕಿ ಮೃತಪಟ್ಟವರ ಸಂಖ್ಯೆ 153ಕ್ಕೆ ಏರಿಕೆಯಾಗಿದೆ. ಅಲ್ಲದೆ 191 ಮಂದಿ ಕಾಣೆಯಾಗಿದ್ದಾರೆ.

ಚಂಡಮಾರುತದಿಂದ ಸುಮಾರು 20,000ಕ್ಕೂ ಹೆಚ್ಚು ಮನೆಗಳು ಹಾನಿಗೊಳಗಾಗಿವೆ. 7.8 ಲಕ್ಷ ಜನರು ಬಾಧಿತರಾಗಿದ್ದಾರೆ. 1 ಲಕ್ಷಕ್ಕೂ ಹೆಚ್ಚು ಜನರಿಗೆ ಆಶ್ರಯ ತಾಣಗಳಲ್ಲಿ ನೆಲೆ ಕಲ್ಪಿಸಲಾಗಿದೆ. ದೇಶದಲ್ಲಿ ಮೂಲ ಸೌಕರ್ಯಕ್ಕೆ ದೊಡ್ಡ ಪ್ರಮಾಣದಲ್ಲಿ ಹಾನಿಯಾಗಿದೆ. ರಕ್ಷಣಾ ಕಾರ್ಯಾಚರಣೆ ಪ್ರಗತಿಯಲ್ಲಿದೆ ಎಂದು ವಿಪತ್ತು ನಿರ್ವಹಣಾ ಕೇಂದ್ರ (ಡಿಎಂಸಿ) ಹೇಳಿದೆ. 8

ಕೊಲಂಬೊ ಹೊರವಲಯದಲ್ಲಿ ಪ್ರವಾಹ ಪೀಡಿತ ಪ್ರದೇಶದಿಂದ ಜನರನ್ನು ಸುರಕ್ಷಿತ ಪ್ರದೇಶಕ್ಕೆ ದೋಣಿಗಳ ಮೂಲಕ ಶನಿವಾರ ಸ್ಥಳಾಂತರಿಸಲಾಯಿತು –ಎಎಫ್‌ಪಿ ಚಿತ್ರ

ತಮಿಳುನಾಡಿನತ್ತ ‘ದಿತ್ವಾ’ ಚಂಡಮಾರುತ

ಚೆನ್ನೈ (ಪಿಟಿಐ): ‘ದಿತ್ವಾ’ ಚಂಡಮಾರುತದ ಪ್ರಭಾವದಿಂದ ಶನಿವಾರ ತಮಿಳುನಾಡಿನ ಕರಾವಳಿ ಪ್ರದೇಶಗಳು ಮತ್ತು ಕಾವೇರಿ ನದಿ ಮುಖಜ ಭೂಮಿ ವ್ಯಾಪ್ತಿಯಲ್ಲಿ ಭಾರಿ ಗಾಳಿಯೊಂದಿಗೆ ಮಳೆಯಾಗಿದೆ. 8

ಪಹಣಿ ಜತೆಗೇ ಪೋಡಿ, ಮ್ಯುಟೇಶನ್ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಹಣಿ, ಆಕಾರಬಂದ್, ಪೋಡಿ ನಕ್ಷೆ, ಮ್ಯುಟೇಶನ್ ಹೀಗೆ ನಾಲ್ಕು ದಾಖಲೆಯನ್ನೂ ಒಂದೇ ಹಾಳೆಯಲ್ಲಿ ಒದಗಿಸುವ ವ್ಯವಸ್ಥೆ ಜಾರಿಗೊಳಿಸಲು ಕಂದಾಯ ಇಲಾಖೆ ಸಿದ್ಧತೆ ಮಾಡಿಕೊಂಡಿದೆ. ಈಗ ಪಹಣಿಗೆ ಶುಲ್ಕ ಪಾವತಿ ಮಾಡಿದರೆ, ಪಹಣಿಯಷ್ಟೇ ಸಿಗುತ್ತಿದೆ. ಸರ್ಕಾರದ ವಿವಿಧ ಕಾರ್ಯಕ್ರಮಗಳ ಪ್ರಯೋಜನ ಪಡೆದುಕೊಳ್ಳಲು ಮತ್ತು ಭೂ ವ್ಯವಹಾರಗಳಿಗೆ ಪೋಡಿ ನಕ್ಷೆ, ಆಕಾರಬಂದ್, ಮ್ಯುಟೇಶನ್ ದಾಖಲೆ ಅಗತ್ಯ. ಇವೆಲ್ಲವನ್ನೂ ಪ್ರತ್ಯೇಕವಾಗಿ ಪಡೆದುಕೊಳ್ಳಲು ಕಂದಾಯ ಇಲಾಖೆಯ ವಿವಿಧ ಕಚೇರಿಗಳಿಗೆ ಅಲೆಯಬೇಕಿದೆ. 6

ಏನೆಲ್ಲಾ ಅನುಕೂಲ...

- ಭೂಮಿಯ ವಿಸ್ತೀರ್ಣ, ಬೆಳೆ ಮಾಹಿತಿ, ಖರಾಬು ಭೂಮಿಯ ವಿವರ ಒಳಗೊಂಡ ಆಕಾರಬಂದ್ ಅನ್ನು ತಹಶೀಲ್ದಾರ್ ಕಚೇರಿಯಿಂದ ಪಡೆದುಕೊಳ್ಳುವುದು ತಪ್ಪಲಿದೆ
- ಭೂಮಿಯ ಮಾಲೀಕತ್ವ, ಖಾತೆ ವರ್ಗಾವಣೆ ವಿವರಗಳನ್ನು ಒಳಗೊಂಡ ಮ್ಯುಟೇಶನ್ ದಾಖಲೆಯನ್ನು ಉಪನೋಂದಣಾಧಿಕಾರಿ ಕಚೇರಿಯಲ್ಲಿ ಪಡೆದುಕೊಳ್ಳುವುದು ತಪ್ಪಲಿದೆ 6

ಚಿನಕುರುಳಿ ಪ್ರಕಾಶ್ ಶೆಟ್ಟಿ

ಬೀಸುತಿದೆ ಶೀತಮಾರುತ: ಚಳಿ ವಿಪರೀತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಾಪಮಾನ ಕುಸಿತ, ಶೀತ ಗಾಳಿಯ ಜತೆಗೆ ದಿತ್ವಾ ಚಂಡಮಾರುತದ ಪರಿಣಾಮವಾಗಿ ರಾಜ್ಯದಲ್ಲಿ ಚಳಿ ಹೆಚ್ಚಳವಾಗುತ್ತಿದೆ. ಭಾನುವಾರದಿಂದ ಹಲವೆಡೆ ಮಳೆಯ ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, ‘ಯೆಲ್ಲೊ ಅಲರ್ಟ್’ ನೀಡಿದೆ.

ಶ್ರೀಲಂಕಾದಲ್ಲಿ ಭಾರಿ ಹಾನಿ ಉಂಟು ಮಾಡಿರುವ ‘ದಿತ್ವಾ’ ಚಂಡಮಾರುತವು ಭಾನುವಾರ ತಮಿಳುನಾಡಿಗೆ ಅಪ್ಪಳಿಸುವ ಸಾಧ್ಯತೆಯಿದೆ. ಇದರ ಪರಿಣಾಮ, ಚಿಕ್ಕಮಗಳೂರು, ತುಮಕೂರು, ಹಾಸನ, ಕೊಡಗು, ಚಾಮರಾಜನಗರ, ರಾಮನಗರ, ಕೋಲಾರ, ಚಿಕ್ಕಬಳ್ಳಾಪುರ, ಮೈಸೂರು, ಬೆಂಗಳೂರು ನಗರ ಮತ್ತು ಗ್ರಾಮಾಂತರ ಜಿಲ್ಲೆಗಳಲ್ಲಿ ಎರಡು ದಿನ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ.

‘ದಿತ್ವಾ’ ಚಂಡಮಾರುತದ ಪರಿಣಾಮ ರಾಜ್ಯದ ಕೆಲವೆಡೆ ಮಳೆಯಾಗುವ ಸಾಧ್ಯತೆ ಇದೆ. ಬೆಂಗಳೂರು ನಗರ ಸೇರಿ ಕೆಲವೆಡೆ ಎರಡು ದಿನ ಚಳಿಯ ವಾತಾವರಣ ಇರಲಿದೆ. ಬೆಂಗಳೂರಿನಲ್ಲಿ ಗರಿಷ್ಠ ತಾಪಮಾನ ಸರಾಸರಿ 4 ಡಿಗ್ರಿ ಸೆಲ್ಸಿಯಸ್‌ನಷ್ಟು ಕುಸಿತವಾಗುವ ಸಾಧ್ಯತೆ ಇದೆ’ ಎಂದು ಹವಾಮಾನ ಇಲಾಖೆ ವಿಜ್ಞಾನಿ ಸಿ.ಎಸ್.ಪಾಟೀಲ ‘ಪ್ರಜಾವಾಣಿ’ಗೆ ತಿಳಿಸಿದರು.

ಉಡುಪಿ ಮತ್ತು ದಕ್ಷಿಣ ಕನ್ನಡ, ಶಿವಮೊಗ್ಗ, ಬಳ್ಳಾರಿ, ವಿಜಯನಗರ ಜಿಲ್ಲೆಯ ಕೆಲವೆಡೆ ಸಾಧಾರಣ ಮಳೆಯಾಗಲಿದೆ.

ಒಂದು ವಾರದಿಂದ ತಾಪಮಾನದಲ್ಲಿ ಇಳಿಕೆಯಾಗುತ್ತಿದ್ದು ಚಳಿ ತೀವ್ರಗೊಂಡಿದೆ. ಬೆಂಗಳೂರು ಹಾಗೂ ಸುತ್ತಮುತ್ತಲ ಪ್ರದೇಶಗಳಲ್ಲಿ ಮೋಡ ಕವಿದ ವಾತಾವರಣ ಇದ್ದು, ಮಳೆಯಾಗಲಿದೆ. ಕೆಲ ಪ್ರದೇಶಗಳಲ್ಲಿ ಬೆಳಗಿನ ಜಾವ ಮಂಜು ಬೀಳುವ ಸಾಧ್ಯತೆ ಇದೆ. 9

ಭದ್ರತೆ, ಊಟಕ್ಕೆ ಹೆಚ್ಚಿನ ವೆಚ್ಚ; ಕಳೆದ ವರ್ಷ ತಗಲಿದ್ದು ₹15.30 ಕೋಟಿ

ಅಧಿವೇಶನಕ್ಕೆ ಬೇಕು ₹21 ಕೋಟಿ

• ಸಂತೋಷ ಈ. ಚಿನಗುಡಿ

ಬೆಳಗಾವಿ: ಇಲ್ಲಿನ ಸುವರ್ಣ ವಿಧಾನ ಸೌಧದಲ್ಲಿ ಡಿಸೆಂಬರ್ 8 ರಿಂದ 19ರವರೆಗೆ ನಡೆಯುವ 14ನೇ ಚಳಿಗಾಲದ ಅಧಿವೇಶನಕ್ಕೆ ₹21 ಕೋಟಿ ವೆಚ್ಚ ಅಂದಾಜಿಸಲಾಗಿದೆ. ಕಳೆದ ವರ್ಷ ₹15.30 ಕೋಟಿ ವೆಚ್ಚವಾಗಿತ್ತು. ಈ ಬಾರಿ ರಕ್ಷಣೆ ಹಾಗೂ ಆಹಾರಕ್ಕಾಗಿ ಹೆಚ್ಚುವರಿ ವೆಚ್ಚ ಮಾಡಲಾಗುತ್ತಿದೆ ಎಂದು ಜಿಲ್ಲಾಡಳಿತದ ಮೂಲಗಳು ತಿಳಿಸಿವೆ.



ಪ್ರತಿವರ್ಷ ವೆಚ್ಚದಲ್ಲಿ ಶೇ 10ರಷ್ಟು ಹೆಚ್ಚಳ ಆಗುವುದು ಸಹಜ. ಆದರೆ, ಈಚೆಗೆ ನವದೆಹಲಿಯಲ್ಲಿ ಬಾಂಬ್ ಸ್ಫೋಟದ ಕಾರಣದಿಂದ ಈ ಬಾರಿ ಭದ್ರತೆಗೆ ಹೆಚ್ಚು ಆದ್ಯತೆ ನೀಡಲಾಗುತ್ತಿದೆ. ಸುಮಾರು 6 ಸಾವಿರಕ್ಕೂ ಹೆಚ್ಚು ಪೊಲೀಸ್ ಸಿಬ್ಬಂದಿ ನಿಯೋಜಿಸಲಾಗುತ್ತಿದೆ. ಪ್ರತಿವರ್ಷ ಈ ಸಂಖ್ಯೆ 4 ಸಾವಿರ ಇರುತ್ತಿತ್ತು. 9

ಚಳಿಗಾಲದ ಅಧಿವೇಶನ ಹಿನ್ನೆಲೆಯಲ್ಲಿ ಬೆಳಗಾವಿ ಸುವರ್ಣ ವಿಧಾನಸೌಧದ ಉದ್ಯಾನದಲ್ಲಿ ಅಂದಗೊಳಿಸುವ ಕಾರ್ಯ ನಡೆದಿರುವುದು

> **ಪ್ರಸಕ್ತ ವರ್ಷದ ಅಧಿವೇಶನಕ್ಕೆ ಪೊಲೀಸ್ ಇಲಾಖೆಯಿಂದ ₹5 ಕೋಟಿ ಹಾಗೂ ಜಿಲ್ಲಾಡಳಿತದಿಂದ ₹16 ಕೋಟಿ ವೆಚ್ಚ ಮಾಡಲು ನಿರ್ಧರಿಸಲಾಗಿದೆ**
> **ಮೊಹಮ್ಮದ್ ರೋಷನ್,** ಜಿಲ್ಲಾಧಿಕಾರಿ, ಬೆಳಗಾವಿ

ಸಭಾಧ್ಯಕ್ಷರ ಪೀಠಕ್ಕೆ ₹ 42.93 ಲಕ್ಷ

ಸುವರ್ಣ ವಿಧಾನಸೌಧದಲ್ಲಿನ ವಿಧಾನಸಭೆ ಸಭಾಂಗಣದಲ್ಲಿ ಸಭಾಧ್ಯಕ್ಷರ ಪೀಠ (ಕುರ್ಚಿ) ಮತ್ತು ಅದರ ಮುಂದಿನ ಮೇಜು ಸಿದ್ಧಪಡಿಸಲು ಕಳೆದ ವರ್ಷ ₹42.93 ಲಕ್ಷ ಖರ್ಚು ಮಾಡಲಾಗಿದೆ. ಜತೆಗೆ, ವಿಧಾನ ಪರಿಷತ್ ಸಭಾಪತಿ ಪೀಠದ ಹಳೆಯ ಪ್ಲೈವುಡ್, ಫ್ರೇಮ್, ಕುಷನ್ ಬದಲಿಸಲು ₹1.98 ಲಕ್ಷ ವೆಚ್ಚವಾಗಿದೆ ಎಂಬುದು ಮಾಹಿತಿ ಹಕ್ಕಿನಿಂದ ಬಹಿರಂಗವಾಗಿದೆ.



‘2006ರಿಂದ 2013ರವರೆಗೆ ಸಭಾಧ್ಯಕ್ಷರು ಕೂತ ಪೀಠ ಚೆನ್ನಾಗಿಯೇ ಇತ್ತು. ಬೆಂಗಳೂರು ವಿಧಾನಸೌಧ ಮಾದರಿಯಲ್ಲೇ ಸುವರ್ಣ ವಿಧಾನಸೌಧದಲ್ಲೂ ಪೀಠ ಇರಬೇಕು ಎಂಬ ಕಾರಣಕ್ಕೆ ಅನಗತ್ಯ ಹಣ ಸುರಿದಿದ್ದಾರೆ’ ಎಂದು ಮಾಹಿತಿ ಹಕ್ಕು ಕಾರ್ಯಕರ್ತ ಭೀಮಪ್ಪ ಗಡಾದ ‘ಪ್ರಜಾವಾಣಿ’ಗೆ ತಿಳಿಸಿದರು.

‘ಸೌಧದಲ್ಲಿ ಗಣ್ಯರ 11 ಪೇಂಟಿಂಗ್ ಹಾಗೂ ಅನುಭವ ಮಂಟಪದ ತೈಲವರ್ಣದ ಚಿತ್ರ ಸಿದ್ಧಪಡಿಸಲು ₹67.67 ಲಕ್ಷ ವ್ಯಯಿಸಲಾಗಿದೆ. 2023ರಲ್ಲಿ ಹೆಸರಾಂತ ಚಿತ್ರ ಕಲಾವಿದರಿಂದ 8x5 ಅಡಿ ಅಳತೆಯಲ್ಲಿ ಮಹಾನ್ ನಾಯಕರ ಭಾವಚಿತ್ರಗಳನ್ನು ಸಿದ್ಧಪಡಿಸಲಾಗಿತ್ತು. ಇದಕ್ಕೆ ₹13.34 ಲಕ್ಷ ವೆಚ್ಚ ಮಾಡಲಾಗಿತ್ತು. ಭಾವಚಿತ್ರಗಳ ಚಹರೆಗಳಲ್ಲಿ ಹೋಲಿಕೆ ಇಲ್ಲ ಎಂದು ಚಿತ್ರಕಲಾ ಪರಿಷತ್ತಿನ ನುರಿತ ತಜ್ಞರ ತಂಡ ಅವುಗಳನ್ನು ತಿರಸ್ಕರಿಸಿತು. 9

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಹಗುರ ಪ್ರಮಾಣದ ಮಳೆ ಬೀಳಲಿದೆ.

‘ಕೆ–ರೈಡ್’ ಕೊನೆಗೂ ‘ಪ್ರಭಾರ’ ಮುಕ್ತ

ಪೂರ್ಣ ಪ್ರಮಾಣದ ವ್ಯವಸ್ಥಾಪಕ ನಿರ್ದೇಶಕ ನೇಮಕ

• ಬೆಂಗಳೂರು ಉಪ ನಗರ ರೈಲು ಯೋಜನೆಗೆ ಸಿಗುವುದೇ ವೇಗ?

• ಬಾಲಕೃಷ್ಣ ಪಿ.ಎಚ್.

ಬೆಂಗಳೂರು: ಉಪನಗರ ರೈಲು ಯೋಜನೆಯನ್ನು ಅನುಷ್ಠಾನಗೊಳಿಸುವ ಕರ್ನಾಟಕ ರೈಲು ಮೂಲಸೌಕರ್ಯ ಅಭಿವೃದ್ಧಿ ಎಂಟರ್ ಪ್ರೈಸರ್ಸ್ (ಕೆ-ರೈಡ್) ಕೊನೆಗೂ ‘ಪ್ರಭಾರ’ದ ಭಾರದಿಂದ ಮುಕ್ತವಾಗಿದೆ. ಪೂರ್ಣ ಪ್ರಮಾಣದ ವ್ಯವಸ್ಥಾಪಕ ನಿರ್ದೇಶಕರ ನೇಮಕವಾಗಿದ್ದು, ಯೋಜನೆಗೆ ವೇಗ ಸಿಗುವ ನಿರೀಕ್ಷೆ ಹುಟ್ಟಿದೆ.

ಲಕ್ಷ್ಮಣ್ ಸಿಂಗ್

ಭಾರತೀಯ ರೈಲ್ವೆ ಸೇವೆಯ ಎಂಜಿನಿಯರ್ (ಐಆರ್‌ಎಸ್‌ಇ) ಲಕ್ಷ್ಮಣ್ ಸಿಂಗ್ ಅವರನ್ನು ಕೆ-ರೈಡ್ ವ್ಯವಸ್ಥಾಪಕ ನಿರ್ದೇಶಕರನ್ನಾಗಿ ಕೇಂದ್ರ ಸರ್ಕಾರ ನೇಮಕ ಮಾಡಿದೆ. ಅವರು ಶೀಘ್ರದಲ್ಲೇ ಅಧಿಕಾರ ಸ್ವೀಕರಿಸಲಿದ್ದಾರೆ ಎಂದು ಸಂಸ್ಥೆ ಅಧಿಕಾರಿಗಳು ತಿಳಿಸಿದರು.

ರೈಲ್ವೆಯ ಮಹತ್ವದ ಯೋಜನೆ, ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಪಾಲುದಾರಿಕೆಯ ಬೆಂಗಳೂರು ಉಪನಗರ ರೈಲು ಯೋಜನೆಗಾಗಿ ಕೆ-ರೈಡ್ ಸಂಸ್ಥೆಯನ್ನು ಎರಡೂ ಸರ್ಕಾರಗಳು ಸೇರಿ ಪ್ರಾರಂಭಿಸಿದಾಗ ಅದಕ್ಕೆ ಪೂರ್ಣ ಪ್ರಮಾಣದ ವ್ಯವಸ್ಥಾಪಕ ನಿರ್ದೇಶಕರನ್ನು ನೇಮಿಸಲಾಗಿತ್ತು. ಕೋವಿಡ್, ರಾಜ್ಯ ಸರ್ಕಾರಗಳ ನಡುವಿನ ಹೊಂದಾಣಿಕೆ ಕೊರತೆ ಇನ್ನಿತರ ಕಾರಣಗಳಿಂದ ಎರಡು ವರ್ಷ ಕಾಮಗಾರಿ ಪ್ರಗತಿ ಕಂಡಿರಲಿಲ್ಲ.

2022ರ ಜೂನ್ 20ರಂದು ಪ್ರಧಾನಿ ನರೇಂದ್ರ ಮೋದಿ ಅವರು ಶಂಕುಸ್ಥಾಪನೆ ಮಾಡಿ, 40 ತಿಂಗಳಲ್ಲಿ ಕಾಮಗಾರಿ ಪೂರ್ಣಗೊಳ್ಳಲಿದೆ ಎಂದು ಘೋಷಿಸಿದ್ದರು. ಅದೇ ವರ್ಷ ಡಿಸೆಂಬರ್‌ನಲ್ಲಿ ಕಾಮಗಾರಿ ಆರಂಭವಾಗಿತ್ತು. ಗೌರವ್ ಗುಪ್ತ ಅವರಿಗೆ ಕೆ-ರೈಡ್ ವ್ಯವಸ್ಥಾಪಕ ನಿರ್ದೇಶಕರ ಜವಾಬ್ದಾರಿ ನೀಡಲಾಗಿತ್ತು.

ಅವರ ನಂತರ ಮತ್ತೊಬ್ಬ ಐಎಎಸ್ ಅಧಿಕಾರಿ ಮಂಜುಳಾ ಎನ್. ಅವರು ವ್ಯವಸ್ಥಾಪಕ ನಿರ್ದೇಶಕರಾದರು. ಬಳಿಕ ಇನ್ನೊಬ್ಬ ಐಎಎಸ್ ಅಧಿಕಾರಿ ಗೋವಿಂದ ರೆಡ್ಡಿ ಜವಾಬ್ದಾರಿ ನೀಡಲಾಯಿತು. ಬಿಎಸ್‌ಆರ್‌ಪಿ ಕಾಮಗಾರಿ ಕುಂಟುತ್ತಾ ಸಾಗಲು ಪೂರ್ಣ ಪ್ರಮಾಣದ ಮತ್ತು ತಾಂತ್ರಿಕ ಮಾಹಿತಿ ಇರುವ ವ್ಯವಸ್ಥಾಪಕ ನಿರ್ದೇಶಕರು ಇಲ್ಲದಿರುವುದೇ ಕಾರಣ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್, ಸಂಸದ ತೇಜಸ್ವಿ ಸೂರ್ಯ ಹಲವು ಬಾರಿ ಹೇಳಿಕೆ ನೀಡಿದ್ದರು. ಈ ಮಧ್ಯೆ ಕಾಮಗಾರಿ ನಡೆಸುತ್ತಿದ್ದ ಗುತ್ತಿಗೆ ಕಂಪನಿಯು ಯೋಜನೆಯಿಂದ ಹಿಂದೆ ಸರಿದಿದ್ದರಿಂದ ಕಾಮಗಾರಿ ಪೂರ್ಣ ಸ್ಥಗಿತಗೊಂಡಿತು. ‘ವ್ಯವಸ್ಥಾಪಕ ನಿರ್ದೇಶಕರ ಒಂದು ಸಹಿ ಬೇಕಿದ್ದರೂ ವಿಕಾಸಸೌಧಕ್ಕೆ ಹೋಗಿ ಕಾಯಬೇಕು. ಇದರಲ್ಲೇ ಸಮಯ ವ್ಯರ್ಥವಾಗುತ್ತಿತ್ತು. ವ್ಯವಸ್ಥಾಪಕ ನಿರ್ದೇಶಕರು ದೆಹಲಿ-ಬೆಂಗಳೂರಿಗೆ ಆಗಾಗ್ಗೆ ನಡೆಯುವ ಸಭೆಗಳಲ್ಲಿ ಭಾಗವಹಿಸಬೇಕು. ಹೆಚ್ಚುವರಿಯಾಗಿ ಹೊಣೆ ಹೊತ್ತವರಿಗೆ ಅಷ್ಟು ಸಮಯ ಸಿಗುವುದಿಲ್ಲ. ಈಗ ಪೂರ್ಣ ಪ್ರಮಾಣದ ವ್ಯವಸ್ಥಾಪಕ ನಿರ್ದೇಶಕರು ಬರುತ್ತಿರುವುದರಿಂದ ಇನ್ನು ಕೆಲಸಗಳು ವೇಗವಾಗಿ ನಡೆಯಲಿವೆ. ಕಾಮಗಾರಿಗೂ ವೇಗ ಸಿಗಲಿದೆ’ ಎಂದು ಕೆ-ರೈಡ್‌ನ ಅಧಿಕಾರಿಗಳು ಅಭಿಪ್ರಾಯಪಟ್ಟರು.

ಉತ್ತಮ ನಿರ್ಧಾರ

ಆಡಳಿತಾತ್ಮಕ ತೀರ್ಮಾನ, ಹಣಕಾಸಿನ ನಿರ್ವಹಣೆಯನ್ನು ಐಎಎಸ್ ಅಧಿಕಾರಿಗಳು ಮಾಡಬಹುದು. ಆದರೆ, ಅವರಿಗೆ ತಾಂತ್ರಿಕ ಜ್ಞಾನ ಅಷ್ಟು ಗೊತ್ತಿರುವುದಿಲ್ಲ. ಈಗ ತಾಂತ್ರಿಕ ತಿಳಿವಳಿಕೆ ಇರುವವರನ್ನೇ ಕೆ-ರೈಡ್ ವ್ಯವಸ್ಥಾಪಕ ನಿರ್ದೇಶಕರನ್ನಾಗಿ ಮಾಡುತ್ತಿರುವುದು ಉತ್ತಮ ನಿರ್ಧಾರ.

ಕೆ.ಎನ್. ಕೃಷ್ಣಪ್ರಸಾದ್, ರೈಲ್ವೆ ಹೋರಾಟಗಾರ

ಕಾಮಗಾರಿಗೆ ವೇಗ ನೀಡಿ

ತಾಂತ್ರಿಕ ತಜ್ಞರಲ್ಲದವರು ವ್ಯವಸ್ಥಾಪಕ ನಿರ್ದೇಶಕರಾಗಿರುವುದರಿಂದ ಮತ್ತು ಅವರಿಗೆ ಬೇರೆ ಬೇರೆ ಜವಾಬ್ದಾರಿಗಳ ನಡುವೆ ಇದು ಒಂದು ಎಂದು ಇರುವುದರಿಂದ ಉಪನಗರ ರೈಲು ಯೋಜನೆ ಸಾಗುತ್ತಿಲ್ಲ ಎಂದು ಹಲವರು ಸೂಚ್ಯ ಹೇಳುತ್ತಿದ್ದರು. ರೈಲ್ವೆಯಲ್ಲಿ ಕೆಲಸ ಮಾಡಿ ಗೊತ್ತಿರುವ ಎಂಜಿನಿಯರ್ ಅವರೇ ವ್ಯವಸ್ಥಾಪಕ ನಿರ್ದೇಶಕರಾಗಿ ಬರುತ್ತಿರುವುದರಿಂದ ಇನ್ನು ಮುಂದಾದರೂ ಕಾಮಗಾರಿಗೆ ವೇಗ ನೀಡಬೇಕು.

ರಾಜಕುಮಾರ್ ದುಗರ್, ಸಿಟಿಜನ್ಸ್ ಫಾರ್ ಸಿಟಿಜನ್ಸ್ ಸಂಸ್ಥಾಪಕ

ಬಿಎಸ್‌ಆರ್‌ಪಿ ಕಾರಿಡಾರ್‌ಗಳು
ಕಾರಿಡಾರ್–1 ಬೆಂಗಳೂರು ನಗರ–ದೇವನಹಳ್ಳಿ
ಕಾರಿಡಾರ್–2 ಚಿಕ್ಕಬಾಣಾವರ–ಬೈಯಪ್ಪನಹಳ್ಳಿ
ಕಾರಿಡಾರ್–3 ಹೀಲಳಿಗೆ–ರಾಜಾನುಕುಂಟೆ
ಕಾರಿಡಾರ್–4 ಕೆಂಗೇರಿ–ವೈಟ್‌ಫೀಲ್ಡ್

ಸುದ್ದಿ 2 ನಿಮಿಷ

ರಾಜ್ಯಕ್ಕೆ ಒಳಿತು ಆಗಲೆಂದು ಪ್ರಾರ್ಥನೆ ಮಾಡಿದ್ದೇನೆ: ಡಿಕೆಶಿ

ಕೆ.ಆರ್. ಪೇಟೆ (ಮಂಡ್ಯ ಜಿಲ್ಲೆ): ‘ರಾಜ್ಯಕ್ಕೆ ಒಳಿತಾಗಲೆಂದು ಪ್ರಾರ್ಥಿಸಿದ್ದೇನೆ. ಭೂವರಾಹನಾಥಸ್ವಾಮಿ ದೇವಾಲಯದ ಭೇಟಿ ಶನಿವಾರ ಬೆಳಿಗ್ಗೆಯಷ್ಟೆ ನಿಗದಿಯಾಯಿತು. ನನಗೆ ಉನ್ನತ ಹುದ್ದೆ ಸಿಗಲೆಂದು ಹೋಮ ಮಾಡಿದ್ದಾರೆಂಬ ವಿಚಾರ ಗೊತ್ತಿಲ್ಲ. ಎಲ್ಲ ಹಿರಿಯರು, ಸ್ವಾಮೀಜಿಗಳು ನನ್ನನ್ನು ಪ್ರೀತಿಯಿಂದ ಕಾಣುತ್ತಿದ್ದಾರಷ್ಟೆ’ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ತಾಲ್ಲೂಕಿನ ಕಲ್ಲಹಳ್ಳಿ ಗ್ರಾಮದ ಭೂವರಾಹನಾಥಸ್ವಾಮಿ ದೇವಾಲಯದಲ್ಲಿ ಶನಿವಾರ ಪತ್ನಿ ಉಷಾ ಅವರೊಂದಿಗೆ ವಿಶೇಷ ಪೂಜೆ ಸಲ್ಲಿಸಿ, ಹೋಮ-ಹವನದಲ್ಲಿ ಪಾಲ್ಗೊಂಡ ವೇಳೆ ಮಾಧ್ಯಮದವರೊಂದಿಗೆ ಮಾತನಾಡಿದರು. ‘ನಾನು ತಿಹಾರ್ ಜೈಲಿನಲ್ಲಿದ್ದಾಗ ಅತ್ತೆ, ಮಾವ ಈ ದೇವಾಲಯಕ್ಕೆ ನಾಲ್ಕು ಬಾರಿ ಬಂದಿದ್ದರು. ಕಳೆದ ಎರಡು ವರ್ಷಗಳಿಂದ ಬೇರೆ ಪಕ್ಷದ ಸ್ನೇಹಿತರೊಬ್ಬರು ಇಲ್ಲಿಗೆ ಹೋಗಲು ಹೇಳುತ್ತಿದ್ದರು. ಇಲ್ಲಿಗೆ ಬಂದು ನೋಡಿದಾಗ ನನಗೆ ಮಹಿಮೆ ಅರ್ಥವಾಯ್ತು. ಇದು ಅದ್ಭುತ, ಐತಿಹಾಸಿಕ ದೇವಾಲಯ. ವಿಗ್ರಹ ಬಹಳ ಸುಂದರವಾಗಿದೆ’ ಎಂದರು.

‘ಎಲ್ಲ ಧರ್ಮಗಳ ಜನ ಇಲ್ಲಿಗೆ ಬಂದು ಪ್ರಾರ್ಥನೆ ಸಲ್ಲಿಸುತ್ತಾರೆ. ಅದನ್ನು ನೋಡಿ ಖುಷಿ ಎನಿಸಿತು. ಈ ದೇವಾಲಯದ ಪ್ರಾಂಗಣ ಕಟ್ಟಲು ಕೆಲಸ ಮಾಡುತ್ತಿರುವವರು ಮುಸ್ಲಿಮರು. ಇಲ್ಲಿ ಜಾತಿ, ಧರ್ಮವಿಲ್ಲ’ ಎಂದರು.

ದೇಗುಲ ಆಡಳಿತ ಮಂಡಳಿಯಿಂದ ದಂಪತಿಗೆ ಪೂರ್ಣಕುಂಭ ಸ್ವಾಗತ ಕೋರಲಾಯಿತು. ಹೋಮ ಕುಂಡಕ್ಕೆ ದಂಪತಿ ಪೂರ್ಣಾಹುತಿ ನೆರವೇರಿಸಿದರು. ಶಿವಕುಮಾರ್ ದೇಗುಲದ ಬಳಿ ಬರುತ್ತಿದ್ದಂತೆ ಕಾಂಗ್ರೆಸ್ ಕಾರ್ಯಕರ್ತರು, ‘ಮುಂದಿನ ಮುಖ್ಯಮಂತ್ರಿ’ ಎಂದು ಘೋಷಣೆ ಕೂಗಿದರು.

₹80 ಕೋಟಿ ಮೌಲ್ಯದ ಆಸ್ತಿ ವಶ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಶನಿವಾರ ಕಾರ್ಯಾಚರಣೆ ನಡೆಸಿ, ಮಾಳಗಾಲದಲ್ಲಿ ₹80 ಕೋಟಿ ಮೌಲ್ಯದ ಆಸ್ತಿಯನ್ನು ವಶಪಡಿಸಿಕೊಂಡಿದೆ.

ಉತ್ತರ ತಾಲ್ಲೂಕಿನ ಯಶವಂತಪುರ ಹೋಬಳಿಯ ಮಾಳಗಾಲ ಗ್ರಾಮದ ಸರ್ವೆ ನಂ. 15/1, 15/2 ಮತ್ತು 15/3ರಲ್ಲಿ 1 ಎಕರೆ 5 ಗುಂಟೆ ಪ್ರದೇಶದಲ್ಲಿ ಅನಧಿಕೃತವಾಗಿ ನಿರ್ಮಿಸಿದ್ದ ಶೆಡ್‌ಗಳನ್ನು ಜೆಸಿಬಿ ಮೂಲಕ ತೆರವುಗೊಳಿಸಲಾಯಿತು. ಕೋಟ್ಯಂತರ ರೂಪಾಯಿ ಬೆಲೆ ಬಾಳುವ ಪ್ರದೇಶವನ್ನು ವಶಪಡಿಸಿಕೊಂಡು, ಸುತ್ತಲೂ ಬೇಲಿ ಹಾಕಲಾಗಿದೆ.

ಬಿಡಿಎ ಕಾರ್ಯನಿರತ ಪಡೆಯ ಆರಕ್ಷಕ ಅಧೀಕ್ಷಕ, ಪಶ್ಚಿಮ ವಿಭಾಗದ ಕಾರ್ಯಪಾಲಕ ಎಂಜಿನಿಯರ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಹಾಗೂ ಸ್ಥಳೀಯ ಪೊಲೀಸರ ಸಹಕಾರದೊಂದಿಗೆ ಕಾರ್ಯಾಚರಣೆ ನಡೆಯಿತು.

‘ಲೋಕಃ’ ವಾರ್ಷಿಕ ನೃತ್ಯೋತ್ಸವ

ಬೆಂಗಳೂರು: ‘ಕಲೆ ಎಲ್ಲ ವರ್ಗದವರಿಗೂ ಲಭ್ಯವಾಗಬೇಕೆಂಬ ಆಶಯದೊಂದಿಗೆ ಕಲಾವಿದೆ ವರ್ಷಾ ಪ್ರಸಾದ್ ಕೆಲಸ ಮಾಡುತ್ತಿದ್ದಾರೆ’ ಎಂದು ದೂರದರ್ಶನದ ನಿಕಟಪೂರ್ವ ನಿರ್ದೇಶಕಿ ನಿರ್ಮಲ ಸಿ. ಎಲಿಗಾರ್ ಶ್ಲಾಘಿಸಿದರು.

ಕಲಾಗ್ರಾಮ ಡ್ಯಾನ್ಸ್ ಗುರುಕುಲದ ‘ಲೋಕಃ’ ವಾರ್ಷಿಕ ನೃತ್ಯೋತ್ಸವ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಅಗಾಧ ಪ್ರತಿಭೆಯ ವರ್ಷಾ ಪ್ರಸಾದ್ ಅವರು ಕಲಾಗ್ರಾಮದ ಸಂಸ್ಥಾಪಕಿಯಾಗಿ ಎಲ್ಲರಿಗೂ ವೇದಿಕೆ ಸಿಗುವಂತೆ ಮಾಡಿದ್ದಾರೆ. ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಎಲ್ಲ ವಿದ್ಯಾರ್ಥಿಗಳಿಗೆ ಒಟ್ಟಿಗೆ ತರಬೇತಿ ನೀಡಿ ಭಾರತೀಯ ಪರಂಪರೆಯ ಕಥಕ್ ನೃತ್ಯವನ್ನು ಆಧುನಿಕ ಪೀಳಿಗೆಯವರೂ ಮುಂದುವರಿಸುವಂತೆ ಮಾರ್ಗದರ್ಶನ ನೀಡುತ್ತಿದ್ದಾರೆ’ ಎಂದು ಹೇಳಿದರು.

ಕಥಕ್ ಗುರು ವರ್ಷಾ ಪ್ರಸಾದ್ ನೇತೃತ್ವದಲ್ಲಿ ಅಮೆರಿಕ, ದುಬೈ, ಕಜಾಕಸ್ತಾನ ದೇಶಗಳ ಹಾಗೂ ಭಾರತದ ವಿವಿಧ ರಾಜ್ಯಗಳ 40 ವಿದ್ಯಾರ್ಥಿನಿಯರು ನೃತ್ಯ ಪ್ರದರ್ಶನ ನೀಡಿದರು. ಕಲಾ ಪ್ರೇಮಿಗಳಾದ ಹರ್ಷಿತಾ ಶ್ರೀನಿವಾಸ್ ಮತ್ತು ಸಂಧ್ಯಾ ರಂಜನ್ ಅತಿಥಿಗಳಾಗಿದ್ದರು.

ವರ್ಷಾ ಪ್ರಸಾದ್ ನೃತ್ಯ ಪ್ರದರ್ಶಿಸಿದರು

ಮಂತ್ರಾಲಯದಲ್ಲಿ ಶನಿವಾರ ನಡೆದ ಸಮಾರಂಭದಲ್ಲಿ ರಾಘವೇಂದ್ರ ಸ್ವಾಮಿಗಳ ಮಠದ ಪೀಠಾಧಿಪತಿ ಸುಬುಧೇಂದ್ರತೀರ್ಥ ಸ್ವಾಮೀಜಿ ಅವರಿಗೆ ಆಫ್ರಿಕಾದ ಮೈಲ್ಸ್ ಲೀಡರ್‌ಶಿಪ್ ವಿಶ್ವವಿದ್ಯಾಲಯದಿಂದ ಗೌರವಡಾಕ್ಟರೇಟ್ ಪ್ರದಾನ ಮಾಡಲಾಯಿತು

ವಿಜ್ಞಾನಿ ಸಿಎನ್‌ಆರ್ ರಾವ್‌ಗೆ ‘ಶಿವಶ್ರೀ ಪ್ರಶಸ್ತಿ’ ಪ್ರದಾನ

‘ಮನುಕುಲದ ಅಭಿವೃದ್ಧಿಗೆ ಸಂಶೋಧನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸಮಾಜಕ್ಕೆ, ಮನುಕುಲಕ್ಕೆ ಅನುಕೂಲವಾಗುವುದನ್ನು ಕಂಡು ಹಿಡಿಯುವವರು, ಸಂಶೋಧಕರು ವಿಶೇಷ ವ್ಯಕ್ತಿಗಳೆನಿಸಿಕೊಳ್ಳುತ್ತಾರೆ’ ಎಂದು ಸುಪ್ರೀಂಕೋರ್ಟ್ ನಿವೃತ್ತ ಮುಖ್ಯ ನ್ಯಾಯಮೂರ್ತಿ ಉದಯ ಉಮೇಶ ಲಲಿತ್ ಹೇಳಿದರು.

‘ವಿಜ್ಞಾನಿಗಳು ತಮ್ಮ ಸಂಶೋಧನೆಯಿಂದ ಜ್ಞಾನವನ್ನು ಸಮಾಜಕ್ಕೆ ನೀಡುತ್ತಾರೆ. ಆ ಜ್ಞಾನದ ಮೂಲಕ ಸಮುದಾಯದ ಅಭಿವೃದ್ಧಿ ಕೆಲಸಗಳಾಗುತ್ತವೆ. ಅಂಥ ಕೆಲಸ ಮಾಡಿದವರು ಸಿಎನ್‌ಆರ್ ರಾವ್’ ಎಂದರು.

ವಿಜ್ಞಾನಿ ಸಿಎನ್‌ಆರ್ ರಾವ್ ಅವರಿಗೆ ನ್ಯಾ. ಶಿವರಾಜ ವಿ. ಪಾಟೀಲ ಪ್ರತಿಷ್ಠಾನದಿಂದ ‘ಶಿವಶ್ರೀ ಪ್ರಶಸ್ತಿ’ಯನ್ನು ಶನಿವಾರ ಪ್ರದಾನ ಮಾಡಿ ಅವರು ಮಾತನಾಡಿದರು.

‘ಸಿಎನ್‌ಆರ್ ರಾವ್ ಅವರು ಒಟ್ಟು 86 ಪಿಎಚ್‌.ಡಿ. ಪಡೆದಿದ್ದಾರೆ. ಅವರನ್ನು ಹೊರತುಪಡಿಸಿ ಇಷ್ಟೊಂದು ಪ್ರಮಾಣದಲ್ಲಿ ಪಿಎಚ್‌.ಡಿ. ಪಡೆದ ಮತ್ತೊಬ್ಬ ವ್ಯಕ್ತಿ ಇಲ್ಲಿವರೆಗೆ ಸಿಕ್ಕಿಲ್ಲ. ರಾವ್ 24ನೇ ವಯಸ್ಸಿನಲ್ಲಿ ಮೊದಲ ಸಂಶೋಧನಾ ಮಹಾಪ್ರಬಂಧ ಮಂಡಿಸಿದ್ದರು. ಅಲ್ಲಿಂದ 91ನೇ ವರ್ಷದವರೆಗೂ ಸಂಶೋಧನೆ, ಅಭಿವೃದ್ಧಿ, ಜ್ಞಾನಾರ್ಜನೆಯಲ್ಲಿ ತೊಡಗಿಸಿಕೊಂಡು ಹೊಸ ಪ್ರತಿಭೆಗಳಿಗೆ ಮಾರ್ಗದರ್ಶನ ಮಾಡುವುದು ಅಸಾಮಾನ್ಯ ಸಂಗತಿ’ ಎಂದು ತಿಳಿಸಿದರು.

ಸಿ.ಎನ್‌.ಆರ್‌. ರಾವ್ ಅವರಿಗೆ ‘ಶಿವಶ್ರೀ ಪ್ರಶಸ್ತಿ’ಯನ್ನು ನ್ಯಾ. ಉದಯ ಉಮೇಶ ಲಲಿತ್ ಅವರು ನೀಡಿ ಗೌರವಿಸಿದರು. ನ್ಯಾ. ಶಿವರಾಜ ವಿ. ಪಾಟೀಲ, ಉದಯ ಹೊಳ್ಳ ಹಾಗೂ ಎಸ್‌.ಎಂ. ರೆಡ್ಡಿ ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

> **ಪಡೆದ ಜ್ಞಾನ, ಗಳಿಸಿದ ಅನುಭವ ನಮ್ಮ ತಲೆಯೊಳಗೇ ಇದ್ದರೆ ಆ ತಲೆ ಗೋದಾಮು ಆಗಿ ಬಿಡುತ್ತದೆ. ಇತರರ ಜತೆ ಹಂಚಿಕೊಂಡರೆ ದೀವಿಗೆಯಾಗುತ್ತದೆ. ಸಿಎನ್‌ಆರ್ ರಾವ್ ಜ್ಞಾನಧಾರೆಯನ್ನು ಮುಂದಿನ ತಲೆಮಾರಿಗೆ ಹರಿಸುತ್ತಿದ್ದಾರೆ**
>
> **ಶಿವರಾಜ ವಿ. ಪಾಟೀಲ**
> ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ

ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಶಿವರಾಜ ವಿ. ಪಾಟೀಲ ಮಾತನಾಡಿ, ‘ಇದು ಪ್ರಶಸ್ತಿ ಪ್ರದಾನ ಸಂಭ್ರಮ ಮಾತ್ರವಲ್ಲ, ಕೆಲಸ ಮತ್ತು ಮೌಲ್ಯಗಳನ್ನೇ ಜೀವನದ ಸಂಭ್ರಮವನ್ನಾಗಿ ಮಾಡಿಕೊಂಡ ರಾವ್ ಅವರನ್ನು ಸನ್ಮಾನಿಸುವ ಮೂಲಕ ನಾವು ಸಂಭ್ರಮಿಸುವ ಕ್ಷಣ’ ಎಂದು ಹೇಳಿದರು.

ಸಿಎನ್‌ಆರ್ ರಾವ್ ಅವರ ಪತ್ನಿ ಇಂದುಮತಿ ರಾವ್, ಮಾಜಿ ಅಡ್ವೊಕೇಟ್ ಜನರಲ್ ಉದಯಹೊಳ್ಳ, ಪ್ರತಿಷ್ಠಾನದ ಅಧ್ಯಕ್ಷ ಎಸ್‌.ಎಂ. ರೆಡ್ಡಿ, ಟ್ರಸ್ಟಿ ಆರ್‌.ವಿ. ಧರ್ಮೇಗೌಡ ಉಪಸ್ಥಿತರಿದ್ದರು.

ವೈದ್ಯ ನಾಪತ್ತೆ: ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಕೊರಟಗೆರೆ: ಮಧುಗಿರಿ ತಾಲ್ಲೂಕು ಐ.ಡಿ.ಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದ ವೈದ್ಯ ಡಾ.ಶ್ರೀನಿವಾಸ್ (35) ತಮ್ಮ ಕಾರನ್ನು ರಸ್ತೆ ಪಕ್ಕದಲ್ಲಿ ನಿಲ್ಲಿಸಿ ನಾಪತ್ತೆಯಾಗಿದ್ದಾರೆ.

ಶ್ರೀನಿವಾಸ್ ತಾಲ್ಲೂಕಿನ ಹೊಳವನಹಳ್ಳಿಯಲ್ಲಿ ಕ್ಲಿನಿಕ್ ನಡೆಸುತ್ತಿದ್ದರು. ರೆಡ್ಡಿಕಟ್ಟೆಬಾರೆ ಬಳಿ ರಸ್ತೆ ಬದಿಯಲ್ಲಿ ಅವರ ಕಾರು ಗುರುವಾರ ರಾತ್ರಿಯಿಂದ ಅನುಮಾನಾಸ್ಪದವಾಗಿ ನಿಂತಿದ್ದು, ಪೊಲೀಸರ ತನಿಖೆಯಿಂದ ಕಾರು ಶ್ರೀನಿವಾಸ್ ಅವರಿಗೆ ಸೇರಿದ್ದು ಎಂಬುದು ಗೊತ್ತಾಗಿದೆ.

‘ನಾನು ಬೆಂಗಳೂರಿನಲ್ಲಿ ಓದುತ್ತಿದ್ದೆ. ಶ್ರೀನಿವಾಸ್ ಮಧುಗಿರಿಯಲ್ಲಿ ವಾಸವಿದ್ದರು. ಐ.ಡಿ.ಹಳ್ಳಿಗೆ ಓಡಾಡುತ್ತಿದ್ದರು. ಪತಿಗೆ ಅಕ್ರಮ ಸಂಬಂಧ ಇತ್ತು. ಈ ಬಗ್ಗೆ ಹಲವು ಬಾರಿ ಬುದ್ಧಿ ಹೇಳಲಾಗಿತ್ತು. ಈ ಕಾರಣಕ್ಕೆ ಅಪಹರಣ ಅಥವಾ ನಾಪತ್ತೆಯಾಗಿರಬಹುದು’ ಎಂದು ಪತ್ನಿ ಕಾವ್ಯ ಅವರು ಪೊಲೀಸರಿಗೆ ನೀಡಿರುವ ದೂರಿನಲ್ಲಿ ತಿಳಿಸಿದ್ದಾರೆ. ಪ್ರಕರಣ ಸಂಬಂಧ ತನಿಖೆ ನಡೆಯುತ್ತಿದೆ ಎಂದು ಪಿಎಸ್‌ಐ ವೈ.ಜಿ.ತೀರ್ಥೇಶ್ ತಿಳಿಸಿದ್ದಾರೆ.

ಪ್ರೆಸಿಡೆನ್ಸಿ ವಿ.ವಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ

ಬೆಂಗಳೂರು: ನಗರದ ಪ್ರೆಸಿಡೆನ್ಸಿ ವಿಶ್ವವಿದ್ಯಾಲಯದ 8ನೇ ಘಟಿಕೋತ್ಸವ ಶನಿವಾರ ಸಂಭ್ರಮದಿಂದ ನಡೆಯಿತು.

ನಾಲ್ಕು ಸಾವಿರಕ್ಕೂ ಅಧಿಕ ಮಂದಿಗೆ ಪದವಿ ಪ್ರದಾನ ಮಾಡಲಾಯಿತು. ಈ ಪೈಕಿ 3,686 ಪದವಿ, 1,233 ಸ್ನಾತಕೋತ್ತರ ಪದವಿ, 34 ಪಿಎಚ್‌.ಡಿ ಪದವಿಗಳನ್ನು ಪ್ರದಾನ ಮಾಡಲಾಯಿತು. 32 ವಿದ್ಯಾರ್ಥಿಗಳಿಗೆ ಚಿನ್ನದ ಪದಕ ನೀಡಿ ಗೌರವಿಸಲಾಯಿತು.

ಪ್ರೆಸಿಡೆನ್ಸಿ ಕಾಲೇಜಿನಲ್ಲಿ ನಡೆದ ಘಟಿಕೋತ್ಸವದಲ್ಲಿ ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು

ಉದ್ಯಮಿ ರೋನಿ ಸ್ಕ್ರೂವಾಲಾ ಮಾತನಾಡಿ, ‘ವಿವಿಧ ಕ್ಷೇತ್ರಗಳಲ್ಲಿ ಲಭ್ಯವಿರುವ ಅವಕಾಶಗಳನ್ನು ಯುವಜನರು ಸದುಪಯೋಗಪಡಿಸಿಕೊಳ್ಳಬೇಕು. ಶೈಕ್ಷಣಿಕ ಕ್ಷೇತ್ರದಲ್ಲೂ ವಿಪುಲ ಅವಕಾಶ ಗಳಿವೆ. ಪ್ರತಿಯೊಬ್ಬರು ಕನಸು ಕಾಣುವ ಧೈರ್ಯ ಮಾಡಬೇಕು. ಗುರಿ ತಲುಪುವ ತನಕ ಪ್ರಯತ್ನ ನಿಲ್ಲಿಸದೆ, ಸಕಾರಾತ್ಮಕವಾಗಿ ಯೋಚಿಸಬೇಕು’ ಎಂದರು. ಪತ್ರಕರ್ತ ದಿಲೀಪ್ ಠಾಕೂರ್ ಮಾತನಾಡಿದರು.

ಕುಲಪತಿ (ಪ್ರಭಾರ) ಡಾ.ಎಸ್‌. ಜೆ. ತಿರುವೇಂಗಡಂ ಅವರು 2024-25ರ ಸಾಲಿನ ಶೈಕ್ಷಣಿಕ ವರದಿಯನ್ನು ಮಂಡಿಸಿದರು.

ಕುಲಾಧಿಪತಿ ನಿಸ್ಸಾರ್ ಅಹ್ಮದ್, ಸಂಸ್ಥಾಪಕ ಟ್ರಸ್ಟಿ ಕೌಸರ್ ನಿಸ್ಸಾರ್ ಅಹ್ಮದ್ ಅಧ್ಯಕ್ಷತೆ ವಹಿಸಿದ್ದರು. ರಿಜಿಸ್ಟ್ರಾರ್ ಡಾ. ಸಮೀನಾ ನೂರ್ ಅಹ್ಮದ್ ಪನಾಲಿ, ಪ್ರೆಸಿಡೆನ್ಸಿ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ ಉಪಾಧ್ಯಕ್ಷ ಸುಹೇಲ್ ಅಹ್ಮದ್, ಪ್ರೆಸಿಡೆನ್ಸಿ ಗ್ರೂಪ್ ಆಫ್ ಸ್ಕೂಲ್ಸ್ ಉಪಾಧ್ಯಕ್ಷ ಡಾ.ನಫೀಸಾ ಅಹ್ಮದ್ ಹಾಜರಿದ್ದರು.

ಉಪವಿಭಾಗಾಧಿಕಾರಿ, ತಹಶೀಲ್ದಾರ್‌ಗೆ ದಂಡ

ಅರ್ಜಿದಾರರಿಗೆ ಮಾಹಿತಿ ಒದಗಿಸಿಲ್ಲ: ಮಾಹಿತಿ ಹಕ್ಕು ಆಯೋಗ ಬೇಸರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರ್ಜಿದಾರರಿಗೆ ಸಕಾಲಕ್ಕೆ ಮಾಹಿತಿ ಒದಗಿಸದೇ ಮಾಹಿತಿ ಹಕ್ಕು ಕಾಯ್ದೆ ಉಲ್ಲಂಘಿಸಿದ ಬೆಂಗಳೂರು ನಗರ ಜಿಲ್ಲೆ ಮತ್ತು ಗ್ರಾಮಾಂತರ ಜಿಲ್ಲೆಯ ಉಪವಿಭಾಗಾಧಿಕಾರಿಗಳು ಹಾಗೂ ತಹಶೀಲ್ದಾರ್‌ಗಳಿಗೆ ಮಾಹಿತಿ ಆಯೋಗ ತಲಾ ₹25 ಸಾವಿರ ದಂಡ ವಿಧಿಸಿ, ಎಚ್ಚರಿಕೆಯ ಸಂದೇಶ ರವಾನಿಸಿದೆ.

ದೊಡ್ಡಬಳ್ಳಾಪುರ ಉಪ ವಿಭಾಗಾಧಿಕಾರಿ ದುರ್ಗಶ್ರೀ ಅವರು ಆಯೋಗದ ವಿಚಾರಣೆಗೆ ಸತತ ಗೈರು ಹಾಜರಾಗಿದ್ದಲ್ಲದೇ ಅರ್ಜಿದಾರರ ಕೋರಿಕೆಗೆ ಸ್ಪಂದಿಸದೇ ಕಾಯ್ದೆ ಉಲ್ಲಂಘಿಸಿರುವುದನ್ನು ಗಂಭೀರವಾಗಿ ಪರಿಗಣಿಸಿದ ಆಯೋಗ, ಎರಡು ಪ್ರಕರಣಗಳಲ್ಲಿ ತಲಾ ₹25 ಸಾವಿರ ದಂಡ ವಿಧಿಸಿದೆ. ಅಲ್ಲದೇ, ಒಂದು ಪ್ರಕರಣದಲ್ಲಿ ಅಧಿಕಾರಿ ವಿರುದ್ಧ ಇಲಾಖೆ ನಿಯಮಾವಳಿಗಳಂತೆ ಶಿಸ್ತು ಕ್ರಮ ಕೈಗೊಳ್ಳಲು ಕಂದಾಯ ಇಲಾಖೆ ಪ್ರಧಾನ ಕಾರ್ಯದರ್ಶಿಗೆ ಆದೇಶ ನೀಡಿದೆ.

ಅದೇ ರೀತಿ ಬೆಂಗಳೂರು ದಕ್ಷಿಣ ಉಪವಿಭಾಗಾಧಿಕಾರಿ ವಿಶ್ವನಾಥ್ ಅವರಿಗೂ ಪ್ರಕರಣವೊಂದರಲ್ಲಿ ₹25 ಸಾವಿರ ದಂಡ ವಿಧಿಸಿದ್ದಲ್ಲದೇ ಇಲಾಖೆ ವಿಚಾರಣೆಗೆ ಶಿಫಾರಸು ಮಾಡುವುದಾಗಿ ಆಯೋಗ ಶೋಕಾಸ್ ನೋಟಿಸ್ ನೀಡಿದೆ.

ಆಯೋಗದ ವಿಚಾರಣೆಗೆ ಸತತ ಗೈರು ಹಾಜರಾಗಿದ್ದಲ್ಲದೇ ಅರ್ಜಿದಾರರಿಗೆ ಮಾಹಿತಿ ಒದಗಿಸದ ಕೆ.ಆರ್.ಪುರದ ತಹಶೀಲ್ದಾರ್ ರಾಜು ಅವರಿಗೆ ₹ 25 ಸಾವಿರ ದಂಡ ವಿಧಿಸಿ, ಶೋಕಾಸ್ ನೋಟಿಸ್ ನೀಡಿದೆ. ದೇವನಹಳ್ಳಿ ತಾಲ್ಲೂಕಿನ ರೈತ ರೊಬ್ಬರು ಸರ್ಕಾರಿ ಶಾಲೆ ಜಮೀನನ್ನು ಉಳಿಸಲು ಕಂದಾಯ ಇಲಾಖೆಯ ದಾಖಲೆಗಳನ್ನು ಕೋರಿ ಸಲ್ಲಿಸಿದ ಅರ್ಜಿಗೆ ನಿರ್ಲಕ್ಷ್ಯ ವಹಿಸಿದ ದೇವನಹಳ್ಳಿ ತಹಶೀಲ್ದಾರ್ ಅನಿಲ್ ಅವರಿಗೂ ₹25 ಸಾವಿರ ದಂಡ ವಿಧಿ, ಶೋಕಾಸ್ ನೋಟಿಸ್ ಜಾರಿ ಮಾಡಿದೆ.

ಭೂಗಳ್ಳರ ಪಾಲಾಗುತ್ತಿದ್ದ ಸರ್ಕಾರಿ ಶಾಲೆಯ ಜಮೀನನ್ನು ಉಳಿಸಲು ಹೋರಾಡುತ್ತಿರುವ ಹಿರಿಯ ನಾಗರಿಕ ತಿರುಮಲಪ್ಪ ಅವರ ಕೋರಿಕೆಗೆ ಮನ್ನಣೆ ನೀಡದ ತಹಶೀಲ್ದಾರ್‌ಗೆ ದಂಡದ ಬಿಸಿ ಮುಟ್ಟಿಸಿದೆ. ವಿಚಾರಣೆ ವೇಳೆ ಎಲ್ಲಾ ದಾಖಲೆ ಒದಗಿಸುವುದಾಗಿ ಅಧಿಕಾರಿ ಒಪ್ಪಿ, ದಾಖಲೆ ನೀಡದೇ ಸತಾಯಿಸುತ್ತಿದ್ದರು ಎಂದು ಆಯೋಗ ತಿಳಿಸಿದೆ.

ನಿಧನ ವಾರ್ತೆ

ಲಕ್ಷ್ಮಮ್ಮ

ಬೆಂಗಳೂರು: ವೈಯಾಲಿಕಾವಲ್‌ನ 2ನೇ ಕ್ರಾಸ್ ನಿವಾಸಿ ಲಕ್ಷ್ಮಮ್ಮ (94) ಅವರು ಶನಿವಾರ ಸಂಜೆ ನಿಧನರಾದರು. ಅವರಿಗೆ ನಾಲ್ವರು ಪುತ್ರರು ಹಾಗೂ ಮೂವರು ಪುತ್ರಿಯರು ಇದ್ದಾರೆ. ಶ್ರೀರಾಂಪುರದಲ್ಲಿರುವ ಹರಿಶ್ಚಂದ್ರ ಘಾಟ್‌ನಲ್ಲಿ ಭಾನುವಾರ ಮಧ್ಯಾಹ್ನ 2ಕ್ಕೆ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. (ಸಂಪರ್ಕ: 8762688653)

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

KPTCL

(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)

ಸಂಖ್ಯೆ: ಮುಇಂವಿ/ಎಸ್‌ಎಲ್‌ಡಿಸಿ/ಕಾನಿಇಂ/ಸಕಾನಿಇಂ-1/2025-26/7985 ದಿನಾಂಕ: 28.11.2025

ಸಂಕ್ಷಿಪ್ತ ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಕವಿಪ್ರನಿನಿಯು, ಬಿಡ್ ವಿಚಾರಣೆ ಸಂಖ್ಯೆ: ಕವಿಪ್ರನಿನಿ/ಸಿಇಇ/ಎಸ್‌ಎಲ್‌ಡಿಸಿ/ಇಇ/ಎಇಇ-1/ಡಿಆರ್‌ಐ-012/2025-26 ಕ್ಕೆ ಸಂಬಂಧಿಸಿದಂತೆ, ‘‘**ಕರ್ನಾಟಕ ರಾಜ್ಯದಲ್ಲಿ ಕವಿಪ್ರನಿನಿಯ ಅಧಿಕೃತ ಬಳಕೆಗಾಗಿ 4G/5G/LTE (Voice & Data) ಸೌಲಭ್ಯದ ಸಂಪರ್ಕದೊಂದಿಗೆ ಕ್ಲೋಸ್ಡ್ ಯೂಸರ್ ಗ್ರೂಪ್ ನೆಟ್‌ವರ್ಕ್ ಅನ್ನು (ಈಗ ಸುಮಾರು 3390 ಸಂಖ್ಯೆಗಳು ಇದ್ದು ಹೆಚ್ಚು ಅಥವಾ ಕಡಿಮೆಯಾಗಬಹುದು) 3 ತಿಂಗಳ ಅನುಷ್ಠಾನ ಅವಧಿಯನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದ ನಂತರ 5 ವರ್ಷಗಳ ಅವಧಿಗೆ ಸೇವೆಯನ್ನು ಒದಗಿಸಲು**’’ ಆಸಕ್ತಿ ಇರುವ ಸಂಸ್ಥೆಗಳಿಂದ ಬಿಡ್‌ಗಳನ್ನು ಆಹ್ವಾನಿಸಲಾಗಿದೆ.

ಸಂಪೂರ್ಣ ವಿವರಗಳನ್ನು ವೆಬ್‌ಸೈಟ್ **https://kppp.karnataka.gov.in** ಗೆ ದಿನಾಂಕ: **04.12.2025 ರಂದು ಮಧ್ಯಾಹ್ನ 3.00 ಗಂಟೆಗೆ** ಅಥವಾ ನಂತರ ಲಾಗಿನ್ ಆಗಿ ಪಡೆಯಬಹುದು. ಹೆಚ್ಚಿನ ವಿವರಗಳನ್ನು ಕೆಳಸಹಿದಾರರ ಕಛೇರಿಯನ್ನು ಸಂಪರ್ಕಿಸಿ ಪಡೆದುಕೊಳ್ಳಬಹುದು.

ಸಹಿ/- **ಮುಖ್ಯ ಇಂಜಿನಿಯರ್ (ವಿ), ರಾಜ್ಯ ವಿದ್ಯುತ್ ರವಾನೆ ಕೇಂದ್ರ, ಕವಿಪ್ರನಿನಿ, ನಂ. 28, ರೇಸ್‌ಕೋರ್ಸ್ ರಸ್ತೆ, ಬೆಂಗಳೂರು -560 009.**

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಜಯನಗರ ವಾಣಿಜ್ಯ ಸಂಕೀರ್ಣ ಮಳಿಗೆ, ಜಯನಗರ, ಬೆಂಗಳೂರು–560011.

ಸಂಖ್ಯೆ: ಕಾಇಂ/ಸನೀ/ಸ.ಇಂ–1&5/ಟೆಂಡರ್ ಪ್ರಕಟಣೆ ಸಂ.21/2025–26/2806 ದಿನಾಂಕ: 29.11.2025

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಅರ್ಹ ಗುತ್ತಿಗೆದಾರರರು ಲೆಕ್ಕ ಶೀರ್ಷಿಕೆ ಗಿರಿಜನ ಉಪಯೋಜನೆ ಮತ್ತು ವಿಶೇಷ ಘಟಕ ಕಾಮಗಾರಿಗಳು ಯೋಜನೆಯಡಿ ಅನುಮೋದನೆಗೊಂಡ ಈ ಕೆಳಕಂಡಂತೆ ಕಾಮಗಾರಿಗಳ ಕೆಟಿಪಿಪಿ ಸ್ಟಾಂಡರ್ಡ್ ಬಿಡ್ ಡಾಕ್ಯೂಮೆಂಟ್ KW-1,2 ಮತ್ತು KC-7ರ ಮುಖಾಂತರ ಪರಿಶಿಷ್ಟ ಜಾತಿ ಗುತ್ತಿಗೆದಾರರಿಗೆ, ಪರಿಶಿಷ್ಟ ಪಂಗಡ ಗುತ್ತಿಗೆದಾರರಿಗೆ, ಪ್ರವರ್ಗ I ಗುತ್ತಿಗೆದಾರರಿಗೆ, ಪ್ರವರ್ಗ II(ಎ) ಗುತ್ತಿಗೆದಾರರಿಗೆ & ಸಾಮಾನ್ಯ (ಜನರಲ್) ಗುತ್ತಿಗೆದಾರರಿಗೆ ಟೆಂಡರ್ ಆಹ್ವಾನಿಸಲಾಗಿದೆ. ಈ ಕಾಮಗಾರಿಗಳಿಗೆ ಕೆಪಿಪಿಪಿ ವೆಬ್‌ಸೈಟ್ **https://kppp.karnataka.gov.in** ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿನಲ್ಲಿ ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಹಾಗೂ ಮೇಲಿನ ವೆಬ್ ಸೈಟ್‌ನಲ್ಲಿ ಮಾಹಿತಿ ಪಡೆಯಬಹುದು.

ಕಾಮಗಾರಿಯ ಹೆಸರು :– ಬೆಂಗಳೂರು ದಕ್ಷಿಣ ಜಿಲ್ಲೆ, ಕನಕಪುರ ತಾಲ್ಲೂಕು, ಮಾಗಡಿ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ದೊಡ್ಡಬಳ್ಳಾಪುರ ತಾಲ್ಲೂಕು, ನೆಲಮಂಗಲ ತಾಲ್ಲೂಕು, ದೇವನಹಳ್ಳಿ ವಿಧಾನಸಭಾ ಕ್ಷೇತ್ರ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ, ಆನೇಕಲ್ ತಾಲ್ಲೂಕುಗಳಲ್ಲಿ ಕೊಳವೆ ಬಾವಿ ಕೊರೆದು ನೀರಾವರಿ ಸೌಲಭ್ಯ ಕಲ್ಪಿಸುವ ಕಾಮಗಾರಿ, ಡಿ.ಪಿ.ಆರ್ ತಯಾರಿಸುವ ಜಾಬ್‌ವರ್ಕ್, 2 Nos of culverts & Protection wall to Draft channel of Gattahalli Tank in Anekal taluk Bangalore Urban District ಕಾಮಗಾರಿಗಳು ಒಳಗೊಂಡಂತೆ **ಒಟ್ಟು 18 ಕಾಮಗಾರಿಗಳನ್ನು ಆಹ್ವಾನಿಸಲಾಗಿದೆ.**

ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ) : **ರೂ.0.53 (ಕನಿಷ್ಠ) & ರೂ.49 (ಗರಿಷ್ಠ)** ಇಎಂಡಿ (ರೂಗಳಲ್ಲಿ): **ರೂ.1,500/– (ಕನಿಷ್ಠ) & ರೂ.71,200/– (ಗರಿಷ್ಠ).**

ಕಾಮಗಾರಿ ಪೂರ್ಣಗೊಳಿಸಬೇಕಾದ ಅವಧಿ: 01 ರಿಂದ 02 ತಿಂಗಳು ಮಳೆಗಾಲ ಸೇರಿದಂತೆ. (ಟೆಂಡರ್‌ಗಿಟ್ಟ ಮೊತ್ತ, ಇಎಂಡಿ, ಕಾಮಗಾರಿಯ ಅವದಿ ಆಯಾ ಕಾಮಗಾರಿಗಳಿಗೆ ಅನುಗುಣವಾಗಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಇದ್ದಂತೆ)

(1) ಟೆಂಡರ್ ದಾಸ್ತಾ ವೇಜುಗಳನ್ನು ವೆಬ್‌ಸೈಟ್ ಪ್ರಕಟಿಸುವ ದಿನಾಂಕ: **29.11.2025 ಸಂಜೆ 16.30** ಗಂಟೆಯ ನಂತರ, (2) ವಿವರಗಳನ್ನು ಈ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾದ ದಿನಾಂಕ ಮತ್ತು ವೇಳೆ: **06.12.2025 ಸಂಜೆ 16.00** ಗಂಟೆಯವರೆಗೆ. (3) ಭರ್ತಿ ಮಾಡಿದ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **06.12.2025 ಸಂಜೆ 16.30** ಗಂಟೆಯವರೆಗೆ. (4) ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: **08.12.2025 ಬೆಳಿಗ್ಗೆ 11.30** ಗಂಟೆಗೆ. (5) ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ: **ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ**

ಷರತ್ತುಗಳು: 1) ಹೆಚ್ಚಿನ ವಿವರಗಳನ್ನು ಕೆಪಿಪಿಪಿ ಪೋರ್ಟಲ್ ಮುಖಾಂತರ ವೆಬ್‌ಸೈಟ್ ವಿಳಾಸ: **https://kppp.karnataka.gov.in** ರಲ್ಲಿ ಪಡೆಯಬಹುದಾಗಿದೆ. ಬದಲಾವಣೆ ಇದ್ದಲ್ಲಿ ಕೆಪಿಪಿಪಿ ಪೋರ್ಟಲ್ ಮುಖಾಂತರ ಪ್ರಕಟಿಸಲಾಗುವುದು. 2) ಗುತ್ತಿಗೆ ಪಡೆಯಲು ಕನಿಷ್ಠ ಅರ್ಹತೆಗಳಿಗಾಗಿ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನ ಐ ಟಿ ಟಿ ನಿಬಂಧನೆ– 1,2 ಮತ್ತು ಕೆ.ಸಿ.–7 ರಲ್ಲಿ ನಮೂದಿಸಿದ ಸೂಚನೆಗಳನ್ನು ಸೂಕ್ಷ್ಮವಾಗಿ ಗಮನಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ. 3) ಗುತ್ತಿಗೆದಾರರು ಜಿಎಸ್‌ಟಿ ಹೊರತುಪಡಿಸಿ ದರಗಳನ್ನು ನಮೂದಿಸಬೇಕು. 4) ಎಲ್ಲಾ ಟೆಂಡರ್‌ನ್ನು ಅಥವಾ ಯಾವುದಾದರೂ ಟೆಂಡರ್‌ನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ

ವಾಸಾಸಂಇ/ವಾ.ಪ್ರ/4104/ಎಸ್‌ಎಸ್‌ಸಿ/2025–26

ಭಾರತ ಸರಕಾರ
ವಸೂಲಾತಿ ಅಧಿಕಾರಿಯವರ ಕಚೇರಿ-- I/II

ಸಾಲ ವಸೂಲಾತಿ ನ್ಯಾಯಾಧಿಕರಣ, ಬೆಂಗಳೂರು- (ಡಿಆರ್‌ಟಿ-2)

ಭಾರತ ಸರ್ಕಾರ, ವಿತ್ತ ಸಚಿವಾಲಯ, ಹಣಕಾಸು ಸೇವಾ ವಿಭಾಗ,
ಸಾಲವಸೂಲಾತಿ ನ್ಯಾಯಾಧಿಕರಣ – II, ಕರ್ನಾಟಕ (ಬೆಂಗಳೂರು)
4ನೇ ಮಹಡಿ, ಟೆಲಿಫೋನ್ ಹೌಸ್, ರಾಜ್ ಭವನ್ ರಸ್ತೆ ಬೆಂಗಳೂರು-560 001

ಫಾರಂ ನಂ. 14 (ರೆಗ್ಯುಲೇಷನ್ 33(2))

ಡಿಮ್ಯಾಂಡ್ ನೋಟೀಸು

ಸಾಲ ವಸೂಲಾತಿ ಮತ್ತು ದಿವಾಳಿತನ ಕಾಯಿದೆ 1993ರ ಸೆಕ್ಷನ್ 25 ರಿಂದ 28ನ್ನು ಮತ್ತು ಇನ್‌ಕಂ ಟ್ಯಾಕ್ಸ್ ಆಕ್ಟ್ 1961ರ 2ನೇ ಷೆಡ್ಯೂಲಿನ ನಿಯಮ 2ರ ಅನ್ವಯ ನೋಟೀಸು.

ಆರ್ ಸಿ ನಂ. 99/2025 ಒಎ ನಂ. 887/2022

ಕೆನರಾ ಬ್ಯಾಂಕ್ Vs ಶ್ರೀಮತಿ ಶೃತಿ ಕೆ. ಸಿ. ಮತ್ತು ಇತರರು

ಇವರ ವಿಷಯದಲ್ಲಿ (ಸಿಹೆಚ್) **ಕೆನರಾ ಬ್ಯಾಂಕ್,** ಬಿಡದಿ ಶಾಖೆ, ನೆಲ್ಲಿಗುಡ್ಡ ತಾಲೂಕು ರಸ್ತೆ, ಬಿಡದಿ – 562 109, ರಾಮನಗರಂ ಜಿಲ್ಲೆ, ಕರ್ನಾಟಕ .... **ಸರ್ಟಿಫಿಕೇಟ್ ಹೋಲ್ಡರ್ಸ್**

Vs

(ಸಿಡಿ 1) **ಶ್ರೀಮತಿ ಶೃತಿ ಕೆ. ಸಿ.** D/o. ಶ್ರೀ ಚನ್ನಪ್ಪ, ವಾಸ: ನಂ. 51/ಎ, ಎಂಐಜಿ –1, ಕೆಹೆಚ್‌ಬಿ ಕಾಲೋನಿ, ಬಿಡದಿ, ರಾಮನಗರ ಜಿಲ್ಲೆ – 562 109, ಕರ್ನಾಟಕ.

(ಸಿಡಿ 2) **ಶ್ರೀ ಚನ್ನಪ್ಪ** S/o. ಲೇಟ್ ನಾಗಪ್ಪ, ವಾಸ: ನಂ. 51/ಎ, ಎಂಐಜಿ –1, ಕೆಹೆಚ್‌ಬಿ ಕಾಲೋನಿ, ಬಿಡದಿ, ರಾಮನಗರ ಜಿಲ್ಲೆ – 562 109, ಕರ್ನಾಟಕ.

(ಸಿಡಿ 3) **ಶ್ರೀಮತಿ ಸಾವಿತ್ರಮ್ಮ** W/o. ಶ್ರೀ ಚನ್ನಪ್ಪ, ವಾಸ: ನಂ. 51/ಎ, ಎಂಐಜಿ –1, ಕೆಹೆಚ್‌ಬಿ ಕಾಲೋನಿ, ಬಿಡದಿ, ರಾಮನಗರ ಜಿಲ್ಲೆ – 562 109, ಕರ್ನಾಟಕ.

(ಸಿಡಿ 4) **ಶ್ರೀ ಸಂತೋಷ್** S/o. ಶ್ರೀ ಚನ್ನಪ್ಪ, ವಾಸ: ನಂ. 51/ಎ, ಎಂಐಜಿ –1, ಕೆಹೆಚ್‌ಬಿ ಕಾಲೋನಿ, ಬಿಡದಿ, ರಾಮನಗರ ಜಿಲ್ಲೆ – 562 109, ಕರ್ನಾಟಕ. ......**ಸರ್ಟಿಫಿಕೇಟ್ ಡೆಟರ್ಸ್**

ಗೌರವಾನ್ವಿತ ಪ್ರಿಸೈಡಿಂಗ್ ಆಫೀಸರ್, ಸಾಲ ವಸೂಲಾತಿ ನ್ಯಾಯಾಧಿಕಣ, ಬೆಂಗಳೂರು (ಡಿಆರ್‌ಟಿ–2) ಇವರು ಒ.ಎ. ನಂ. 887/2022ರಲ್ಲಿ ಜಾರಿ ಮಾಡಿದ ರಿಕವರಿ ಸರ್ಟಿಫಿಕೇಟ್‌ನಂತೆ ರೂ. **21,32,347/-** (ರೂಪಾಯಿ ಇಪ್ಪತ್ತೊಂದು ಲಕ್ಷದ ಮೂವತ್ತೆರಡು ಸಾವಿರದ ಮುನ್ನೂರ ನಲವತ್ತೇಳು ಮಾತ್ರ) ಒಳಗೊಂಡಿರುವ ಈ ಮೊತ್ತದ ವಿವರಗಳು : (I) ಎಂಎಸ್‌ಎಂಇ ಟರ್ಮ್ ಲೋನ್ : ರೂ.21,15,526/- (ರೂಪಾಯಿ ಇಪ್ಪತ್ತೊಂದು ಲಕ್ಷ ಹದಿನೈದು ಸಾವಿರದ ಐದು ನೂರ ಇಪ್ಪತ್ತಾರು ಮಾತ್ರ) ಜೊತೆಗೆ ದಿನಾಂಕ 25.03.2022 ರಿಂದ ವಾರ್ಷಿಕ 11.20% ಬಡ್ಡಿ (II) **ಕ್ರೆಡಿಟ್ ಕಾರ್ಡ್ ಲಯಾಬಿಲಿಟಿ ಸಾಲ : ರೂ.16,821/-** (ರೂಪಾಯಿ ಹದಿನಾರು ಸಾವಿರದ ಎಂಟು ನೂರ ಇಪ್ಪತ್ತೊಂದು ಮಾತ್ರ) ಜೊತೆಗೆ ದಿನಾಂಕ 25.03.2022 ರಿಂದ ವಾರ್ಷಿಕ 16% ಬಡ್ಡಿ ಅಂದರೆ ಒಎ/887/2022 ಅನ್ನು ದಾಖಲಿಸಿದ ದಿನಾಂಕದಿಂದ ಪೂರ್ಣ ವಸೂಲಾತಿಯ ದಿನಾಂಕದವರೆಗೆ ವೆಚ್ಚಗಳು ಮತ್ತು ಬಡ್ಡಿಯೊಂದಿಗೆ ಮತ್ತು **ರೂ.24,000/-** (ರೂಪಾಯಿಗಳು ಇಪ್ಪತ್ತ ನಾಲ್ಕು ಸಾವಿರ ಮಾತ್ರ) ಪ್ರಮಾಣ ಪತ್ರ ಸಾಲಗಾರಿಂದ ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ ಬಾಕಿ ಉಳಿದಿದೆ.

2) ನೀವು ಸದರಿ ಮೊತ್ತವನ್ನು ಈ ನೋಟೀಸನ್ನು ನೀಡಿದ 15 ದಿನಗಳ ಒಳಗೆ ಪಾವತಿಸಬೇಕಾಗುತ್ತದೆ. ಇದಕ್ಕೆ ತಪ್ಪಿದಲ್ಲಿ, ರಿಕವರಿ ಆಫ್ ಡೆಟ್ಸ್ ಡ್ಯೂ ಟುಬ್ಯಾಂಕ್ಸ್ ಅಂಡ್ ಫೈನಾನ್ಷಿಯಲ್ ಇನ್ಸಿಟಿಟ್ಯೂಷನ್ಸ್ ಆಕ್ಟ್, 1993ರ ನಿಯಮಗಳ ಅನ್ವಯ ಮೊತ್ತವನ್ನು ವಸೂಲಿ ಮಾಡಲು ಕ್ರಮಗಳನ್ನು ಕೈಗೊಳ್ಳಲಾಗುವುದು. 3) ನಿಮಗೆ ಈ ಮೂಲಕ ಸೂಚಿಸುವುದೇನೆಂದರೆ ಮುಂದಿನ ವಿಚಾರಣೆಯ ದಿನಾಂಕದಂದು ನಿಮ್ಮ ಸ್ವತ್ತುಗಳ ವಿವರಗಳನ್ನು ಅಫಿಡವಿಟ್ ಮೂಲಕ ಘೋಷಿಸಬೇಕೆಂದು ಆದೇಶ ನೀಡಲಾಗಿದೆ. 4) ನಿಮಗೆ ಈ ಮೂಲಕ ಆದೇಶಿಸುವುದೇನೆಂದರೆ ಮುಂದಿನ ಪ್ರಕ್ರಿಯೆಗಳಿಗಾಗಿ ಈ ನೋಟೀಸನ್ನು ನೀಡಿದ 15 ದಿನಗಳ ಒಳಗೆ ಕೆಳಸಹಿದಾರರ ಮುಂದೆ ಹಾಜರಾಗಬೇಕು. 5) ಮೇಲೆ ಹೇಳಲ್ಪಟ್ಟ ಮೊತ್ತವಲ್ಲದೆ ನೀವು ಹೆಚ್ಚುವರಿಯಾಗಿ ಮುಂದಿನದಕ್ಕೂ ಬಾಧ್ಯರಾಗುತ್ತೀರಿ : (ಎ) ಈ ನೋಟೀಸು ನೀಡಿದ ನಂತರದ ಪ್ರಕ್ರಿಯೆಯನ್ನು ಪ್ರಾರಂಭಿಸುವ ಅವಧಿಗೆ ಆದೇಶದ ಪ್ರಕಾರ ಕೊಡಬೇಕಾಗಿ ರುವಂತಹ ಬಡ್ಡಿ ಮೊತ್ತ. (ಬಿ) ಈ ನೋಟೀಸನ್ನು ಜಾರಿ ಮಾಡಲು ಮತ್ತು ವಾರಂಟ್‌ಗಳಿಗೆ ಮತ್ತು ಇತರ ಪ್ರಕ್ರಿಯೆಗಳಿಗೆ ಮತ್ತು ಇತರ ಎಲ್ಲಾ ನಡಾವಳಿಗಳಿಗೆ ಸಾಲವನ್ನು ವಸೂಲಿ ಮಾಡುವಲ್ಲಿ ತಗಲುವ ಎಲ್ಲ ಖರ್ಚು ಮತ್ತು ವೆಚ್ಚಗಳು.

ನನ್ನ ಕೈಯಿಂದ ಮತ್ತು ಈ ನ್ಯಾಯಾಧಿಕರಣದ ಮುದ್ರೆಯ ಅಡಿಯಲ್ಲಿ **05.04.2025 ರಂದು** ಕೊಡಲ್ಪಟ್ಟಿದೆ.

ಸಹಿ/- ವಸೂಲಾತಿ ಅಧಿಕಾರಿ
ಸಾಲ ವಸೂಲಾತಿ ನ್ಯಾಯಾಧಿಕರಣ, ಬೆಂಗಳೂರು ,(ಡಿಆರ್‌ಟಿ–2)

ಗಮನಿಸಿ : ಆರ್ಥಿಕ ಸಂಸ್ಥೆಗಳಿಗೆ ಮತ್ತು ಬ್ಯಾಂಕ್‌ಗಳಿಗೆ ಬಾಕಿ ಇರುವ ಸಾಲಗಳ ವಸೂಲಾತಿ ಕಾಯ್ದೆ 1993ರ ಜೊತೆಯಲ್ಲಿ ಓದಿಕೊಂಡಂತೆ ಆದಾಯ ತೆರಿಗೆ ಕಾಯ್ದೆ 1961ರ ಎರಡನೇ ಷೆಡ್ಯೂಲಿನ ನಿಯಮ 16ರತ್ತ ಗಮನ ಸೆಳೆಯಲಾಗಿದ್ದು, ಅದು ಈ ಕೆಳಗಿನಂತಿದೆ : 16 (1) ನಿಯಮ 2 ರ ಅಡಿಯಲ್ಲಿ ಸುಸ್ತಿದಾರರೊಬ್ಬರಿಗೆ ನೋಟೀಸನ್ನು ನೀಡಿರುವಾಗ, ಸುಸ್ತಿದಾರರೇ ಆಗಲಿ ಅವರ ಆಸಕ್ತ ಪ್ರತಿನಿಧಿಯೇ ಆಗಲಿ, ಸಾಲ ವಸೂಲಾತಿ ಅಧಿಕಾರಿಯ ಅನುಮತಿ ಪಡೆದುಕೊಂಡ ಹೊರತು, ತಮಗೆ ಸೇರಿದ ಯಾವುದೇ ಆಸ್ತಿಯನ್ನು ಒತ್ತೆ ಇಡುವುದು/ಮಾರುವುದು/ಬಾಡಿಗೆಗೆ ಕೊಡುವುದು ಅಥವಾ ಇನ್ನು ಯಾವುದೇ ರೀತಿಯಲ್ಲಿ ಪರಭಾರೆ ಮಾಡುವುದಕ್ಕೆ ಅರ್ಹರಾಗಿರುವುದಿಲ್ಲ; ಹಾಗೆಯೇ, ಅಂಥ ಆಸ್ತಿಯ ಸಂಬಂಧವಾಗಿ ಹಣವನ್ನು ಸಂದಾಯ ಮಾಡುವುದಕ್ಕೆ ವಿರುದ್ಧವಾಗಿ ಯಾವುದೇ ಸಿವಿಲ್ ಕೋರ್ಟು ಯಾವುದೇ ಕ್ರಮವನ್ನು ಆದೇಶಿಸುವಂತಿಲ್ಲ. 2) ಈ ಷೆಡ್ಯೂಲಿನ ಅಡಿಯಲ್ಲಿ ಮುಟ್ಟುಗೋಲು ಹಾಕಿಕೊಂಡಿರುವಾಗ, ಮುಟ್ಟುಗೋಲು ಹಾಕಲ್ಪಟ್ಟ ಆಸ್ತಿಯ ಅಥವಾ ಅದಕ್ಕೆ ಸಂಬಂಧಿಸಿದ ಯಾವುದೇ ಭಾಗದ ಖಾಸಗಿ ವರ್ಗಾವಣೆ ಅಥವಾ ನೀಡಿಕೆಯಾಗಲಿ, ಸದರಿ ಮುಟ್ಟುಗೋಲು ಹಾಕುವಿಕೆಗೆ ವಿರುದ್ಧವಾಗಿ ಸುಸ್ತಿದಾರರಿಗೆ ಯಾವುದೇ ಸಾಲದ ಲಾಭಾಂಶ ಅಥವಾ ಇತರ ಹಣಗಳ ಪಾವತಿಯಾಗಲಿ, ಮುಟ್ಟುಗೋಲಿನ ಅಡಿಯಲ್ಲಿ ಒತ್ತಾಯಿಸಬಹುದಾದ ಎಲ್ಲ ಕ್ಲೇಮುಗಳ ವಿರುದ್ಧವಾಗಿ ಅಸಿಂಧೂವಾಗುತ್ತವೆ. 3) ನೀವು ಕಳೆದ 5 ವರ್ಷಗಳ ಆದಾಯ ತೆರಿಗೆ ಪಾವತಿಯ ದಾಖಲೆಗಳೊಂದಿಗೆ ನಿಮ್ಮ ಸ್ಥಿರ ಮತ್ತು ಚರಾಸ್ತಿಗಳ ವಿವರಗಳನ್ನು ಈ ನ್ಯಾಯಾಧಿಕರಣಕ್ಕೆ ಸಲ್ಲಿಸಬೇಕಾಗಿದೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರಪಾರ್ಕ್ ಪಶ್ಚಿಮ, ಬೆಂಗಳೂರು–560 020

ಸಂ.: ಬೆಂಅಪ್ರಾ/ನಯೋಸ/CLU-427/3271/2025–26 ದಿನಾಂಕ: 28.11.2025

ಪ್ರಕಟಣೆ

[ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69(3)ರಡಿಯಲ್ಲಿ]

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಸ್ಥಳೀಯ ಯೋಜನಾ ಪ್ರದೇಶದ ಪರಿಷ್ಕೃತ ಮಹಾಯೋಜನೆ 2015 ಸರ್ಕಾರದ ಆದೇಶ ಸಂಖ್ಯೆ: ಯುಡಿಡಿ 540 ಬೆಂಆಸೇ 2004, ದಿನಾಂಕ: 22.06.2007ರಲ್ಲಿ ಅನುಮೋದನೆಯಾಗಿದ್ದು, ಐದು ವರ್ಷಗಳ ಅವಧಿಯು ಈಗಾಗಲೇ ಪೂರ್ಣಗೊಂಡಿದ್ದು, ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69(2) ರ ಅಡಿಯಲ್ಲಿ ಪ್ರಶ್ನಿತ ಜಮೀನಿನ ಸಾರ್ವಜನಿಕ / ಅರೆಸಾರ್ವಜನಿಕ ಭೂಉಪಯೋಗ ರದ್ದಾಗಿರುತ್ತದೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 69 (4) ರನ್ವಯ ಈ ಕೆಳಕಂಡ ಜಮೀನನ್ನು ವಸತಿ ಉಪಯೋಗಕ್ಕಾಗಿ ಭೂಉಪಯೋಗ ನಿಗದಿಪಡಿಸಲು ಅರ್ಜಿದಾರರು ಕೋರಿರುತ್ತಾರೆ. ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 69(4) ರ ಅಡಿಯಲ್ಲಿ ಈ ಕೆಳಕಂಡಂತೆ ಭೂಉಪಯೋಗ ನಿಗದಿಪಡಿಸುವ ಸಂಬಂಧ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿನಗಳೊಳಗಾಗಿ ಸಲಹೆ /ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಸಲಹೆ / ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂ ಉಪಯೋಗ	ನಿಗಧಿಪಡಿಸಲು ಕೋರಿರುವ ಹೊಸ ಭೂ ಉಪಯೋಗ
1	ಶ್ರೀ.ಎಸ್. ಚಿನರಾಜ್ ಬಿನ್ ಸಂಧ್ಯಾಗಪ್ಪ ಹಾರೋಬೆಲೆ, ನಲ್ಲಹಳ್ಳಿ, ರಾಮನಗರ	ಬೆಂಗಳೂರು ದಕ್ಷಿಣ	ಉತ್ತರಹಳ್ಳಿ	ಕೊತ್ತನೂರು	187/2ರ ಪೈಕಿ	0–28.50	ಸಾರ್ವಜನಿಕ / ಅರೆ ಸಾರ್ವಜನಿಕ ವಲಯ	ವಸತಿ

ಸಹಿ/– ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

ಮಾಹೆ: ಮೂವರಿಗೆ ಚಿನ್ನದ ಪದಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ (ಮಾಹೆ) ವಿಶ್ವವಿದ್ಯಾಲಯದ ಬೆಂಗಳೂರು ಕ್ಯಾಂಪಸ್‌ನ 33ನೇ ಘಟಿಕೋತ್ಸವ ಶನಿವಾರ ನಡೆಯಿತು.

ಯಲಹಂಕದ ಕ್ಯಾಂಪಸ್‌ನಲ್ಲಿ ಸಹ ಕುಲಾಧಿಪತಿ ಎಚ್. ಎಸ್. ಬಲ್ಲಾಳ್ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ 12 ಪಿಎಚ್.ಡಿ ಪದವಿ ಸೇರಿ ಒಟ್ಟು 746 ಮಂದಿಗೆ ಪದವಿ ಪ್ರದಾನ ಮಾಡಲಾಯಿತು. ವಿದ್ಯಾರ್ಥಿಗಳಾದ ರಿಯಾನಾ ಚಟ್ಟೋಪಾಧ್ಯಾಯ, ಮೋಹನಿಶ್ ರಾಜ್ ಕೆ, ದಿಬ್ಯಾಭ್ ದೇಬ್ ಅವರಿಗೆ 'ಡಾ.ಟಿ.ಎಂ.ಎ. ಪೈ ಚಿನ್ನದ ಪದಕ' ನೀಡಿ ಗೌರವಿಸಲಾಯಿತು.

ಯಲಹಂಕ ಕ್ಯಾಂಪಸ್‌ನಲ್ಲಿ ಮಾಹೆ ವಿಶ್ವವಿದ್ಯಾಲಯದ 33ನೇ ಘಟಿಕೋತ್ಸವ ನಡೆಯಿತು

ಆ್ಯಕ್ಸಿಸ್ ಬ್ಯಾಂಕ್‌ನ ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥೆ ರಾಜ್‌ಕಮಲ್ ವೆಂಪತಿ ಮಾತನಾಡಿ, 'ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನ ಎಷ್ಟೇ ವೇಗವಾಗಿದ್ದರೂ ಮನುಷ್ಯರಂತೆ ಯೋಚಿಸುವ ಶಕ್ತಿ ಇಲ್ಲ. ಹಾಗಾಗಿ ತಂತ್ರಜ್ಞಾನವನ್ನು ಸಾಧನವನ್ನಾಗಿ ಬಳಸಿಕೊಂಡು ನಿಮ್ಮಲ್ಲಿರುವ ಕುತೂಹಲ ಉಳಿಸಿಕೊಂಡರೆ, ಭವಿಷ್ಯ ಉತ್ತಮವಾಗಿರುತ್ತದೆ' ಎಂದು ಸಲಹೆ ನೀಡಿದರು.

'ವೃತ್ತಿ ಜೀವನದ ಹಾದಿ ಸರಳವಾಗಿರುವುದಿಲ್ಲ. ಸಾಕಷ್ಟು ತಿರುವುಗಳು, ಪ್ರಶ್ನೆಗಳು ಎದುರಾಗುತ್ತವೆ. ಸವಾಲುಗಳನ್ನು ಎದುರಿಸಿದರೆ, ಸಾಧನೆ ಮಾಡಲು ಸಾಧ್ಯ' ಎಂದರು.

ಕುಲಪತಿ ಎಂ. ಡಿ. ವೆಂಕಟೇಶ್ ಮಾತನಾಡಿ, 'ಬೆಂಗಳೂರು ಕ್ಯಾಂಪಸ್‌ನ ಶೈಕ್ಷಣಿಕ ಮತ್ತು ಸಂಶೋಧನಾ ವ್ಯವಸ್ಥೆಯನ್ನು ಬಲಪಡಿಸಲು ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಮುಖ್ಯವಾಗಿ 7-ಕ್ಯೂಬಿಟ್ ಕ್ವಾಂಟಮ್ ಕಂಪ್ಯೂಟಿಂಗ್ ಸೌಲಭ್ಯ, 'ಐ-ಫ್ಯಾಕ್ಟರಿ', ರೊಬೊಟಿಕ್ಸ್, ಮಣಿಪಾಲ್ ಯೂನಿವರ್ಸಿಟಿ ಟೆಕ್ನಾಲಜಿ ಬ್ಯುಸಿನೆಸ್ ಇನ್‌ಕ್ಯುಬೇಟರ್, ಸ್ಯಾಟಲೈಟ್ ಕೇಂದ್ರ ಪ್ರಾರಂಭಿಸಲಾಗುವುದು' ಎಂದು ಹೇಳಿದರು.

ಕುಣಿಗಲ್: ಮಗುವಿಗೆ ಜನ್ಮ ನೀಡಿದ ಬಾಲಕಿ – ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಕುಣಿಗಲ್: ತಾಲ್ಲೂಕಿನ ಹುಲಿಯೂರು ದುರ್ಗ ಹೋಬಳಿಯ ಗ್ರಾಮವೊಂದರ ಬಾಲಕಿ ಗಂಡು ಮಗುವಿಗೆ ಜನ್ಮ ನೀಡಿದ್ದಾಳೆ. ಬಾಲಕಿ ಗರ್ಭಿಣಿಯಾಗಲು ಕಾರಣವಾದ ಆರೋಪದ ಮೇಲೆ 44 ವರ್ಷದ ಮಲ್ಲೇಶ ಎಂಬುವವರನ್ನು ಪೊಲೀಸರು ಬಂಧಿಸಿದ್ದಾರೆ.

ಆಗಸ್ಟ್‌ನಲ್ಲಿ ಪೋಷಕರು ಬಾಲಕಿಯನ್ನು ಚಿಕಿತ್ಸೆಗೆಂದು ಆಸ್ಪತ್ರೆಗೆ ಕರೆದುಕೊಂಡು ಹೋದಾಗ 7 ತಿಂಗಳ ಗರ್ಭಿಣಿಯಾಗಿರುವುದು ತಿಳಿದಿದೆ. ನವೆಂಬರ್ 18ರಂದು ಮಗು ಜನಿಸಿದೆ. ಪೊಲೀಸರು ಪೋಕ್ಸೊ ಕಾಯ್ದೆ ಅಡಿ ಪ್ರಕರಣ ದಾಖಲಿಸಿದ್ದರು. ತಲೆ ಮರೆಸಿಕೊಂಡಿದ್ದ ಆರೋಪಿಯನ್ನು ಪೊಲೀಸರು ಶನಿವಾರ ಬಂಧಿಸಿದ್ದಾರೆ.

SBI ಭಾರತೀಯ ಸ್ಟೇಟ್ ಬ್ಯಾಂಕ್, ಪ್ರಾದೇಶಿಕ ವ್ಯವಹಾರ ಕಚೇರಿ–02
ಬಾಣಸವಾಡಿ, ನಂ.253, 4ನೇ ಮಹಡಿ, ಡಾಲ್ಫಿನ್ ಮ್ಯಾನ್ಷನ್, ಹೆಣ್ಣೂರು ರಸ್ತೆ
ಹೆಣ್ಣೂರು ಬಸ್ ಡಿಪೋ ಎದುರು, ಎಚ್ ಬಿಆರ್ ಲೇಔಟ್, ಬೆಂಗಳೂರು–560043
ದೂರವಾಣಿ: 080–25944208 /25944212

ಗುತ್ತಿಗೆಗೆ ಅಗತ್ಯವಿರುವ ಆವರಣ

ಎಸ್‌ಬಿಐ ಪರವಾಗಿ ಪ್ರಾದೇಶಿಕ ವ್ಯವಸ್ಥಾಪಕರು, ಆರ್ ಬಿಒ–02, ಬಾಣಸವಾಡಿಯವರು, ಎಸ್‌ಬಿಐ ಬೂದಿಗೆರೆ ಕ್ರಾಸ್ ಶಾಖೆಗೆ ಮುಖ್ಯ ರಸ್ತೆಯಲ್ಲಿ (ಬೂದಿಗೆರೆ ಕ್ರಾಸ್‌ನಿಂದ 3 ಕಿ.ಮೀ. ಮತ್ತು ಅದರ ಸುತ್ತಲಿನ ವ್ಯಾಪ್ತಿಯಲ್ಲಿ) ನೆಲಮಹಡಿಯಲ್ಲಿ ಇರುವ ಸುಮಾರು **232 ಚದರ ಮೀಟರ್ (2500 ಚದರ ಅಡಿ +/– 25%)** ಕಾರ್ಪೆಟ್ ಪ್ರದೇಶವನ್ನು ಹೊಂದಿರುವ ವಾಣಿಜ್ಯ/ ಕಚೇರಿ ಬಳಕೆಗಾಗಿ ಗುತ್ತಿಗೆ ಆಧಾರದ ಮೇಲೆ ಆವರಣಕ್ಕಾಗಿ ಮಾಲೀಕರು / ಪವರ್ ಆಫ್ ಅಟಾರ್ನಿ ಮಾಲೀಕರಿಂದ ಅರ್ಜಿಗಳನ್ನು ಆಹ್ವಾನಿಸಿದ್ದಾರೆ.

ವಿವರವಾದ ನಿಯತಾಂಕಗಳು, ಸಲ್ಲಿಕೆಗಳ ಸ್ಥಳ, ಷರತ್ತುಗಳ ನಿಯಮಗಳು ಮತ್ತು ಬೆಲೆ ಬಿಡ್ ಅನ್ನು ಒಳಗೊಂಡ ತಾಂತ್ರಿಕ ಬಿಡ್ ಗಳನ್ನು ಸಲ್ಲಿಸುವ ನಮೂನೆಯನ್ನು ಎಸ್‌ಬಿಐ ವೆಬ್ ಸೈಟ್ www.sbi.co.in ನ SBI in the news / Procurement News ಅಡಿಯಲ್ಲಿ **01.12.2025** ರಿಂದ **22.12.2025** ರವರೆಗೆ ಡೌನ್ ಲೋಡ್ ಮಾಡಬಹುದು. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ **22.12.2025** 3.00 ಗಂಟೆಗೆ ಒಳಗಾಗಿ ಅಥವಾ ಅದಕ್ಕೂ ಮುಂಚಿತವಾಗಿ. ದಲ್ಲಾಳಿಗಳಿಗೆ ಅವಕಾಶ ನೀಡಲಾಗುವುದಿಲ್ಲ.

ಸಹಿ/–
ಪ್ರಾದೇಶಿಕ ವ್ಯವಸ್ಥಾಪಕರು
ಪ್ರಾದೇಶಿಕ ವ್ಯವಹಾರ ಕಚೇರಿ–02
ಬಾಣಸವಾಡಿ

ಸ್ಥಳ: ಬೆಂಗಳೂರು
ದಿನಾಂಕ: 30.11.2025

'ಬನ್ನೇರುಘಟ್ಟ ಉದ್ಯಾನಕ್ಕೆ ಅಪಾಯ'

ಬೆಂಗಳೂರು: 'ಅತಿಯಾದ ನಗರೀಕರಣದಿಂದ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನದಲ್ಲಿ ಅರಣ್ಯ ನಾಶವಾಗುತ್ತಿದೆ' ಎಂದು ಬನ್ನೇರುಘಟ್ಟ ನೇಚರ್ ಕನ್ಸರ್ವೇಶನ್ ಟ್ರಸ್ಟ್ ಶನಿವಾರ ಕಳವಳ ವ್ಯಕ್ತಪಡಿಸಿದೆ.

'ಪರಿಸರಸೂಕ್ಷ್ಮ (ಬಫರ್) ವಲಯದ ಕಡಿತದಿಂದ ಉದ್ಯಾನದ ಗಡಿಯ ಸುತ್ತಮುತ್ತ ವಾಣಿಜ್ಯ ಚಟುವಟಿಕೆಗಳು ಹೆಚ್ಚುತ್ತಿದ್ದು, ವನ್ಯಜೀವಿಗಳು ಹಾಗೂ ಸ್ಥಳೀಯ ಸಮುದಾಯದ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತಿದೆ' ಎಂದು ಟ್ರಸ್ಟ್‌ನ ಕಿರಣ್ ಅರಸ್ ಅವರು ಪತ್ರಿಕಾಗೋಷ್ಠಿ ಯಲ್ಲಿ ತಿಳಿಸಿದರು.

'ಉದ್ಯಾನದ ಸುತ್ತಮುತ್ತಲಿನ ಪರಿಸರ ಸೂಕ್ಷ್ಮ ವಲಯವನ್ನು 2018ರಲ್ಲಿ 268.9 ಚದರ ಕಿ.ಮೀ.ಯಿಂದ, 168 ಚದರ ಕಿ.ಮೀ.ಗೆ ಇಳಿಸಲಾಗಿದೆ. ಇದರಿಂದ ಸ್ಥಳೀಯ ವನ್ಯಜೀವಿಗಳು ಮತ್ತು ಅವುಗಳ ಆವಾಸಸ್ಥಾನಗಳ ಮೇಲೆ ನಕಾರಾತ್ಮಕ ಪರಿಣಾಮ ಬೀರಿದೆ' ಎಂದು ಬೇಸರ ವ್ಯಕ್ತಪಡಿಸಿದರು.

ಪರಿಸರ ಪ್ರೇಮಿ ಕೀರ್ತನ್ ರೆಡ್ಡಿ, 'ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರವು ಉದ್ಯಾನ ದಾಟುವ 'ಸ್ಯಾಟಲೈಟ್ ಟೌನ್ ರಿಂಗ್ ರಸ್ತೆ' ಯೋಜನೆಯ ಭಾಗವಾಗಿ ಆರು ಪಥಗಳ ಮೇಲ್ಸೇತುವೆ ನಿರ್ಮಿಸುತ್ತಿದೆ. ಇದು ಉದ್ಯಾನದ ಪರಿಸರ ವ್ಯವಸ್ಥೆ ಮತ್ತು ಜೀವವೈವಿಧ್ಯಕ್ಕೆ ಅಪಾಯವನ್ನುಂಟು ಮಾಡಲಿದೆ' ಎಂದರು.

'ವಜ್ರ' ಬಸ್: ಪಾಸ್ ದರ ಕಡಿತ

ಬೆಂಗಳೂರು: ಬಿಎಂಟಿಸಿ 'ವಜ್ರ' ಹವಾನಿಯಂತ್ರಿತ ಬಸ್‌ನ ವಾರದ ಪಾಸ್ ದರವನ್ನು ಕಡಿತ ಮಾಡಲಾಗಿದೆ. ₹750ರಿಂದ ₹700ಕ್ಕೆ ಇಳಿಸಲಾಗಿದೆ ಎಂದು ಬಿಎಂಟಿಸಿ ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಯಾಣಿಕರಿಗೆ ಕೈಗೆಟಕುವ ದರದಲ್ಲಿ ಪಾಸ್ ನೀಡಲು ಈ ಕ್ರಮ ಕೈಗೊಳ್ಳಲಾಗಿದೆ. ಬಿಎಂಟಿಸಿ ಟುಮ್ಯಾಕ್ ಆ್ಯಪ್ ಮೂಲಕ ವಜ್ರ ಸಾಪ್ತಾಹಿಕ ಪಾಸ್‌ಗಳನ್ನು ಡಿಜಿಟಲ್ ಮಾದರಿಯಲ್ಲಿ ವಿತರಿಸುತ್ತಿದೆ. ಸುಲಭವಾಗಿ ಪಾಸ್ ಪಡೆಯಬಹುದು ಎಂದು ತಿಳಿಸಿದ್ದಾರೆ.



Reg.No.L Dis 2509-168/45-46 Phone No: 0821- 4281679

CHRIST THE KING CONVENT HIGH SCHOOL, MYSURU-4

J. L. B. ROAD, MYSURU. E-mail : : ckchs1945@gmail.

ನೇಮಕಾತಿ ಅರ್ಜಿ ಆಹ್ವಾನ

ಸಂಖ್ಯೆ: 04/25–26 ಅಧಿಸೂಚನೆ ದಿನಾಂಕ : 29–11–2025

ಕ್ರೈಸ್ಟ್ ದ ಕಿಂಗ್ ಕಾನ್ವೆಂಟ್(ರಿ), ತಾ॥ ಮೈಸೂರು, ಜಿ॥ ಮೈಸೂರು ಈ ಸಂಸ್ಥೆಯಿಂದ ನಡೆಯುತ್ತಿರುವ ಕ್ರೈಸ್ಟ್ ದ ಕಿಂಗ್ ಕಾನ್ವೆಂಟ್ ಪ್ರೌಢಶಾಲೆ, ಜೆ.ಎಲ್.ಬಿ.ರಸ್ತೆ, ಮೈಸೂರು ಈ ಶಾಲೆಯಲ್ಲಿ ಖಾಲಿಯಾಗಿರುವ "ಸಹಶಿಕ್ಷಕಿ ಕನ್ನಡ ಮತ್ತು ಹಿಂದಿ" ಹುದ್ದೆ ತುಂಬಲು ನಿರ್ದೇಶಕರು (ಪ್ರೌಢ ಶಿಕ್ಷಣ), ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರು ಇವರ ಆದೇಶ ಸಂಖ್ಯೆ : ಪಿ8(5)ಶಾಶಿಅ. ಖಾ.ಹು.ಭ ಅನು 1023254/2020–26 ದಿನಾಂಕ : 27–11–2025ರ ಅನ್ವಯ ಈ ಕೆಳಗಿನಂತೆ ಹುದ್ದೆ ತುಂಬಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಹುದ್ದೆಯ ವಿವರ ಅರ್ಹತೆ	ಅನುಮತಿ ನೀಡಿದ ವಿಷಯ	ಮೀಸಲಾತಿ
ಸಹ ಶಿಕ್ಷಕರು ಬಿ.ಎ., ಬಿ.ಎಡ್.	1. ಸಹಶಿಕ್ಷಕರು – ಕನ್ನಡ 2. ಸಹಶಿಕ್ಷಕರು – ಹಿಂದಿ	ಮತೀಯ ಅಲ್ಪಸಂಖ್ಯಾತ ಶಾಲೆಯಾಗಿದ್ದು ಮೀಸಲಾತಿ ಅನ್ವಯಿಸುವುದಿಲ್ಲ.

ಈ ಜಾಹೀರಾತು ಪ್ರಕಟಣೆಯಾದ 21 ದಿನದೊಳಗೆ ಅರ್ಹ ಅಭ್ಯರ್ಥಿಗಳು ಕೈಬರಹದ ಅರ್ಜಿಯೊಂದಿಗೆ ಎಸ್.ಎಸ್.ಎಲ್.ಸಿ. ಯಿಂದ ಬಿ.ಎಡ್. ಅಂಕಪಟ್ಟಿಗಳು, ಪಾಸಿಂಗ್ ಸರ್ಟಿಫಿಕೇಟ್ ಹಾಗೂ ಜಾತಿ ಪ್ರಮಾಣ ಪತ್ರಗಳನ್ನು ದೃಢೀಕರಿಸಿ ಎಲ್ಲಾ ದಾಖಲೆಗಳೊಂದಿಗೆ ಕರೆಸ್ಪಾಂಡೆಂಟ್‌ರವರ ವಿಳಾಸಕ್ಕೆ ಅರ್ಜಿಯನ್ನು ಸಲ್ಲಿಸತಕ್ಕದ್ದು. ಅರ್ಜಿಯೊಂದಿಗೆ ರೂ. 1000/– ಡಿ.ಡಿ. ಯನ್ನು **The Headmistress, Christ the King Convent High School, Mysuru** ಇವರ ಹೆಸರಿನಲ್ಲಿ ಪಡೆದು ಸಲ್ಲಿಸುವುದು. ಅರ್ಜಿಯ ಒಂದು ಪ್ರತಿಯನ್ನು ಮಾನ್ಯ ಉಪನಿರ್ದೇಶಕರು, ಶಾಲಾ ಶಿಕ್ಷಣ ಇಲಾಖೆ, ಮೈಸೂರು ಜಿಲ್ಲೆ, ಮೈಸೂರು ಇವರಿಗೆ ರಿಜಿಸ್ಟರ್ಡ್ ಪೋಸ್ಟ್ ಮೂಲಕ ಕಳುಹಿಸತಕ್ಕದ್ದು.

ಸ್ಥಳ : ಮೈಸೂರು.
ದಿನಾಂಕ : 29–11–2025

Sd/- Correspondent, C.K.C. High School
J.L.B. Road, Mysuru-570004.

ಪ್ರಜಾವಾಣಿ

ಬೇಕಾಗಿದ್ದಾರೆ

ಜೂನಿಯರ್ ಎಕ್ಸಿಕ್ಯೂಟಿವ್ - ಸೇಲ್ಸ್

(ಮಹಿಳೆ/ಪುರುಷ)

ಉದ್ಯೋಗ ಸ್ಥಳ : ರಾಜ್ಯದಾದ್ಯಂತ
ವಿದ್ಯಾರ್ಹತೆ : ಪಿಯುಸಿ
ಅನುಭವ : ಹೊಸಬರು ಅಥವಾ ಈ ಹಿಂದೆಯೇ ಈ ಕೆಲಸ ನಿರ್ವಹಿಸಿದ ಅನುಭವ ಇರುವವರು

ಉದ್ಯೋಗದ ವಿವರ:

- ಪ್ರಸರಣದ ಗುರಿ ತಲುಪುವುದು, ನಿಮಗೆ ವಹಿಸಿದ ಪ್ರದೇಶದಲ್ಲಿ ಪತ್ರಿಕೆ/ನಿಯತಕಾಲಿಕಗಳ ಪ್ರಚಾರ ಕಾರ್ಯನಿರ್ವಹಿಸುವುದು
- ಪತ್ರಿಕೆಯ ಪ್ರಸರಣ ಹೆಚ್ಚಾಗಲು ವಿವಿಧ ರೀತಿಯ ಮಾರುಕಟ್ಟೆ ತಂತ್ರಗಳನ್ನು ರೂಪಿಸುವುದು ಮತ್ತು ಜಾರಿಗೆ ತರುವುದು
- ಪ್ರಸರಣದ ಕುರಿತ ನಿರ್ದೇಶನಗಳು ಪಾಲನೆಯಾಗುವಂತೆ ನೋಡಿಕೊಳ್ಳುವುದು, ವಿತರಕರಿಗೆ ಇದರ ಕುರಿತು ವಿವರಣೆ ನೀಡುವುದು ಮತ್ತು ಬದಲಾವಣೆಗಳನ್ನು ಮಾಡುವುದು. ಜೊತೆಗೆ ವಿತರಕರ ಬಗ್ಗೆ ಬರುವ ದೂರುಗಳ ಪರಿಶೀಲಿಸಿ ಇತ್ಯರ್ಥಗೊಳಿಸುವುದು

ಆಸಕ್ತಿಯುಳ್ಳ ಅಭ್ಯರ್ಥಿಗಳು ನಿಮ್ಮ ಇತ್ತೀಚಿನ ರೆಸ್ಯೂಮ್/ಸಿವಿ ಪ್ರತಿಗಳನ್ನು ಕೆಳಕಂಡ ಇ-ಮೇಲ್ ವಿಳಾಸಕ್ಕೆ ಕಳುಹಿಸುವುದು

ವ್ಯವಸ್ಥಾಪಕರು – ನೇಮಕಾತಿ

ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್
75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು – 560 001
ಇ–ಮೇಲ್: careers@prajavani.co.in

ಶ್ರೀ ನರೇಂದ್ರ ಮೋದಿ
ಸನ್ಮಾನ್ಯ ಪ್ರಧಾನ ಮಂತ್ರಿಗಳು
ಭಾರತ ಸರ್ಕಾರ

ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು
ಕರ್ನಾಟಕ ಸರ್ಕಾರ

ಪಿ.ಎಂ ಕುಸುಮ್ -ಬಿ ಯೋಜನೆಯಡಿ ಸೋಲಾರ್ ಪಂಪ್-ಸೆಟ್‌ಗಾಗಿ ಅರ್ಜಿ ಆಹ್ವಾನ

ರೈತರ ಗಮನಕ್ಕೆ

- ರಾಜ್ಯದಲ್ಲಿ **MNRE** ಮತ್ತು **KREDL** ಸಹಯೋಗದೊಂದಿಗೆ ರೈತರ ಜಮೀನಿನ ಕೊಳವೆ/ತೆರದ ಬಾವಿಗಳಿಗೆ ಸೋಲಾರ್ ಪಂಪ್-ಸೆಟ್ ಗಳನ್ನು ಅಳವಡಿಸಲು ರೈತರಿಂದ ಅರ್ಜಿಗಳನ್ನು ಆನ್‌ಲೈನ್ ಮುಖಾಂತರ, **www.souramitra.com** ವೆಬ್‌ಸೈಟ್ ನಲ್ಲಿ ನೋಂದಣಿಗೆ ಅವಕಾಶ ಕಲ್ಪಿಸಲಾಗಿದೆ.
- ಸದರಿ ಪೋರ್ಟಲ್ ಮುಖಾಂತರ ಸೋಲಾರ್ ಪಂಪ್-ಸೆಟ್‌ಗಳ ಅಳವಡಿಕೆಗಾಗಿ ರೈತರು **www.souramitra.com** ಪೋರ್ಟಲ್ ನಲ್ಲಿ ಅರ್ಜಿ ನೋಂದಾಯಿಸಿಕೊಂಡು ವೆಂಡರ್ /ಏಜೆನ್ಸಿ ಯನ್ನು ಆಯ್ಕೆ ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.

- ರೈತಬಾಂಧವರಿಗೆ ತಿಳಿಯಪಡಿಸುವುದೇನೆಂದರೆ, **PM-KUSUM Component-B** ಯೋಜನೆಗೆ ಸಂಬಂಧಿಸಿದಂತೆ, **www.kredl.karnataka.gov.in** ವೆಬ್‌ಸೈಟ್‌ನಲ್ಲಿ ಹೊರಡಿಸಿದ ಪ್ರಕಟಣೆ/ಮಾಹಿತಿಗಳನ್ನು ಮಾತ್ರ ಪರಿಗಣಿಸಲು ಕೋರಲಾಗಿದೆ. ಸೌರ ಪಂಪ್ ಸೆಟ್ ನೋಂದಣಿ ಹಾಗೂ ಪಾವತಿಗೆ ಸಂಬಂಧಿಸಿದಂತೆ **www.souramitra.com** ನಲ್ಲಿ ಹಾಗೂ **KREDL** ನ ಸಹಾಯವಾಣಿ ಸಂಖ್ಯೆ: **080-22202100 & 8095132100** ಮುಖಾಂತರ ಮಾತ್ರವೇ ಮಾಹಿತಿ ಪಡೆದುಕೊಳ್ಳಲು ಕೋರಲಾಗಿದೆ ಹಾಗೂ ಸದರಿ ನೋಂದಣಿ ಪ್ರಕ್ರಿಯೆಯಲ್ಲಿ ಸ್ವೀಕೃತವಾಗುವ ಒಟಿಪಿಗಳನ್ನು ಯಾರೊಂದಿಗೂ ಹಂಚಿಕೊಳ್ಳದೇ ತಾವೇ ನೋಂದಾಯಿಸಿಕೊಳ್ಳಲು ಕೋರಲಾಗಿದೆ.

ಕ್ರಮ ಸಂಖ್ಯೆ	ಪಂಪ್ ಸಾಮರ್ಥ್ಯ (HP)	ಪಂಪ್ ಮಾದರಿ	ರಾಜ್ಯ ಸರ್ಕಾರದ ಸಹಾಯಧನ 50% (ಜಿಎಸ್‌ಟಿ ಸೇರಿ) ರೂ.	ಕೇಂದ್ರ ಸರ್ಕಾರದ ಸಹಾಯಧನ 30% (ಜಿಎಸ್‌ಟಿ ಸೇರಿ) ರೂ.	ರೈತರ ವಂತಿಗೆ 20% (ಜಿಎಸ್‌ಟಿ ಸೇರಿ) ರೂ.	ಸೌರ ಪಂಪ್‌ನ ಪ್ರತಿ ಘಟಕದ ದರ (ಜಿಎಸ್‌ಟಿ ಸೇರಿ) ರೂ.
1	3 HP	ಸರ್ಫೇಸ್	97972	54696	**43276**	195944
2		ಸಬ್‌ಮರ್ಸಿಬಲ್	99524	54696	**44827**	199047
3	5 HP	ಸರ್ಫೇಸ್	141993	84259	**57733**	283985
4		ಸಬ್‌ಮರ್ಸಿಬಲ್	142768	84259	**58509**	285536
5	7.5 HP	ಸರ್ಫೇಸ್	206832	114203	**92628**	413663
6		ಸಬ್‌ಮರ್ಸಿಬಲ್	196020	114203	**81817**	392040
7	10 HP	ಸರ್ಫೇಸ್	206832	114203	**191983**	513018
8		ಸಬ್‌ಮರ್ಸಿಬಲ್	196020	114203	**181911**	492134

ಸಹಾಯಧನದ ವಿವರ

ರಾಜ್ಯ ಸರ್ಕಾರ - **50%**	ಕೇಂದ್ರ ಸರ್ಕಾರ - **30%**	ಫಲಾನುಭವಿಗಳ ವಂತಿಗೆ - **20%**

ಮಾನ್ಯ ಮುಖ್ಯಮಂತ್ರಿಗಳಾದ **ಶ್ರೀ ಸಿದ್ದರಾಮಯ್ಯ** ರವರೊಂದಿಗೆ ಮಾನ್ಯ ಇಂಧನ ಸಚಿವರಾದ **ಶ್ರೀ ಕೆ.ಜೆ. ಜಾರ್ಜ್** ರವರು ಸೌರ ಘಟಕವನ್ನು ವೀಕ್ಷಿಸುತ್ತಿರುವುದು

ಎಂಪ್ಯಾನೆಲ್ಡ್ ಮಾಡಲಾಗಿರುವ ಸರಬರಾಜುದಾರರ ವಿವರ

- ಮೆ|| ಪರ್ಲ್ ಎಂಟರ್‌ಪ್ರೈಸಸ್ - ಶ್ರೀ ದಿಲೀಪ್ ಎನ್ - 9663130828
- ಮೆ|| ಓಸ್ವಾಲ್ ಪಂಪ್ಸ್ ಲಿಮಿಟೆಡ್ - ಶ್ರೀ ವೀರೇಂದ್ರ ಗೌಡ - 8073789294
- ಮೆ|| ರೋಟೋಮ್ಯಾಗ್ ಏನರ್ ಟೆಕ್ ಲಿಮಿಟೆಡ್ - ಶ್ರೀ ಲತೀಶ್ - 8951906471
- ಮೆ|| ಅರ್ಚನಾ ಇಂಡಸ್ಟ್ರೀಸ್ - ಶ್ರೀ ರಮೇಶ್ ರೆಡ್ಡಿ - 9448785577
- ಮೆ|| ಅದಿತಿ ಸೋಲಾರ್ ಪ್ರೈವೇಟ್ ಲಿಮಿಟೆಡ್ - ಶ್ರೀ ಕರೆಗೌಡರ್ - 9916037976
- ಮೆ|| ಶಕ್ತಿ ಪಂಪ್ಸ್ (ಇಂಡಿಯಾ) ಲಿಮಿಟೆಡ್ - ಶ್ರೀ ಬಸವ ಪ್ರಭು - 080-69146060
- ಮೆ|| ಶ್ರೀ ಸವಿಟರ್ ಸೋಲಾರ್ ಪ್ರೈವೇಟ್ ಲಿಮಿಟೆಡ್ - ಶ್ರೀ ಮಹೇಶ್ - 8544898544
- ಮೆ|| ಸಿ.ಆರ್.ಐ. ಪಂಪ್ಸ್ ಪ್ರೈವೇಟ್ ಲಿಮಿಟೆಡ್ - ಶ್ರೀ ಹನುಮಂತು - 9380001213
- ಮೆ|| ಕೆ.ಎಲ್.ಕೆ ವೆಂಚರ್ಸ್ ಪ್ರೈವೇಟ್ ಲಿಮಿಟೆಡ್ - ಶ್ರೀ ರಾಜೇಂದ್ರ - 8867777388
- ಮೆ|| ಜುನ್ನಾ ಸೋಲಾರ್ ಸಿಸ್ಟಮ್ಸ್ ಲಿಮಿಟೆಡ್ - ಶ್ರೀ ಮೈಕೆಲ್ - 6363110288
- ಮೆ|| ಸಿರಿಯಸ್ ಸೋಲಾರ್ ಎನರ್ಜಿ ಸಿಸ್ಟಮ್ಸ್ ಪ್ರೈವೇಟ್ ಲಿಮಿಟೆಡ್ - ಶ್ರೀ ಪ್ರಮೋದ್ - 9949055250
- ಮೆ|| ಆಸ್ಟ್ರೇಲಿಯನ್ ಪ್ರೀಮಿಯಂ ಸೋಲಾರ್ (ಇಂಡಿಯಾ) ಲಿಮಿಟೆಡ್ - ಶ್ರೀ ರಂಜಿತ್ ವೈಟ್ಲಾ - 9844486268
- ಮೆ|| ಸನ್‌ಗ್ರೇಸ್ ಎನರ್ಜಿ ಸೊಲ್ಯೂಷನ್ಸ್ ಪ್ರೈವೇಟ್ ಲಿಮಿಟೆಡ್ - ಶ್ರೀ ಪವನ್ ಕುಮಾರ್ - 9347025815

ಮಾನ್ಯ ಹೊಸ ಮತ್ತು ನವೀಕರಿಸಬಹುದಾದ ಇಂಧನ ಹಾಗೂ ಗ್ರಾಹಕ ವ್ಯವಹಾರ, ಆಹಾರ ಮತ್ತು ಪಡಿತರ ವಿತರಣೆ, ಕೇಂದ್ರ ಸಚಿವರಾದ **ಶ್ರೀ ಪ್ರಲ್ಹಾದ ಜೋಶಿ** ಯವರು ಸೌರ ಘಟಕವನ್ನು ವೀಕ್ಷಿಸುತ್ತಿರುವುದು.

ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು" ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

KREDL BESCOM CESC MYSURU GESCOM HESCOM MESCOM

ಟಿ.ಡಿ.ರಾಜೇಗೌಡ,
ಶಾಸಕರು ಮತ್ತು ಅಧ್ಯಕ್ಷರು, ಕ್ರೆಡಲ್

ಗೌರವ್ ಗುಪ್ತ, ಭಾ.ಆ.ಸೇ.
ಅಪರ ಮುಖ್ಯ ಕಾರ್ಯದರ್ಶಿ, ಇಂಧನ ಇಲಾಖೆ
ಕರ್ನಾಟಕ ಸರ್ಕಾರ

ಕೆ. ಪಿ. ರುದ್ರಪ್ಪಯ್ಯ
ಕ್ರೆಡಲ್, ವ್ಯವಸ್ಥಾಪಕ ನಿರ್ದೇಶಕರು
ಕರ್ನಾಟಕ ಸರ್ಕಾರ

33 ಕಸ ಪ್ಯಾಕೇಜ್ ಅಂತಿಮಕ್ಕೆ ವಿಳಂಬ

ಪಿಎಫ್ ಪಾವತಿಸದವರಿಗೆ ಗುತ್ತಿಗೆ ಬೇಡ

• ತಡೆ ಇರುವುದು ಲೇವಣಿ, ದಂಡಕ್ಕೆ ಮಾತ್ರ

• ಆರ್.ಮಂಜುನಾಥ್

ಬೆಂಗಳೂರು: ನಗರದಲ್ಲಿ ತ್ಯಾಜ್ಯ ವಿಲೇವಾರಿಗೆ ಹೊಸ ಪ್ಯಾಕೇಜ್ ಅನುಷ್ಠಾನ ಎರಡೂವರೆ ವರ್ಷದಿಂದ ಮುಂದಕ್ಕೆ ಹೋಗುತ್ತಲೇ ಇದೆ. ಭವಿಷ್ಯ ನಿಧಿ (ಪಿಎಫ್) ಪಾವತಿಸದ ಗುತ್ತಿಗೆದಾರರಿಗೆ ಹೊಸ ಗುತ್ತಿಗೆ ನೀಡುವಂತಿಲ್ಲ ಎಂಬ 'ಕಾರ್ಮಿಕರ ಭವಿಷ್ಯನಿಧಿ ಸಂಘಟನೆ'ಯ (ಇಪಿಎಫ್‌ಒ) ಆದೇಶದಿಂದ 33 ಕಸದ ಪ್ಯಾಕೇಜ್ ಅಂತಿಮಗೊಳ್ಳಲು ಇನ್ನಷ್ಟು ವಿಳಂಬವಾಗಲಿದೆ.

ಬಿಬಿಎಂಪಿ ಪಾವತಿ ಮಾಡಿದ್ದರೂ ತ್ಯಾಜ್ಯ ನಿರ್ವಹಣೆ ಗುತ್ತಿಗೆದಾರರು ಆರು ಸಾವಿರ ಪೌರಕಾರ್ಮಿಕರಿಗೆ 2011ರಿಂದ 2017ರ ಅವಧಿಯಲ್ಲಿ ಪಿಎಫ್ ಪಾವತಿಸಿರಲಿಲ್ಲ. ಬಿಬಿಎಂಪಿ ಖಾತೆಯನ್ನು ಜಪ್ತಿ ಮಾಡಿ ₹90 ಕೋಟಿಯನ್ನು ತನ್ನ ಅಧೀನದಲ್ಲಿರಿಸಿಕೊಂಡಿದೆ. ಗುತ್ತಿಗೆದಾರರಿಗೂ ₹90 ಕೋಟಿಯನ್ನು ಪಾವತಿಸಿರುವುದರಿಂದ, ಈಗಿನ ಗ್ರೇಟರ್ ಬೆಂಗಳೂರು ಪ್ರಾಧಿಕಾರಕ್ಕೆ (ಜಿಬಿಎ) ₹180 ಕೋಟಿಗೂ ಹೆಚ್ಚು ನಷ್ಟವಾಗಿದೆ.

ಇಪಿಎಫ್‌ಒ 2017ರ ಅಕ್ಟೋಬರ್ 10ರಂದು ₹90 ಕೋಟಿ ಮೊತ್ತವನ್ನು ಬಿಬಿಎಂಪಿ ಖಾತೆಯಿಂದ ಜಪ್ತಿ ಮಾಡಿಕೊಂಡಿದ್ದು, ಇಪಿಎಫ್ ಕಾಯ್ದೆ ಸೆಕ್ಷನ್ 14ಬಿ ಮತ್ತು 7ಕ್ಯೂನಂತೆ ದಂಡ ವಿಧಿಸುವ ಕ್ರಮ ಕೈಗೊಂಡು, ವಿಳಂಬಕ್ಕಾದ ಬಡ್ಡಿಯನ್ನೂ ವಸೂಲಿ ಮಾಡುವಂತೆ ಬೆಂಗಳೂರು ಪ್ರಾದೇಶಿಕ ಭವಿಷ್ಯ ನಿಧಿ ಆಯುಕ್ತರು 2025ರ ಸೆಪ್ಟೆಂಬರ್ 15ರಂದು ಆದೇಶ ಹೊರಡಿಸಿದ್ದಾರೆ. ಜೊತೆಗೆ, ಪಿಎಫ್ ಪಾವತಿಸದ ಗುತ್ತಿಗೆದಾರರಿಂದ ಕಾನೂನು ಪ್ರಕ್ರಿಯೆಯ ಶುಲ್ಕವನ್ನು ವಸೂಲಿ ಮಾಡಿಕೊಂಡು, ಅವರಿಗೆ ಯಾವುದೇ ರೀತಿಯ ಗುತ್ತಿಗೆಯನ್ನು ನೀಡಬಾರದು ಎಂದು ಆದೇಶಿಸಿದ್ದರು.

ಈ ಆದೇಶದ ವಿರುದ್ಧ, ಹೊಸದಾಗಿ ರಚನೆಯಾಗಿರುವ ಐದೂ ನಗರ ಪಾಲಿಕೆಗಳು ಕೇಂದ್ರ ಸರ್ಕಾರದ ಕೈಗಾರಿಕಾ ನ್ಯಾಯಮಂಡಳಿ/ ಕಾರ್ಮಿಕ ನ್ಯಾಯಾಲಯಕ್ಕೆ (ಸಿಜಿಐಟಿ) ಮೇಲ್ಮನವಿ ಸಲ್ಲಿಸಿವೆ. ಇದನ್ನು ಪರಿಗಣಿಸಿರುವ ನ್ಯಾಯಾಲಯ, 2026ರ ಜನವರಿ 29ರವರೆಗೆ ಸೆಕ್ಷನ್ 14ಬಿ ಮತ್ತು 7 ಕ್ಯೂನಂತೆ (ಆದೇಶದ ಸಿ ಅಂಶ) ಯಾವುದೇ ಕ್ರಮ ಕೈಗೊಳ್ಳಬಾರದು ಎಂದು ಸೂಚಿಸಿದೆ. ಆದರೆ, ಪಿಎಫ್ ಪಾವತಿಸದ 'ಡಿಫಾಲ್ಟ್' ಗುತ್ತಿಗೆದಾರರಿಗೆ ಹೊಸ ಗುತ್ತಿಗೆ ನೀಡಬಾರದು (ಆದೇಶದ ಎಚ್ ಅಂಶ) ಎಂಬ ಆದೇಶಕ್ಕೆ ಯಾವುದೇ ತಡೆಯಾಜ್ಞೆ ಸಿಕ್ಕಿಲ್ಲ.

'ಗುತ್ತಿಗೆದಾರರ ವಿರುದ್ಧ ಕ್ರಮ ಹಾಗೂ ಅವರಿಗೆ ಹೊಸ ಗುತ್ತಿಗೆ ನೀಡಬಾರದು' ಎಂಬ ಇಪಿಎಫ್‌ಒ ಆದೇಶಕ್ಕೆ ತಡೆ ಇಲ್ಲದಿದ್ದರೂ, ಕೆಲವು ಗುತ್ತಿಗೆದಾರರು 'ಗುತ್ತಿಗೆದಾರರು ನಿರಾಳ' ಎಂಬ ಸುದ್ದಿಗಳನ್ನು ಹಬ್ಬಿಸುತ್ತಿದ್ದಾರೆ' ಎಂದು ಗುತ್ತಿಗೆದಾರರ ಸಂಘವೇ ದೂರಿದೆ.

'33 ಕಸದ ಪ್ಯಾಕೇಜ್ ಟೆಂಡರ್ ಅವಧಿ ಮುಗಿದು, ಪ್ರಕ್ರಿಯೆ ನಡೆಯುತ್ತಿದೆ. ಇದನ್ನು ಅಂತಿಮಗೊಳಿಸಲು ಸಾಕಷ್ಟು ಸಮಸ್ಯೆಗಳು ಎದುರಾಗಿವೆ. ಇಪಿಎಫ್‌ಒ ಆದೇಶ ವಿರುದ್ಧ ಮೇಲ್ಮನವಿ ಸಲ್ಲಿಸಲಾಗಿದೆ. ಅದರಲ್ಲಿ ಬಿಬಿಎಂಪಿ (ಜಿಬಿಎ) ಖಾತೆ ಜಪ್ತಿಯ ಬಗ್ಗೆ ಮಾತ್ರ ತಡೆಯಾಜ್ಞೆ ಸಿಕ್ಕಿದೆ. ಗುತ್ತಿಗೆದಾರರ ವಿರುದ್ಧದ ಕ್ರಮದ ಬಗ್ಗೆ ತಡೆಯಾಜ್ಞೆಗೆ ನಾವೆಲ್ಲೂ ಕೇಳಿಲ್ಲ, ಅವರು ಕೊಟ್ಟೂ ಇಲ್ಲ. ಹೀಗಾಗಿ, 'ಡಿಫಾಲ್ಟ್' ಗುತ್ತಿಗೆದಾರರನ್ನು 33 ಪ್ಯಾಕೇಜ್‌ನಲ್ಲಿ ಪರಿಗಣಿಸಬೇಕೇ, ಬೇಡವೇ ಎಂಬ ಬಗ್ಗೆ ಇನ್ನೂ ಸ್ಪಷ್ಟತೆ ಸಿಕ್ಕಿಲ್ಲ' ಎಂದು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ಅಧಿಕಾರಿಗಳು ತಿಳಿಸಿದರು.

> ಇಪಿಎಫ್‌ಒ ಆದೇಶಕ್ಕೆ ನ್ಯಾಯಮಂಡಳಿಯಲ್ಲಿ ಮೇಲ್ಮನವಿ ಸಲ್ಲಿಸಲಾಗಿದೆ. ಗುತ್ತಿಗೆದಾರರ ವಿಷಯದಲ್ಲಿ ಕಾನೂನು ತಜ್ಞರ ಜೊತೆ ಚರ್ಚೆ ನಡೆಯುತ್ತಿದೆ
> **ಕರೀಗೌಡ**
> ಸಿಇಒ, ಬಿಎಸ್‌ಡಬ್ಲ್ಯುಎಂಎಲ್

ಗೊಂದಲ ಇಲ್ಲ: ವೆಂಕಟೇಶ್

'ಕೆಲವು ಗುತ್ತಿಗೆದಾರರು ಪಿಎಫ್ ವಂತಿಗೆ ಪಾವತಿಸಿಲ್ಲವೆಂದು ಡಿಫಾಲ್ಟ್ ಗುತ್ತಿಗೆದಾರರೆಂದು ಪಟ್ಟಿ ಮಾಡಿ, ದಾಖಲೆ ಸಲ್ಲಿಸದ ಕೆಲವು ಗುತ್ತಿಗೆದಾರರನ್ನು 'ನಾನ್-ಕಂಪ್ಲೈಯನ್ಸ್' ಎಂದು ಪಟ್ಟಿ ಮಾಡಲಾಗಿತ್ತು. ಇವರನ್ನು ಟೆಂಡರ್ ಪ್ರಕ್ರಿಯೆಯಲ್ಲಿ ಅನರ್ಹಗೊಳಿಸಬೇಕು ಎಂದು ಕೆಲವರು ಆಗ್ರಹಿಸಿದ್ದರು. ಆದರೆ, ಐದು ನಗರ ಪಾಲಿಕೆಗಳ ಮೇಲ್ಮನವಿಯನ್ನು ಸಿಜಿಐಟಿ ಪುರಸ್ಕರಿಸಿದ್ದು ಗೊಂದಲ ನಿವಾರಣೆಯಾಗಿದೆ. ಗುತ್ತಿಗೆದಾರರ ಬಿಡ್‌ಗಳ ಮೌಲ್ಯಮಾಪನಕ್ಕೆ ಇದ್ದ ಅಡೆತಡೆ ನಿವಾರಣೆಯಾಗಿದ್ದು, ಈ ಬಗ್ಗೆ ಬಿಎಸ್‌ಡಬ್ಲ್ಯುಎಂಎಲ್‌ನ ಸಿಇಒ ಅವರಿಗೆ ಲಿಖಿತ ದಾಖಲೆಗಳನ್ನು ನೀಡಲಾಗಿದೆ' ಎಂದು ಗೋರಿಪಾಳ್ಯದ ಗುತ್ತಿಗೆದಾರ ವೆಂಕಟೇಶ್ ತಿಳಿಸಿದರು.

ಹಣ ಉಳಿಸಲು ತಾತ್ಸಾರ: ಬಾಲಸುಬ್ರಮಣಿಯಂ

'ಸಿಜಿಐಟಿ ಠೇವಣಿ ಹಣ ಬಿಡುಗಡೆ ಹಾಗೂ ಅದರ ಮೇಲಿನ ದಂಡ ವಿಧಿಸಲು ಮಾತ್ರ ತಡೆ ನೀಡಿದೆ. ಗುತ್ತಿಗೆದಾರರ ಮೇಲಿನ ಶಿಸ್ತುಕ್ರಮದ ಬಗ್ಗೆ ಏನೂ ಹೇಳಿಲ್ಲ. ಕೆಲವು ಗುತ್ತಿಗೆದಾರರು ಹಾದಿ ತಪ್ಪಿಸುತ್ತಿದ್ದಾರೆ. ₹90 ಕೋಟಿ ಸಾರ್ವಜನಿಕರ ಹಣವನ್ನು ದುರುಪಯೋಗ ಪಡಿಸಿಕೊಂಡಿರುವ ಗುತ್ತಿಗೆದಾರರಿಗೆ ಹೊಸ ಗುತ್ತಿಗೆ ನೀಡಲೇಬಾರದು. ಅಲ್ಲದೆ, ಅಂತಹವರ ವಿರುದ್ಧ ಕ್ರಿಮಿನಲ್ ಪ್ರಕರಣವನ್ನೇ ದಾಖಲಿಸಬೇಕು. ಇಪಿಎಫ್‌ಒ ಆದೇಶ ನೀಡಿ ಎರಡು ತಿಂಗಳಾದರೂ ಬಿಎಸ್‌ಡಬ್ಲ್ಯುಎಂ-ಎಲ್ ಅಧಿಕಾರಿಗಳು ಕ್ರಮ ಕೈಗೊಳ್ಳಲು ತಾತ್ಸಾರದಿಂದ ಇದ್ದಾರೆ. ಯಾರೇ ಅಧಿಕಾರಿ ಇರಲಿ, ಬರಲಿ ₹90 ಕೋಟಿ ಸಾರ್ವಜನಿಕರ ಹಣ ದುರುಪಯೋಗ ಆಗಬಾರದು' ಎಂದು ಬೆಂಗಳೂರು ನಗರ ಸ್ವಚ್ಛತೆ ಮತ್ತು ಲಾರಿ ಮಾಲೀಕರು-ಗುತ್ತಿಗೆದಾರರ ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ಎನ್. ಬಾಲಸುಬ್ರಮಣಿಯಂ ಹೇಳಿದರು.

ಚಿಟಿಕೆ ಸುದ್ದಿ

ಅಬ್ದುಲ್, ಜುಬೇದಾಗೆ 'ಬ್ಯಾರಿ ಪ್ರಶಸ್ತಿ'

ಬೆಂಗಳೂರು: ಬೆಂಗಳೂರಿನ ದಿ ಬ್ಯಾರೀಸ್ ವೆಲ್‌ಫೇರ್ ಅಸೋಸಿಯೇಷನ್ ನೀಡುವ 2025ರ 'ವರ್ಷದ ಬ್ಯಾರಿ' ಪ್ರಶಸ್ತಿಗೆ ಉತ್ತರ ಕನ್ನಡ ಜಿಲ್ಲೆಯ ಶಿರಸಿಯ ಕೃಷಿಕರಾದ ಕೆ. ಅಬ್ದುಲ್ ಕರೀಮ್, 'ವರ್ಷದ ಬ್ಯಾರ್ದಿ' ಪ್ರಶಸ್ತಿಗೆ ಚಿಕ್ಕಮಗಳೂರು ಜಿಲ್ಲೆಯ ಎನ್.ಆರ್. ಪುರದ ಸಾಮಾಜಿಕ ಕಾರ್ಯಕರ್ತೆ ಜುಬೇದಾ ಆಯ್ಕೆಯಾಗಿದ್ದಾರೆ.

ಕೆ. ಅಬ್ದುಲ್ ಕರೀಮ್

ಜುಬೇದಾ

ಪ್ರಶಸ್ತಿಯೂ ತಲಾ ₹50 ಸಾವಿರ ನಗದು, ಪ್ರಶಸ್ತಿ ಫಲಕ ಒಳಗೊಂಡಿದೆ.

ನವೆಂಬರ್ 30ರಂದು ಬೆಂಗಳೂರಿನ ಬ್ಯಾರಿ ಸೌಹಾರ್ದ ಭವನದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ. ವಿಧಾನಸಭೆಯ ಸಭಾಧ್ಯಕ್ಷ ಯು.ಟಿ. ಖಾದರ್, ಇಂಧನ ಸಚಿವ ಕೆ.ಜೆ. ಜಾರ್ಜ್, ಶಾಸಕ ರಿಜ್ವಾನ್ ಅರ್ಷದ್ ಹಾಗೂ ಐಎಎಸ್ ಅಧಿಕಾರಿ ಅಕ್ರಂ ಪಾಷಾ, ಶಿಕ್ಷಣ ತಜ್ಞ ಮೋಹನ್ ಆಳ್ವ ಅತಿಥಿಗಳಾಗಿ ಭಾಗವಹಿಸಲಿದ್ದಾರೆ ಎಂದು ಅಸೋಸಿಯೇಷನ್ ಅಧ್ಯಕ್ಷ ಶಂಸುದ್ದೀನ್ ಅಡೂರ್ ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

'ವಿಶ್ವನಾಥ್‌ಗೆ ಮತಿಭ್ರಮಣೆ'

ಬೆಂಗಳೂರು: 'ಮುಖ್ಯಮಂತ್ರಿ ಸಿದ್ದರಾಮಯ್ಯನವರ ವಿರುದ್ಧ ಅವಾಚ್ಯ ಪದ ಬಳಸಿ ಟೀಕಿಸಿರುವ ವಿಧಾನ ಪರಿಷತ್ತಿನ ಬಿಜೆಪಿ ಸದಸ್ಯ ಎಚ್. ವಿಶ್ವನಾಥ್ ಅವರಿಗೆ ಮತಿಭ್ರಮಣೆಯಾಗಿದೆ. ಅವರನ್ನು ಮಾನಸಿಕ ಸ್ವಾಸ್ಥ್ಯ ಕೇಂದ್ರಕ್ಕೆ ಸೇರಿಸಬೇಕು' ಎಂದು ರಾಮಮನೋಹರ್ ಲೋಹಿಯಾ ವೇದಿಕೆ ಅಧ್ಯಕ್ಷ ಬಿ.ಎಸ್. ಶಿವಣ್ಣ ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ನೈತಿಕವಾಗಿ, ರಾಜಕೀಯವಾಗಿ, ಸೈದ್ಧಾಂತಿಕವಾಗಿ ವಿಶ್ವನಾಥ್ ಅಧಃಪತನಗೊಂಡಿದ್ದಾರೆ. ಅಧಿಕಾರ ರಾಜಕಾರಣಕ್ಕಾಗಿ ಯಾರ ಕಾಲು ಬೇಕಾದರೂ ಹಿಡಿಯುವವರು ಅವರು. ವಿಶ್ವನಾಥ ಅವರಂಥ ಸ್ವಾರ್ಥ, ನಿರ್ಲಜ್ಜ ರಾಜಕಾರಣಿಯನ್ನು ಕರ್ನಾಟಕ ಈವರೆಗೆ ಕಂಡಿಲ್ಲ' ಎಂದಿದ್ದಾರೆ.

'ಅಧಿಕಾರ ಹಂಚಿಕೆ ವಿಚಾರ ಕಾಂಗ್ರೆಸ್‌ಗೆ ಸಂಬಂಧಪಟ್ಟಿದ್ದು, ಅದನ್ನು ತಮ್ಮ ಹೈಕಮಾಂಡ್ ನಿರ್ಧರಿಸುತ್ತದೆ ಎಂದು ಸಿದ್ದರಾಮಯ್ಯ ಹಲವು ಬಾರಿ ಸ್ಪಷ್ಟಪಡಿಸಿದ್ದಾರೆ. ಈ ಬಗ್ಗೆ ಮಾತನಾಡಲು ವಿಶ್ವನಾಥ್ ಅವರಿಗೆ ಯಾವ ನೈತಿಕ ಅಧಿಕಾರವಿದೆ? ಕೊಟ್ಟ ಕುದುರೆ ಏರಲಾಗದೆ ಊರೆಲ್ಲ ಅಲೆದು ನಯಾಪೈಸೆ ಮೌಲ್ಯ ಉಳಿಸಿಕೊಳ್ಳದ ವಿಶ್ವನಾಥ್‌ನಂಥವರಿಂದ ಸಿದ್ದರಾಮಯ್ಯನವರಂಥ ಮೌಲ್ಯಾಧಾರಿತ ರಾಜಕಾರಣಿ ಪಾಠ ಹೇಳಿಸಿಕೊಳ್ಳಬೇಕಾದ ಅಗತ್ಯವಿಲ್ಲ' ಎಂದಿದ್ದಾರೆ.

ಅಗರ, ಎಚ್‌ಎಸ್‌ಆರ್‌ನಲ್ಲಿ ಸಂಭ್ರಮದ ರಾಜ್ಯೋತ್ಸವ

ಬೊಮ್ಮನಹಳ್ಳಿ: ಅಗರ ಮತ್ತು ಎಚ್‌ಎಸ್‌ಆರ್ ಬಡಾವಣೆಯಲ್ಲಿ ಶನಿವಾರ ಭುವನೇಶ್ವರಿ ತಾಯಿಗೆ ಪೂಜೆ ಸಲ್ಲಿಸಿ, ಕನ್ನಡ ಧ್ವಜ ಹಾರಿಸುವ ಮೂಲಕ ಕರ್ನಾಟಕ ರಾಜ್ಯೋತ್ಸವ ಆಚರಿಸಲಾಯಿತು.

ಅಗರ ಗ್ರಾಮ ನಾಗರಿಕರ ಹಿತರಕ್ಷಣಾ ವೇದಿಕೆ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ರಂಗಭೂಮಿ ನಟ ಏಳಗಳ್ಳಿ ಪರಮಶಿವಯ್ಯ ಮತ್ತು ಕನ್ನಡ ಉಪನ್ಯಾಸಕಿ ಡಾ.ಸುಕನ್ಯಾ ಅವರನ್ನು ಸನ್ಮಾನಿಸಲಾಯಿತು. ದಿನವಿಡೀ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಅಗರ ಪ್ರಾಥಮಿಕ ಶಾಲೆಯ ಮಕ್ಕಳು ಹಾಡು ಹಾಡಿದರು.

ಬೊಮ್ಮನಹಳ್ಳಿ ಕ್ಷೇತ್ರದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಟಿ.ವಾಸುದೇವರೆಡ್ಡಿ, ಪಾಲಿಕೆ ಮಾಜಿ ಸದಸ್ಯ ಗುರುಮೂರ್ತಿ ರೆಡ್ಡಿ, ಎಸ್.ಆರ್.ವಿ. ಶಿಕ್ಷಣ ಸಂಸ್ಥೆ ಮುಖ್ಯಸ್ಥ ಕೆ.ವಾಸುದೇವ, ಗ್ರಾಮಸ್ಥರಾದ ಚಿಕ್ಕಣ್ಣ, ವೆಂಕರಮಣಗೌಡ ಇದ್ದರು.

ಎಚ್.ಎಸ್.ಬಡಾವಣೆ ಮೂಲ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಟಿ.ವಾಸುದೇವರೆಡ್ಡಿ, 'ಬೆಂಗಳೂರು ನಗರದಲ್ಲಿ ಕನ್ನಡ ಭಾಷೆ ಅನಾಥವಾಗಿದೆ. ಕನ್ನಡ ಅನ್ನದ ಭಾಷೆಯಾಗಬೇಕು, ಖಾಸಗಿ ವಲಯದಲ್ಲಿ ನೇಮಕಾತಿಯಲ್ಲಿ ಕನ್ನಡಿಗರಿಗೆ ಆದ್ಯತೆ ಸಿಗಬೇಕು, ಪರಭಾಷಿಕರು ಕನ್ನಡ ಭಾಷೆ ಕಲಿಯಬೇಕು' ಎಂದರು.

ಅಧ್ಯಕ್ಷ ಕೆ.ಅನಂತಕುಮಾರ್, ಪ್ರಧಾನ ಕಾರ್ಯದರ್ಶಿ ಅನಿಲ್ ರೆಡ್ಡಿ, ಖಜಾಂಚಿ ಶ್ರೀನಿವಾಸರೆಡ್ಡಿ, ವಕೀಲ ವೆಂಕಟರಮಣರೆಡ್ಡಿ, ಮುನೇಗೌಡ ಉಪಸ್ಥಿತರಿದ್ದರು.

ಲಗ್ಗೆರೆಯಲ್ಲಿ ಕಾವೇರಿ ಮಾತೆ ಪ್ರತಿಮೆ ಪ್ರತಿಷ್ಠಾಪನಾ ಕಾಮಗಾರಿಗೆ ಹನುಮಂತರಾಯಪ್ಪ ಭೂಮಿ ಪೂಜೆ ನೆರವೇರಿಸಿದರು. ಕೆ. ಗೋಪಾಲಯ್ಯ, ಲಗ್ಗೆರೆ ನಾರಾಯಣಸ್ವಾಮಿ, ಎನ್. ಚಂದ್ರಶೇಖರ್ (ಶೇಖರ್) ಸಿದ್ದೇಗೌಡ ಇದ್ದರು

ಕಾವೇರಿ ತಾಯಿ ಪ್ರತಿಮೆ: ಭೂಮಿಪೂಜೆ

ರಾಜರಾಜೇಶ್ವರಿ ನಗರ: ಕೋಟ್ಯಂತರ ಜನರ ಜೀವನದಿ ಕಾವೇರಿ ನದಿಯಿಂದ ಜನರು ಬದುಕು ಕಟ್ಟಿಕೊಳ್ಳಲು ಸಾಧ್ಯವಾಗಿದೆ ಎಂದು ಬೆಂಗಳೂರು ಪಶ್ಚಿಮ ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಹನುಮಂತರಾಯಪ್ಪ ಹೇಳಿದರು.

ನಾಡಪ್ರಭು ಕೆಂಪೇಗೌಡ ಸೇವಾ ಟ್ರಸ್ಟ್ ವತಿಯಿಂದ ಲಗ್ಗೆರೆಯಲ್ಲಿ ಕಾವೇರಿ ತಾಯಿಯ ಪ್ರತಿಮೆ ಪ್ರತಿಷ್ಠಾಪನೆಗೆ ಸಂಬಂಧಿಸಿ ನಿರ್ಮಾಣ ಕಾಮಗಾರಿಯ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ನಾಡಪ್ರಭು ಕೆಂಪೇಗೌಡ ಸೇವಾ ಟ್ರಸ್ಟ್ ಅಧ್ಯಕ್ಷ ಎಚ್.ಎಸ್.ಸಿದ್ದೇಗೌಡ ಮತ್ತು ಶಾಸಕ ಕೆ.ಗೋಪಾಲಯ್ಯ ಶುಭ ಹಾರೈಸಿದರು. ಅರ್ಪಿತಾ ಸೇವಾ ಟ್ರಸ್ಟ್ ಅಧ್ಯಕ್ಷ ಲಗ್ಗೆರೆ ನಾರಾಯಣಸ್ವಾಮಿ, ನಾಡಪ್ರಭು ಕೆಂಪೇಗೌಡ ಸೇವಾ ಟ್ರಸ್ಟ್ ಧರ್ಮದರ್ಶಿ ಬ್ಯಾಟರಾಯಪ್ಪ, ಎನ್. ಚಂದ್ರಶೇಖರ್ (ಶೇಖರ್), ಜಗದೀಶ್, ಪಟೇಲ್ ದೇವರಾಜು, ಹನುಮಯ್ಯ, ಮಾಜಿ ಪಾಲಿಕೆ ಸದಸ್ಯರಾದ ಮಂಜುಳಾ ನಾರಾಯಣಸ್ವಾಮಿ, ವೇಲು ನಾಯ್ಕರ್, ಆಶಾ ಸುರೇಶ್ ಇದ್ದರು.

'ಮಾತು ತಪ್ಪಿದ ಸಿದ್ದರಾಮಯ್ಯ ಸರ್ಕಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದ ರೈತರಿಗೆ, ಹೈನುಗಾರರಿಗೆ ಕೊಟ್ಟಿದ್ದ ಮಾತನ್ನು ಉಳಿಸಿಕೊಳ್ಳುವಲ್ಲಿ ಸಿದ್ದರಾಮಯ್ಯ ಅವರ ಸರ್ಕಾರ ವಿಫಲವಾಗಿದೆ' ಎಂದು ಬಿಜೆಪಿ ರಾಜ್ಯ ರೈತ ಮೋರ್ಚಾ ಕಾರ್ಯದರ್ಶಿ ಸತೀಶ್‌ಗೌಡ ಕಡತನಮಲೆ ಆರೋಪಿಸಿದರು.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, '2023ರ ಚುನಾವಣೆಗೂ ಮುನ್ನ ಕಾಂಗ್ರೆಸ್ ಹಲವು ಆಶ್ವಾಸನೆಗಳನ್ನು ಕೊಟ್ಟಿತ್ತು. ಹಾಲು ಉತ್ಪಾದಕರಿಗೆ ಪ್ರತಿ ಲೀಟರ್‌ಗೆ ₹7 ಪ್ರೋತ್ಸಾಹ ಧನ, ₹10 ಲಕ್ಷದವರೆಗೆ ಶೂನ್ಯ ಬಡ್ಡಿಯಲ್ಲಿ ಸಾಲ ನೀಡುತ್ತೇವೆ ಎಂದು ಪ್ರಣಾಳಿಕೆಯಲ್ಲಿ ಹೇಳಲಾಗಿತ್ತು. ಆದರೆ ಈ ಯಾವ ಆಶ್ವಾಸನೆಯನ್ನೂ ಈಡೇರಿಸಿಲ್ಲ' ಎಂದು ಆರೋಪಿಸಿದರು.

'ಹಾಲು ಉತ್ಪಾದಕರಿಗೆ ₹7 ಪ್ರೋತ್ಸಾಹಧನ ನೀಡುವುದು ಇರಲಿ, ನಮ್ಮ ಸರ್ಕಾರ ನೀಡುತ್ತಿದ್ದ ₹5 ಪ್ರೋತ್ಸಾಹಧನದಲ್ಲಿ ₹600 ಕೋಟಿಗೂ ಹೆಚ್ಚು ಬಾಕಿ ಉಳಿಸಿಕೊಂಡಿದ್ದೀರಿ. ಶೂನ್ಯ ಬಡ್ಡಿಯ ಸಾಲ ಇರಲಿ, ಸಾಲವನ್ನೇ ನೀಡುತ್ತಿಲ್ಲ. ಈ ಸರ್ಕಾರ ರೈತರನ್ನು ಸಂಪೂರ್ಣವಾಗಿ ಕಡೆಗಣಿಸಿದೆ' ಎಂದರು.

'ಸಿದ್ದರಾಮಯ್ಯ ಅವರ ಸರ್ಕಾರ ಮಾತು ತಪ್ಪಿದೆ ಎಂಬುದನ್ನು ಅವರ ಪಕ್ಷದ ಅಧ್ಯಕ್ಷರೇ ಸಾಮಾಜಿಕ ಜಾಲತಾಣಗಳಲ್ಲಿ ಹೇಳಿದ್ದಾರೆ. ಅಂತಹ ಸ್ಥಿತಿಗೆ ಈ ಸರ್ಕಾರ ಬಂದು ನಿಂತಿದೆ. ಸರ್ಕಾರವು ಈಗಲೇ ಮೆಕ್ಕೆಜೋಳ ಖರೀದಿ, ಭತ್ತ-ರಾಗಿ ಖರೀದಿ ಕೇಂದ್ರಗಳನ್ನು ಆರಂಭಿಸಬೇಕು. ರೈತರ ಉತ್ಪನ್ನಗಳ ಖರೀದಿಗೆ ಅನಗತ್ಯ ಷರತ್ತುಗಳನ್ನು ಹೇರಬಾರದು. ಇಲ್ಲದೇ ಇದ್ದಲ್ಲಿ, ರಾಜ್ಯದಾದ್ಯಂತ ತೀವ್ರ ಹೋರಾಟ ನಡೆಸುತ್ತೇವೆ' ಎಂದು ಒತ್ತಾಯಿಸಿದರು.

ಬಿಜೆಪಿ ರೈತ ಮೋರ್ಚಾದ ಬೆಂಗಳೂರು ಉತ್ತರ ಜಿಲ್ಲಾ ಘಟಕದ ಅಧ್ಯಕ್ಷ ಜಿ.ಜೆ.ಮೂರ್ತಿ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಬಿಜೆಪಿ ರೈತ ಮೋರ್ಚಾದ ಪದಾಧಿಕಾರಿಗಳು ರಾಜ್ಯ ಸರ್ಕಾರದ ವಿರುದ್ಧ ಆಯೋಜಿಸಿರುವ ರೈತ ಹೋರಾಟದ ಪೋಸ್ಟರ್ ಅನಾವರಣ ಮಾಡಿದರು

'ಅಧಿವೇಶನದ ದಿನ ಪ್ರತಿಭಟನೆ'

'ಬೆಳಗಾವಿಯ ಸುವರ್ಣ ಸೌಧದಲ್ಲಿ ಅಧಿವೇಶನ ಆರಂಭವಾಗುವ ಡಿ.8ರಂದು ರಾಜ್ಯದ ಎಲ್ಲ ತಾಲ್ಲೂಕು ಕೇಂದ್ರದಲ್ಲಿ ರೈತ ಮೋರ್ಚಾದಿಂದ ಪ್ರತಿಭಟನೆ ನಡೆಸುತ್ತೇವೆ' ಎಂದು ಬಿಜೆಪಿ ರೈತ ಮೋರ್ಚಾ ಉಪಾಧ್ಯಕ್ಷ ರುದ್ರೇಶ್ ಹೇಳಿದರು.

'ರೈತರಿಗೆ ನೀಡಿದ್ದ ಮಾತುಗಳನ್ನು ಸಿದ್ದರಾಮಯ್ಯ ಸರ್ಕಾರ ಈಡೇರಿಸಿಲ್ಲ. ಆದರೆ ಅವೆಲ್ಲವನ್ನೂ ಈಡೇರಿಸಿದ್ದೇವೆ ಎಂದು ಪ್ರಚಾರ ಮಾಡುತ್ತಿದ್ದಾರೆ. ಇದು ಸುಳ್ಳು. ಸುಳ್ಳು ಹೇಳುವುದನ್ನು ಬಿಟ್ಟು, ರೈತರಿಗೆ ನೀಡಿದ್ದ ಆಶ್ವಾಸನೆಗಳನ್ನು ಈಡೇರಿಸಿ' ಎಂದು ಅವರು ಒತ್ತಾಯಿಸಿದರು.

ಪುಸ್ತಕ ಬಿಡುಗಡೆ

ಪ್ರಜಾವಾಣಿ ಚಿತ್ರ

ಬೆಂಗಳೂರಿನ ಕರ್ನಾಟಕ ರಾಜ್ಯ ಬಿಲಿಯರ್ಡ್ಸ್ ಸಂಸ್ಥೆಯಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಲೇಖಕ ಸ್ಟ್ಯಾನ್ಲಿ ಕರ್ವಾಲೊ ಅವರ 'ಪ್ಲೇಬ್ಯಾಕ್ 2 ಸ್ಪೋರ್ಟ್ಸ್ ಲೆಜೆಂಡ್ಸ್ ಆಫ್ ಬೆಂಗಳೂರು' ಪುಸ್ತಕವನ್ನು ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್ ನಿರ್ದೇಶಕ ಕೆ.ಎನ್. ಶಾಂತಕುಮಾರ್ ಅವರು ಬಿಡುಗಡೆ ಮಾಡಿ ಕ್ರೀಡಾ ವಕೀಲ ನಂದನ್ ಕಾಮತ್ ಅವರಿಗೆ ಪ್ರತಿಯನ್ನು ನೀಡಿದರು

'ದೈವ'ವನ್ನು 'ದೆವ್ವ'ವೆಂದ ರಣ್‌ವೀರ್ ಸಿಂಗ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಣಜಿಯಲ್ಲಿ ಶುಕ್ರವಾರ(ಅ.28) ನಡೆದ 56ನೇ ಭಾರತದ ಅಂತರರಾಷ್ಟ್ರೀಯ ಚಲನಚಿತ್ರೋತ್ಸವದ(IFFI-ಇಫಿ) ಸಮಾರೋಪ ಸಮಾರಂಭದಲ್ಲಿ 'ಕಾಂತಾರ' ಪ್ರೀಕ್ವೆಲ್‌ನಲ್ಲಿ ಬರುವ ಚಾವುಂಡಿ ದೈವವನ್ನು 'ದೆವ್ವ'(ಘೋಸ್ಟ್) ಎಂದು ಬಾಲಿವುಡ್ ನಟ ರಣ್‌ವೀರ್ ಸಿಂಗ್ ಹೇಳಿರುವುದು ಚರ್ಚೆಗೆ ಗ್ರಾಸವಾಗಿದೆ.

'ದೈವವನ್ನು ಚಿತ್ರಮಂದಿರಗಳಲ್ಲಿ ಅಥವಾ ಹೊರಗಡೆ ಅನುಕರಣೆ ಮಾಡಿದಾಗ ನನಗೂ ಬೇಜಾರಾಗುತ್ತದೆ. ದಯವಿಟ್ಟು ಅನುಕರಣೆ ಮಾಡಬೇಡಿ. ಇದು ಭಕ್ತರಿಗೂ ಬೇಸರ ಉಂಟುಮಾಡುತ್ತದೆ' ಎಂದು ರಿಷಬ್ ಈ ಹಿಂದೆ ಹಲವು ಬಾರಿ ಹೇಳಿದ್ದರು. ಆದರೆ ಸಮಾರೋಪ ಸಮಾರಂಭದಲ್ಲಿ ನಟ ರಿಷಬ್ ಶೆಟ್ಟಿ ಎದುರೇ ದೈವವನ್ನು ಎರಡು ಬಾರಿ ವ್ಯಂಗ್ಯವಾಗಿ ಅನುಕರಣೆ ಮಾಡಿದ್ದಾರೆ ರಣ್‌ವೀರ್ ಸಿಂಗ್. ಮೊದಲ ಬಾರಿಗೆ ಹೀಗೆ ಮಾಡಬೇಡಿ ಎಂದು ಕೈಸನ್ನೆಯಲ್ಲಿ ರಿಷಬ್ ಹೇಳುತ್ತಾರೆ. ಬಳಿಕ ವೇದಿಕೆಯಲ್ಲಿ ರಣ್‌ವೀರ್ ದೈವವನ್ನು ಅನುಕರಣೆ ಮಾಡಿದಾಗ ಇದನ್ನು ನೋಡಿ ರಿಷಬ್ ನಗುತ್ತಿರುವ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ.

'ಕಾಂತಾರದಲ್ಲಿ ರಿಷಬ್ ನಟನೆಗೆ ದೊಡ್ಡ ಮಟ್ಟದ ಮೆಚ್ಚುಗೆ ಸಿಗಬೇಕು. ಚಿತ್ರಮಂದಿರದಲ್ಲೇ ರಿಷಬ್ ಅವರ ನಟನೆ ನೋಡಿದೆ. ನಿಮ್ಮ ದೇಹದೊಳಗೆ ಹೆಣ್ಣು ದೆವ್ವ ಹೊಕ್ಕ ಸಂದರ್ಭದಲ್ಲಿ ನೀವು ಮಾಡಿದ ನಟನೆ ಅದ್ಭುತವಾಗಿತ್ತು. ಅದನ್ನು ನೋಡಿದ್ದೀರಾ? (ಈ ಸಂದರ್ಭದಲ್ಲೇ ನಾಲಿಗೆ ಹೊರಚಾಚಿ ವ್ಯಂಗ್ಯವಾಗಿ ದೈವದ ಅನುಕರಣೆ ಮಾಡಿದರು). ನನ್ನನ್ನು 'ಕಾಂತಾರ-3'ರಲ್ಲಿ ನೋಡಬಯಸುತ್ತೀರಾ? ದಯವಿಟ್ಟು ರಿಷಬ್‌ಗೆ ಹೇಳಿ' ಎಂದು ರಣ್‌ವೀರ್ ಹೇಳಿದರು.

ರಣ್‌ವೀರ್ ಸಿಂಗ್ ನಟನೆಯ 'ಧುರಂಧರ್' ಸಿನಿಮಾ ಡಿ.5ರಂದು ಬಿಡುಗಡೆಯಾಗುತ್ತಿದ್ದು, ಸಿನಿಮಾದ ಹಾಡಿನ ಬಿಡುಗಡೆ ಇಫಿ ಸಮಾರೋಪದಲ್ಲಿ ನಡೆಯಿತು. ಇದಕ್ಕಾಗಿ ರಣ್‌ವೀರ್ ಇಫಿ ಸಮಾರೋಪಕ್ಕೆ ಬಂದಿದ್ದರು.

ರಿಷಬ್ ಶೆಟ್ಟಿ, ರಣ್‌ವೀರ್ ಸಿಂಗ್

ಸಕ್ರಿಯ ಸಿಮ್ ಕಾರ್ಡ್: ಕೇಂದ್ರ ಸೂಚನೆ

ನವದೆಹಲಿ (ಪಿಟಿಐ): ಬಳಕೆದಾರರ ಮೊಬೈಲ್‌ನಲ್ಲಿ ಸಕ್ರಿಯವಾಗಿರುವ ಸಿಮ್ ಕಾರ್ಡ್ ಇದ್ದಾಗ ಮಾತ್ರ ವಾಟ್ಸ್‌ಆ್ಯಪ್ ಸೇರಿದಂತೆ ಆ್ಯಪ್ ಆಧಾರಿತ ಸಂವಹನ ಸೇವೆ ಕಾರ್ಯನಿರ್ವಹಿಸುವುದನ್ನು ಖಾತರಿಪಡಿಸುವಂತೆ ಕೇಂದ್ರ ಸರ್ಕಾರ ನಿರ್ದೇಶನ ನೀಡಿದೆ.

ಈ ಕುರಿತಂತೆ 120 ದಿನಗಳೊಳಗಾಗಿ ದೂರಸಂಪರ್ಕ ಇಲಾಖೆಗೆ ಅನುಪಾಲನಾ ವರದಿಯನ್ನು ಸಲ್ಲಿಸುವಂತೆ ಆ್ಯಪ್ ಆಧಾರಿತ ಸಂವಹನ ಸೇವೆ ಒದಗಿಸುವ ಕಂಪನಿಗಳಿಗೆ ನಿರ್ದೇಶನ ನೀಡಲಾಗಿದೆ.

ವರದಿ ಸಲ್ಲಿಸಲು ವಿಫಲವಾದಲ್ಲಿ ದೂರಸಂಪರ್ಕ ಕಾಯ್ದೆ 2023, ಟೆಲಿಕಾಂ ಸೈಬರ್ ಭದ್ರತಾ ನಿಯಮ ಮತ್ತು ಇತರ ಕಾಯ್ದೆಗಳ ಅಡಿಯಲ್ಲಿ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದೆ.

ಕೇಂದ್ರ ಸರ್ಕಾರದ ಈ ಕ್ರಮವು ವಾಟ್ಸ್‌ಆ್ಯಪ್, ಸಿಗ್ನಲ್, ಟೆಲಿಗ್ರಾಮ್, ಅರಟ್ಟೈ, ಸ್ನಾಪ್‌ಚಾಟ್, ಶೇರ್‌ಚಾಟ್, ಜಿಯೋಚಾಟ್, ಜೋಷ್‌ನಂತಹ ಸಂವಹನ ಸೇವೆ ನೀಡುವ ಆ್ಯಪ್‌ಗಳ ಬಳಕೆದಾರರ ಮೇಲೆ ಪರಿಣಾಮ ಬೀರಲಿದೆ.

ನಗರದಲ್ಲಿ ಇಂದು

ಹೂಗಳ ಹಬ್ಬ: ಕರ್ನಾಟಕ ರಾಜ್ಯೋತ್ಸವ ಹಾಗೂ ಮಕ್ಕಳ ದಿನಾಚರಣೆ ಅಂಗವಾಗಿ ಪುಷ್ಪ ಪ್ರದರ್ಶನ, ಮಕ್ಕಳು ಮತ್ತು ಮಹಿಳೆಯರಿಗೆ ವಿವಿಧ ಸ್ಪರ್ಧೆಗಳು, ಆಯೋಜನೆ: ತೋಟಗಾರಿಕೆ ಇಲಾಖೆ, ಸ್ಥಳ: ಬ್ಯಾಂಡ್ ಸ್ಟ್ಯಾಂಡ್ ಆವರಣ, ಕಬ್ಬನ್ ಉದ್ಯಾನ, ಬೆಳಿಗ್ಗೆ 8ರಿಂದ ಸಂಜೆ 6

ಟ್ರಸ್ಟ್ ಉದ್ಘಾಟನೆ ಹಾಗೂ ಕರ್ನಾಟಕ ರಾಜ್ಯೋತ್ಸವ: ಅತಿಥಿಗಳು: ದಿನೇಶ್ ಗುಂಡೂರಾವ್, ಕೃಷ್ಣಬೈರೇಗೌಡ, ಸಂತೋಷ್ ಹೆಗ್ಡೆ, ಡಾ. ನಾಗಲಕ್ಷ್ಮಿ ಚೌಧರಿ, ಸಾ.ರಾ.ಗೋವಿಂದು, ಎನ್.ಎಂ. ಸುರೇಶ್, ಲಕ್ಷ್ಮೀ ಗೋವಿಂದರಾಜ್, ಪೂರ್ಣಿಮಾ ರಾಜ್‌ಕುಮಾರ್, ಎಚ್. ಶಿವರಾಮೇಗೌಡ, ನಾ.ಶ್ರೀಧರ್, ಕಾ.ವೆಂ. ಶ್ರೀನಿವಾಸಮೂರ್ತಿ, ವ.ಚ. ಚನ್ನೇಗೌಡ, ಪಾಲನೇತ್ರ, ಆಯೋಜನೆ: ಶಾರದಾಂಬೆ ಸೇವಾ ಚಾರಿಟಬಲ್ ಟ್ರಸ್ಟ್, ಸ್ಥಳ: ಶುಕ್ರ ಸಭಾಂಗಣ, 1ನೇ ಅಡ್ಡರಸ್ತೆ, ಮಲ್ಲೇಶ್ವರ, ಬೆಳಿಗ್ಗೆ 9

2024ನೇ ಸಾಲಿನ ಗೌರವ ಪ್ರಶಸ್ತಿ ಪ್ರದಾನ ಸಮಾರಂಭ: ಉದ್ಘಾಟನೆ: ಸಿದ್ದರಾಮಯ್ಯ, ಪುಸ್ತಕ ಬಿಡುಗಡೆ: ಯು.ಟಿ. ಖಾದರ್, ಪ್ರಶಸ್ತಿ ಪ್ರದಾನ: ಡಿ.ಕೆ. ಶಿವಕುಮಾರ್, ಸಾಕ್ಷ್ಯಚಿತ್ರ ಬಿಡುಗಡೆ: ಶಿವರಾಜ ತಂಗಡಗಿ, ಅಭಿನಂದನಾ ನುಡಿ: ಡಿ.ವಿ. ಸದಾನಂದಗೌಡ, ಅರೆಭಾಷೆ ನಾಟಕ ಬಿಡುಗಡೆ: ಎ.ಎಸ್. ಪೊನ್ನಣ್ಣ, ಅಧ್ಯಕ್ಷತೆ: ಸದಾನಂದ ಮಾವಜಿ, ಆಯೋಜನೆ: ಕರ್ನಾಟಕ ಅರೆಭಾಷೆ ಸಂಸ್ಕೃತಿ ಮತ್ತು ಸಾಹಿತ್ಯ ಅಕಾಡೆಮಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ.ರಸ್ತೆ, ಬೆಳಿಗ್ಗೆ 9.30

ನೂಪುರ ನಾದ: ವಿ. ಪ್ರತೀಕ್ಷ, ಆಯೋಜನೆ: ನೆಲಮಂಗಲದ ಅರಿಶಿನಕುಂಟೆಯ ಶ್ರೀ ಗಣೇಶ ನೃತ್ಯಾಲಯ ಟ್ರಸ್ಟ್ ಸಂಗೀತ ಮತ್ತು ನೃತ್ಯ ಶಾಲೆ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಳಿಗ್ಗೆ 9.30

ಅಖಿಲ ಭಾರತ ಕನ್ನಡ ನುಡಿ ಸಮ್ಮೇಳನ: ಸಮ್ಮೇಳನಾಧ್ಯಕ್ಷತೆ: ಎಸ್. ರಾಮಲಿಂಗೇಶ್ವರ (ಸಿಸಿರಾ), ಉದ್ಘಾಟನೆ: ಚಿಕ್ಕಹೆಜ್ಜಾಜಿ ಮಹದೇವ್, ಉಪಸ್ಥಿತಿ: ವಿ. ಮುರಳಿ ಮೋಹನ್, ಗಣೇಶ್ ರಾವ್ ಕೇಸರಕರ್, ಕೆ.ಸಿ. ಮುನಿಯಪ್ಪ, ಕೆ.ಬಿ. ಪರಮೇಶ್ವರಪ್ಪ, ಅಧ್ಯಕ್ಷತೆ: ಸುರೇಶ್ ಕೋರಕೊಪ್ಪ, ಆಯೋಜನೆ: ಗಂಧದ ಗುಡಿ ಕನ್ನಡ ಸಂಘ, ಧಾರವಾಡದ ಚೇತನ ಪ್ರತಿಷ್ಠಾನ, ಸ್ಥಳ: ಸಮ್ಮೇಳನ ಸಭಾಂಗಣ, ಶೇಷಾದ್ರಿಪುರಂ ಕಾಲೇಜು, ಶೇಷಾದ್ರಿಪುರ, ಬೆಳಿಗ್ಗೆ 10

103ನೇ ಆರ್ಗ್ಯಾನಿಕ್ ಸಂತೆ: ಕಲಾ ಪ್ರದರ್ಶನ: ಆರ್.ಪಿ. ಕಲಾ ಕುಟುಂಬ, ವಾರದ ಅತಿಥಿ: ಅಮೃತಾ ಗೌಡ, ಆಯೋಜನೆ ಹಾಗೂ ಸ್ಥಳ: ದಿ ಗ್ರೀನ್ ಪಾಥ್, ಮಲ್ಲೇಶ್ವರ, ಬೆಳಿಗ್ಗೆ 10

ನೂತನ ಧ್ವಜಸ್ತಂಭದ ಉದ್ಘಾಟನೆ ಮತ್ತು ಕರ್ನಾಟಕ ರಾಜ್ಯೋತ್ಸವ ಸಮಾರಂಭ: ಅತಿಥಿಗಳು: ಎಂ. ಕೃಷ್ಣಪ್ಪ, ಜಯರಾಮ್, ಆಯೋಜನೆ ಹಾಗೂ ಸ್ಥಳ: ಚಂಪಕಧಾಮ ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ, ಶ್ರೀರಾಮ ಕಟ್ಟೆ ರಸ್ತೆ, ಬನ್ನೇರುಘಟ್ಟ, ಬೆಳಿಗ್ಗೆ 10

ರಂಗಪ್ರವೇಶ: ದೇವಿಕಾ ಬಾಯ್, ಗಾಯನ: ಹರ್ಷಿತಾ ವಿದ್ಯಾ, ಕೊಳಲು: ರಾಕೇಶ್ ದತ್, ಮೃದಂಗ: ವಿನಯ್ ನಾಗರಾಜ್, ಆಯೋಜನೆ: ನರ್ತಿತಮ್ ಸ್ಕೂಲ್ ಆಫ್ ಭರತನಾಟ್ಯಂ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಸವನಗುಡಿ, ಬೆಳಿಗ್ಗೆ 10

ದೇವಿಕಾ ಬಾಯ್

ನಾಟ್ಯೇಶ್ವರ ನೃತ್ಯ ಮತ್ತು ಸಂಗೀತ ಉತ್ಸವ: ಅತಿಥಿ: ಮೀನಾಕ್ಷಿ ಪ್ರಸಾದ್, ಆಯೋಜನೆ: ನಾಟ್ಯೇಶ್ವರ ನೃತ್ಯ ಶಾಲೆ, ಸ್ಥಳ: ಕೇಶವ ಕಲ್ಪ, ಮಲ್ಲೇಶ್ವರ, ಬೆಳಿಗ್ಗೆ 10.30

ಕಬಡ್ಡಿ ನರೇಂದ್ರ ಬಾಬು @ 50: ಚಲನಚಿತ್ರ ಪ್ರದರ್ಶನ ಹಾಗೂ ಅಭಿನಂದನೆ, ಉದ್ಘಾಟನೆ: ಗಿರೀಶ್ ಕಾಸರವಳ್ಳಿ, ಅತಿಥಿಗಳು: ಎಚ್. ಎನ್. ನರಹರಿ ರಾವ್, ಪಿ. ಶೇಷಾದ್ರಿ, ಎನ್.ಎಸ್. ಶಂಕರ್, ನಾಗೇಂದ್ರ ಶಾ, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ನಿರ್ವಹಣೆ: ಜಗದೀಶ್ ಜಾಲ, ಆಯೋಜನೆ: ರಂಗ ಗೆಳೆಯರು, ಸ್ಥಳ: ಸುಚಿತ್ರ ಸಿನಿಮಾ ಮತ್ತು ಸಾಂಸ್ಕೃತಿಕ ಅಕಾಡೆಮಿ, ಬನಶಂಕರಿ 2ನೇ ಹಂತ, ಬೆಳಿಗ್ಗೆ 10.30

'ಅನು ಒಲಿದಂತೆ ಹಾಡುವೆ' ಎಂ. ಬಸವಣ್ಣ ಅವರ ಸಮಗ್ರ ಸಾಹಿತ್ಯ ಅವಲೋಕನ: ಉದ್ಘಾಟನೆ: ಡಿ.ವಿ. ಪರಶಿವಮೂರ್ತಿ, ಉಪಸ್ಥಿತಿ: ಎಂ. ಬಸವಣ್ಣ, ನ.ರವಿಕುಮಾರ, ವಿಚಾರ ಪ್ರಸ್ತುತಿ: ಬಸವರಾಜ ಕಲ್ಗುಡಿ, ಸುಭಾಷ ರಾಜಮಾನೆ, ಆಯೋಜನೆ: ಕನ್ನಡ ವಿಶ್ವವಿದ್ಯಾಲಯ ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ, ಅಭಿನವ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪ ರಸ್ತೆ, ಬೆಳಿಗ್ಗೆ 10.30

ಬೆಂಗಳೂರು ಸುರಂಗ ರಸ್ತೆ ಯೋಜನೆ ವಿರೋಧಿಸಿ ಜನಸಮಾವೇಶ: ಅಧ್ಯಕ್ಷತೆ: ಜಿ. ಶಶಿಕುಮಾರ್, ಪ್ರಾಸ್ತಾವಿಕ ಭಾಷಣ: ಎನ್.ರವಿ, ಭಾಷಣಕಾರರು: ಪ್ರೊ.ಸಿ.ಪಿ. ರಾಜೇಂದ್ರನ್, ಪ್ರೊ.ಟಿ.ವಿ. ರಾಮಚಂದ್ರ, ಪ್ರೊ.ಎಂ.ಎನ್. ಶ್ರೀಹರಿ, ಪ್ರೊ.ರೇಣುಕಾ ಪ್ರಸಾದ್, ಸುಧಾ ಕಾಮತ್, ಉಪಸ್ಥಿತಿ: ನಾಗೇಶ್ ಹೆಗಡೆ, ಆಯೋಜನೆ: ಬೆಂಗಳೂರು ಉಳಿಸಿ ಸಮಿತಿ, ಸ್ಥಳ: ಎಸ್‌ಸಿಎಂ ಹೌಸ್, ಮಿಷನ್ ರಸ್ತೆ, ಬೆಳಿಗ್ಗೆ 10.30

ಲಕ್ಷ್ಮೀನಾರಾಯಣ 50ರ ಸಂಭ್ರಮ: ಉದ್ಘಾಟನೆ: ಎಂ.ದೊರೆಸ್ವಾಮಿ, ಉಪಸ್ಥಿತಿ: ಅನಂತರಾಮ್, ಅಧ್ಯಕ್ಷತೆ: ಬಿ.ಕೆ. ಶಿವರಾಮ್, ಆಯೋಜನೆ: ರಂಗವಿಜಯಾ, ಸ್ಥಳ: ವೆಂಕಟಪ್ಪ ಆರ್ಟ್ ಗ್ಯಾಲರಿ, ಕಸ್ತೂರಿಬಾ ರಸ್ತೆ, ಬೆಳಿಗ್ಗೆ 10.30

ಮಲ್ಲೇಪುರಂ ಜಿ. ವೆಂಕಟೇಶ್ ಅವರ 'ಅಲ್ಲಮ ಕಥನ' ಪುಸ್ತಕ ಬಿಡುಗಡೆ ಮತ್ತು ಅಲ್ಲಮ ಪುರಸ್ಕಾರ ಪ್ರದಾನ: ಸಾನ್ನಿಧ್ಯ: ಸಿದ್ಧಲಿಂಗ ಸ್ವಾಮೀಜಿ, ಪುಸ್ತಕ ಬಿಡುಗಡೆ: ಶಿವರಾಜ ವಿ. ಪಾಟೀಲ, ಅಧ್ಯಕ್ಷತೆ: ಜಗದೀಶ ಶಿವಯ್ಯ ಗುಡಗುಂಟಿ, ಅತಿಥಿ: ವೂಡೇ ಪಿ. ಕೃಷ್ಣ, ಪುಸ್ತಕದ ಬಗ್ಗೆ ಮಾತು: ಬಿ.ವಿ. ವಸಂತಕುಮಾರ್, ಅಲ್ಲಮ ಪುರಸ್ಕಾರ: ನೀಲಗಿರಿ ತಳವಾರ, ವೀಣಾ ಬನ್ನಂಜೆ, ಟಿ.ಎನ್. ವಾಸುದೇವಮೂರ್ತಿ, ಪ್ರಕಾಶ್ ಗಿರಿಮಲ್ಲನವರ, ಆಯೋಜನೆ: ಪ್ರಭುಲಿಂಗೇಶ್ವರ ಶಿಕ್ಷಣ ಸಂಸ್ಥೆ, ಅಂಕಿತ ಪುಸ್ತಕ, ಸ್ಥಳ: ದೇಸಾಯಿ ಮಹದೇವ ಸಭಾಂಗಣ, ಗಾಂಧಿ ಭವನ, ಕುಮಾರಪಾರ್ಕ್ ಪೂರ್ವ, ಬೆಳಿಗ್ಗೆ 11

5ನೇ ಕನ್ನಡ ಪುಸ್ತಕ ಹಬ್ಬ: 'ತಾಯೇ ವಂದಿಸುವೆ!' ವಿಷಯದ ಬಗ್ಗೆ ಉಪನ್ಯಾಸ: ಚಕ್ರವರ್ತಿ ಸೂಲಿಬೆಲೆ, ಆಯೋಜನೆ: ರಾಷ್ಟ್ರೋತ್ಥಾನ ಸಾಹಿತ್ಯ, ಸ್ಥಳ: ಕೇಶವಶಿಲ್ಪ ಸಭಾಂಗಣ, ಕೆಂಪೇಗೌಡನಗರ, ಬೆಳಿಗ್ಗೆ 11

ಮುಕುಲ ನೃತ್ಯೋತ್ಸವ: ವಿವಿಧ ಪ್ರಕಾರದ ನೃತ್ಯ ಪ್ರದರ್ಶನ, ಅತಿಥಿ: ರೋಹಿಣಿ ರಘುನಂದನ್, ಆಯೋಜನೆ: ಸಾಧನ ಸಂಗಮ ಟ್ರಸ್ಟ್, ಸ್ಥಳ: ರಂಗೋಪನಿಷತ್, ಬಸವೇಶ್ವರನಗರ, ಸಂಜೆ 4

ಮಲ್ಲೇಪುರಂ ಜಿ. ವೆಂಕಟೇಶ್

ಮಾಗಡಿ ಆರ್. ಗುರುದೇವ 70 ಅಭಿನಂದನಾ ಸಮಾರಂಭ ಹಾಗೂ 'ಪದಗಳಾದ ನೆನಪುಗಳು' ಅಭಿನಂದನಾ ಗ್ರಂಥ ಬಿಡುಗಡೆ: ಸಾನ್ನಿಧ್ಯ: ನಿರ್ಮಲಾನಂದನಾಥ ಸ್ವಾಮೀಜಿ, ನಿಶ್ಚಲಾನಂದನಾಥ ಸ್ವಾಮೀಜಿ, ಅತಿಥಿಗಳು: ಡಾ.ಸಿ.ಎನ್. ಮಂಜುನಾಥ್, ವೂಡೇ ಪಿ. ಕೃಷ್ಣ, ತಾನಂ ಕುಮಾರಸ್ವಾಮಿ, ಅಧ್ಯಕ್ಷತೆ: ಅ. ದೇವೇಗೌಡ, ಆಯೋಜನೆ: ಡಾ.ಎಂ.ಆರ್. ಗುರುದೇವ ಅಭಿನಂದನಾ ಸಮಿತಿ, ಸ್ಥಳ: ಗಾಂಧಿಭವನ, ಕುಮಾರಪಾರ್ಕ್ ಪೂರ್ವ, ಸಂಜೆ 4

ಕರ್ನಾಟಕ ರಾಜ್ಯೋತ್ಸವ ಸಮಾರಂಭ ಹಾಗೂ ಬಸವೇಶ್ವರನಗರ ದಿನಪತ್ರಿಕೆ ವಿತರಕರ ಸಂಘದ ಉದ್ಘಾಟನೆ: ಕೆ.ಗೋಪಾಲಯ್ಯ, ಅಧ್ಯಕ್ಷತೆ: ಕೆ. ಶಂಭುಲಿಂಗ, ಉಪಸ್ಥಿತಿ: ಬಿ.ವಿ. ಮಲ್ಲಿಕಾರ್ಜುನಯ್ಯ, ಆಯೋಜನೆ: ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಸಂಘ, ಬಸವೇಶ್ವರನಗರ ದಿನಪತ್ರಿಕೆ ವಿತರಕರ ಸಂಘ, ಸ್ಥಳ: ಶಾಸಕರ ಭವನ, ಮಹಾಲಕ್ಷ್ಮಿಪುರ, ಸಂಜೆ 4

'ವಿಷ್ಣು ವಿಜಯ' ಸಾಂಸ್ಕೃತಿ ಕಾರ್ಯಕ್ರಮ: ಅತಿಥಿಗಳು: ಎಂ.ಕೃಷ್ಣಪ್ಪ, ನಸೀರ್ ಅಹ್ಮದ್, ವಿಶ್ವೇಶ್ವರ ಭಟ್, ಆರ್. ಪ್ರಭಾಕರ್ ರೆಡ್ಡಿ, ಸಿ.ಆರ್. ಮುರಳಿ, ಹರೀಶ್ ಭಟ್, ಅಮೃತಾ, ವಾದ್ಯಗೋಷ್ಠಿ: ಉಮೇಶ್ ಮತ್ತು ತಂಡ, ನೃತ್ಯ: ಶ್ರೀಕಂಠೇಶ್ವರ ಕಲಾ ಕೇಂದ್ರ, ಆಯೋಜನೆ: ಸೃಜನ ಲಲಿತಕಲಾ ವೇದಿಕೆ, ಸ್ಥಳ: ಟೌನ್‌ಹಾಲ್, ಜೆ.ಸಿ.ರಸ್ತೆ, ಸಂಜೆ 5

ಮಾಸಿಕ ಓಪನ್ ಮೈಕ್: ಕಲಾವಿದರಿಂದ ಪ್ರದರ್ಶನ, ಆಯೋಜನೆ ಹಾಗೂ ಸ್ಥಳ: ಇಂಡಿಯನ್ ಮ್ಯೂಸಿಕ್ ಎಕ್ಸ್‌ಪೀರಿಯನ್ಸ್ ಮ್ಯೂಸಿಯಂ, ಜೆ.ಪಿ. ನಗರ, ಸಂಜೆ 5

ಸರೋಜಾದೇವಿ

ಇಂಚರ 130: ಪುರುಷೋತ್ತಮ ಭಾರತೀ ಸ್ವಾಮೀಜಿ, ಎಸ್.ಎಲ್. ಭೈರಪ್ಪ, ಬಿ. ಸರೋಜಾದೇವಿ, ಸಾಲುಮರದ ತಿಮ್ಮಕ್ಕ, ಜಯಲಕ್ಷ್ಮಮ್ಮ ಅವರಿಗೆ ನುಡಿ ಹಾಗೂ ಗೀತ ನಮನ, ಉಪಸ್ಥಿತಿ: ಎ.ಎಂ. ಚಂದ್ರಶೇಖರ್, ಭ.ರಾ. ವಿಜಯಕುಮಾರ್, ಶ್ರೀಕಂಠ ಬಾಳಗಂಚಿ, ಶಾರದ ಬಿ.ಎ., ಆಯೋಜನೆ ಹಾಗೂ ಸ್ಥಳ: ಪಂಚಾಮೃತ ಸುಗಮ ಸಂಗೀತ ಅಕಾಡೆಮಿ, ದೊಡ್ಡಬೊಮ್ಮಸಂದ್ರ, ಸಂಜೆ 6.05

'ಸ್ವರನಮನ' ಗಾಯನ-ಭಕ್ತಿ ಸಂಗೀತ: ಅತಿಥಿಗಳು: ಲಕ್ಷ್ಮೀ ನಾಗರಾಜ್, ತಬಲಾ ನಾಣಿ, ಭಕ್ತಿ ಸಂಗೀತ: ಉಮಾ ಕುಲಕರ್ಣಿ, ಸುಮನಾ ಕಡೇಕಾರ್, ರಶ್ಮಿ ಶಶಿಧರ್, ಶಿವರಂಜನಿ, ಭಕ್ತಿ ಸಿಂಚನ: ವೈಸಿರಿ ಎನ್. ಆತ್ರೇಯ, ತಬಲಾ ವಾದನ: ಗುರುರಾಜ ಹೊಳೆನರಸೀಪುರ, ದತ್ತ ಗೀತಾಂಜಲಿ: ನಾಗೇಂದ್ರ ರಾಣಾಪೂರ್ ಮತ್ತು ವೃಂದ, ಹಿಂದೂಸ್ತಾನಿ ಸಂಗೀತ: ವಿನೀತ್ ರಾಣಾಪೂರ್, ವಾದ್ಯ ಸಹಕಾರ: ಸತೀಶ್ ಹಂಪಿಹೊಳಿ, ಶಿವಕುಮಾರ್ ಮಹಾಂತ್, ಅಮೃತೇಶ್ ಕುಲಕರ್ಣಿ, ನಾಗಶಯನ ಬಿ., ಗೌತಮ್ ಕಾರ್ಕಳ, ಪುನೀತ್ ರಾಣಾಪೂರ್, ಸುತೇಜ್ ಆರ್. ಹರಿತ್ಸ, ರೋಗನ್ ಕುಮಾರ್, ಆಯೋಜನೆ: ಸತೀಶ್ ಹಂಪಿಹೊಳಿ ಮ್ಯೂಸಿಕ್ ಫೌಂಡೇಷನ್ ಟ್ರಸ್ಟ್, ಸ್ಥಳ: ದತ್ತಾತ್ರೇಯ ದೇವಸ್ಥಾನ, ತ್ಯಾಗರಾಜನಗರ, ಸಂಜೆ 5.30

ಲಕ್ಷ್ಮೀ ನಾಗರಾಜ್

'ನಾರದಿ ವಿಲಾಸ' ಯಕ್ಷಗಾನ ಪ್ರದರ್ಶನ: ಹಿಮ್ಮೇಳ: ಸುಧೀರ್ ಭಟ್ ಪೆರ್ಡೂರು, ಪ್ರಭಾಕರ್ ಹೆಗಡೆ ಸಾಣ್ಮನೆ, ಸುಬ್ರಾಯ ಹೆಗಡೆ ಮೂರೂರು, ಗುರುದತ್ತ ಪಡಿಯಾರ್, ಮುಮ್ಮೇಳ: ಮಾರುತಿ ನಾಯ್ಕ ಚಿಕ್ಕನಕೋಡು, ಶ್ರೀಕಾಂತ್ ಪೂಜಾರಿ ರಟ್ಟಾಡಿ, ಯೋಗೀಶ್ ಪೂಜಾರಿ ನೇರಳಕಟ್ಟೆ, ಪ್ರವೀಣ್ ಬಲ್ಯಾಯ ಅಮ್ಮುಂಜೆ, ರಮೇಶ್ ಭಂಡಾರಿ ಮೂರೂರು, ಸುಬ್ರಹ್ಮಣ್ಯ ಎನ್.ಜಿ. ಅಂಕೋಲಾ, ಆಯೋಜನೆ: ನಂದಿಕೇಶ್ವರ ಪ್ರಸಾದಿತ ಯಕ್ಷಗಾನ ಮಂಡಳಿ, ಸ್ಥಳ: ಶೃಂಗೇರಿ ಶಂಕರ ಮಠ, ಶಂಕರಪುರ, ಸಂಜೆ 6



ಕರ್ನಾಟಕ ರಾಜ್ಯೋತ್ಸವ, 12ನೇ ವಾರ್ಷಿಕೋತ್ಸವ ಹಾಗೂ ವಿಶ್ವರತ್ನ ಪ್ರಶಸ್ತಿ ಪ್ರದಾನ ಸಮಾರಂಭ: ಉದ್ಘಾಟನೆ: ವಿ. ನಾಗೇಂದ್ರ ಪ್ರಸಾದ್, ಅಧ್ಯಕ್ಷತೆ: ಲಿಂಗರಾಜು ಡಿ. ನೊಣವಿನಕೆರೆ, ಉಪನ್ಯಾಸ: ಸಿ.ಎಸ್. ಬನಶಂಕರಯ್ಯ, ಆಯೋಜನೆ: ವಿಶ್ವಚೇತನ ಟ್ರಸ್ಟ್, ಸ್ಥಳ: ಕಂಬಿ ಸಿದ್ರಾಮಣ್ಣ ಸಭಾಂಗಣ, ನೊಳಂಬ ಲಿಂಗಾಯಿತ ಸಂಘ, ಬಸವೇಶ್ವರ ನಗರ, ಸಂಜೆ 6

'ಶಾಖಾ ಟು ನೇಷನ್' ಪುಸ್ತಕ ಬಿಡುಗಡೆ ಹಾಗೂ ಚರ್ಚೆ: ಉಪಸ್ಥಿತಿ: ರಾಮ್ ಮಾಧವ್, ವಿ. ನಾಗರಾಜ್, ಶ್ರೀರಾಮ ದೇವತಾ, ಆಯೋಜನೆ: ಥಿಂಕರ್ಸ್ ಫೋರಂ ಕರ್ನಾ ಟಕ, ಸ್ಥಳ: ಬಿಎಂಎಸ್ ಎಂಜಿನಿಯರಿಂಗ್ ಕಾಲೇಜು, ಬಸವನಗುಡಿ, ಸಂಜೆ 6.30

'ವರ್ಣ ಪಲ್ಲಟ' ನಾಟಕ ಪ್ರದರ್ಶನ: ನಿರ್ದೇಶನ: ಶಶಿಧರ್ ಭಾರಿಘಾಟ್, ರಚನೆ: ಕೆ.ವೈ. ನಾರಾಯಣಸ್ವಾಮಿ, ಆಯೋಜನೆ: ಅನಾವರಣ, ಸ್ಥಳ: ಸಾಂಸ್ಕೃತಿಕ ಸಮುಚ್ಚಯ, ಕಲಾಗ್ರಮ, ಮಲ್ಲತ್ತಹಳ್ಳಿ, ಸಂಜೆ 7

ವಿದ್ಯಾಭೂಷಣರಿಂದ ಸಂಗೀತ ಕಛೇರಿ ಹಾಗೂ 'ಕಲಾ ಸೇವಾ ಪುರಸ್ಕಾರ' ಪ್ರದಾನ: ಅತಿಥಿಗಳು: ಶಿವರಾಜ ತಂಗಡಗಿ, ಶುಭಾ ಧನಂಜಯ್, ಲಹರಿ ವೇಲು, ವಿಶ್ವನಾಥ್ ಪ್ರಸಾದ್ ಎಚ್., ಪ್ರಶಸ್ತಿ ಪುರಸ್ಕೃತರು: ವಿದ್ಯಾಭೂಷಣ, ಲಲಿತಾ ಶ್ರೀನಿವಾಸನ್, ಶಂಕರಪ್ಪ ಲಕ್ಷ್ಮಪ್ಪ ಬೆಲ್ದಾರ, ಆಯೋಜನೆ: ಹಜಾರಿ ಪ್ರಸಾದ್ ಫೌಂಡೇಷನ್, ಸ್ಥಳ: ಚೌಡಯ್ಯ ಸ್ಮಾರಕ ಭವನ, ಸಂಜೆ 5.30

ವಿದ್ಯಾಭೂಷಣ

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

8 ತಿಂಗಳಲ್ಲಿ 1.79 ಲಕ್ಷ ಮೊಬೈಲ್ ಕಳ್ಳತನ

ಜನದಟ್ಟಣೆ ಪ್ರದೇಶದಲ್ಲಿ ಕದ್ದು ಪರಾರಿ ಆಗುತ್ತಿರುವ ಕಳ್ಳರು
• ಮೊಬೈಲ್ ಕಳೆದು ಹೋದ ತಕ್ಷಣ ದೂರು ನೀಡುವಂತೆ ಸಲಹೆ

• ಕೆ.ಎಸ್.ಸುನಿಲ್

ಬೆಂಗಳೂರು: ನಗರದಲ್ಲಿ ಮೊಬೈಲ್ ಕಳ್ಳತನ ಮಾಡುವ ತಂಡಗಳು ಸಕ್ರಿಯವಾಗಿದ್ದು, ಎಂಟು ತಿಂಗಳಲ್ಲಿ ಮೊಬೈಲ್ ಕಳ್ಳತನಕ್ಕೆ ಸಂಬಂಧಿಸಿದಂತೆ 1.79 ಲಕ್ಷ ಪ್ರಕರಣಗಳು ವರದಿಯಾಗಿವೆ. ಈ ಪೈಕಿ, 84 ಸಾವಿರ ಪ್ರಕರಣಗಳನ್ನು ಪೊಲೀಸರು ಪತ್ತೆ ಮಾಡಿದ್ದಾರೆ.

ಬಸ್ ಹಾಗೂ ರೈಲು ಹತ್ತುವಾಗ, ಬಸ್ ನಿಲ್ದಾಣ, ದೇವಸ್ಥಾನ ಆವರಣ, ಜಾತ್ರೆ ಹಾಗೂ ಜನಸಂದಣಿ ಪ್ರದೇಶದಲ್ಲಿ ಮೊಬೈಲ್ ಫೋನ್ ಕದ್ದು ಕಳ್ಳರು ಪರಾರಿ ಆಗುತ್ತಿದ್ದಾರೆ. ಪಾದಚಾರಿಗಳು, ಮಹಿಳೆಯರು, ಹಿರಿಯ ನಾಗರಿಕರು ಹಾಗೂ ಒಬ್ಬರೇ ನಡೆದುಕೊಂಡು ಹೋಗುವ ವ್ಯಕ್ತಿಗಳನ್ನು ಗುರಿಯಾಗಿಸಿಕೊಂಡು ದ್ವಿಚಕ್ರ ವಾಹನದಲ್ಲಿ ಬಂದು ಮೊಬೈಲ್ ಕಿತ್ತುಕೊಂಡು ಹೋಗಿರುವ ಉದಾಹರಣೆಗಳೂ ಇವೆ.

ಕಳ್ಳತನವಾದ ಮೊಬೈಲ್‌ಗಳ ಮಾಹಿತಿಯನ್ನು ಇ-ಲಾಸ್ಟ್ ಆ್ಯಪ್ ಮತ್ತು ಕೇಂದ್ರ ಸರ್ಕಾರ ರೂಪಿಸಿರುವ ಸೆಂಟ್ರಲ್ ಎಕ್ವಿಪ್‌ಮೆಂಟ್ ಐಡೆಂಟಿಟಿ ರಿಜಿಸ್ಟರ್ (ಸಿಇಐಆರ್) ಜಾಲತಾಣದಲ್ಲಿ ದಾಖಲು ಮಾಡಲಾಗುತ್ತದೆ. ತಾಂತ್ರಿಕ ಸುಳಿವು ಆಧರಿಸಿ, ಪೊಲೀಸರು ತನಿಖೆ ನಡೆಸಿ ಮೊಬೈಲ್ ಪತ್ತೆ ಹಚ್ಚುತ್ತಾರೆ.

ಸಿಇಐಆರ್ ಜಾಲತಾಣದಲ್ಲಿ ಆಗಸ್ಟ್ ಅಂತ್ಯದವರೆಗೆ ದಾಖಲಾಗಿರುವ 1,79,285 ಪ್ರಕರಣಗಳಲ್ಲಿ 30,420 ಮೊಬೈಲ್ ಪತ್ತೆ ಹಚ್ಚಿ ವಶಕ್ಕೆ ಪಡೆದು ವಾರಸುದಾರರಿಗೆ ಹಸ್ತಾಂತರಿಸಲಾಗಿದೆ. ಶೇಕಡ 17ರಷ್ಟು ಮೊಬೈಲ್ ಮಾತ್ರ ವಶಪಡಿಸಿಕೊಳ್ಳಲಾಗಿದೆ. ಆಧುನಿಕ ತಂತ್ರಜ್ಞಾನ ಬಳಸಿಕೊಂಡು 84,942 ಮೊಬೈಲ್‌ಗಳನ್ನು ಪತ್ತೆ ಹಚ್ಚುವಲ್ಲಿ ಪೊಲೀಸರು ಯಶಸ್ವಿಯಾಗಿದ್ದಾರೆ.

'ಮೊಬೈಲ್ ಕಳ್ಳರು ಆಗಾಗ್ಗೆ ಸ್ಥಳ ಬದಲಿಸಿ, ವಿವಿಧ ನಗರಗಳಲ್ಲಿ ಮಾರಾಟ ಮಾಡುತ್ತಾರೆ. ಈ ಫೋನ್‌ಗಳನ್ನು ಖರೀದಿಸುವವರಿಗೆ ಕಳವು ಮಾಲು ಎಂಬುದು ಗೊತ್ತಿರುವುದಿಲ್ಲ. ಪೊಲೀಸರು, ಆರೋಪಿಗಳಿಂದ ಮೊಬೈಲ್ ವಶಪಡಿಸಿಕೊಂಡ ಬಳಿಕವೇ ವಂಚನೆಗೆ ಒಳಗಾಗಿರುವ ವಿಷಯ ಖರೀದಿದಾರರಿಗೆ ಗೊತ್ತಾಗುತ್ತದೆ. ಮೊಬೈಲ್ ಕಳೆದುಕೊಂಡ ಎಲ್ಲರೂ ದೂರು ನೀಡುವುದಿಲ್ಲ' ಎಂದು ಪೊಲೀಸರು ತಿಳಿಸಿದರು.

ಮೊಬೈಲ್ ಕಳೆದು ಹೋದ ತಕ್ಷಣ ಐಎಂಇಐ ಸಂಖ್ಯೆ ಸಹಿತ ಪೊಲೀಸ್ ಠಾಣೆಯಲ್ಲಿ ದಾಖಲಿಸಿರುವ ಎಫ್‌ಐಆರ್ ಅಥವಾ ಇ-ಲಾಸ್ಟ್ ಪ್ರತಿಯನ್ನು ಸಿಇಐಆರ್ ಜಾಲತಾಣದಲ್ಲಿ ಅಪ್‌ಲೋಡ್ ಮಾಡಬೇಕು. ಆಗ ಕದ್ದ ಮೊಬೈಲ್‌ಗೆ ಹೊಸ ಸಿಮ್ ಹಾಕಿದಾಗ ಪೊಲೀಸರಿಗೆ ಸಂದೇಶ ಬರಲಿದೆ. ಅದನ್ನು ಆಧರಿಸಿ ತನಿಖೆ ಆರಂಭವಾಗಲಿದೆ. ಜತೆಗೆ ಈ ತಂತ್ರಾಂಶದಲ್ಲಿ, ಕಳುವಾದ ಮೊಬೈಲ್‌ಗಳನ್ನು ಐಎಂಇಐ ಸಂಖ್ಯೆ ಮೂಲಕ ಪತ್ತೆ ಮಾಡುವ, ಮೊಬೈಲ್‌ಗಳನ್ನು ಮತ್ತೊಬ್ಬರು ಬಳಸದಂತೆ ನಿಷ್ಕ್ರಿಯಗೊಳಿಸುವ ಅವಕಾಶವೂ ಇದೆ ಎಂದು ಹೇಳಿದರು.

ಸಿಇಐಆರ್ ಪೋರ್ಟಲ್ ಮೂಲಕ ದೂರು ದಾಖಲಾದ 24 ಗಂಟೆಯ ಒಳಗಾಗಿ ಕಳೆದುಹೋದ ಮೊಬೈಲ್ ಫೋನನ್ನು ಬ್ಲಾಕ್ ಮಾಡಲಾಗುತ್ತದೆ. ಇದರಿಂದ ಅದು ದುರ್ಬಳಕೆ ಆಗುವುದು ತಪ್ಪಲಿದೆ. ಆ ಫೋನನ್ನು ಯಾರಾದರೂ ಬಳಕೆ ಮಾಡಿದಲ್ಲಿ ಅವರ ವಿವರವೂ ದೊರಕುತ್ತದೆ. ಇದರಿಂದ ಕಳೆದು ಹೋದ ಮೊಬೈಲ್ ಫೋನ್‌ಗಳನ್ನು ಸುಲಭವಾಗಿ ಪತ್ತೆ ಮಾಡಲು ಸಾಧ್ಯ. ಸಾರ್ವಜನಿಕರು ಈ ಪೋರ್ಟಲ್‌ನ ಉಪಯೋಗ ಪಡೆದುಕೊಳ್ಳುವಂತೆ ಪೊಲೀಸರು ಸಲಹೆ ನೀಡಿದ್ದಾರೆ.

ಕೆಲ ದಿನಗಳ ಹಿಂದೆ ಸಿಟಿ ಮಾರ್ಕೆಟ್ ಠಾಣೆ ಪೊಲೀಸರು, ನಗರದ ವಿವಿಧೆಡೆ ಅಲ್ಯುಮಿನಿಯಂ ಕಾಯಿಲ್ ಪೇಪರ್ ಬಳಸಿ ಮೊಬೈಲ್ ಕಳವು ಮಾಡುತ್ತಿದ್ದ 42 ಆರೋಪಿಗಳನ್ನು ಬಂಧಿಸಿ, 1,949 ಮೊಬೈಲ್‌ಗಳನ್ನು ಜಪ್ತಿ ಮಾಡಿದ್ದರು. ಮೊಬೈಲ್ ಕದ್ದ ಬಳಿಕ ಅಲ್ಯುಮಿನಿಯಂ ಕಾಯಿಲ್ ಸುತ್ತಿ ಜೇಬಿಗೆ ಇರಿಸಿಕೊಳ್ಳುತ್ತಿದ್ದರು. ಈ ರೀತಿ ಮಾಡುವುದರಿಂದ ಮೊಬೈಲ್ ನೆಟ್‌ವರ್ಕ್ ಜಾಮ್ ಆಗುತ್ತದೆ. ಮೊಬೈಲ್ ಕಳೆದುಕೊಂಡವರು ತಕ್ಷಣ ಕರೆ ಮಾಡಿದರೂ ಮೊಬೈಲ್ ರಿಂಗ್ ಆಗುವುದಿಲ್ಲ. ಸ್ವಿಚ್ ಆಫ್ ಅಥವಾ ನಾಟ್ ರೀಚೆಬಲ್ ಬರುತ್ತದೆ. ಹೀಗೆ ಆರೋಪಿಗಳು ಸುಲಭವಾಗಿ ಮೊಬೈಲ್ ಕಳ್ಳತನ ಮಾಡಿ ಪರಾರಿಯಾಗುತ್ತಿದ್ದರು. ಕದ್ದ ಮೊಬೈಲ್‌ಗಳನ್ನು ಪರಿಚಿತರ ಮೂಲಕ ವಿಲೇವಾರಿ ಮಾಡುತ್ತಿದ್ದರು.

ಅಗತ್ಯ ದಾಖಲಾತಿ ಇಲ್ಲದೆ ಸೆಕೆಂಡ್ ಹ್ಯಾಂಡ್ ಮೊಬೈಲ್‌ಗಳನ್ನು ಖರೀದಿಸಬಾರದು. ಇದರಿಂದ ಹಣ ಕಳೆದುಕೊಳ್ಳುವುದರ ಜತೆಗೆ ಇತರೆ ಸಮಸ್ಯೆ ಎದುರಾಗುವ ಸಾಧ್ಯತೆ ಇದೆ
ಸೀಮಾಂತ್ ಕುಮಾರ್ ಸಿಂಗ್,
ನಗರ ಪೊಲೀಸ್ ಕಮಿಷನರ್

ಮೊಬೈಲ್ ಕಳ್ಳತನ ಮಾಹಿತಿ (2025ರ ಸೆಪ್ಟೆಂಬರ್‌ವರೆಗೆ)

1,79,285	ಸಿಇಐಆರ್ ಪೋರ್ಟಲ್‌ನಲ್ಲಿ ದೂರು ದಾಖಲು
84,942	ಪತ್ತೆ ಮಾಡಲಾದ ಪ್ರಕರಣಗಳು
30,420	ಜಪ್ತಿ ಮಾಡಿದ ಮೊಬೈಲ್
29,821	ವಾರಸುದಾರರಿಗೆ ಹಸ್ತಾಂತರ

ಆರೋಪಿಗಳಿಂದ ವಶ ಪಡಿಸಿಕೊಂಡಿರುವ ಮೊಬೈಲ್ ಫೋನ್‌ಗಳು

ಮಾಹಿತಿ ನೀಡಿ...

ಮೊಬೈಲ್ ಕಳೆದು ಹೋದವರು, ಕರ್ನಾಟಕ ರಾಜ್ಯ ಪೊಲೀಸ್ (ಕೆಎಸ್‌ಪಿ ಇ-ಲಾಸ್ಟ್) ವೆಬ್‌ಸೈಟ್‌ಗೆ ಹೋಗಿ ಅಲ್ಲಿ ಇ-ಲಾಸ್ಟ್ ಕಾಲಂನಲ್ಲಿ ಮಾಹಿತಿ ನೀಡಿದರೆ, ದೂರಿನ ಪ್ರತಿ ಸಿಗುತ್ತದೆ. ನಂತರ, ಈ ಮೊದಲು ಬಳಸುತ್ತಿದ್ದ ಡೂಪ್ಲಿಕೇಟ್ ಸಿಮ್‌ಕಾರ್ಡ್ ಪಡೆದು ಸಿಇಐಆರ್ ವೆಬ್ ಪೋರ್ಟಲ್‌ನಲ್ಲಿ ಮೊಬೈಲ್ ಕಳೆದುಹೋದ ಬಗ್ಗೆ ಮಾಹಿತಿ ನೀಡಬೇಕು. ಈ ಮೂಲಕ 24 ಗಂಟೆ ಒಳಗೆ ಮೊಬೈಲ್ ಬ್ಲಾಕ್ ಆಗುತ್ತದೆ. ಮೊಬೈಲ್ ತೆಗೆದುಕೊಂಡವರು ಬೇರೆ ಸಿಮ್ ಹಾಕಿದರೂ ಪತ್ತೆ ಹಚ್ಚಲು ಸುಲಭವಾಗುತ್ತದೆ ಎಂದು ಪೊಲೀಸರು ತಿಳಿಸುತ್ತಾರೆ.

ಮಹಿಳೆಗೆ ₹20.18 ಲಕ್ಷ ವಂಚನೆ ಆರೋಪಿ ಬಂಧನ

ಶಿವಕುಮಾರ್

ಬೆಂಗಳೂರು: ಕರ್ನಾಟಕ ಪ್ರೆಸ್‌ಕ್ಲಬ್ ಕೌನ್ಸಿಲ್‌ನ ರಾಜ್ಯ ಅಧ್ಯಕ್ಷೆ ಮಾಡುವುದಾಗಿ ವಂಚಿಸಿದ್ದ ಆರೋಪಿಯನ್ನು ಗೋವಿಂದರಾಜನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕಣ್ಣು ಪತ್ರಿಕೆಯ ಸಂಪಾದಕ ಶಿವಕುಮಾರ್ ನಾಗರನವಿಲೆ ಬಂಧಿತ ಆರೋಪಿ. ಕರ್ನಾಟಕ ಪ್ರೆಸ್‌ಕ್ಲಬ್ ಅಧ್ಯಕ್ಷನೆಂದು ಪರಿಚಯಿಸಿಕೊಂಡಿದ್ದ ಆರೋಪಿ, ವಿವಿಧ ಬಗೆಯ ಆಮಿಷವೊಡ್ಡಿ ಬಿ.ಮೀನಾಕ್ಷಿ ಅವರಿಗೆ ₹20.18 ಲಕ್ಷ ವಂಚಿಸಿದ್ದ. ಈ ಸಂಬಂಧ ಗೋವಿಂದರಾಜನಗರ ಠಾಣೆಗೆ ಮೀನಾಕ್ಷಿ ದೂರು ನೀಡಿದ್ದರು.

'ಕರ್ನಾಟಕ ಪ್ರೆಸ್‌ಕ್ಲಬ್ ಕೌನ್ಸಿಲ್‌ನ ರಾಜ್ಯ ಅಧ್ಯಕ್ಷೆ ಹಾಗೂ ಸಿಂಗಪುರದಲ್ಲಿ ಆಯೋಜಿಸಿರುವ 2ನೇ ಆವೃತ್ತಿಯ ವಿಶ್ವ ಕನ್ನಡ ಹಬ್ಬಕ್ಕೆ ನಿರ್ದೇಶಕಿಯನ್ನಾಗಿ ಮಾಡುತ್ತೇನೆ' ಎಂದು ಆರೋಪಿ ನಂಬಿಸಿದ್ದ. ಆರಂಭದಲ್ಲಿ ₹11 ಸಾವಿರ ಪಡೆದಿದ್ದ ಆರೋಪಿ ನಂತರ ಸಚಿವರಿಂದ ಆದೇಶ ಪತ್ರ ಕೊಡಿಸುವುದಾಗಿ ₹20 ಸಾವಿರ ಪಡೆದುಕೊಂಡಿದ್ದ. ಬಳಿಕ ವಿಶ್ವ ಕನ್ನಡ ಹಬ್ಬದ ಖರ್ಚುಗಳಿಗಾಗಿ ಹಂತಹಂತವಾಗಿ ಒಟ್ಟು ₹20.18 ಲಕ್ಷ ಪಡೆದುಕೊಂಡಿದ್ದ' ಎಂದು ಮೀನಾಕ್ಷಿ ಅವರು ದೂರು ನೀಡಿದ್ದರು.

ದುಬೈಗೆ ತೆರಳಲು ಗುರುವಾರ ರಾತ್ರಿ ದೇವನಹಳ್ಳಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆರೋಪಿ ತೆರಳುತ್ತಿದ್ದ. ಆ ಸಂದರ್ಭದಲ್ಲಿ ಕಾರ್ಯಾಚರಣೆ ನಡೆಸಿ ಆರೋಪಿಯನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು.

ಭದ್ರತಾ ಸಿಬ್ಬಂದಿ ಶವ ಪತ್ತೆ: ಕೊಲೆ ಶಂಕೆ

ಬೆಂಗಳೂರು: ಹೋಟೆಲ್‌ನಲ್ಲಿ ಭದ್ರತಾ ಸಿಬ್ಬಂದಿಯಾಗಿದ್ದ ಹಿಮಾಚಲ ಪ್ರದೇಶದ ತಿಲಕ್‌ಕುಮಾರ್ (36) ಅವರ ಮೃತದೇಹ ಪತ್ತೆಯಾಗಿದ್ದು, ಕೊಲೆಯ ಶಂಕೆ ವ್ಯಕ್ತವಾಗಿದೆ.

ಜೆ.ಪಿ.ನಗರ ಮೊದಲನೇ ಹಂತದ ಪಾದಚಾರಿ ಮಾರ್ಗದಲ್ಲಿ ಮೃತದೇಹ ಪತ್ತೆಯಾಗಿದೆ. ಕತ್ತಿನ ಭಾಗದಲ್ಲಿ ಗಂಭೀರ ಸ್ವರೂಪದ ಗಾಯವಿದೆ. ಮರಣೋತ್ತರ ಪರೀಕ್ಷೆಯ ಬಳಿಕ ಕೊಲೆಯೋ? ಆತ್ಮಹತ್ಯೆಯೇ ಎಂಬುದು ಗೊತ್ತಾಗಲಿದೆ ಎಂದು ಪೊಲೀಸರು ಹೇಳಿದರು.

ಸುಮಾರು 15 ವರ್ಷಗಳ ಹಿಂದೆ ಬೆಂಗಳೂರಿಗೆ ಬಂದಿದ್ದ ತಿಲಕ್ ಕುಮಾರ್, ಜೆ.ಪಿ.ನಗರದ ಹೋಟೆಲ್‌ನಲ್ಲಿ ಕೆಲಸ ಮಾಡುತ್ತಿದ್ದರು. ಬಾಡಿಗೆ ಮನೆಯಲ್ಲಿ ವಾಸವಿದ್ದರು. ಹೋಟೆಲ್‌ನಿಂದ ಸ್ವಲ್ಪ ದೂರದಲ್ಲೇ ತಿಲಕ್ ಕುಮಾರ್ ಮೃತದೇಹ ಪತ್ತೆಯಾಗಿದೆ. ಸೀನ್ ಆಫ್ ಕ್ರೈಮ್ ಆಫೀಸರ್ಸ್ (ಸೋಕೊ) ತಂಡ ಪರಿಶೀಲನೆ ನಡೆಸಿದೆ. ಜೆ.ಪಿ.ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಷೇರು ಮಾರುಕಟ್ಟೆಯಲ್ಲಿ ಹೂಡಿಕೆ ನೆಪದಲ್ಲಿ ಸೈಬರ್ ವಂಚಕರ ಗಾಳ
₹62 ಲಕ್ಷ ದೋಚಿದ ಸೈಬರ್ ಕಳ್ಳರು

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಪ್ರತ್ಯೇಕ ಸೈಬರ್ ವಂಚನೆ ಪ್ರಕರಣಗಳಲ್ಲಿ ಸಾಫ್ಟ್‌ವೇರ್ ಎಂಜಿನಿಯರ್ ಹಾಗೂ ನಿವೃತ್ತ ಉದ್ಯೋಗಿ ಒಟ್ಟು ₹62 ಲಕ್ಷ ಕಳೆದುಕೊಂಡಿದ್ದು, ಈ ಸಂಬಂಧ ವೈಟ್‌ಫೀಲ್ಡ್ ಸೈಬರ್ ಅಪರಾಧ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿವೆ.

ಮಾಹಿತಿ ತಂತ್ರಜ್ಞಾನ ಕಾಯ್ದೆ ಸೆಕ್ಷನ್ 66(ಸಿ) ಹಾಗೂ 66(ಡಿ) ಹಾಗೂ ಭಾರತೀಯ ನ್ಯಾಯ ಸಂಹಿತೆಯ (ಬಿಎನ್‌ಎಸ್) ಸೆಕ್ಷನ್ 318(4), 319(2) ಅಡಿ ಪ್ರಕರಣಗಳು ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಸೈಬರ್ ಅಪರಾಧ ವಿಭಾಗದ ಪೊಲೀಸರು ಹೇಳಿದರು.

ನಿವೃತ್ತ ಉದ್ಯೋಗಿಗೆ ₹30 ಲಕ್ಷ ವಂಚನೆ: ಎಚ್‌ಎಎಲ್ ನಿವಾಸಿ ಕೆ.ಜಿ.ಶಿವರಾಜ್ ಅವರಿಗೆ ಫೇಸ್‌ಬುಕ್‌ನಲ್ಲಿ ಅದ್ವಿಕಾ ಅಮ್ಮು ಎಂಬ ಹೆಸರಿನ ಮಹಿಳೆ ಪರಿಚಯ ಆಗಿದ್ದರು. ಬಳಿಕ ವಾಟ್ಸ್‌ಆ್ಯಪ್ ಮೂಲಕ ಲಿಂಕ್ ಕಳುಹಿಸಿ, ನೋಂದಣಿ ಮಾಡಿಕೊಳ್ಳುವಂತೆ ಆ ಮಹಿಳೆ ತಿಳಿಸಿದ್ದರು. ಹೂಡಿಕೆ ಮಾಡಿದರೆ ಹೆಚ್ಚಿನ ಲಾಭಾಂಶ ಬರಲಿದೆ ಎಂದು ಆಮಿಷವೊಡ್ಡಿದ್ದರು. ಅದನ್ನು ನಂಬಿದ್ದ ದೂರುದಾರರು, ಆರಂಭದಲ್ಲಿ ₹20 ಸಾವಿರ ಹೂಡಿಕೆ ಮಾಡಿದ್ದರು. ಇನ್ನೂ ಹೆಚ್ಚಿನ ಹೂಡಿಕೆ ಮಾಡಿದರೆ ಅಧಿಕ ಲಾಭ ಬರಲಿದೆ ಎಂಬುದಾಗಿ ಮಹಿಳೆ ಹೇಳಿದ್ದರು. ಸೈಬರ್ ವಂಚಕರ ಮಾತು ನಂಬಿದ್ದ ಶಿವರಾಜ್, ಬೇರೆ ಬೇರೆ ಬ್ಯಾಂಕ್‌ನ ಎಂಟು ಖಾತೆಗಳಿಗೆ ₹30.42 ಲಕ್ಷ ವರ್ಗಾವಣೆ ಮಾಡಿದ್ದರು. ಅದಾದ ಮೇಲೆ ದೂರುದಾರರಿಗೆ ಲಾಭದ ಹಣವಾಗಲಿ, ಅಸಲು ಆಗಲಿ ನೀಡದೆ ವಂಚನೆ ನಡೆಸಲಾಗಿದೆ ಎಂದು ಪೊಲೀಸರು ಹೇಳಿದರು.

ಟೆಕಿಗೆ ₹31.80 ಲಕ್ಷ ವಂಚನೆ

ಮಾರತ್‌ಹಳ್ಳಿಯ ನಿವಾಸಿ, ಸಾಫ್ಟ್‌ವೇರ್ ಎಂಜಿನಿಯರ್ ಗುಂಜ ವಿಜಯ್ ಕುಮಾರ್ ಅವರಿಗೆ ಕರೆ ಮಾಡಿದ್ದ ಸೈಬರ್ ವಂಚಕರು ₹31.80 ಲಕ್ಷ ದೋಚಿದ್ದಾರೆ.

ವಿಜಯ್‌ಕುಮಾರ್ ಅವರ ಮೊಬೈಲ್ ಸಂಖ್ಯೆಯನ್ನು 'ಬ್ಯುಸಿನೆಸ್ ಕಮ್ಯುನಿಟ್' ಎಂಬ ಗ್ರೂಪ್‌ಗೆ ಸೇರಿಸಿದ್ದರು. ನಂತರ, ವಾಟ್ಸ್‌ಆ್ಯಪ್ ಕರೆಯ ಮೂಲಕ ಸಂಪರ್ಕಿಸಿದ್ದ ವಂಚಕರು, ಷೇರು ಮಾರುಕಟ್ಟೆಯಲ್ಲಿ ಹಣ ಹೂಡಿಕೆ ಮಾಡಿದರೆ, ಹೆಚ್ಚಿನ ಲಾಭ ಪಡೆಯಬಹುದಾಗಿದೆ ಎಂದು ನಂಬಿಸಿದ್ದರು. ದೂರುದಾರರು ತಮ್ಮ ಎರಡು ಬ್ಯಾಂಕ್ ಖಾತೆಗಳಿಂದ ಅಪರಿಚಿತರು ಕಳುಹಿಸಿದ, ಬೇರೆ ಬೇರೆ ಬ್ಯಾಂಕ್‌ನ ನಾಲ್ಕು ಪ್ರತ್ಯೇಕ ಖಾತೆಗಳಿಗೆ ₹31.80 ಲಕ್ಷ ವರ್ಗಾವಣೆ ಮಾಡಿದ್ದರು. ಆರಂಭದಲ್ಲಿ ವಿಜಯ್ ಅವರಿಗೆ ಲಾಭಾಂಶವೆಂದು ₹800 ವರ್ಗಾವಣೆ ಮಾಡಿದ್ದ ವಂಚಕರು, ಬಳಿಕ ಯಾವುದೇ ಹಣ ನೀಡದೆ ವಂಚಿಸಿದ್ದಾರೆ ಎಂದು ಪೊಲೀಸರು ಹೇಳಿದರು.

ಬಿ-ಫಾರ್ಮಾ ವಿದ್ಯಾರ್ಥಿನಿ ಆತ್ಮಹತ್ಯೆ

ಪೀಣ್ಯ-ದಾಸರಹಳ್ಳಿ: ಪೇಯಿಂಗ್ ಗೆಸ್ಟ್‌ನಲ್ಲಿ(ಪಿ.ಜಿ) ನೆಲಸಿದ್ದ, ಬಿ-ಫಾರ್ಮಾ ಓದುತ್ತಿದ್ದ ವಿದ್ಯಾರ್ಥಿನಿ ವತ್ಸಲಾ (19) ಅವರು ಶನಿವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಹಾಸನದ ವತ್ಸಲಾ ಅವರು ಸೋಲದೇವನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಖಾಸಗಿ ಕಾಲೇಜಿನಲ್ಲಿ ಓದುತ್ತಿದ್ದರು. ಪೆಟಲ್ಸ್ ಗರ್ಲ್ಸ್ ಪಿ.ಜಿಯಲ್ಲಿದ್ದ ಅವರು ಫ್ಯಾನ್‌ಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಪೊಲೀಸರು ಹೇಳಿದರು.

'ವಿದ್ಯಾರ್ಥಿನಿ ಆತ್ಮಹತ್ಯೆ ಮಾಡಿಕೊಂಡಿದ್ದ ಮಾಹಿತಿ ಶನಿವಾರ ಮಧ್ಯಾಹ್ನ 2.30ರ ಸುಮಾರಿಗೆ ಸಿಕ್ಕಿತ್ತು. ಸ್ಥಳಕ್ಕೆ ತೆರಳಿ ಪರಿಶೀಲನೆ ನಡೆಸಿ ಅವರ ಕುಟುಂಬಸ್ಥರಿಗೆ ಮಾಹಿತಿ ನೀಡಲಾಗಿದೆ. ಯುಡಿಆರ್ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

ಭೂ ಸ್ವಾಧೀನ ಪರಿಹಾರ ಕೋರಿಕೆ ಪ್ರಕರಣ
'ಏಕಪಕ್ಷೀಯ ನಿರ್ಧಾರ ಸಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾನೂನುಬದ್ಧ ಅನುಮತಿ ಇಲ್ಲದೇ ಯಾವುದೇ ಒಬ್ಬ ವ್ಯಕ್ತಿ ತನ್ನ ಜಮೀನಿನಲ್ಲಿ ಪ್ರವೇಶಿಸುವುದನ್ನು ತಡೆಯುವ ಹಕ್ಕು ಪ್ರತಿಯೊಬ್ಬ ನಾಗರಿಕನಿಗೂ ಇದೆ' ಎಂಬ ಇಂಗ್ಲೆಂಡಿನ ಅತ್ಯುನ್ನತ ಕಿಂಗ್ಸ್ ಕೋರ್ಟ್‌ನ ಲೋಕ ಪ್ರಸಿದ್ಧ ತೀರ್ಪನ್ನು ಉಲ್ಲೇಖಿಸುವ ಮೂಲಕ ಕರ್ನಾಟಕ ಹೈಕೋರ್ಟ್, ಭೂ ಸ್ವಾಧೀನ ಪರಿಹಾರ ಕೋರಿಕೆ ಪ್ರಕರಣವೊಂದರಲ್ಲಿ ತುಮಕೂರು ಜಿಲ್ಲಾಧಿಕಾರಿ ಹೊರಡಿಸಿದ್ದ ಆದೇಶವನ್ನು ರದ್ದುಪಡಿಸಿದೆ.

ಈ ಸಂಬಂಧ ಗುಬ್ಬಿ ತಾಲ್ಲೂಕು ನಿಟ್ಟೂರು ಹೋಬಳಿಯ ಹರದಗೆರೆ ಗ್ರಾಮದ ಎಚ್.ಪಿ.ರಮೇಶ್ ಮತ್ತು ಎಚ್.ಆರ್.ಸುಷ್ಮಿತಾ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿದೆ.

'ಸಂವಿಧಾನದ 300ಎ ವಿಧಿಯಡಿ ಸಂರಕ್ಷಿಸಲಾದ ವ್ಯಕ್ತಿಯೊಬ್ಬನ ಆಸ್ತಿಯ ಹಕ್ಕನ್ನು, 21ನೇ ವಿಧಿಯಡಿ ಕಡ್ಡಾಯಗೊಳಿಸಲಾದ ಜೀವನ ಮತ್ತು ವೈಯಕ್ತಿಕ ಸ್ವಾತಂತ್ರ್ಯದಿಂದ ಬಲಪಡಿಸಲಾಗಿದೆ' ಎಂಬ ಸುಪ್ರೀಂ ಕೋರ್ಟ್ ತೀರ್ಪನ್ನು ಉಲ್ಲೇಖಿಸಿರುವ ನ್ಯಾಯಪೀಠ, 'ಅರ್ಜಿದಾರರು ಸಕ್ಷಮ ಪ್ರಾಧಿಕಾರದಲ್ಲಿ ಅಥವಾ ನ್ಯಾಯಾಲಯದಲ್ಲಿ ತಮ್ಮ ಹಕ್ಕನ್ನು ಸ್ಥಾಪಿಸಿಕೊಳ್ಳಬಹುದು' ಎಂದು ಆದೇಶಿಸಿದೆ.

'ಅರ್ಜಿದಾರರು ನಾಲ್ಕು ವಾರಗಳ ಒಳಗಾಗಿ ಅಗತ್ಯ ದಾಖಲೆಗಳೊಂದಿಗೆ ತಮ್ಮ ಆಕ್ಷೇಪಣೆಗಳ ಹೇಳಿಕೆಯನ್ನು ತುಮಕೂರು ಜಿಲ್ಲಾಧಿಕಾರಿ ಮುಂದೆ ಸಲ್ಲಿಸಬೇಕು. ಜಿಲ್ಲಾಧಿಕಾರಿ ಆಕ್ಷೇಪಣೆಯನ್ನು ಪರಿಗಣಿಸಿ ಅರ್ಜಿದಾರರ ವೈಯಕ್ತಿಕ ವಿಚಾರಣೆ ನಡೆಸಿದ ನಂತರ ಸೂಕ್ತ ಆದೇಶ ಹೊರಡಿಸಬೇಕು. ವಿಚಾರಣೆಯ ನಂತರ, ವಿವಾದದಲ್ಲಿರುವ ಸ್ಥಿರಾಸ್ತಿ ಸರ್ಕಾರಿ ಆಸ್ತಿ ಎಂಬುದು ಸಾಬೀತಾದರೆ, ಅರ್ಜಿದಾರರು ಯಾವುದೇ ಪರಿಹಾರಕ್ಕೆ ಅರ್ಹರಾಗಿರುವುದಿಲ್ಲ' ಎಂದು ಸ್ಪಷ್ಟಪಡಿಸಿದೆ.

'ಆಸ್ತಿ ಅರ್ಜಿದಾರರಿಗೆ ಸೇರಿದ್ದು ಮತ್ತು ಅವರು ಭೂಮಿಯನ್ನು ಅತಿಕ್ರಮಿಸಿಲ್ಲ ಎಂದಾದರೆ, ಅಧಿಕಾರಿಗಳು ಕಾನೂನಿನ ಪ್ರಕಾರ ರಸ್ತೆ ನಿರ್ಮಾಣ ಮತ್ತು ಶಾಲಾ ಕಟ್ಟಡ ನಿರ್ಮಾಣಕ್ಕೆ ಅಗತ್ಯವಿರುವ ಪ್ರದೇಶವನ್ನು ನಿರ್ದಿಷ್ಟಪಡಿಸಬೇಕು. ಕಾನೂನು ಪ್ರಕಾರ ಅರ್ಜಿದಾರರಿಗೆ ಪರಿಹಾರ ಪಾವತಿಸುವ ಮೂಲಕ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲು ಮುಂದುವರಿಯಬೇಕು' ಎಂದೂ ನ್ಯಾಯಪೀಠ ಆದೇಶದಲ್ಲಿ ವಿವರಿಸಿದೆ.

ಪ್ರಕರಣವೇನು?: 'ಹರದಗೆರೆ ಗ್ರಾಮದ ಸರ್ವೆ ನಂಬರ್ 51ರಲ್ಲಿನ ನಮ್ಮ ಜಮೀನನ್ನು ಸರ್ಕಾರ ಶಾಲಾ ಕಟ್ಟಡ ನಿರ್ಮಾಣ ಮತ್ತು ಸಾರ್ವಜನಿಕ ರಸ್ತೆ ಬಳಕೆಗಾಗಿ ಅಕ್ರಮವಾಗಿ ಬಳಸಿದ್ದು, ಪರಿಹಾರ ನಿರಾಕರಿಸಿದೆ. ಆದ್ದರಿಂದ, ಭೂ ಸ್ವಾಧೀನ ಪ್ರಕರಣಗಳಲ್ಲಿ, ನ್ಯಾಯಯುತ ಪರಿಹಾರ ಮತ್ತು ಪಾರದರ್ಶಕತೆಯ ಹಕ್ಕುಗಳಿಗಾಗಿ ಇರುವ ಪುನರ್ವಸತಿ ಮತ್ತು ಪುನರ್‌ಸ್ಥಾಪನೆ ಕಾಯ್ದೆ-2013ರ ಅಡಿಯಲ್ಲಿ ಸರ್ಕಾರ ಬಳಸಿಕೊಂಡಿರುವ ನಮ್ಮ ಆಸ್ತಿಗೆ ಪರಿಹಾರ ಪಾವತಿಸಬೇಕು' ಎಂದು ಅರ್ಜಿದಾರರು ಸರ್ಕಾರಕ್ಕೆ ಮನವಿ ಸಲ್ಲಿಸಿದ್ದರು.

ಇದರ ವಿಚಾರಣೆ ನಡೆಸಿದ್ದ ತುಮಕೂರು ಜಿಲ್ಲಾಧಿಕಾರಿ, 'ಗುಬ್ಬಿ ತಾಲ್ಲೂಕು ನಿಟ್ಟೂರು ಹೋಬಳಿ ಹರದಗೆರೆ ಗ್ರಾಮದ ಸರ್ವೆ ನಂ.51/1ರಲ್ಲಿ ಶಾಲಾ ಕಟ್ಟಡದ ಜಾಗ ಹಾಗೂ ಸಾರ್ವಜನಿಕ ಬಳಕೆಯ ರಸ್ತೆಯನ್ನು ಈಗ್ಗೆ 60 ವರ್ಷಗಳಿಗೂ ಮೊದಲಿಂದಲೇ ಉಪಯೋಗಿಸಲಾಗುತ್ತಿದೆ. ಈಗಾಗಲೇ ಅಲ್ಲಿ ಶಾಲೆಯ ಕಟ್ಟಡ ಮತ್ತು ರಸ್ತೆ ನಿರ್ಮಾಣ ಆಗಿರುವುದರಿಂದ ಅರ್ಜಿದಾರರು ಈಗ ಪರಿಹಾರ ಕೇಳುತ್ತಿದ್ದು, ಈ ಅರ್ಜಿಯನ್ನು ತಿರಸ್ಕರಿಸಲಾಗಿದೆ' ಎಂದು 2021ರ ನವೆಂಬರ್ 8ರಂದು ಆದೇಶಿಸಿದ್ದರು. ಈ ಆದೇಶವನ್ನು ಪ್ರಶ್ನಿಸಿ ಅರ್ಜಿದಾರರು ಹೈಕೋರ್ಟ್ ಮೆಟ್ಟಿಲೇರಿದ್ದರು.

'ಸಾರ್ವಜನಿಕ ಹಿತಾಸಕ್ತಿಯ ವಿಷಯ'

'ಅರ್ಜಿದಾರರು 2 ಎಕರೆ 8 ಗುಂಟೆ ಅಳತೆಯ ಜಮೀನಿನ ಸಂಪೂರ್ಣ ಮಾಲೀಕರು ಎಂದು ಹೇಳಿಕೊಳ್ಳುತ್ತಾರೆ. ಕೆಲವು ದಾಖಲೆಗಳ ಆಧಾರದಡಿ ಅವರು ತಮ್ಮ ಹಕ್ಕನ್ನು ಸಾಧಿಸುತ್ತಿದ್ದಾರೆ. ಹೀಗಿರುವಾಗ, ಕಟ್ಟಡ ರಚನೆ ಅಥವಾ ರಸ್ತೆ ವಿಸ್ತರಣೆಯ ತಕರಾರಿನ ಅಂಶವನ್ನು ಆದ್ಯತೆಯ ಮೇರೆಗೆ ನಿರ್ವಹಿಸಬೇಕು. ಏಕೆಂದರೆ ಇವೆಲ್ಲಾ ಸಾರ್ವಜನಿಕ ಹಿತಾಸಕ್ತಿಯ ವಿಷಯ. ಆದರೆ, ಈ ಪ್ರಕ್ರಿಯೆಯಲ್ಲಿ ನಾಗರಿಕರ ಹಕ್ಕುಗಳನ್ನು ಅಪಾಯಕ್ಕೆ ಸಿಲುಕಿಸಲು ಸಾಧ್ಯವಿಲ್ಲ ಎಂಬುದನ್ನು ಮರೆಯಬಾರದು. ಮತ್ತೊಂದೆಡೆ, ಭೂಮಿಯ ಮಾಲೀಕರಾಗಿ ತಮ್ಮ ಹಕ್ಕುಗಳನ್ನು ಪ್ರತಿಪಾದಿಸುವ ಅರ್ಜಿದಾರರ ಹಕ್ಕುಗಳನ್ನು ಅಧಿಕಾರಿಗಳು ಏಕಪಕ್ಷೀಯವಾಗಿ ನಿರ್ಧರಿಸಲಾಗದು' ಎಂದು ನ್ಯಾಯಪೀಠ ತಿಳಿಸಿದೆ.

ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ಪೀಠದಿಂದ ಆದೇಶ
ಜ್ಞಾನಭಾರತಿ: ಮರಗಳ ಕತ್ತರಿಸಲು ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಕ್ಯಾಂಪಸ್ ಆವರಣದಲ್ಲಿರುವ ಬಯೋ ಪಾರ್ಕ್‌ನಲ್ಲಿ ಸದ್ಯ ಯಾವುದೇ ಮರಗಳನ್ನು ಕತ್ತರಿಸಬಾರದು' ಎಂದು ನಿರ್ಬಂಧಿಸಿ ಹೈಕೋರ್ಟ್ ಮಧ್ಯಂತರ ಆದೇಶ ಹೊರಡಿಸಿದೆ.

ಈ ಸಂಬಂಧ, 'ಸ್ವಯಂ ಜಾಗೃತಿ ಸೇವಾ ಟ್ರಸ್ಟ್' ಅಧ್ಯಕ್ಷ ಸಿ.ಅಜಯ್ ಕುಮಾರ್ ಹಾಗೂ ಕೋರಮಂಗಲದ ಪಾರ್ವತಿ ಶ್ರೀರಾಮ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ಕ್ಯಾಂಪಸ್ ಆವರಣದಲ್ಲಿನ ವಿವಿಧ ಸಂಸ್ಥೆಗಳಿಗೆ ನೀಡಿರುವ ಜಾಗದಲ್ಲಿ ಕಟ್ಟಡಗಳನ್ನು ನಿರ್ಮಿಸಲು ಹಾಗೂ ಇನ್ನಿತರ ಕಾಮಗಾರಿ ಕೈಗೊಳ್ಳುವ ಉದ್ದೇಶದಿಂದ ಎಷ್ಟು ಮರಗಳನ್ನು ಕತ್ತರಿಸಲಾಗಿದೆ ಹಾಗೂ ಎಷ್ಟು ಮರಗಳನ್ನು ಸ್ಥಳಾಂತರ ಮಾಡಲಾಗಿದೆ ಎಂಬುದರ ಸಮಗ್ರ ವರದಿ ಸಲ್ಲಿಸಿ' ಎಂದೂ ನ್ಯಾಯಪೀಠ ನಿರ್ದೇಶಿಸಿದೆ.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, 'ನ್ಯಾಯಾಲಯದಲ್ಲಿ ಅರ್ಜಿ ಬಾಕಿ ಇರುವಾಗಲೇ, ಕೆಲವು ಮರಗಳನ್ನು ಕತ್ತರಿಸಲಾಗಿದೆ. ಇನ್ನೂ ಕೆಲವು ಮರಗಳನ್ನು ಸ್ಥಳಾಂತರ ಮಾಡುವ ಕಾರ್ಯ ನಡೆದಿದೆ. ಪ್ರತಿವಾದಿಗಳು 350 ಮರಗಳನ್ನು ಕತ್ತರಿಸುವ ಬಗ್ಗೆ ಸಾರ್ವಜನಿಕ ನೋಟಿಸ್ ಅನ್ನೂ ಹೊರಡಿಸಿದ್ದಾರೆ' ಎಂದು ನ್ಯಾಯಪೀಠಕ್ಕೆ ವಿವರಿಸಿದರು.

'ವಿಶ್ವವಿದ್ಯಾಲಯದ ಕ್ಯಾಂಪಸ್‌ನಲ್ಲಿನ ಜಾಗವನ್ನು ಯುಜಿಸಿ, ಕರ್ನಾಟಕ ಸೆಂಟ್ರಲ್ ಯೂನಿವರ್ಸಿಟಿ, ನ್ಯಾಕ್ ಮಂಡಳಿ, ವಿಟಿಯು ಮತ್ತಿತರ ಸಂಸ್ಥೆಗಳಿಗೆ ಹಂಚಿಕೆ ಮಾಡಲು ಮುಂದಾಗಿದ್ದು, ಅದಕ್ಕೆ ನಿರ್ಬಂಧ ವಿಧಿಸಬೇಕು' ಎಂದೂ ಕೋರಿದರು.

ಇದಕ್ಕೆ ನ್ಯಾಯಪೀಠ, 'ಈಗಾಗಲೇ ಕತ್ತರಿಸಿರುವ ಮತ್ತು ಸ್ಥಳಾಂತರ ಮಾಡಿರುವ ಮರಗಳಿಗಾಗಿ ಏನೂ ಮಾಡಲಾಗದು. ಆದರೆ, ಸದ್ಯಕ್ಕೆ ಹೊಸದಾಗಿ ಯಾವುದೇ ಮರಗಳನ್ನು ಕತ್ತರಿಸಬಾರದು' ಎಂದು ಬೆಂಗಳೂರು ವಿಶ್ವವಿದ್ಯಾಲಯ, ಗ್ರೇಟರ್ ಬೆಂಗಳೂರು ಪ್ರಾಧಿಕಾರ, ರಾಜ್ಯ ಸರ್ಕಾರ, ಎನ್‌ಎಲ್‌ಎಸ್‌ಯುಐ ಸೇರಿದಂತೆ ಎಲ್ಲಾ 40 ಪ್ರತಿವಾದಿಗಳಿಗೆ ನಿರ್ದೇಶಿಸಿತು.

'ಪಿಎಂ-ಉಷಾ ಯೋಜನೆ (ಪ್ರಧಾನ ಮಂತ್ರಿ ಉಚ್ಚತರ ಶಿಕ್ಷಾ ಅಭಿಯಾನ), ಅಂಬೇಡ್ಕರ್ ಥೀಮ್ ಪಾರ್ಕ್, ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜಿನ (ಯುವಿಸಿಇ) ಹೊಸ ಕ್ಯಾಂಪಸ್ ಸೇರಿದಂತೆ ಹಲವು ನಿರ್ಮಾಣ ಯೋಜನೆಗಳ ಜಾರಿಗಾಗಿ ಜ್ಞಾನಭಾರತಿ ಕ್ಯಾಂಪಸ್‌ನ ನೂರಾರು ಮರಗಳನ್ನು ಕಡಿಯುವ ಪ್ರಸ್ತಾವ ಆತಂಕಕಾರಿಯಾಗಿದೆ' ಎಂದು ದೂರಿ ಈ ಅರ್ಜಿ ಸಲ್ಲಿಸಲಾಗಿದೆ.

ಅರ್ಜಿಯಲ್ಲಿ ಏನಿದೆ?: 'ಜ್ಞಾನಭಾರತಿ ಕ್ಯಾಂಪಸ್ ಒಟ್ಟು 1,112 ಎಕರೆ ಪ್ರದೇಶದಲ್ಲಿ ವಿಸ್ತರಿಸಿಕೊಂಡಿದೆ. ಇದನ್ನು ನೈಸರ್ಗಿಕ ಭೂಪ್ರದೇಶ ಮತ್ತು ಜೀವವೈವಿಧ್ಯತೆ ಸಂರಕ್ಷಣೆಯ ಶೈಕ್ಷಣಿಕ ಹಾಗೂ ಪರಿಸರ ಕ್ಯಾಂಪಸ್ ಎಂದು ಗುರುತಿಸಲಾಗಿದೆ. ಬಯೋ ಪಾರ್ಕ್‌ನಲ್ಲಿ ಔಷಧೀಯ, ಬಿದಿರು, ಚಿಟ್ಟೆ, ಹಣ್ಣು ಸೇರಿದಂತೆ ವಿವಿಧ 16 ಬಗೆಯ ವಲಯಗಳಿವೆ. ಇದು ನಗರದಲ್ಲಿ ಉಳಿದಿರುವ ಕೊನೆಯ ಹಸಿರು ಪ್ರದೇಶ ಎನಿಸಿದೆ. ಇದು ಅಮೂಲ್ಯ ಸಸ್ಯವರ್ಗ, ಪ್ರಾಣಿ ಸಂಕುಲ ಮತ್ತು ನೈಸರ್ಗಿಕ ಜಲಮೂಲಗಳನ್ನು ಹೊಂದಿದೆ' ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.

'ವಿವಿಧ ನಿರ್ಮಾಣ ಯೋಜನೆಗಳ ಜಾರಿಗಾಗಿ ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಕ್ಯಾಂಪಸ್ ಅರಣ್ಯ ಪ್ರದೇಶ ನಾಶದ ಅಂಚಿಗೆ ಸಿಲುಕಲಿದೆ ಮತ್ತು ಅಲ್ಲಿನ ಜೀವಸಂಕುಲದ ವೈವಿಧ್ಯವನ್ನು ಅಪಾಯಕ್ಕೆ ನೂಕಲಾಗುತ್ತಿದೆ' ಎಂದು ಅರ್ಜಿದಾರರು ದೂರಿದ್ದಾರೆ.

ಸ್ಥಳ ಪರಿಶೀಲಿಸಿ ವರದಿ ಸಲ್ಲಿಸಲು ನಿರ್ದೇಶನ

ಹೈಕೋರ್ಟ್ ಸುದ್ದಿ

'ರೈಲ್ವೆ ಇಲಾಖೆಯು, ನಗರದ ಕೆ.ಜಿ. ಹಳ್ಳಿಯ ಸಮೀಪದ ಜಾಗ ತನಗೆ ಸೇರಿದ್ದು ಎಂದು 130 ಜನ ದಲಿತರು ವಾಸಿಸುತ್ತಿದ್ದ ಮನೆಗಳನ್ನು ನೆಲಸಮಗೊಳಿಸಿರುವ ಹಿನ್ನೆಲೆಯಲ್ಲಿ, ರೈಲ್ವೆ ಸುಪರ್ದಿಯ ಜಾಗ ಯಾವುದು, ಸಂತ್ರಸ್ತರ ಜಾಗ ಯಾವುದು ಎಂಬುದರ ಬಗ್ಗೆ ಸ್ಥಳ ಪರಿಶೀಲನೆ ನಡೆಸಿ ವರದಿ ಸಲ್ಲಿಸಿ' ಎಂದು ಹೈಕೋರ್ಟ್, ಭೂ ದಾಖಲೆಗಳ ಸಹಾಯಕ ನಿರ್ದೇಶಕರಿಗೆ ನಿರ್ದೇಶಿಸಿದೆ.

'ಸದ್ಯ ಸಂತ್ರಸ್ತರಾಗಿರುವ 29 ಕುಟುಂಬಗಳಿಗೆ ಸ್ಥಳೀಯ ಲಿಡ್ಕರ್ ಭವನದಲ್ಲಿ ಕಲ್ಪಿಸಲಾಗಿರುವ ತಾತ್ಕಾಲಿಕ ವಸತಿ ಸೌಕರ್ಯವನ್ನು 2026ರ ಜನವರಿ 15ವರೆಗೂ ಮುಂದುವರಿಸಬೇಕು' ಎಂದ ನ್ಯಾಯಪೀಠ, ಇದೇ ವೇಳೆ ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಸಮಾಜ ಕಲ್ಯಾಣ ಇಲಾಖೆಗೆ ತಾಕೀತು ಮಾಡಿದೆ. ಮನೆ ಕಳೆದುಕೊಂಡಿರುವ ಕೆ.ಜಿ.ಹಳ್ಳಿಯ ಚುನಾ ಲೈನ್ ನಿವಾಸಿಗಳಾದ ಯು.ರಾಣಿ ಸೇರಿದಂತೆ 12 ಮಂದಿ ಸಲ್ಲಿಸಿರುವ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಅರ್ಜಿದಾರರ ಪರ ಹೈಕೋರ್ಟ್ ವಕೀಲ ಜಿ.ಆರ್. ಮೋಹನ್ ವಾದವನ್ನು ಮಾನ್ಯ ಮಾಡಿದ ನ್ಯಾಯಪೀಠ, 'ರೈಲ್ವೆ ಭೂಮಿ ಯಾವುದು, ಅರ್ಜಿದಾರರ ಭೂಮಿ ಯಾವುದು ಎಂಬ ಬಗ್ಗೆ ಡಿ.7ರಂದು ಸ್ಥಳ ಪರಿಶೀಲನೆ ನಡೆಸಿ, ಡಿ.11ಕ್ಕೆ ನ್ಯಾಯಾಲಯಕ್ಕೆ ವರದಿ ಸಲ್ಲಿಸಬೇಕು' ಎಂದು ತಾಕೀತು ಮಾಡಿ ವಿಚಾರಣೆ ಮುಂದೂಡಿದೆ.

ಪೀಣ್ಯ ದಾಸರಹಳ್ಳಿ ಸಮೀಪದ ಬಾಗಲಗುಂಟೆ ವಿಡಿಯಾ ಪೂರ್ಣ ಪ್ರಜ್ಞಾ ಪಿಯು ಕಾಲೇಜಿನ ವತಿಯಿಂದ ಹಮ್ಮಿಕೊಂಡಿದ್ದ ಚಕ್ರವ್ಯೂಹ– 2025 ಕಾರ್ಯಕ್ರಮದಲ್ಲಿ ಶಾಸಕ ಎಸ್‌. ಮುನಿರಾಜು ಅವರು ಸಾಧಕ ಶಿಕ್ಷಕರನ್ನು ಅಭಿನಂದಿಸಿದರು. ಸಂಸ್ಥೆಯ ಪ್ರಾಂಶುಪಾಲ ಎಂ.ಎನ್‌. ಉಮೇಶ್ ಕುಮಾರ್, ಕಾರ್ಯದರ್ಶಿ ಗೋಪಾಲ್ ಶಬರಾಯ, ಜಂಟಿ ಕಾರ್ಯದರ್ಶಿ ಜಿ.ವಿ.ಕೃಷ್ಣ, ಪ್ರವೀಣ್ ಕುಮಾರ್ ಉಪಸ್ಥಿತರಿದ್ದರು

'ಲಹರಿ ಅಡ್ವೊಕೇಟ್ಸ್ ಫೋರಂ' ವತಿಯಿಂದ ಹೈಕೋರ್ಟ್‌ನಲ್ಲಿ ನಡೆದ ಚೆಂಗಪ್ಪ ಸ್ಮರಣಾರ್ಥದ 18ನೇ ಉಪನ್ಯಾಸ ಕಾರ್ಯಕ್ರಮದಲ್ಲಿ ಫೋರಂನ ಕಾರ್ಯದರ್ಶಿಯೂ ಆದ ಹೈಕೋರ್ಟ್ ವಕೀಲೆ ಎಂ.ಸುಮನಾ ಬಾಳಿಗಾ, ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್, ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ಮತ್ತು ಫೋರಂ ಅಧ್ಯಕ್ಷ ಎಚ್‌.ಜೆ.ಸಾಂಘ್ವಿ ಉಪಸ್ಥಿತರಿದ್ದರು

ಏರುಗತಿಯಲ್ಲಿ ಟೊಮೆಟೊ ಧಾರಣೆ

ಪ್ರಜಾವಾಣಿ ವಾರ್ತೆ

ಕೋಲಾರ: ಹೊರರಾಜ್ಯಗಳ ವರ್ತಕರಿಂದ ಬೇಡಿಕೆ ಹೆಚ್ಚುತ್ತಿರುವ ಕಾರಣ ಕಳೆದ 10 ದಿನಗಳಿಂದ ಟೊಮೆಟೊ ಧಾರಣೆ ಏರುಗತಿಯಲ್ಲಿ ಸಾಗಿದೆ. ಕೋಲಾರದ ಎಪಿಎಂಸಿ ಮಾರುಕಟ್ಟೆಯಲ್ಲಿನ ಹರಾಜಿನಲ್ಲಿ 15 ಕೆ.ಜಿ ತೂಕದ ಬಾಕ್ಸ್ ಟೊಮೆಟೊ ₹600ರಿಂದ ₹700ರವರೆಗೆ ಮಾರಾಟವಾಗುತ್ತಿದೆ. ಉತ್ತಮ ಗುಣಮಟ್ಟವಿದ್ದರೆ ದರ ಇನ್ನೂ ಹೆಚ್ಚುತ್ತಿದೆ. ಸ್ಥಳೀಯ ಚಿಲ್ಲರೆ ಮಾರುಕಟ್ಟೆಯಲ್ಲೂ ಕೆ.ಜಿ ಟೊಮೆಟೊ ₹60 ದರದಲ್ಲಿ ಮಾರಾಟವಾಗುತ್ತಿದೆ. ಬೆಂಗಳೂರಿನಲ್ಲಿ ₹80 ತಲುಪಿದ್ದು, ಕೆಲವೇ ದಿನಗಳಲ್ಲಿ ಶತಕದ ಗಡಿಮುಟ್ಟುವ ಸಾಧ್ಯತೆ ಇದೆ.

ಎಪಿಎಂಸಿ ಮಾರುಕಟ್ಟೆಯಲ್ಲಿ ಶನಿವಾರ ಟೊಮೆಟೊ ಆವಕ ಪ್ರಮಾಣ 11 ಸಾವಿರ ಕ್ವಿಂಟಲ್ (ಸುಮಾರು 80 ಸಾವಿರ ಬಾಕ್ಸ್) ಇತ್ತು. ಕಳೆದ ಮೂರು ದಿನಗಳಿಗೆ ಹೋಲಿಸಿದರೆ ಶುಕ್ರವಾರ, ಶನಿವಾರ ಮಾತ್ರ 15 ಕೆ.ಜಿ ತೂಕದ ಬಾಕ್ಸ್ ಟೊಮೆಟೊ ₹500ರ ಆಸುಪಾಸಿನಲ್ಲಿ ಹರಾಜು ಆಯಿತು.

ನ್ಯಾ. ಎಚ್‌.ಎನ್‌. ನಾಗಮೋಹನದಾಸ್ ಪ್ರತಿಪಾದನೆ • ಪ್ರಬಂಧ ಸ್ಪರ್ಧೆಯ ವಿಜೇತರಿಗೆ ಬಹುಮಾನ ವಿತರಣೆ
'ಸಾಮಾಜಿಕ ಸಮಸ್ಯೆ: ಸಂವಿಧಾನದಿಂದ ಪರಿಹಾರ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭಾರತವನ್ನು ಕಾಡುತ್ತಿರುವ ಹಲವಾರು ಜ್ವಲಂತ ಹಾಗೂ ಸಾಮಾಜಿಕ ಸಮಸ್ಯೆಗಳಿಗೆ ಸಂವಿಧಾನದ ಹಾದಿಯಲ್ಲಿ ಹೋಗುವುದರಿಂದ ಪರಿಹಾರ ಕಂಡುಕೊಳ್ಳಬಹುದು' ಎಂದು ನಿವೃತ್ತ ನ್ಯಾ. ಎಚ್.ಎನ್.ನಾಗಮೋಹನದಾಸ್ ಹೇಳಿದರು.

ಸಂವಿಧಾನ ಓದು ಅಭಿಯಾನ-ಕರ್ನಾಟಕ ಸಂಘಟನೆಯು ನಗರದ ಸರ್ಕಾರಿ ಕಲಾ ಕಾಲೇಜು ಸಹಯೋಗದಲ್ಲಿ ಆಯೋಜಿಸಿದ್ದ ಸಂವಿಧಾನ ಕುರಿತ ರಾಜ್ಯಮಟ್ಟದ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದವರಿಗೆ ಬಹುಮಾನ ವಿತರಿಸಿ ಅವರು ಮಾತನಾಡಿದರು.

'ಸ್ವಾತಂತ್ರ್ಯ ಬಂದ ನಂತರ ಭಾರತ ಹಲವು ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವುದನ್ನು ನೋಡಿದ್ದೇವೆ. ಹೀಗಿದ್ದರೂ ನಮ್ಮಲ್ಲಿ ಹಲವಾರು ಸಮಸ್ಯೆಗಳಿವೆ. ಹಸಿವಿನಿಂದ ಬಳಲುತ್ತಿರುವ ಜನರೂ ಇದ್ದಾರೆ. ಶಿಕ್ಷಣ, ಆರೋಗ್ಯ, ಉದ್ಯೋಗ ಎಲ್ಲರಿಗೂ ಸಿಗುತ್ತಿಲ್ಲ. ವಸತಿರಹಿತರೂ ಇದ್ದಾರೆ. ಭಯೋತ್ಪಾದನೆ, ಕೋಮುವಾದ, ಅಪರಾಧೀಕರಣ, ಭ್ರಷ್ಟಾಚಾರ, ಸಾಂಸ್ಕೃತಿಕ ದಿವಾಳಿತನವೂ ನಮ್ಮನ್ನು ಕಾಡುತ್ತಿದೆ. ಇವುಗಳಿಗೆಲ್ಲಾ ಸಂವಿಧಾನದ ಹಾದಿ ಪರಿಹಾರ ಆಗಬಲ್ಲದು' ಎಂದರು.

'2018ರಲ್ಲಿ ಸಂವಿಧಾನ ಓದು ಪುಸ್ತಕವನ್ನು ಪ್ರಕಟಿಸಲಾಯಿತು. ಈವರೆಗೂ ಲಕ್ಷಗಟ್ಟಲೇ ಪುಸ್ತಕಗಳು ಜನರನ್ನು ತಲುಪಿವೆ. ಹಿಂದಿ, ಮಲೆಯಾಳ, ತೆಲುಗಿಗೆ ಇದು ಭಾಷಾಂತರಗೊಂಡಿದೆ. ತಮಿಳು, ಉರ್ದು, ಮರಾಠಿಗೂ ಭಾಷಾಂತರ ಆಗುತ್ತಿದೆ. ಪ್ರತಿ ಜಿಲ್ಲೆಯಲ್ಲೂ ಸಂವಿಧಾನದ ಸಂಪನ್ಮೂಲ ವ್ಯಕ್ತಿಗಳನ್ನು ತಯಾರು ಮಾಡಲು ಕಾರ್ಯಾಗಾರ ನಡೆಸಲಾಗುತ್ತಿದೆ. ಸಂವಿಧಾನ ಕುರಿತ ಪ್ರಬಂಧ ಸ್ಪರ್ಧೆಯಲ್ಲಿ ಯುವಜನರು ತೋರುತ್ತಿರುವ ಉತ್ಸಾಹದಿಂದ ದೇಶ ಭದ್ರವಾಗಿದೆ ಎನ್ನುವ ವಿಶ್ವಾಸವಂತೂ ಮೂಡಿದೆ' ಎಂದರು.

ಕರ್ನಾಟಕದ ವಿವಿಧ ಪ್ರಥಮ ದರ್ಜೆ ಕಾಲೇಜುಗಳ 550 ವಿದ್ಯಾರ್ಥಿಗಳು ಪ್ರಬಂಧ ಸ್ಪರ್ಧೆಯಲ್ಲಿ ಭಾಗಿಯಾಗಿದ್ದರು. ಇವರಲ್ಲಿ ಮೂವರಿಗೆ ನಗದು ಬಹುಮಾನ, ಉಳಿದ 50 ವಿದ್ಯಾರ್ಥಿಗಳಿಗೆ ಸಮಾಧಾನಕರ ಬಹುಮಾನ ವಿತರಿಸಲಾಯಿತು.

ಸರ್ಕಾರಿ ಕಲಾ ಕಾಲೇಜಿನ ಪ್ರಾಂಶುಪಾಲ ನಾಗೇಂದ್ರಕುಮಾರ್, ಶ್ರೀಹರಿ, ರುದ್ರೇಶ್ ಅದರಂಗಿ, ರಾಜಶೇಖರಮೂರ್ತಿ ಉಪಸ್ಥಿತರಿದ್ದರು.

ಸಂವಿಧಾನ ಓದು ಸಂಘಟನೆ ಆಯೋಜಿಸಿದ್ದ ಸಂವಿಧಾನ ಕುರಿತ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ನ್ಯಾ. ನಾಗಮೋಹನದಾಸ್ ಅವರು ಬಹುಮಾನ ವಿತರಿಸಿದರು

ವಿಜೇತರ ವಿವರ

- ಟಿ.ಜೆ. ಮಾನ್ಯ, ಬೆಂಗಳೂರು ನಗರ ವಿಶ್ವವಿದ್ಯಾಲಯ- ಪ್ರಥಮ
- ಎಂ.ಹರ್ಷಿತಾ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕೋಲಾರ- ದ್ವಿತೀಯ
- ಎಸ್.ಬಿ.ವಿಭಾ, ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಕಾಡುಗೋಡಿ- ತೃತೀಯ

ಕಾರ್ಯಾಚರಣೆ ಸಿಬ್ಬಂದಿ ಮೇಲೆ ಕಾಡೆಮ್ಮೆ ದಾಳಿ

ಪ್ರಜಾವಾಣಿ ವಾರ್ತೆ

ಆನೇಕಲ್: ತಾಲ್ಲೂಕಿನಲ್ಲಿ ಕಾಡೆಮ್ಮೆ ಸೆರೆಗೆ ಕಾರ್ಯಾಚರಣೆ ನಡೆಸುತ್ತಿದ್ದ ಅರಣ್ಯ ಇಲಾಖೆ ಸಿಬ್ಬಂದಿ ಮೇಲೆ ಕಾಡೆಮ್ಮೆ ದಾಳಿ ನಡೆಸಿದ್ದು, ಆರು ಮಂದಿ ಗಾಯಗೊಂಡಿದ್ದಾರೆ.

ಬಳ್ಳೂರಿನ ನೀಲಗಿರಿ ತೋಪಿನಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದಾಗ ಏಕಾಏಕಿ ನುಗ್ಗಿ ದಾಳಿ ನಡೆಸಿದೆ. ಇದರ ನಡುವೆಯೂ ಕಾಡೆಮ್ಮೆಯನ್ನು ತಮಿಳುನಾಡಿನ ಕಾಡಿನತ್ತ ಓಡಿಸಲಾಗಿದೆ.

ಅರಣ್ಯ ಇಲಾಖೆ ಸಿಬ್ಬಂದಿ ಮಾರಪ್ಪ ಅವರಿಗೆ ಗುದ್ದಿದ್ದರಿಂದ ಅವರು ಮರಕ್ಕೆ ಕಚ್ಚಿಕೊಂಡರು. ಇದರಿಂದ ಬೆನ್ನು ಮತ್ತು ತೊಡೆ ಭಾಗಕ್ಕೆ ಗಾಯವಾಗಿದೆ. ಚಿನ್ನಸ್ವಾಮಿ ಅವರ ಬೆನ್ನು, ಸೊಂಟ ಹಾಗೂ ರಮೇಶ್ ಅವರ ಬೆನ್ನಿಗೆ ಗಾಯವಾಗಿದೆ. ವೆಂಕಟೇಶ್, ಕಬ್ಬಾಳ, ರಮೇಶ್ ಅವರಿಗೂ ಸಣ್ಣ ಪುಟ್ಟ ಗಾಯವಾಗಿದೆ. ಗಾಯಾಳುಗಳನ್ನು ಆನೇಕಲ್ ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಲಾಗಿದೆ.

ಖಾಲಿಯಿವೆ ಬಿ.ಇ ಸೀಟು...!

ಒಂದನೇ ಪುಟದಿಂದ..

ಸರ್ಕಾರಿ ಕೋಟಾದ ಸೀಟುಗಳು ಪ್ರತಿ ವರ್ಷವು ಸ್ವಲ್ಪಮಟ್ಟಿಗೆ ಉಳಿಯುವುದು ಸಹಜ. ಆದರೆ, ಕಾಮೆಡ್‌–ಕೆ ಕೋಟಾದ ಶೇ 70ರಷ್ಟು ಸೀಟುಗಳು ಖಾಲಿ ಉಳಿದಿರುವುದು ಕಾಲೇಜುಗಳಿಗೆ ಅಷ್ಟೇ ಅಲ್ಲದೆ, ಈ ಕ್ಷೇತ್ರದ ಭವಿಷ್ಯದ ಬಗ್ಗೆ ಆತಂಕವನ್ನುಂಟು ಮಾಡಿದೆ.

ಕಾಮೆಡ್ ಕೆ ಕೋಟಾದಡಿ ಉಳಿಯುವ ಸೀಟುಗಳು ಆಡಳಿತ ಮಂಡಳಿಯ ಪಾಲಾಗಲಿದ್ದು, ಕೆಲವು ಪ್ರತಿಷ್ಠಿತ ಕಾಲೇಜುಗಳಲ್ಲಿ ಆ ಸೀಟುಗಳೂ ಭರ್ತಿಯಾಗುತ್ತವೆ. ಆದರೆ, ಮೂಲಸೌಕರ್ಯ ಕಡಿಮೆ ಇರುವ, ಕ್ಯಾಂಪಸ್ ಸಂದರ್ಶನದಲ್ಲಿ ಉದ್ಯೋಗಾವಕಾಶ ಸಿಗದ ಕಾಲೇಜುಗಳಲ್ಲಿ ಸೀಟುಗಳು ಖಾಲಿಯೇ ಇರುತ್ತವೆ. ಕೆಲವು ಕಾಲೇಜುಗಳು ಖಾಲಿ ಉಳಿಯುವ ಕಾಮೆಡ್‌–ಕೆ ಕೋಟಾ ಸೀಟುಗಳನ್ನು ಸರ್ಕಾರಕ್ಕೆ ನೀಡುತ್ತಿದ್ದು, ಕೆಇಎ ಮೂಲಕ ಆ ಸೀಟುಗಳನ್ನು ಹಂಚಿಕೆ ಮಾಡಲಾಗುತ್ತದೆ.

ಕಾಮೆಡ್‌ಕೆ ಕೋಟಾ ಸೀಟುಗಳಿಗೆ ಮೊದಲು ಉತ್ತರ ಭಾರತದ ರಾಜ್ಯಗಳಿಂದ ಹೆಚ್ಚಾಗಿ ಬರುತ್ತಿದ್ದರು. ಈಗ ಅಲ್ಲೂ ಕಾಲೇಜುಗಳು ಇರುವುದರಿಂದ ಹೊರಗಿನಿಂದ ಬರುವವರ ಸಂಖ್ಯೆ ಕಡಿಮೆ ಆಗಿದೆ. ಸೀಟುಗಳು ಉಳಿಯುವುದಕ್ಕೆ ಇದೂ ಒಂದು ಕಾರಣ ಎನ್ನುತ್ತಾರೆ ಸಿಎಂಆರ್ ಶಿಕ್ಷಣ ಸಂಸ್ಥೆಗಳ ಸಮೂಹದ ಅಧ್ಯಕ್ಷ ಕೆ.ಸಿ.ರಾಮಮೂರ್ತಿ.

ಮೊದಲು ವಿದ್ಯಾರ್ಥಿಗಳು ಹಾಗೂ ಪೋಷಕರು ವೈದ್ಯಕೀಯ, ಎಂಜಿನಿಯರಿಂಗ್ ಕೋರ್ಸ್‌ಗಳತ್ತ ಹೆಚ್ಚು ಗಮನಹರಿಸುತ್ತಿದ್ದರು. ಆದರೆ, ಈಗ ಕಾನೂನು ಕೋರ್ಸ್, ಬಿ.ಕಾಂಗೆ ಹೋಗುವವರ ಸಂಖ್ಯೆ ಜಾಸ್ತಿಯಾಗಿದೆ. ಎಂಜಿನಿಯರಿಂಗ್‌ನಲ್ಲಿ ಸೀಟುಗಳು ಜಾಸ್ತಿ ಆಗಿವೆ. ಆದರೆ, ಬೇಡಿಕೆ ಅದೇ ರೀತಿಯಲ್ಲಿ ಇಲ್ಲ. ಪಿಯುಸಿ ಹಂತದಲ್ಲೇ ಆಯ್ಕೆಗಳಿಗೆ ಅವಕಾಶ ಇದೆ ಎಂಬುದು ಅವರ ಅಭಿಪ್ರಾಯ.

ಭಾರಿ ವ್ಯತ್ಯಾಸ: ಕಳೆದ ಆರು ವರ್ಷಗಳಲ್ಲಿ ವಿಭಾಗವಾರು ಸೀಟುಗಳಲ್ಲಿ ಭಾರಿ ವ್ಯತ್ಯಾಸವಾಗಿದೆ. ಸಿವಿಲ್, ಮೆಕ್ಯಾನಿಕಲ್, ಎಲೆಕ್ಟ್ರಾನಿಕ್ಸ್, ಎಲೆಕ್ಟ್ರಿಕಲ್ ಇತ್ಯಾದಿ ಬೇಡಿಕೆ ಕಳೆದುಕೊಳ್ಳುತ್ತಿದ್ದು ವರ್ಷದಿಂದ ವರ್ಷಕ್ಕೆ ಕಾಲೇಜುಗಳಲ್ಲಿ ಸೀಟುಗಳ ಸಂಖ್ಯೆ ಕಡಿಮೆಯಾಗುತ್ತಿದೆ. ಅಷ್ಟೇ ಅಲ್ಲದೆ ಇರುವ ಸೀಟುಗಳೂ ಭರ್ತಿಯಾಗುತ್ತಿಲ್ಲ.

ಉದಾಹರಣೆಗೆ ಸಿವಿಲ್‌ನಲ್ಲಿ 2020ರಲ್ಲಿ 14,160 ಸೀಟುಗಳು ಇದ್ದರೆ, ಈಗ 7,860 ಸೀಟುಗಳು ಇವೆ. ಮೆಕ್ಯಾನಿಕಲ್‌ನಲ್ಲಿ 17,510 ಸೀಟುಗಳು ಇದ್ದರೆ, ಈಗ 8,960 ಇವೆ. ಈ ಸೀಟುಗಳು ಸಹ ಭರ್ತಿಯಾಗುತ್ತಿಲ್ಲ. ಕೆಲವು ಕಾಲೇಜುಗಳಲ್ಲಿ ಸಿವಿಲ್ ವಿಭಾಗವನ್ನು ಮುಚ್ಚಿದ್ದು, ಆ ಸೀಟುಗಳನ್ನು ಕಂಪ್ಯೂಟರ್ ಸೈನ್ಸ್, ಕೃತಕ ಬುದ್ಧಿಮತ್ತೆ ಮತ್ತು ಮಷಿನ್ ಲರ್ನಿಂಗ್ ಇತ್ಯಾದಿಗಳಿಗೆ ಪರಿವರ್ತಿಸಲಾಗಿದೆ.

ಮತ್ತೊಂದೆಡೆ ಕಂಪ್ಯೂಟರ್ ಸೈನ್ಸ್ ಎಂಜಿನಿಯರಿಂಗ್, ಕೃತಕ ಬುದ್ಧಿಮತ್ತೆ ಮತ್ತು ಮಷಿನ್ ಲರ್ನಿಂಗ್, ಡೇಟಾ ಸೈನ್ಸ್, ಕೃತಕ ಬುದ್ಧಿಮತ್ತೆ ಮತ್ತು ಡೇಟಾಸೈನ್ಸ್, ಎಲೆಕ್ಟ್ರಾನಿಕ್ಸ್ ಆ್ಯಂಡ್ ಕಮ್ಯೂನಿಕೇಷನ್ ಎಂಜಿನಿಯರಿಂಗ್ ವಿಭಾಗಗಳಲ್ಲಿ ಸೀಟುಗಳ ಸಂಖ್ಯೆ ಹೆಚ್ಚಾಗಿದ್ದು, ವಿದ್ಯಾರ್ಥಿಗಳಿಂದ ಬೇಡಿಕೆಯೂ ಬರುತ್ತಿದೆ.

ಕೃತಕ ಬುದ್ಧಿಮತ್ತೆ ಮತ್ತು ಮಷಿನ್ ಲರ್ನಿಂಗ್‌ನಲ್ಲಿ 2020ರಲ್ಲಿ 2040 ಸೀಟು ಇದ್ದರೆ, ಈಗ 8109 ಸೀಟುಗಳಿವೆ. ಡೇಟಾ ಸೈನ್ಸ್‌ನಲ್ಲಿ ಸೀಟುಗಳ ಸಂಖ್ಯೆ 180ರಿಂದ 4230ಕ್ಕೆ, ಕೃತಕ ಬುದ್ಧಿಮತ್ತೆ ಮತ್ತು ಡೇಟಾ ಸೈನ್ಸ್‌ನಲ್ಲಿ 210ರಿಂದ 2610ಕ್ಕೆ ಸೀಟುಗಳ ಸಂಖ್ಯೆ ಹೆಚ್ಚಾಗಿದೆ.

ಮೂಲಸೌಕರ್ಯಗಳು ಇಲ್ಲದೆ ಇದ್ದರೂ, ಮಾರುಕಟ್ಟೆಯಲ್ಲಿ ಬೇಡಿಕೆ ಇದೆ ಎಂಬ ಕಾರಣದಿಂದ ಕೆಲವೊಂದು ಕಾಲೇಜುಗಳು ಕಂಪ್ಯೂಟರ್ ಸೈನ್ಸ್, ಕೃತಕ ಬುದ್ಧಿಮತ್ತೆ ಮತ್ತು ಮಷಿನ್ ಲರ್ನಿಂಗ್, ಡೇಟಾ ಸೈನ್ಸ್ ಇತ್ಯಾದಿ ವಿಭಾಗಗಳಲ್ಲಿ ಸೀಟುಗಳ ಸಂಖ್ಯೆಯನ್ನು ಜಾಸ್ತಿ ಮಾಡುತ್ತಲೇ ಇವೆ. ಇವುಗಳಿಗೆ ಬೇಡಿಕೆ ಇರುವ ಕಾರಣ ಬಹುತೇಕ ಭರ್ತಿ ಆಗುತ್ತಿವೆ. ಆದರೆ, ಸಿವಿಲ್, ಮೆಕ್ಯಾನಿಕಲ್, ಎಲೆಕ್ಟ್ರಿಕಲ್ ಇತ್ಯಾದಿ ವಿಭಾಗಗಳಲ್ಲಿ ಸೀಟುಗಳು ಉಳಿಯುತ್ತಿವೆ.



ಎಐ ಚಿತ್ರ: ಕಣಕಾಲಮಠ

ಎಲ್ಲ ಬ್ರಾಂಚ್‌ಗಳಲ್ಲಿ ಉದ್ಯೋಗಾವಕಾಶ ಇದೆ. ಆದರೆ, ಈ ಬಗ್ಗೆ ಅರಿವು ಇಲ್ಲ. ಇದರಿಂದಾಗಿ ಕೆಲವೊಂದು ಬ್ರಾಂಚ್‌ಗಳಿಗೆ ಯಾರೂ ಹೋಗುತ್ತಿಲ್ಲ, ಇನ್ನು ಪ್ಲೇಸ್‌ಮೆಂಟ್ ಇಲ್ಲದ ಕಾರಣಕ್ಕೆ ಗ್ರಾಮಾಂತರ ಪ್ರದೇಶದ ಕಾಲೇಜುಗಳಿಗೆ ಸೇರದೆ ಇರಬಹುದು. ನಮ್ಮಲ್ಲಿ ಒಂದೂ ಸೀಟು ಖಾಲಿ ಇಲ್ಲ.

ಪ್ರೊ.ಜವಾಹರ ದೊರೆಸ್ವಾಮಿ, ಕುಲಾಧಿಪತಿ, ಪಿಇಎಸ್ ವಿಶ್ವವಿದ್ಯಾಲಯ

ಅಖಿಲ ಭಾರತ ತಾಂತ್ರಿಕ ಶಿಕ್ಷಣ ಮಂಡಳಿ (ಎಐಸಿಟಿಇ) ನಿಗದಿ ಮಾಡಿರುವ ಮಾನದಂಡದ ಪ್ರಕಾರ, ತಾಂತ್ರಿಕ ಶಿಕ್ಷಣ ಸಂಸ್ಥೆಗಳಲ್ಲಿ ಅಧ್ಯಾಪಕರ ಮತ್ತು ವಿದ್ಯಾರ್ಥಿಗಳು ಅನುಪಾತ 1:20 ಇರಬೇಕು. ಒಂದು ವಿಭಾಗದಲ್ಲಿ 60 ವಿದ್ಯಾರ್ಥಿಗಳು ಇದ್ದರೆ ಒಬ್ಬರು ಪ್ರಾಧ್ಯಾಪಕರು, ಮೂವರು ಸಹ ಪ್ರಾಧ್ಯಾಪಕರು ಹಾಗೂ 8 ಸಹಾಯಕ ಪ್ರಾಧ್ಯಾಪಕರು ಇರಬೇಕು. ಆದರೆ, ಬಹುತೇಕ ಕಡೆ ಇದರ ಪಾಲನೆ ಆಗುತ್ತಿಲ್ಲ. ವಾಸ್ತವಕ್ಕೆ ದೂರವಾದ ಅಂಕಿ–ಸಂಖ್ಯೆಗಳನ್ನು ತೋರಿಸಿ, ಎಐಸಿಟಿಇ ಮತ್ತು ಸರ್ಕಾರದ ಕಣ್ಣಿಗೆ ಮಣ್ಣೆರಚಲಾಗುತ್ತಿದೆ ಎಂಬ ಮಾತುಗಳು ಕೇಳಿ ಬರುತ್ತಿವೆ.

‘ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು ನಿಗದಿತ ವಿಷಯದಲ್ಲಿ ಪಿಎಚ್‌.ಡಿ ಮಾಡಿರಬೇಕು. ಸಹಾಯಕ ಪ್ರಾಧ್ಯಾಪಕರು ಪ್ರಥಮ ದರ್ಜೆಯಲ್ಲಿ ಎಂ.ಟೆಕ್ ಪಾಸಾಗಿರಬೇಕು ಎಂಬ ನಿಯಮವಿದೆ. ಆದರೆ, ಈ ವಿದ್ಯಾರ್ಹತೆ ಇರುವವರು ಸಿಗುತ್ತಿಲ್ಲ. ಒಂದು ವೇಳೆ ದೊರೆತರೂ, ಅವರು ಬಯಸಿದಷ್ಟು ಸಂಬಳ ಕೊಡಲು ಕಾಲೇಜುಗಳ ಆಡಳಿತ ಮಂಡಳಿಗಳು ಸಿದ್ಧವಿಲ್ಲ. ಹೀಗಾಗಿ ತಾಂತ್ರಿಕ ಶಿಕ್ಷಣದಲ್ಲಿ ಗುಣಮಟ್ಟ ಕಾಪಾಡಿಕೊಳ್ಳಲು ಸಾಧ್ಯವಾಗುತ್ತಿಲ್ಲ’ ಎಂಬುದು ಅಧಿಕಾರಿಯೊಬ್ಬರ ಅಭಿಪ್ರಾಯ.

ಮನಬಂದಂತೆ ಹೆಚ್ಚಳ: ರಾಜ್ಯದಲ್ಲಿ ಇರುವ 27 ಖಾಸಗಿ ವಿಶ್ವವಿದ್ಯಾಲಯಗಳಲ್ಲಿ 33,300 ಎಂಜಿನಿಯರಿಂಗ್ ಸೀಟುಗಳು ಲಭ್ಯ ಇವೆ. ಇವುಗಳ ಮೇಲೆ ಎಐಸಿಟಿಇಗೆ ಯಾವುದೇ ಹಿಡಿತ ಇಲ್ಲ. ಉನ್ನತ ಶಿಕ್ಷಣ ಸಚಿವರು ಅಧ್ಯಕ್ಷರಾಗಿರುವ ಉನ್ನತ ಶಿಕ್ಷಣ ಪರಿಷತ್‌ನ ಆಡಳಿತ ಮಂಡಳಿಯಲ್ಲಿ ತೆಗೆದುಕೊಳ್ಳುವ ನಿರ್ಧಾರಕ್ಕೆ ಅನುಗುಣವಾಗಿ ಇವುಗಳು ಕಾರ್ಯನಿರ್ವಹಿಸುತ್ತಿವೆ.

ಬಹುತೇಕ ವಿಶ್ವವಿದ್ಯಾಲಯಗಳು ರಾಜಕಾರಣಿಗಳು ಮತ್ತು ಪ್ರಭಾವಿಗಳ ಹಿಡಿತದಲ್ಲಿವೆ. ಅವರು ಒತ್ತಡ ತಂದು ಸೀಟು ಜಾಸ್ತಿ ಮಾಡಿಸಿಕೊಳ್ಳುತ್ತಾರೆ. ಬೆಂಗಳೂರಿನ ಖಾಸಗಿ ವಿಶ್ವವಿದ್ಯಾಲಯವೊಂದರ ಕಂಪ್ಯೂಟರ್ ಸೈನ್ಸ್ ವಿಭಾಗದಲ್ಲಿ 2,850 ಸೀಟುಗಳು ಇವೆ. ಎಐಸಿಟಿಇ ಪ್ರಕಾರ ಆ ವಿಭಾಗದಲ್ಲಿ 47 ಪ್ರಾಧ್ಯಾಪಕರು, 141 ಸಹ ಪ್ರಾಧ್ಯಾಪಕರು ಹಾಗೂ 376 ಸಹಾಯಕ ಪ್ರಾಧ್ಯಾಪಕರು ಸೇರಿ ಒಟ್ಟು 564 ಮಂದಿ ಬೋಧನಾ ಸಿಬ್ಬಂದಿ ಇರಬೇಕು. ಇದಲ್ಲದೆ ಪ್ರಯೋಗಾಲಯ ಸಿಬ್ಬಂದಿ, ಸಹಾಯಕ ಸಿಬ್ಬಂದಿ ಇರಬೇಕು. ಆದರೆ, ಇದರ ಪಾಲನೆ ಆಗುತ್ತಿಲ್ಲ. ಬಹುತೇಕ ಖಾಸಗಿ ವಿ.ವಿ.ಗಳ ಪರಿಸ್ಥಿತಿ ಇದೇ ರೀತಿ ಇದೆ.

ಕಾಲೇಜು ವಿಶ್ವವಿದ್ಯಾಲಯಗಳು ಮನಬಂದಂತೆ ಸೀಟುಗಳನ್ನು ಸಂಖ್ಯೆಯನ್ನು ಹೆಚ್ಚಿಸುತ್ತಿವೆ. ಸರ್ಕಾರ ಕೂಡ ಇದಕ್ಕೆ ಮೌನ ಸಮ್ಮತಿ ಸೂಚಿಸುತ್ತಿದೆ. ಇದೇ ರೀತಿಯ ವಾತಾವರಣ ಮುಂದುವರಿದರೆ ಗುಣಮಟ್ಟ ಕುಸಿಯುವುದರ ಜೊತೆಗೆ ಈಗ ಸಿವಿಲ್, ಮೆಕ್ಯಾನಿಕಲ್‌ಗೆ ಬಂದಿರುವ ಸ್ಥಿತಿಯೇ ಕಂಪ್ಯೂಟರ್ ಸೈನ್ಸ್, ಕೃತಕ ಬುದ್ಧಿಮತ್ತೆ ಮತ್ತು ಮಷಿನ್ ಲರ್ನಿಂಗ್, ಡೇಟಾ ಸೈನ್ಸ್ ಇತ್ಯಾದಿ ವಿಭಾಗಗಳಿಗೂ ಬರಲಿದೆ ಎಂದು ಶಿಕ್ಷಣ ತಜ್ಞರೊಬ್ಬರು ಆತಂಕ ವ್ಯಕ್ತಪಡಿಸಿದರು.

ಮುಕ್ತ ಅವಕಾಶ: ‘ಕಾಮೆಡ್‌–ಕೆಗೆ ಶೇ 30ರಷ್ಟು ಸೀಟುಗಳು ಹಂಚಿಕೆ ಆಗಿವೆ. ಆದರೆ, ಸರ್ಕಾರ ಮತ್ತು ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳ ಆಡಳಿತ ಮಂಡಳಿಗಳ ಒಕ್ಕೂಟದ ನಡುವೆ ಆಗಿರುವ ಒಪ್ಪಂದದ ಪ್ರಕಾರ, ಕಾಮೆಡ್‌– ಕೆ ಕೋಟಾದ ಸೀಟುಗಳನ್ನು ಸರ್ಕಾರಿ ಕೋಟಾಗೆ ಬಿಟ್ಟುಕೊಡಲು ಕಾಲೇಜುಗಳಿಗೆ ಅವಕಾಶ ಇದೆ. ಸೀಟುಗಳು ಭರ್ತಿಯಾಗುವುದಿಲ್ಲ ಎಂದು ಕಾಲೇಜುಗಳಿಗೆ ಅನಿಸಿದರೆ, ಸರ್ಕಾರಕ್ಕೆ ಬಿಟ್ಟುಕೊಡಬಹುದು. ಅಲ್ಲದೆ ಶುಲ್ಕ ಕಡಿಮೆ ಮಾಡಲು ಮುಕ್ತ ಅವಕಾಶ ನೀಡಲಾಗಿದೆ ಎನ್ನುತ್ತಾರೆ’ ಒಕ್ಕೂಟದ ಜಂಟಿ ಕಾರ್ಯದರ್ಶಿ ಗುರುರಾಜ್ ಭಟ್.

ಡೀಮ್ಡ್ ವಿಶ್ವವಿದ್ಯಾಲಯಗಳು ಹಾಗೂ ಖಾಸಗಿ ವಿಶ್ವವಿದ್ಯಾಲಯಗಳು ತಮ್ಮ ಪಾಲಿನ ಸೀಟುಗಳ ಭರ್ತಿಗೆ ಮುಂಚೆ ಪ್ರತ್ಯೇಕ ಪ್ರವೇಶ ಪರೀಕ್ಷೆ ನಡೆಸುತ್ತಿದ್ದವು. ಆದರೆ, ಈಚೆಗೆ ಕೆಲವು ಶಿಕ್ಷಣ ಸಂಸ್ಥೆಗಳು ಜಂಟಿ ಪ್ರವೇಶ ಪರೀಕ್ಷೆಯಲ್ಲಿ (ಜೆಇಇ) ಪಡೆದಿರುವ ಅಂಕಗಳ ಆಧಾರದ ಸೀಟುಗಳನ್ನು ಹಂಚಿಕೆ ಮಾಡುತ್ತಿವೆ. ಇದರಿಂದ ವಿದ್ಯಾರ್ಥಿಗಳು ಮತ್ತೊಂದು ಪ್ರವೇಶ ಪರೀಕ್ಷೆ ಬರೆಯುವ ಅಗತ್ಯವಿಲ್ಲ. ಬಹುತೇಕ ಖಾಸಗಿ ವಿ.ವಿ.ಗಳಲ್ಲಿ ಎಲ್ಲ ಸೀಟುಗಳು ಭರ್ತಿಯಾಗಿವೆ.

ಒಂದೆರಡು ಬ್ರಾಂಚ್‌ಗಳಿಗೆ ಹೆಚ್ಚಿನ ಒಲವು: ಎಂಜಿನಿಯರಿಂಗ್‌ನಲ್ಲಿ ಸಿವಿಲ್, ಮೆಕ್ಯಾನಿಕಲ್, ಎಲೆಕ್ಟ್ರಿಕಲ್, ಎಲೆಕ್ಟ್ರಾನಿಕ್ಸ್, ಕಂಪ್ಯೂಟರ್ ಸೈನ್ಸ್, ಕೃತಕ ಬುದ್ಧಿಮತ್ತೆ ಮತ್ತು ಮಷಿನ್ ಟೂಲ್ಸ್, ಕೃತಕ ಬುದ್ಧಿಮತ್ತೆ ಮತ್ತು ಡೇಟಾ ಸೈನ್ಸ್ ಸೇರಿದಂತೆ ಹಲವು ಬ್ರಾಂಚ್‌ಗಳು ಇವೆ. ಆದರೆ, ವಿದ್ಯಾರ್ಥಿಗಳು ಕಂಪ್ಯೂಟರ್ ಸೈನ್ಸ್‌ಗೆ ಹೆಚ್ಚು ಒಲವು ತೋರುತ್ತಿದ್ದರು. ಈ ವರ್ಷದಿಂದ ಕಂಪ್ಯೂಟರ್ ಸೈನ್ಸ್ ಜೊತೆಗೆ ಕೃತಕ ಬುದ್ಧಿಮತ್ತೆಗೂ ಬೇಡಿಕೆ ಬಂದಿದೆ.

ರಾಜ್ಯದಲ್ಲಿ ಕಂಪ್ಯೂಟರ್ ಸೈನ್ಸ್‌ನಲ್ಲಿ ಕಳೆದ ಬಾರಿ 33,573 ಸೀಟುಗಳು ಲಭ್ಯವಿದ್ದವು. ಈ ಬಾರಿ 38,178ಕ್ಕೆ ಏರಿದೆ. ಕಂಪ್ಯೂಟರ್ ಸೈನ್ಸ್ ವಿಭಾಗದಲ್ಲಿ ದೇಶದಲ್ಲಿ ಒಟ್ಟಾರೆ 12 ಲಕ್ಷಕ್ಕೂ ಅಧಿಕ ಸೀಟುಗಳಿವೆ. ಎರಡು ಲಕ್ಷ ಜನರಿಗೆ ಉದ್ಯೋಗ ಸಿಗಬಹುದು. ಉಳಿದವರು ಏನು ಮಾಡುವುದು ಎಂಬುದು ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳ ಆಡಳಿತ ಮಂಡಳಿಯ ಪದಾಧಿಕಾರಿಯೊಬ್ಬರ ಪ್ರಶ್ನೆ.

‘ಈ ಕ್ಷೇತ್ರದಲ್ಲಿ ಸ್ಥಿರತೆ ಇಲ್ಲ, ಸ್ಪರ್ಧೆ ಜಾಸ್ತಿಯಾಗಿದೆ. ಕಂಪನಿಗಳು ಕೂಡ ಉದ್ಯೋಗಿಗಳನ್ನು ಬದಲಾವಣೆ ಮಾಡುತ್ತಿರುತ್ತವೆ. ಹೀಗಾಗಿ ನಿರಂತರವಾಗಿ ಕೆಲಸಕ್ಕೆ ಹುಡುಕಾಟ ನಡೆದೇ ಇದೆ. ಈ ಕ್ಷೇತ್ರಕ್ಕೆ ಬರುವ ಯುವ ಸಮೂಹ ಭ್ರಮಾ ಲೋಕದಿಂದ ಹೊರ ಬರಬೇಕು. ಎಂಜಿನಿಯರಿಂಗ್ ಅಂದರೆ ಕಂಪ್ಯೂಟರ್ ಸೈನ್ಸ್, ಕೃತಕ ಬುದ್ಧಿಮತ್ತೆ ಅಷ್ಟೇ ಅಲ್ಲ, ಇದರ ಆಚೆಗೂ ಅವಕಾಶಗಳು ಇವೆ. ಮೆಕ್ಯಾನಿಕಲ್, ಎಲೆಕ್ಟ್ರಿಕಲ್, ಎಲೆಕ್ಟ್ರಾನಿಕ್ಸ್, ಸಿವಿಲ್ ಸೇರಿದಂತೆ ಹಲವು ಬ್ರಾಂಚ್‌ಗಳಿವೆ. ಇತ್ತ ಕಡೆಯೂ ಗಮನಹರಿಸಬೇಕು. ಇದರಿಂದ ಸಮತೋಲನ ಕಾಪಾಡಿಕೊಳ್ಳಬಹುದು ಎನ್ನುತ್ತಾರೆ’ ಒಕ್ಕೂಟದ ಜಂಟಿ ಕಾರ್ಯದರ್ಶಿ ಗುರುರಾಜ್ ಭಟ್.

ಕಂಪ್ಯೂಟರ್ ಸೈನ್ಸ್ ಮಾಡಿದರೆ ವರ್ಷಕ್ಕೆ ಗರಿಷ್ಠ ₹50–60 ಲಕ್ಷ ಪ್ಯಾಕೇಜ್ ಸಿಗಲಿದೆ ಎಂಬ ಆಸೆಯಿಂದ ಬಹುತೇಕ ವಿದ್ಯಾರ್ಥಿಗಳು ಆ ಬ್ರಾಂಚ್‌ಗೆ ಹೋಗುತ್ತಾರೆ. ಆದರೆ, ಎಷ್ಟು ಮಂದಿಗೆ ಈ ರೀತಿಯ ಪ್ಯಾಕೇಜ್ ಸಿಗುತ್ತದೆ ಎಂಬ ಅರಿವು ಇರುವುದಿಲ್ಲ. ಯಾರೋ ಒಬ್ಬರಿಗೆ ಒಳ್ಳೆಯ ಪ್ಯಾಕೇಜ್ ಸಿಕ್ಕಿದರೆ, ಎಲ್ಲರೂ ಅದೇ ಬ್ರಾಂಚ್, ಕಾಲೇಜಿಗೆ ಸೇರಲು ಪ್ರಯತ್ನ ಮಾಡುತ್ತಾರೆ. ಈ ರೀತಿಯ ಅನಾರೋಗ್ಯಕರ ಸ್ಪರ್ಧೆಯಿಂದಾಗಿಯೇ ಹೆಚ್ಚಿನ ಕಾಲೇಜುಗಳಲ್ಲಿ ಕೆಲವು ಕೋರ್ಸ್‌ಗಳಿಗೆ ಬೇಡಿಕೆ ಇಲ್ಲದಂತಾಗಿದೆ ಎಂಬುದು ಅವರ ಅಭಿಪ್ರಾಯ.

ಶುಲ್ಕದ ಹೊರೆ: ಎಂಜಿನಿಯರಿಂಗ್, ವೈದ್ಯಕೀಯ ಶಿಕ್ಷಣಕ್ಕೆ ಕರ್ನಾಟಕ ಮೊದಲಿನಿಂದಲೂ ಹೆಸರುವಾಸಿ. ಸರ್ಕಾರಿ, ಖಾಸಗಿ ಕಾಲೇಜುಗಳು ಅಷ್ಟೇ ಅಲ್ಲದೆ, ಸಾಕಷ್ಟು ಖಾಸಗಿ ವಿಶ್ವವಿದ್ಯಾಲಯಗಳೂ ತಲೆ ಎತ್ತಿವೆ. ಇಲ್ಲಿ ಎಂಜಿನಿಯರಿಂಗ್ ಸೀಟು ಪಡೆಯಲು ರಾಜ್ಯದವರು ಅಷ್ಟೇ ಅಲ್ಲದೆ ಹೊರ ರಾಜ್ಯದ ವಿದ್ಯಾರ್ಥಿಗಳೂ ಪೈಪೋಟಿ ನಡೆಸುತ್ತಿದ್ದರು.

ಇದರ ದುರ್ಲಾಭ ಪಡೆಯಲು ಮುಂದಾದ ಆಡಳಿತ ಮಂಡಳಿಗಳು, ರಾಜಕಾರಣಿಗಳು ಅಧಿಕ ಸಂಖ್ಯೆಯಲ್ಲಿ ಎಂಜಿನಿಯರಿಂಗ್ ಕಾಲೇಜುಗಳನ್ನು ಆರಂಭಿಸಿದರು. ಇದು ಕರ್ನಾಟಕಕ್ಕೆ ಅಷ್ಟೇ ಸೀಮಿತವಾಗಿಲ್ಲ. ಬೇರೆ ರಾಜ್ಯಗಳಲ್ಲೂ ನಾಯಿಕೊಡೆಗಳಂತೆ ಎಂಜಿನಿಯರಿಂಗ್ ಕಾಲೇಜುಗಳು ತಲೆ ಎತ್ತಿವೆ. ಇದರಿಂದಾಗಿ ರಾಜ್ಯಕ್ಕೆ ಬರುವ ವಿದ್ಯಾರ್ಥಿಗಳ ಸಂಖ್ಯೆ ಕ್ರಮೇಣ ಕಡಿಮೆಯಾಗಿದೆ.

ಇನ್ನು ಸರ್ಕಾರದ ಮಾತಿಗೂ ‘ಡೋಂಟ್ ಕೇರ್’ ಎನ್ನದ ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳು ಪ್ರತಿ ವರ್ಷ ಶುಲ್ಕವನ್ನು ಜಾಸ್ತಿ ಮಾಡುತ್ತಲೇ ಇವೆ. ಶೇ 25ರಷ್ಟು ಶುಲ್ಕ ಜಾಸ್ತಿ ಮಾಡಬೇಕು ಎಂದು ಸರ್ಕಾರದ ಮೇಲೆ ಒತ್ತಡ ತರುವುದು, ಕೊನೆಗೆ ಶೇ 10ರಿಂದ 15ರಷ್ಟು ಶುಲ್ಕ ಹೆಚ್ಚಳಕ್ಕೆ ಸರ್ಕಾರ ಅನುಮತಿ ನೀಡುವುದು ಹಲವು ವರ್ಷಗಳಿಂದ ನಡೆದುಕೊಂಡು ಬಂದಿದೆ.

‘ಸರ್ಕಾರ ನಿಗದಿಪಡಿಸಿದ ವಾರ್ಷಿಕ ಶುಲ್ಕ ಅಷ್ಟೇ ಅಲ್ಲದೆ, ಬಹುತೇಕ ಶಿಕ್ಷಣ ಸಂಸ್ಥೆಗಳಲ್ಲಿ, ಕಾಲೇಜಿಗೆ ದಾಖಲಾಗುವಾಗ ಅಭಿವೃದ್ಧಿ ಶುಲ್ಕ ಸೇರಿದಂತೆ ಬೇರೆ ಬೇರೆ ಹೆಸರಿನಲ್ಲಿ ಕನಿಷ್ಠ ₹25 ಸಾವಿರದಿಂದ ಒಂದು ಲಕ್ಷ ರೂಪಾಯಿವರೆಗೆ ಹೆಚ್ಚುವರಿಯಾಗಿ ಹಣ ವಸೂಲಿ ಮಾಡುತ್ತಾರೆ. ಇದು ‘ಹಗಲು ದರೋಡೆ’ ಎಂದು ಸರ್ಕಾರಕ್ಕೆ ಗೊತ್ತಿದ್ದರೂ, ಕಡಿವಾಣ ಹಾಕಿಲ್ಲ. ಕಾಲೇಜಿನ ವಿರುದ್ಧ ದೂರು ಕೊಟ್ಟರೆ ಹತ್ತಾರು ಸಮಸ್ಯೆ ಎಂದು ವಿದ್ಯಾರ್ಥಿಗಳು, ಪೋಷಕರೂ ದುಡ್ಡು ಕೊಟ್ಟು ಸುಮ್ಮನಾಗುತ್ತಾರೆ. ದುಡ್ಡು ಇಲ್ಲದವರು ಅತ್ತ ಸುಳಿಯುವುದಿಲ್ಲ’ ಎನ್ನುತ್ತಾರೆ ಬೆಂಗಳೂರಿನ ಖಾಸಗಿ ಕಾಲೇಜಿನಲ್ಲಿ ಓದುತ್ತಿರುವ ವಿದ್ಯಾರ್ಥಿ ಮಂಜುನಾಥ್.

ಕೆಲವು ಕಾಲೇಜುಗಳು ಹಣ ಮಾಡುವ ದುರಾಸೆಯಿಂದ 2 ಲಕ್ಷದಿಂದ 3 ಲಕ್ಷದವರೆಗೂ ಶುಲ್ಕ ವಸೂಲಿ ಮಾಡುತ್ತಿವೆ. ಈ ರೀತಿ ಆದಾಗ 100ರಲ್ಲಿ 80 ಸೀಟು ಉಳಿಯುತ್ತವೆ. ಅದರ ಬದಲು ಒಂದು ಲಕ್ಷ ನಿಗದಿ ಮಾಡಿದರೆ ಹೆಚ್ಚು ಸೀಟುಗಳು ಭರ್ತಿಯಾಗುತ್ತವೆ. ಇದರಿಂದ ಆಡಳಿತ ಮಂಡಳಿಗೂ ಅನುಕೂಲ, ವಿದ್ಯಾರ್ಥಿಗಳಿಗೂ ಅನುಕೂಲವಾಗುತ್ತದೆ. ಕಾಲೇಜುಗಳು ಇದನ್ನು ಅರ್ಥ ಮಾಡಿಕೊಳ್ಳಬೇಕು ಎಂಬುದು ಕಾಮೆಡ್ ಕೆ ಪದಾಧಿಕಾರಿಯೊಬ್ಬರ ಅಭಿಪ್ರಾಯ.

ಕಾಲೇಜುಗಳಲ್ಲಿ ಸೀಟುಗಳು ಹೆಚ್ಚಾಗುತ್ತಲೇ ಇವೆ. ಆದರೆ, ಸೌಲಭ್ಯಗಳು ಇಲ್ಲ. ಹೊಸ ಅಧ್ಯಾಪಕರು ಬರುತ್ತಿಲ್ಲ. 150 ಇರುವ ಸೀಟುಗಳನ್ನು 400ಕ್ಕೆ ಹೆಚ್ಚಿಸಿದರೆ ಪಾಠ ಮಾಡುವವರು ಯಾರು? ಮೊದಲು ಕಾಲೇಜುಗಳ ಗುಣಮಟ್ಟ ಸುಧಾರಣೆಯಾಗಬೇಕು. ಗುಣಮಟ್ಟದ ಶಿಕ್ಷಣ ನೀಡದೆ ಇದ್ದರೆ ಕಾಲೇಜುಗಳನ್ನು ಮುಚ್ಚಬೇಕಾಗುತ್ತದೆ. ದೇಶದಲ್ಲಿ ಈಗಾಗಲೇ ಕಾಲೇಜುಗಳನ್ನು ಮುಚ್ಚುವ ಪರಿಸ್ಥಿತಿ ಬಂದಿದೆ ಎಂದು ಬೇಸರ ವ್ಯಕ್ತಪಡಿಸಿದರು. ❖

ಕಡಿಮೆಯಾದ ಉದ್ಯೋಗ ಅವಕಾಶಗಳು

‘2023ರಿಂದ ಈಚೆಗೆ ಐಟಿ ಕ್ಷೇತ್ರದಲ್ಲಿ ಸ್ಥಿರತೆ ಇಲ್ಲದಂತಾಗಿದೆ. ಕೆಲವು ಕಂಪನಿಗಳು ಉದ್ಯೋಗಿಗಳ ಸಂಖ್ಯೆಯನ್ನು ಕಡಿಮೆ ಮಾಡುತ್ತಿವೆ. ಬಹುತೇಕ ಕಂಪನಿಗಳಲ್ಲಿ ನಿರೀಕ್ಷಿತ ಮಟ್ಟದಲ್ಲಿ ಹೊಸ ನೇಮಕಾತಿಗಳು ಆಗುತ್ತಿಲ್ಲ. ಈಗ ಇರುವವರು ಕೂಡ ಕೆಲಸ ಉಳಿದರೆ ಸಾಕು ಎನ್ನುವ ಸ್ಥಿತಿಯಲ್ಲಿ ಇದ್ದಾರೆ’ ಎನ್ನುತ್ತಾರೆ ಖಾಸಗಿ ಕಂಪನಿಯೊಂದರ ಟೆಕಿ.

‘ಹಿಂದೆ ಸಾಮಾನ್ಯವಾಗಿ ಶೇ 40ರಷ್ಟು ಎಂಜಿನಿಯರಿಂಗ್ ಪದವೀಧರರಿಗೆ ಕೆಲಸ ಸಿಗುತ್ತಿತ್ತು. ಬೆಂಗಳೂರಿನ ಪ್ರಮುಖ ಕಾಲೇಜುಗಳಲ್ಲಿ ಶೇ 80ರಷ್ಟು ಮಂದಿ ಕ್ಯಾಂಪಸ್ ಸಂದರ್ಶನ ಮೂಲಕ ಆಯ್ಕೆಯಾಗುತ್ತಿದ್ದರು. ಆದರೆ, ಈಗ ಆ ರೀತಿಯ ವಾತಾವರಣ ಇಲ್ಲ. ಆಯ್ಕೆಯಾದವರಿಗೆ ಒಂದು ವರ್ಷ ಕಾಯಿರಿ ಎಂದು ಕೆಲವೊಂದು ಕಂಪನಿಗಳು ಹೇಳುತ್ತಿವೆ. ಆಶಾದಾಯಕವಾದ ವಾತಾವರಣ ಇಲ್ಲ’ ಎನ್ನುತ್ತಾರೆ ಉದ್ಯೋಗಿ ಅಶ್ವಿನ್.

ಬಹುಕೌಶಲಕ್ಕೆ ಒತ್ತು

‘ಕೇವಲ ಬಿ.ಇ.ಯಲ್ಲಿ ಇರುವ ಸಿಲಬಸ್ ಓದಿಕೊಂಡು ಬಂದರೆ ಈಗ ಯಾವ ಕಂಪನಿಯೂ ಕೆಲಸ ಕೊಡುವುದಿಲ್ಲ. ಕಂಪನಿಗಳಿಂದ ನಿರೀಕ್ಷೆ ಜಾಸ್ತಿ ಇರುತ್ತದೆ. ಹೊಸ ತಂತ್ರಜ್ಞಾನ ಗೊತ್ತಿರಬೇಕು, ಒಂದಕ್ಕಿಂತ ಹೆಚ್ಚು ವಿಷಯಗಳಲ್ಲಿ ಕೌಶಲ ಇರಬೇಕು. ಅಂತಹವರಿಗೆ ಮಾತ್ರ ಅವಕಾಶ’ ಎನ್ನುತ್ತಾರೆ ಮತ್ತೊಂದು ಖಾಸಗಿ ಕಂಪನಿಯ ಉದ್ಯೋಗಿ ಮುರಳಿ.

‘ಕಂಪನಿಗಳಲ್ಲಿ ಮಧ್ಯಮ ಹಂತದಲ್ಲಿ ಇರುವ ಕೆಲವರು ಕೆಲಸ ಕಳೆದುಕೊಂಡಿದ್ದಾರೆ. ಹೊಸಬರಿಗೆ ಸದ್ಯಕ್ಕೆ ತೊಂದರೆ ಇಲ್ಲ, ಆದರೆ ಕೃತಕ ಬುದ್ಧಿಮತ್ತೆ ಕಾರ್ಯಸೂಚಿಗೆ ತಕ್ಕಂತೆ ಕೆಲಸ ಮಾಡಬೇಕು. ಹೊಸಬರಿಂದ ಕಂಪನಿಗಳು ನಿರೀಕ್ಷೆ ಮಾಡುವುದು ಜಾಸ್ತಿಯಾಗಿದೆ’ ಎನ್ನುವುದು ಅವರ ಅಭಿಪ್ರಾಯ.

ಗುಣಮಟ್ಟ, ಕೌಶಲದ ಕೊರತೆ...

ಎಂಜಿನಿಯರಿಂಗ್ ಪದವೀಧರರಲ್ಲಿ ಉದ್ಯೋಗಕ್ಕೆ ಬೇಕಾದ ಕೌಶಲ ಇಲ್ಲ, ಇದರಿಂದಾಗಿಯೇ ಬಹಳಷ್ಟು ಮಂದಿ ಕೆಲಸ ಇಲ್ಲದೆ ನಿರುದ್ಯೋಗಿಗಳಾಗಿದ್ದಾರೆ ಎಂದು ಇನ್ಫೋಸಿಸ್ ಸಂಸ್ಥಾಪಕ ಎನ್.ಆರ್.ನಾರಾಯಣ ಮೂರ್ತಿ ಅವರು ಬಹಳ ಹಿಂದೆಯೇ ಹೇಳಿದ್ದರು. ಇದಾದ ಬಳಿಕ ಸಾಕಷ್ಟು ಚರ್ಚೆಗಳು ನಡೆದಿದ್ದರೂ, ವಾಸ್ತವವಾಗಿ ಈಗಲೂ ಹೆಚ್ಚಿನ ಬದಲಾವಣೆ ಏನೂ ಆಗಿಲ್ಲ.

ಬಹಳಷ್ಟು ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಮೂಲಸೌಕರ್ಯಗಳು ಇಲ್ಲ. ಬಹುತೇಕ ಕಡೆ ಅಧ್ಯಾಪಕರ ಕೊರತೆ ಇದೆ. ಇರುವ ಅಧ್ಯಾಪಕರಲ್ಲೂ ಗುಣಮಟ್ಟ ಇಲ್ಲ. ಕಾಲೇಜುಗಳ ಆಡಳಿತ ಮಂಡಳಿಗಳು, ಸರ್ಕಾರ, ಅಖಿಲ ಭಾರತ ತಾಂತ್ರಿಕ ಶಿಕ್ಷಣ (ಎಐಸಿಟಿಇ) ಇದನ್ನು ಗಂಭೀರವಾಗಿ ಪರಿಗಣಿಸಿಲ್ಲ ಎನ್ನುತ್ತಾರೆ ಈ ಕ್ಷೇತ್ರದ ತಜ್ಞರು.

ಬೆಂಗಳೂರಿನ ಕೆಲವೊಂದು ಪ್ರತಿಷ್ಠಿತ ಕಾಲೇಜುಗಳನ್ನು ಹೊರತುಪಡಿಸಿದರೆ, ಉಳಿದಂತೆ ಎಲ್ಲ ಕಡೆ ಈ ಸಮಸ್ಯೆ ಇದೆ. ಅಧ್ಯಾಪಕ ವೃತ್ತಿಗೆ ಬರುವವರ ಸಂಖ್ಯೆ ಕಡಿಮೆ ಇದೆ. ಕಡಿಮೆ ಸಂಬಳ, ಬೆಂಗಳೂರು ಬಿಟ್ಟು ಹೊರಗೆ ಹೋಗಲು ಇಷ್ಟ ಇಲ್ಲದಿರುವುದು ಸೇರಿದಂತೆ ಹಲವು ಕಾರಣಗಳಿಂದಾಗಿ ಈ ವೃತ್ತಿಗೆ ಬರಲು ಒಲವು ತೋರುವುದಿಲ್ಲ ಎಂದು ಖಾಸಗಿ ಕಾಲೇಜಿನ ಪ್ರಾಧ್ಯಾಪಕರೊಬ್ಬರು ತಿಳಿಸಿದರು.

ಅನುಭವ ಇರುವ ಅಧ್ಯಾಪಕರು ಸಿಗುವುದಿಲ್ಲ, ಕಡಿಮೆ ಸಂಬಳ ನೀಡಿ ಹೊಸಬರನ್ನು ನೇಮಕ ಮಾಡಿಕೊಳ್ಳುತ್ತಾರೆ. ಅವರಿಗೆ ವೃತ್ತಿ ಬಗ್ಗೆ ಪ್ರೀತಿಯೇ ಇರುವುದಿಲ್ಲ, ಬೇರೆ ಕಡೆ ಹೆಚ್ಚು ಸಂಬಳ ಕೊಟ್ಟರೆ ಬಿಟ್ಟು ಹೋಗುತ್ತಾರೆ. ಆಗ ಮತ್ತೆ ಹೊಸಬರನ್ನು ಹುಡುಕಬೇಕಾಗುತ್ತದೆ. ಇದು ಒಂದು ರೀತಿಯಲ್ಲಿ ನಿರಂತರ ಪ್ರಕ್ರಿಯೆಯಾಗಿದೆ ಎಂಬುದು ಮತ್ತೊಬ್ಬ ಪ್ರಾಧ್ಯಾಪಕರ ಅಭಿಪ್ರಾಯ.

‘ಸರ್ಕಾರಿ ಎಂಜಿನಿಯರಿಂಗ್ ಕಾಲೇಜುಗಳಲ್ಲೂ ಇದೇ ರೀತಿಯ ಪರಿಸ್ಥಿತಿ ಇದೆ. ಕಟ್ಟಡಗಳನ್ನು ನಿರ್ಮಾಣ ಮಾಡಿದ್ದು ಬಿಟ್ಟರೆ, ಕಾಯಂ ಸಿಬ್ಬಂದಿಯ ನೇಮಕಾತಿಗೆ ಸರ್ಕಾರ ಗಮನಹರಿಸಲಿಲ್ಲ. ಹೀಗಾಗಿ ಅತಿಥಿ ಉಪನ್ಯಾಸಕರ ಮೇಲೆ ಅವಲಂಬನೆ ಆಗಿದ್ದೇವೆ’ ಎಂದು ಸರ್ಕಾರಿ ಕಾಲೇಜಿನ ಪ್ರಾಂಶುಪಾಲರೊಬ್ಬರು ತಿಳಿಸಿದರು.

‘ರಾಜಧಾನಿ ಬೆಂಗಳೂರು ಹಾಗೂ ಎರಡನೇ ಹಂತದ ನಗರಗಳಲ್ಲಿ ಬಹುತೇಕ ಎಂಜಿನಿಯರಿಂಗ್ ಕಾಲೇಜುಗಳು ಕೇಂದ್ರೀಕೃತವಾಗಿವೆ. ಅಂತಹ ಕಡೆ ಪರವಾಗಿಲ್ಲ. ಆದರೆ, ಉಳಿದ ಕಡೆ ಇರುವ ಕಾಲೇಜುಗಳಲ್ಲಿ ಹೆಚ್ಚಾಗಿ ಸೀಟುಗಳು ಉಳಿಯುತ್ತಿವೆ. ತಾಲ್ಲೂಕು, ಜಿಲ್ಲಾಮಟ್ಟದಲ್ಲಿ ಎಂಜಿನಿಯರಿಂಗ್ ಕಾಲೇಜುಗಳನ್ನು ನಡೆಸುವುದು ಕಷ್ಟವಾಗಿದೆ. ವಿದ್ಯಾರ್ಥಿಗಳು ಬರುವುದಿಲ್ಲ, ಅಧ್ಯಾಪಕರೂ ಬರಲು ಇಷ್ಟಪಡುವುದಿಲ್ಲ’ ಎಂದು ಖಾಸಗಿ ಕಾಲೇಜಿನ ಪ್ರಾಂಶುಪಾಲರೊಬ್ಬರು ತಿಳಿಸಿದರು.

ಕಾಲೇಜು ಶುರು ಮಾಡುವಾಗ ಆಡಳಿತ ಮಂಡಳಿಯವರು ಕೋಟ್ಯಂತರ ರೂಪಾಯಿ ಬಂಡವಾಳ ಹಾಕಿರುತ್ತಾರೆ. ಅಲ್ಲದೆ ಪ್ರತಿವರ್ಷ ಕಾಲೇಜು ನಡೆಸಲು ಸಾಕಷ್ಟು ಖರ್ಚು ಬರುತ್ತದೆ. ತುಂಬಾ ಲಾಭ ಇಲ್ಲದೆ ಇದ್ದರೂ, ಹಾಕಿದ ಬಂಡವಾಳ ಬರಬೇಕು ಎಂದು ಆಡಳಿತ ಮಂಡಳಿಯವರು ಬಯಸುತ್ತಾರೆ. ಎಲ್ಲ ಸೀಟುಗಳು ಭರ್ತಿಯಾಗಿ, ಲಾಭದಲ್ಲಿ ಇದ್ದರೆ ಅಧ್ಯಾಪಕರಿಗೆ ಉತ್ತಮ ಸಂಬಳ ನೀಡಬಹುದು. ಆದರೆ, ಸೀಟುಗಳು ಉಳಿಯುತ್ತವೆ. ಕಾಲೇಜುಗಳನ್ನು ನಡೆಸುವುದೇ ಕಷ್ಟ ಅನ್ನುವ ಪರಿಸ್ಥಿತಿ ಇರುವಾಗ, ಅಧಿಕ ಸಂಬಳ ಕೊಡುವುದು ಕಷ್ಟ ಮತ್ತೊಬ್ಬ ಪ್ರಾಂಶುಪಾಲರು ಅಳಲು ತೋಡಿಕೊಂಡರು.



ಗುಂಡಣ್ಣ

25 ವರ್ಷಗಳ ಹಿಂದೆ

ಗುರುವಾರ, 30-11-2000

• **ತೆಂಗು, ಜೋಳ, ಸೂರ್ಯಕಾಂತಿ ಖರೀದಿ: ಆಹಾರ ನಿಗಮ ಒಪ್ಪಿಗೆ**

ನವದೆಹಲಿ, ನ.29 – ಕರ್ನಾಟಕದ ಮೆಕ್ಕೆಜೋಳ ಮತ್ತು ಭತ್ತ ಮಾತ್ರವಲ್ಲದೆ ರಾಗಿ, ಜೋಳ ಮತ್ತು ಸಜ್ಜೆಯನ್ನು ಕೂಡಾ ಗುಣಮಟ್ಟದ ಷರತ್ತುಗಳನ್ನು ಸಡಿಲಿಸಿ ಖರೀದಿಸಲು ಭಾರತೀಯ ಆಹಾರ ನಿಗಮ ಒಪ್ಪಿಕೊಂಡಿದೆ.

ಇದರ ಜತೆ ಇದೇ ಮೊದಲ ಬಾರಿಗೆ ನೆಲಗಡಲೆ ಮತ್ತು ಸೂರ್ಯಕಾಂತಿ ಜತೆ ತೆಂಗಿನಕಾಯಿ ಮತ್ತು ಕೊಬ್ಬರಿಯನ್ನು ಕೂಡ ‘ನಾಫೆಡ್’ ರಾಜ್ಯದಲ್ಲಿ ಖರೀದಿಸಲಿದೆ. ಈ ಬಗ್ಗೆ ರಾಜ್ಯ ನಿಯೋಗಕ್ಕೆ ಕೇಂದ್ರ ಸಚಿವರು ಆಶ್ವಾಸನೆ ನೀಡಿದರು.

75 ವರ್ಷಗಳ ಹಿಂದೆ

ಗುರುವಾರ, 30-11-1950

• **ಸಂಚಾರ ವ್ಯವಸ್ಥೆ ಕಾರ್ಪೋರೇಷನ್ ಮಸೂದೆಗೆ ಪಾರ್ಲಿಮೆಂಟ್ ಒಪ್ಪಿಗೆ**

ದೆಹಲಿ, ನ.29 – ಭಾರತ ಪಾರ್ಲಿಮೆಂಟ್‌ನಲ್ಲಿಂದು ಸಂಚಾರ ವ್ಯವಸ್ಥೆ ಕಾರ್ಪೋರೇಷನ್ ಮಸೂದೆಗೆ ಅಂಗೀಕಾರ ಮುದ್ರೆಯನ್ನು ಒತ್ತಲಾಯಿತು. ಅನಂತರ ದೆಹಲಿ ವಸತಿ ಮಸೂದೆ (ವಸತಿಗಳನ್ನು ವಶಪಡಿಸಿಕೊಳ್ಳುವ ಮತ್ತು ಉಚ್ಚಾಟನಾ ಕಾನೂನು)ಯನ್ನು ಸಭೆಯಲ್ಲಿ ಪರಿಶೀಲನೆಗೆ ತೆಗೆದುಕೊಳ್ಳಲಾಯಿತು.

ಈ ಮಸೂದೆಯನ್ನು ಸೆಲೆಕ್ಟ್ ಸಮಿತಿಯೊಂದರ ಪರಿಶೀಲನೆಗೆ ಬಿಡುವುದಾಗಿ ಕೇಂದ್ರ ಸರ್ಕಾರ ತಿಳಿಸಿದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

30 ನವೆಂಬರ್ 2025 ಭಾನುವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಶುಕ್ಲ ದಶಮಿ ಗಂ. 21-30 ನಕ್ಷತ್ರ: ಉತ್ತರಾಭಾದ್ರ ಗಂ. 25-11 ಯೋಗ: ವಜ್ರ ಗಂ. 7-12 ನಂತರ ಸಿದ್ಧಿ (ಆಸ್ರಿಕ್) ಗಂ 28-22 ಕರಣ: ತೈತಿಲ ಗಂ. 10-28 ವೃಶ್ಚಿಕ ಮಾಸದ 15 ನೇ ದಿನ. ಮಳೆ ನಕ್ಷತ್ರ : ಅನುರಾಧ 4 ನೇ ಪಾದ. ರಾಹುಕಾಲ : ಸಾಯಂಕಾಲ 04-30 - 06-00, ಸೂರ್ಯೋದಯ : 06-41 ಸೂರ್ಯಾಸ್ತ : 05-58, ಮುಸ್ಲಿಂ ದಿನಾಂಕ : 8 ಜುಮಾದುಸ್ಸಾನಿ ಅದೃಷ್ಟ ಸಂಖ್ಯೆ : 9, 6

ಮೇಷ: ವಿದೇಶಿ ಸ್ನೇಹಿತನನ್ನು ಮೊದಲ ಬಾರಿ ನೇರವಾಗಿ ಭೇಟಿಯಾಗುವ ಅವಕಾಶ ದೊರಕಲಿದೆ. ಸುಖ-ದುಃಖದ ಸಮ ಫಲವನ್ನು ಅನುಭವಿಸುವಂತಾಗುವುದು. ಲೇವಾದೇವಿ ವ್ಯವಹಾರಗಳು ಮುಂದುವರಿಯುವುದು.

ವೃಷಭ: ನಿಮ್ಮ ದೇಹಕ್ಕೆ ಸರಿ ಹೊಂದುವಂಥ ಆಹಾರವನ್ನು ಸ್ವೀಕರಿಸದ ಕಾರಣವಾಗಿ ಅನಾರೋಗ್ಯ ಉಂಟಾಗುವುದು. ನಿಮ್ಮ ಅಭಿಪ್ರಾಯಗಳಿಗೆ ಕುಟುಂಬದವರು ಸಮ್ಮತಿಸಲಿದ್ದಾರೆ. ಗುರು ಹಿರಿಯರಿಗೆ ಅಗೌರವ ತೋರದಿರಿ.

ಮಿಥುನ: ಮೃತ ವ್ಯಕ್ತಿಗಳ ಆಸ್ತಿಯನ್ನು ಸೇರಬೇಕಾದವರಿಗೆಲ್ಲರಿಗೂ ಸೇರಿಸುವಂತಹ ಕೆಲಸವನ್ನು ಮಾಡಬೇಕಾದೀತು. ಬದಲಾದ ದಿನಚರಿಗೆ ಹೊಂದಿಕೊಳ್ಳುವುದು ಕಷ್ಟದ ಕೆಲಸವಾಗಿ ಪರಿಣಮಿಸಬಹುದು.

ಕರ್ಕಾಟಕ: ಕುಟುಂಬದ ಹಣಕಾಸಿನ ವಿಚಾರವಾಗಿ ಒಂದು ಮಾತನಾಡಿದರೆ ಕಡಿಮೆ ಎರಡು ಮಾತನಾಡಿದರೆ ಹೆಚ್ಚು ಎಂಬ ಪರಿಸ್ಥಿತಿ ಉಂಟಾಗುವುದು. ಭೇದ-ಭಾವ, ತಾರತಮ್ಯದ ಮಾತುಗಳು ಆಡುವುದನ್ನು ಕಡಿಮೆ ಮಾಡಿ.

ಸಿಂಹ: ಓಡುತ್ತಿರುವಂಥ ಕಾಲದ ಜೊತೆಯಲ್ಲಿ ನೀವು ಸಹ ಚಲಿಸುವ ಗುಣವನ್ನು ಹೊಂದಿದರಷ್ಟೇ ನಿಮ್ಮ ಉದ್ಯೋಗದಲ್ಲಿ ಪ್ರಶಂಸೆಗೊಳಗಾಗುವಿರಿ. ಸ್ನೇಹಿತರ ಒತ್ತಡದಿಂದಾಗಿ ಮಗಳಿಗೆ ವಿವಾಹ ಸಂಬಂಧ ಕೂಡಿ ಬರಲಿದೆ.

ಕನ್ಯಾ: ಭಾಗವತ ಅಥವಾ ಮಹಾಭಾರತದಂತಹ ಧಾರ್ಮಿಕ ಉಪನ್ಯಾಸಗಳಲ್ಲಿ ಭಾಗವಹಿಸುವ ಅವಕಾಶ ದೊರೆಯುವ ಸಾಧ್ಯತೆ ಇದೆ. ಮನೆಯಲ್ಲಿರುವ ಸಣ್ಣ ಮಕ್ಕಳ ಕೆಲವು ಮಾತುಗಳು ನಿಮ್ಮ ಶಿರೋವೇದನೆಗೆ ಕಾರಣವಾಗುವುದು.

ತುಲಾ: ಕುಟುಂಬದಲ್ಲಿ ನಡೆಯುತ್ತಿದ್ದ ದೇವತಾರಾಧನೆಯು ನಿಂತಿರುವ ಕಾರಣದಿಂದಾಗಿ ಹಲವಾರು ತೊಂದರೆಗಳು ಉಂಟಾಗುತ್ತಿದ್ದು, ಅದನ್ನು ಪರಿಹರಿಸುವ ಮಾರ್ಗ ಕಂಡುಕೊಳ್ಳಿ. ಅದರಿಂದ ಒಳ್ಳೆಯದಾಗುವುದು.

ವೃಶ್ಚಿಕ: ಸಹೋದರ ಅಥವಾ ಸಹೋದರಿಯರ ಆರೋಗ್ಯ ವಿಚಾರವಾಗಿ ಹಣ ಹಾಗೂ ಸಮಯವನ್ನು ವಿನಿಯೋಗಿಸುವಿರಿ. ಕ್ರೀಡಾ ಕ್ಷೇತ್ರದಲ್ಲಿ ಈಗಾಗಲೇ ರಾಷ್ಟ್ರ ಮಟ್ಟದಲ್ಲಿ ಸಾಧನೆ ಮಾಡಿರುವವರು ವಿದೇಶದಲ್ಲಿ ಹೆಸರು ಗಳಿಸುವಿರಿ.

ಧನು: ಬಹುದಿನಗಳಿಂದ ನಿರೀಕ್ಷಿಸಿದ ಪುತ್ರನ ಉದ್ಯೋಗ ವಿಚಾರವು ಶೀಘ್ರದಲ್ಲಿ ಫಲಿಸಿ, ಗುಣಮಟ್ಟದ ಕೆಲಸ ಪ್ರಾಪ್ತಿಯಾಗುವುದು. ಇನ್ನೊಬ್ಬರಿಗೆ ಹೇಳಿಕೊಡುವ ಮುಂಚೆ ನಿಮ್ಮ ಜ್ಞಾನ ಎಷ್ಟಿದೆ ಎಂಬುದನ್ನು ತಿಳಿದುಕೊಳ್ಳಿರಿ.

ಮಕರ: ಅತ್ಯಂತ ಸೂಕ್ಷ್ಮ ಮನಸ್ಕರಾಗಿರುವ ನಿಮಗೆ ಇತರರು ನಿಮ್ಮ ಬಗ್ಗೆ ಹೇಳಬಹುದಾದ ಮಾತುಗಳನ್ನು ಸ್ವೀಕರಿಸುವಂಥ ಸಾಮರ್ಥ್ಯ ಇಲ್ಲವಾಗುವುದು. ಸ್ಪರ್ಧಾತ್ಮಕ ಪರೀಕ್ಷೆಯನ್ನು ಎದುರಿಸಲು ಅಧ್ಯಯನ ಅಗತ್ಯ.

ಕುಂಭ: ರಾಜಕೀಯದವರಿಂದ ಸಾಮಾಜಿಕ ಕಾರ್ಯ ಸಾಧಿಸಿಕೊಳ್ಳುವಲ್ಲಿ ನಿಮ್ಮ ಪಾತ್ರ ಮುಖ್ಯವಾಗಿರಲಿದೆ. ವಿದೇಶಿ ಸಂಪರ್ಕಗಳಿಂದ ಉತ್ತಮ ಪ್ರಯೋಜನ ಆಗಲಿದೆ. ಉದ್ಯಮಿಗಳಿಗೆ ಅನುಕೂಲಕರ ಸನ್ನಿವೇಶ ನಿರ್ಮಾಣವಾಗಲಿದೆ.

ಮೀನ: ಮುಖ್ಯವಾದ ವ್ಯಕ್ತಿಯ ಬಳಿ ಮಾತನಾಡುವಾಗ ಪೂರ್ವ ತಯಾರಿ ಅತ್ಯಂತ ಮುಖ್ಯವಾಗುವುದು. ನಿಮ್ಮ ಕುಟುಂಬದವರ ಜೊತೆ ನಡೆಯುತ್ತಿದ್ದ ಮುಸುಕಿನ ಗುದ್ದಾಟವನ್ನು ಮಾತನಾಡಿ ಬಗೆಹರಿಸಿಕೊಳ್ಳುವಿರಿ.

ಪದಬಂಧ 6639

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1. ಜರೂರಾಗಿ ಮಾಡಿರುವ ಪಂಚನಾಮೆ (4)
3. ಅಭ್ಯಂಜನ ಮಾಡುವಾಗಿನ ಅಡ್ಡಿ ಈ ತರ ಬಂದಿದೆ! (4)
5. ಸ್ಲೇಟಿನ ಮೇಲೆ ಬರೆಯುವ ಸಾಧನ (3)
7. ನಿಯಮದಂತೆ ಕನ್ನಡಿಗ ಮಾಡಿರುವ ಎಕ್ಸ್ಚೇಂಜ್! (4)
9. ಆಕಾಶದಲ್ಲಿ ಸಂಚಾರ ಮಾಡುವವನು (5)
11. ಯಾವುದೇ ಆಯುಧವಿಲ್ಲದಿರುವಿಕೆ (4)
13. ನಲಿಯುತ್ತಿರುವ ರಾಷ್ಟ್ರ ಪಕ್ಷಿ (3)
15. ಈತ ಲೆಕ್ಕ ಬರೆಯುವವನು (4)
16. ಮದುವೆಯ ಗಂಡು (4)

ಮೇಲಿಂದ ಕೆಳಕ್ಕೆ

2. ಸಮುದ್ರ ಜೀವಿಯಿಂದ ಉತ್ಪನ್ನವಾಗುವ ಈ ಕಠಿಣ ಪದಾರ್ಥ ನವರತ್ನಗಳಲ್ಲಿ ಒಂದೆನಿಸಿದೆ (3)
3. ಅವನಿರುವ ಭೂಮಿ (3)
4. ತನ್ಮಯನಾಗಿರುವ ಮಗ (3)
5. ಆರಂಕುಶವಿಟ್ಟೊಡಂ ನೆನೆವುದೆನ್ನ ಮನಂ ಎಂದು ವರ್ಣಿಸಿದ ಪಂಪನ ಹುಟ್ಟೂರು (4)
6. ಹೂವಿನಲ್ಲಿರುವ ಹುಡಿ (3)
7. ಕೆಂಗಲ್ ಹನುಮಂತಯ್ಯನವರು ನಿರ್ಮಿಸಿದ ಭವ್ಯಸೌಧ (5)
8. ತೊಂದರೆಯ ನಿವಾರಣೆಗಾಗಿ ಮಾಡುವ ಮನವಿ (4)
10. ಜ್ಯೋತಿಶ್ಚಕ್ರದ ಹನ್ನೆರಡು ರಾಶಿಗಳಲ್ಲಿ ಒಂದು (3)
11. ಪರ್ವತದ ಮೇಲಿನಿಂದ ಹರಿಯುವ ಝರಿ (3)
12. ತರುಣ ಇಲ್ಲಿದ್ದಾನೆ (3)
14. ಬಿಡುವಿಗೊಂದು ಪರ್ಯಾಯ ಪದ (3)



6638ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಪರಿಕರ 3.ಮೋಸಗಾರ 5.ಸಮಕ್ಷ 7.ರಾಣಿ 8.ತಡ 10.ನಾದಿನಿ 11.ಸಿಂಬಳ 13.ಷರಾ 15.ಪಾತಿ 16.ಗಡಸು 18.ರಣವೈದ್ಯ 19.ಮಧುಕರಿ

ಮೇಲಿಂದ ಕೆಳಕ್ಕೆ: 1.ಪರಾಜಿತ 2.ರಸ 3.ಮೋಕ್ಷ 4.ರಮಣಿ 6.ಮಸೀದಿ 7.ರಾಜಾರೋಷ 9.ಡಕಾಯಿತಿ 12.ಬಗ್ಗಡ 14.ರಾಯಭಾರಿ 15.ಪಾಮರ 16.ಗದ್ಯ 17.ಸುಮ

ಸುಡೊಕು 6623

ಹೀಗೆ ಆಡಿ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	6		8	7			9	3
								4
	8		5	2		1	6	
1		5					8	9
4			2	9	5			1
	9						2	
		9	3		2		4	
7			9		8	5		2
	5			4			3	

6622 ಸುಡೊಕು

4	6	5	3	9	8	7	1	2
2	7	1	4	6	5	3	8	9
9	8	3	7	1	2	5	4	6
7	1	9	5	8	3	2	6	4
5	2	6	9	4	7	1	3	8
3	4	8	6	2	1	9	7	5
6	3	4	1	5	9	8	2	7
8	5	7	2	3	4	6	9	1
1	9	2	8	7	6	4	5	3

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಗದಗ: ರಸ್ತೆಗೆ ಮೆಕ್ಕೆಜೋಳ ಸುರಿದು ರೈತರ ಆಕ್ರೋಶ

ಬೆಂಬಲ ಬೆಲೆಯಡಿ ಮೆಕ್ಕೆಜೋಳ ಖರೀದಿ ಕೇಂದ್ರ ತೆರೆಯುವಂತೆ ಆಗ್ರಹಿಸಿ ಲಕ್ಷ್ಮೇಶ್ವರದಲ್ಲಿ ರೈತರು ಮೆಕ್ಕೆಜೋಳವನ್ನು ರಸ್ತೆಗೆ ಸುರಿದು ಶನಿವಾರ ಪ್ರತಿಭಟನೆ ನಡೆಸಿದರು.

ಪ್ರಜಾವಾಣಿ ವಾರ್ತೆ

ಲಕ್ಷ್ಮೇಶ್ವರ (ಗದಗ ಜಿಲ್ಲೆ): ಬೆಂಬಲ ಬೆಲೆಯಡಿ ಮೆಕ್ಕೆಜೋಳ ಖರೀದಿ ಕೇಂದ್ರ ತೆರೆಯುವಂತೆ ಆಗ್ರಹಿಸಿ ಸಮಗ್ರ ರೈತಪರ ಹೋರಾಟ ಸಂಘಟನೆ ವತಿಯಿಂದ ಲಕ್ಷ್ಮೇಶ್ವರ, ಮುಂದರಗಿ ಮತ್ತು ಶಿರಹಟ್ಟಿಯಲ್ಲಿ ರೈತರು ನಡೆಸುತ್ತಿರುವ ಅನಿರ್ದಿಷ್ಟಾವಧಿ ಹೋರಾಟ ಶನಿವಾರ 15ನೇ ದಿನಕ್ಕೆ ಕಾಲಿರಿಸಿತು. ರೈತರು ಮೆಕ್ಕೆಜೋಳವನ್ನು ರಸ್ತೆಗೆ ಸುರಿದು, ಸರ್ಕಾರದ ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

'ರೈತರಿಗೆ ಸರ್ಕಾರ ಸ್ಪಂದಿಸುತ್ತಿಲ್ಲ' ಎಂದು ಖಂಡಿಸಿ ಕುಮಾರ ಮಹಾರಾಜರು ಶನಿವಾರದಿಂದ ಆಮರಣಾಂತ ಉಪವಾಸ ಕೈಗೊಳ್ಳಲು ನಿರ್ಧರಿಸಿದ್ದರು. ಆದರೆ, ಜಿಲ್ಲಾಧಿಕಾರಿ ಮನ ಒಲಿಸಿದ್ದರಿಂದ, ಅವರು ಉಪವಾಸ ಕೈಬಿಟ್ಟರು. 'ಸೋಮವಾರ ಒಳಗೆ ಖರೀದಿ ಕೇಂದ್ರ ಆರಂಭವಾಗದಿದ್ದರೆ ಆಮರಣಾಂತ ಉಪವಾಸ ಸತ್ಯಾಗ್ರಹ ಆರಂಭಿಸುವೆ' ಎಂದು ಕುಮಾರ ಮಹಾರಾಜರು ಎಚ್ಚರಿಕೆ ನೀಡಿದರು.

'ಮುಖ್ಯಮಂತ್ರಿ ಸಿದ್ದರಾಮಯ್ಯ ತಕ್ಷಣ ರೈತರ ನೆರವಿಗೆ ಧಾವಿಸಿದ್ದರೆ ಹೋರಾಟ ತೀವ್ರಗೊಳ್ಳುತ್ತಿರಲಿಲ್ಲ' ಎಂದು ಕಿಸಾನ್ ಜಾಗೃತಿ ಸಂಘದ ಸದಸ್ಯ ವಿಶ್ವನಾಥ ತಾಂಬ್ರಗುಂಡಿ ತಿಳಿಸಿದರು.

ಅರಣ್ಯ ಸಿಬ್ಬಂದಿ ಗುಂಡೇಟು: ಚಿರತೆ ಸಾವು

ಪ್ರಜಾವಾಣಿ ವಾರ್ತೆ

ತರೀಕೆರೆ (ಚಿಕ್ಕಮಗಳೂರು): ತಾಲ್ಲೂಕಿನ ಬೈರಾಪುರ ಬಳಿ ಚಿರತೆ ಸೆರೆ ಕಾರ್ಯಾಚರಣೆ ವೇಳೆ ಅರಣ್ಯ ಇಲಾಖೆ ಸಿಬ್ಬಂದಿ ಹಾರಿಸಿದ ಗುಂಡಿಗೆ ಚಿರತೆ ಮೃತಪಟ್ಟಿದೆ.

ನ.20ರಂದು ಶಿವಪುರ ಗ್ರಾಮದ ಕಲ್ಲು ಕ್ವಾರಿ ಬಳಿಯ ಶೆಡ್‌ನಲ್ಲಿ ವಾಸವಿದ್ದ ಕಾರ್ಮಿಕ ದಂಪತಿಯ 5 ವರ್ಷದ ಮಗುವನ್ನು ಪೋಷಕರ ಎದುರೇ ಚಿರತೆಯೊಂದು ಹೊತ್ತೊಯ್ದಿತ್ತು. ಬಳಿಕ ಬಾಲಕಿಯ ಮೃತದೇಹ ದೊರೆತಿತ್ತು. ನ.28ರಂದು ಬೈರಾಪುರ 10 ವರ್ಷದ ಬಾಲಕನ ಮೇಲೆ ದಾಳಿ ನಡೆಸಿತ್ತು.



ಮೃತಪಟ್ಟಿರುವ ಚಿರತೆ

ಈ ಕಾರಣದಿಂದ ಸಕ್ರೆಬೈಲಿನಿಂದ ಮೂರು ಸಾಕಾನೆಗಳು, ಮಂಗಳೂರು, ಬಂಡೀಪುರ, ಬನ್ನೇರುಘಟ್ಟ, ತಾವರೆಕೊಪ್ಪ ಮೃಗಾಲಯದಿಂದ ಪಶುವೈದ್ಯರನ್ನು ಕರೆಸಿ ಅರಣ್ಯ ಇಲಾಖೆ ಶನಿವಾರ ಚಿರತೆ ಸೆರೆ ಕಾರ್ಯಾಚರಣೆ ಆರಂಭಿಸಿತ್ತು.

'ಬೈರಾಪುರ ಬಳಿ ಕಾಣಿಸಿಕೊಂಡ ಚಿರತೆಯನ್ನು ಸಿಬ್ಬಂದಿ ಹಿಂಬಾಲಿಸಿದ್ದರು. ಲಂಟಾನ ಪೊದೆಯೊಳಗಿಂದ ಚಿರತೆ ಸಿಬ್ಬಂದಿಯ ಮೇಲೆ ಎರಗಿದಾಗ ಗುಂಡು ಹಾರಿಸಲಾಯಿತು. ಚಿರತೆ ಕೊಂಚ ದೂರ ಸಾಗಿ ಮೃತಪಟ್ಟಿದೆ' ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

'ಜನರ ಮೇಲೆ ಅದರಲ್ಲೂ ಮಕ್ಕಳ ಮೇಲೆ ದಾಳಿ ಮಾಡುವ ಪ್ರವೃತ್ತಿ ಹೊಂದಿರುವ ಚಿರತೆ ಸೆರೆಗೆ ನಂದಿ, ಕೆಂಚಾಪುರ, ಕೆಂಚಾಪುರ ಗೇಟ್, ಭೈರಾಪುರ ಸುತ್ತಮುತ್ತಲ ಗ್ರಾಮಗಳಲ್ಲಿ ಹಲವು ಬೋನುಗಳನ್ನು ಇರಿಸಲಾಗಿತ್ತು. ಚಿರತೆ ಬೋನಿಗೆ ಬಿದ್ದಿರದ ಕಾರಣ ಕಾರ್ಯಾಚರಣೆ ಆರಂಭಿಸಲಾಗಿತ್ತು. ಸಿಬ್ಬಂದಿಯ ಮೇಲೆ ದಾಳಿ ಮಾಡಿದಾಗ ಪ್ರಾಣ ರಕ್ಷಣೆಗಾಗಿ ಅವರು ಗುಂಡು ಹಾರಿಸಿದ್ದಾರೆ' ಎಂದು ವಿವರಿಸಿದ್ದಾರೆ.

'ಮಗು ಕೊಂದಿದ್ದು, ಪದೇ ಪದೇ ದಾಳಿ ನಡೆಸುತ್ತಿದ್ದುದು ಇದೇ ಚಿರತೆ ಎಂಬುದನ್ನು ಅರಣ್ಯ ಇಲಾಖೆ ಹೇಗೆ ಗುರುತಿಸಿದೆ? ಅದಕ್ಕೆ ಆಧಾರವಿರುವ ಮಾರ್ಗಗಳನ್ನು ಏನು ಎಂಬುದು ಗೊತ್ತಿಲ್ಲ. ಅರಣ್ಯ ಇಲಾಖೆ ಸಿಬ್ಬಂದಿಯಲ್ಲಿ ಆ ಪರಿಣತಿಯೂ ಇಲ್ಲ. ಆದ್ದರಿಂದ ಇಂಥ ಹಲವು ಪ್ರಶ್ನೆಗಳು ಉದ್ಭವಿಸುತ್ತವೆ. ಮರಣೋತ್ತರ ಪರೀಕ್ಷೆಯ ವರದಿ ಏನು ಹೇಳುತ್ತದೆ ಎಂಬುದನ್ನು ಅರಣ್ಯ ಇಲಾಖೆ ಅಧಿಕಾರಿಗಳು ಸ್ಪಷ್ಟಪಡಿಸಬೇಕು' ಎಂದು ವನ್ಯಜೀವಿ ತಜ್ಞರು ಒತ್ತಾಯಿಸಿದ್ದಾರೆ.

ನಕಲಿ ಮದ್ಯ ಮಾರಾಟ: ಕಠಿಣ ಕ್ರಮಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ನಕಲಿ ಮದ್ಯದ ಮಾರಾಟ ತಡೆಯಲು ಕಠಿಣ ಕ್ರಮ ಕೈಗೊಳ್ಳಬೇಕು' ಎಂದು ಕರ್ನಾಟಕ ರಾಜ್ಯ ಮದ್ಯಪಾನ ಸಂಯಮ ಮಂಡಳಿಯ ಅಧ್ಯಕ್ಷ ಶರಣಪ್ಪ ಸಲಾದಪುರ ಅಬಕಾರಿ ಇಲಾಖೆ ಅಧಿಕಾರಿಗಳಿಗೆ ಸೂಚಿಸಿದರು.

ಮಂಡಳಿಯ ಸರ್ವ ಸದಸ್ಯರ ಸಭೆಯಲ್ಲಿ ಮಾತನಾಡಿದ ಅವರು, ಹಲವು ಜಿಲ್ಲೆಗಳ ತಾಲ್ಲೂಕುಗಳಲ್ಲಿ ನಕಲಿ ಮದ್ಯದ ಮಾರಾಟ ಹೆಚ್ಚುತ್ತಿರುವುದನ್ನು ಗಂಭೀರವಾಗಿ ಪರಿಗಣಿಸಲಾಗಿದೆ. ಅಬಕಾರಿ ಇಲಾಖೆ ಅಧಿಕಾರಿಗಳು ಅಬಕಾರಿ ಕಾಯ್ದೆ ಮತ್ತು ಕಾನೂನುಗಳನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಬೇಕು ಎಂದು ಹೇಳಿದರು.

'ಯುವಜನರು ದೇಶವನ್ನು ಬಲಿಷ್ಠಗೊಳಿಸುವ ನಿಟ್ಟಿನಲ್ಲಿ ಹೋರಾಡಬೇಕು. ಅದರ ಬದಲು, ನಕಲಿ ಮದ್ಯ, ಕಳ್ಳಭಟ್ಟಿಯ ವ್ಯಸನಕ್ಕೆ ತುತ್ತಾಗುತ್ತಿದ್ದಾರೆ. ಕಡಿಮೆ ಬೆಲೆಗೆ ಸಿಗುತ್ತಿರುವ ನಕಲಿ ಮದ್ಯ ಹಾಗೂ ಕಳ್ಳಭಟ್ಟಿ ಸಮಾಜಕ್ಕೆ ದೊಡ್ಡ ಮಾರಕ. ಈ ಸಮಸ್ಯೆಯನ್ನು ತುರ್ತಾಗಿ ನಿಯಂತ್ರಿಸಲು, ಅಬಕಾರಿ ಇಲಾಖೆ ನಿರ್ದಿಷ್ಟವಾದ ಕ್ರಮವನ್ನು ಜರುಗಿಸಬೇಕು' ಎಂದು ತಿಳಿಸಿದರು.

ಯಾದಗಿರಿ ಜಿಲ್ಲೆಯ ವಡಿಗೇರಿ, ಗುರುಮಠಕಲ್, ಶಹಾಪುರ ಹಾಗೂ ರಾಯಚೂರು ಜಿಲ್ಲೆಯ ದೇವದುರ್ಗ ತಾಲ್ಲೂಕಿನ ಗೊಬ್ಬೂರಿನಲ್ಲಿ ನಕಲಿ ಮದ್ಯ ಮಾರಾಟವಾಗುತ್ತಿದೆ ಎಂಬ ಮಾಹಿತಿಯನ್ನು ಶರಣಪ್ಪ ಅವರು ಸಭೆಯ ಗಮನಕ್ಕೆ ತಂದರು. ಸಂಶಯಾಸ್ಪದ ಮದ್ಯದ ಅನೇಕ ಮಾದರಿಗಳನ್ನು ಇಲಾಖೆಯ ಉಪ ಆಯುಕ್ತ ಮಹೇಶ್ ಕುಮಾರ್ ಅವರಿಗೆ ಹಸ್ತಾಂತರಿಸಿದರು.

'ಮಾದರಿಗಳನ್ನು ಪ್ರಯೋಗಾಲಯಕ್ಕೆ ಕಳುಹಿಸಿ, ಏಳು ದಿನಗಳೊಳಗೆ ಸಮಗ್ರ ವರದಿ ಸಲ್ಲಿಸಬೇಕು. ವರದಿ ಬಂದ ಕೂಡಲೇ, ಅಗತ್ಯವಿರುವ ಕಾನೂನು ಕ್ರಮವನ್ನು ಕೈಗೊಳ್ಳಬೇಕು' ಎಂದು ಶರಣಪ್ಪ ಸೂಚಿಸಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಜಂಟಿ ನಿರ್ದೇಶಕ ಮತ್ತಿತರರು ಉಪಸ್ಥಿತರಿದ್ದರು.

ನಿವೃತ್ತ ಡಿವೈಎಸ್‌ಪಿ ಆತ್ಮಹತ್ಯೆ

ದಾವಣಗೆರೆ: ನಿವೃತ್ತ ಡಿವೈಎಸ್‌ಪಿ ಎಚ್‌.ವೈ. ತುರಾಯಿ (70) ಅವರು ಕೆಟಿಜೆ ನಗರದ ಮನೆಯಲ್ಲಿ ಶನಿವಾರ ಸಂಜೆ ಬಂದೂಕಿನಿಂದ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಎಚ್‌.ವೈ. ತುರಾಯಿ

ಗುಂಡು ಹಾರಿದ ಸದ್ದು ಕೇಳಿ ಅಕ್ಕಪಕ್ಕದ ಮನೆಯವರು ಪರಿಶೀಲಿಸಿದಾಗ ಅವರು ಮೃತಪಟ್ಟಿದ್ದು ಗೊತ್ತಾಗಿದೆ. ಈ ವೇಳೆ ಮನೆಯಲ್ಲಿ ಒಬ್ಬರೇ ಇದ್ದರು ಎನ್ನಲಾಗಿದೆ.

2014ರಲ್ಲಿ ಸೇವೆಯಿಂದ ನಿವೃತ್ತಿ ಹೊಂದಿದ್ದ ಅವರಿಗೆ ಆರೋಗ್ಯ ಸಮಸ್ಯೆ ಕಾಡಿತ್ತು. ಕೌಟುಂಬಿಕ ಸಮಸ್ಯೆಯಿಂದಲೂ ಮನನೊಂದಿದ್ದರು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೆಟಿಜೆ ನಗರ ಠಾಣೆಯ ಪೊಲೀಸರು ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದಾರೆ.

ಬೆಂಗಳೂರು ಉತ್ತರ ನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ಸರ್ವಜ್ಞನಗರ ವಿಭಾಗ, 9ನೇ ಸಿ ಮುಖ್ಯರಸ್ತೆ, ಹೆಚ್‌ಆರ್‌ಬಿಆರ್ ಲೇಔಟ್, 1ನೇ ಬ್ಲಾಕ್, ಕಲ್ಯಾಣನಗರ, ಬೆಂಗಳೂರು-560 043

ಸಂ. ಕಾಅ/ಸನವಿ/ಕೆಪಿಪಿಪಿ/ಟೆಂಡರ್/12/2025-26 ದಿನಾಂಕ : 29.11.2025

ಅಲ್ಪಾವಧಿ ಟೆಂಡರ್‌ಗಳಿಗಾಗಿ ಆಹ್ವಾನ (ಎರಡು ಲಕೋಟೆ ಪದ್ಧತಿ)

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು (ಸರ್ವಜ್ಞನಗರ ವಿಭಾಗ), ಬೆಂ.ಉ.ನ.ಪಾ. ವಲಯ-1 ಇವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನೋಂದಾಯಿಸಲಾದ ಅರ್ಹ ಗುತ್ತಿಗೆದಾರರಿಂದ ಅಥವಾ ಸಿಪಿಡಬ್ಲ್ಯುಡಿ / ಕೆಪಿಡಬ್ಲ್ಯುಡಿ / ರೈಲ್ವೆ / ಎಂಇಎಸ್/ ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ಸಮಾನ ನೋಂದಣಿ ಹೊಂದಿರುವ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾದ ಕಾಮಗಾರಿಗಳ ನಿರ್ಮಾಣಕ್ಕಾಗಿ ಟೆಂಡರ್‌ಗಳನ್ನು ಆಹ್ವಾನಿಸುತ್ತಾರೆ.

ಕಾಮಗಾರಿಯ ವಿವರ : ಪ್ಯಾಕೇಜ್-1 : (1) ಸರ್ವಜ್ಞನಗರ ವಿಭಾಗದ ಪಾಟರಿ ರಸ್ತೆಯಿಂದ 6ನೇ ಅಡ್ಡರಸ್ತೆ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ವೀಲರ್ ರಸ್ತೆ ಎಕ್ಸ್‌ಟೆನ್ಷನ್‌ನಲ್ಲಿ ಚರಂಡಿ ಮತ್ತು ಪಾದಚಾರಿ ಮಾರ್ಗದ ಸುಧಾರಣೆಗಳು (2) ಸರ್ವಜ್ಞನಗರ ವಿಭಾಗದ ಹಚಿನ್ಸ್ ರಸ್ತೆ, 6ನೇ ಅಡ್ಡರಸ್ತೆ ಜೈ ಭಾರತ ನಗರ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ಚರಂಡಿ ಮತ್ತು ಪಾದಚಾರಿ ಮಾರ್ಗದ ಸುಧಾರಣೆಗಳು (3) ಸರ್ವಜ್ಞನಗರ ವಿಭಾಗದ ಲಿಂಗರಾಜಪುರ ಮೇಲ್ಸೇತುವೆಯ ಕೆಳಗೆ ಮತ್ತು ರಾಜ್‌ಕುಮಾರ್ ಅಂಡರ್ ಪಾಸ್‌ನಲ್ಲಿ ರಸ್ತೆ ಮತ್ತು ಚರಂಡಿಗಳ ಸುಧಾರಣೆಗಳು (4) ಸರ್ವಜ್ಞನಗರ ವಿಭಾಗದ ಐಟಿಸಿ ಸೇತುವೆಯಿಂದ ಜೀವನಹಳ್ಳಿ ಮುಖ್ಯರಸ್ತೆಯ ಎರಡೂ ಬದಿಗಳು ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ಬಾಣಸವಾಡಿ ಮುಖ್ಯರಸ್ತೆಯಲ್ಲಿ ಚರಂಡಿ ಮತ್ತು ಪಾದಚಾರಿ ಮಾರ್ಗದ ಸುಧಾರಣೆಗಳು.

ಟೆಂಡರ್‌ಗಿಟ್ಟ ಮೊತ್ತ : **ರೂ.840.00 ಲಕ್ಷಗಳು**. ಇಎಂಡಿ : **ರೂ. 12,60,000/- (ಇ-ಪಾವತಿ ಮೂಲಕ 1.00 ಲಕ್ಷ ಬಾಕಿ ರೂ. 11,60,000/- ಬಿಜಿ/ಎಫ್‌ಡಿಆರ್ ಮೂಲಕ ತಾಂತ್ರಿಕ ಬಿಡ್ ತೆರೆಯುವ ಮೊದಲು ಸಲ್ಲಿಸಬೇಕು.**

ಕಾಮಗಾರಿಯ ವಿವರ : ಪ್ಯಾಕೇಜ್-2 : (1) ಸರ್ವಜ್ಞನಗರ ವಿಭಾಗದ 9ನೇ ಮುಖ್ಯ ರಸ್ತೆ, ಪಿಳ್ಳಣ್ಣ ಉದ್ಯಾನ, ಅರೇಬಿಕ್ ಕಾಲೇಜು ರಸ್ತೆಯಿಂದ 12ನೇ ಪಿಳ್ಳಣ್ಣ ಉದ್ಯಾನದವರೆಗೆ ರಸ್ತೆ ಮತ್ತು ಚರಂಡಿಗಳ ಸುಧಾರಣೆ (2) ಸರ್ವಜ್ಞನಗರ ವಿಭಾಗದ ಕಮ್ಮನಹಳ್ಳಿ ಮುಖ್ಯ ರಸ್ತೆ, ಎಂಪೈರ್ ಹೋಟೆಲ್ ನಿಂದ ಕಾರ್ಪೊರೇಷನ್ ಬ್ಯಾಂಕ್ ವರೆಗಿನ ರಸ್ತೆ, ಚರಂಡಿ ಮತ್ತು ಪಾದಚಾರಿ ಮಾರ್ಗದ ಸುಧಾರಣೆ (3) ಸರ್ವಜ್ಞನಗರ ವಿಭಾಗದ ಕಮ್ಮನಹಳ್ಳಿ ಮುಖ್ಯ ರಸ್ತೆಯಿಂದ ಹೆಣ್ಣೂರು ಮುಖ್ಯ ರಸ್ತೆಯವರೆಗಿನ ಆಯಿಲ್ ಮಿಲ್ ರಸ್ತೆಯ ಮರು ಮೇಲ್ಪಾವಣಿ (4) ಸರ್ವಜ್ಞನಗರ ವಿಭಾಗದ 5ನೇ ಮುಖ್ಯ ಹೆಚ್‌ಆರ್‌ಬಿಆರ್ ಲೇಔಟ್ 2ನೇ ಬ್ಲಾಕ್ ನಲ್ಲಿ ರಸ್ತೆಗಳು, ಚರಂಡಿ ಮತ್ತು ಪಾದಚಾರಿ ಮಾರ್ಗದ ಸುಧಾರಣೆ (5) ಸರ್ವಜ್ಞನಗರ ವಿಭಾಗದ 9ನೇ ಮುಖ್ಯ ಹೆಚ್‌ಆರ್‌ಬಿಆರ್ ಲೇಔಟ್ 1ನೇ ಬ್ಲಾಕ್ ಸರ್ವೀಸ್ ರಸ್ತೆಯಿಂದ 2ನೇ ಕ್ರಾಸ್ ಮತ್ತು ಸುತ್ತಮುತ್ತಲಿನ ಪ್ರದೇಶದ ಮರು ಮೇಲ್ಪಾವಣಿ ಸುಧಾರಣೆ. (6) ಸರ್ವಜ್ಞನಗರ ವಿಭಾಗದ ರಾಮ್ ಮೂರ್ತಿ ವೃತ್ತದಿಂದ ಮುಕುಟಮ್ಮ ದೇವಸ್ಥಾನದವರೆಗಿನ ಬಾಣಸವಾಡಿ ಮುಖ್ಯ ರಸ್ತೆಯ ಮರು ಮೇಲ್ಪಾವಣಿ ಸುಧಾರಣೆ.

ಟೆಂಡರ್‌ಗಿಟ್ಟ ಮೊತ್ತ : **ರೂ.800.00 ಲಕ್ಷಗಳು**. ಇಎಂಡಿ : **ರೂ. 12,00,000/- (ಇ-ಪಾವತಿ ಮೂಲಕ 1.00 ಲಕ್ಷ ಬಾಕಿ ರೂ. 11,00,000/- ಬಿಜಿ/ಎಫ್‌ಡಿಆರ್ ಮೂಲಕ ತಾಂತ್ರಿಕ ಬಿಡ್ ತೆರೆಯುವ ಮೊದಲು ಸಲ್ಲಿಸಬೇಕು.**

ಕಾಮಗಾರಿಯ ವಿವರ : ಪ್ಯಾಕೇಜ್-3 : (1) ಸರ್ವಜ್ಞನಗರ ವಿಭಾಗದ ಬಾಟಾ ಶೋ ರೂಂ ನಿಂದ 3ನೇ ಕ್ರಾಸ್ ಚಿಕ್ಕಬಾಣಸವಾಡಿಯವರೆಗಿನ ಚಿಕ್ಕಬಾಣಸವಾಡಿಯ ಮುಖ್ಯರಸ್ತೆಯ ರಸ್ತೆಗಳು ಮತ್ತು ಪಾದಚಾರಿ ಮಾರ್ಗ (ಎರಡೂ ಬದಿ) ಸುಧಾರಣೆಗಳು (2) 4ನೇ ಕ್ರಾಸ್ ಓಎಂಬಿಆರ್ ಲೇಔಟ್‌ನಲ್ಲಿ ಚರಂಡಿಗಳು ಮತ್ತು ಪಾದಚಾರಿ ಮಾರ್ಗದ ಸುಧಾರಣೆಗಳು 7ನೇ ಮುಖ್ಯರಸ್ತೆಯಿಂದ ಚನ್ನಸಂದ್ರ ಮುಖ್ಯರಸ್ತೆ ಮತ್ತು 7ನೇ ಮುಖ್ಯರಸ್ತೆ, ಬಾಬುಸಪಾಳ್ಯ, ಸರ್ವಜ್ಞನಗರ ವಿಭಾಗದ ಹೆಚ್‌ಆರ್‌ಬಿಆರ್ ಲೇಔಟ್ (3) 2ನೇ ಕ್ರಾಸ್ ಹೆಚ್‌ಆರ್‌ಬಿಆರ್ ನಲ್ಲಿ 7ನೇ ಮುಖ್ಯರಸ್ತೆಯಿಂದ 100 ಅಡಿ ರಸ್ತೆಯವರೆಗಿನ 1ನೇ ಬ್ಲಾಕ್‌ನಲ್ಲಿ ಪಾದಚಾರಿ ಮಾರ್ಗ ಮತ್ತು ಚರಂಡಿಗಳ ಸುಧಾರಣೆಗಳು (4) ಗ್ರೇಸ್ ಗಾರ್ಡನ್ 1ನೇ ಕ್ರಾಸ್, ವಾರ್ಡ್ ಸಂಖ್ಯೆ 76, ಹೆಣ್ಣೂರಿನ ರಾಘವೇಂದ್ರ ನಗರ 1ನೇ, 2ನೇ ಮತ್ತು 3ನೇ ಅಡ್ಡರಸ್ತೆಗಳಲ್ಲಿ ರಸ್ತೆಗಳು, ಚರಂಡಿಗಳು ಮತ್ತು ಕಲ್ವರ್ಟ್‌ಗಳ ಸುಧಾರಣೆಗಳು (5) ಹೆಚ್‌ಬಿಆರ್ ಲೇಔಟ್ 4ನೇ ಬ್ಲಾಕ್, 4ನೇ ಮುಖ್ಯರಸ್ತೆ (ವಿಬಿಆರ್ ಕಾಲೇಜು ರಸ್ತೆ) ಮತ್ತು 5ನೇ ಬ್ಲಾಕ್, 24ನೇ ಅಡ್ಡರಸ್ತೆಗಳಲ್ಲಿ ರಸ್ತೆಗಳು, ಚರಂಡಿಗಳು ಮತ್ತು ಕಲ್ವರ್ಟ್‌ಗಳ ಸುಧಾರಣೆಗಳು.

ಟೆಂಡರ್‌ಗಿಟ್ಟ ಮೊತ್ತ : **ರೂ.836.00 ಲಕ್ಷಗಳು**. ಇಎಂಡಿ : **ರೂ. 12,60,000/- (ಇ-ಪಾವತಿ ಮೂಲಕ 1.00 ಲಕ್ಷ ಬಾಕಿ ರೂ. 11,60,000/- ಬಿಜಿ/ಎಫ್‌ಡಿಆರ್ ಮೂಲಕ ತಾಂತ್ರಿಕ ಬಿಡ್ ತೆರೆಯುವ ಮೊದಲು ಸಲ್ಲಿಸಬೇಕು.**

ಕಾಮಗಾರಿಯ ವಿವರ : ಪ್ಯಾಕೇಜ್-4 : ವಾರ್ಡ್ ಸಂಖ್ಯೆ 76, ಹೆಣ್ಣೂರಿನ ಎಚ್‌ಬಿಆರ್ 4ನೇ ಬ್ಲಾಕ್, 1 ನೇ ಮುಖ್ಯ ರಸ್ತೆ (ಅರಣ್ಯ ರಸ್ತೆ), 4ನೇ, 4ನೇ ಎ ಮುಖ್ಯ ರಸ್ತೆ ಮತ್ತು 2ನೇ ಅಡ್ಡ ರಸ್ತೆಗಳಲ್ಲಿ ರಸ್ತೆಗಳು, ಚರಂಡಿಗಳು ಮತ್ತು ಕಲ್ವರ್ಟ್‌ಗಳ ಸುಧಾರಣೆ. (2) ನಾಗವಾರದ ವಾರ್ಡ್ ಸಂಖ್ಯೆ 77 ರಲ್ಲಿರುವ ಕೆಹೆಚ್‌ಬಿ ಮುಖ್ಯರಸ್ತೆಯಲ್ಲಿ ರೈಲ್ವೆ ಗೇಟ್‌ನಿಂದ ಓಆರ್‌ಆರ್‌ವರೆಗಿನ ರಸ್ತೆಗಳು, ಸಂದಿಗಪ್ಪ ಲೇಔಟ್ ಕ್ರಾಸ್ ರಸ್ತೆ ಮತ್ತು ವೀರಣ್ಣ ಪಾಳ್ಯ ಕಾಲೋನಿ 2ನೇ ಮತ್ತು 3ನೇ ಅಡ್ಡರಸ್ತೆಗಳು, ರಸ್ತೆಗಳು, ಚರಂಡಿಗಳು ಮತ್ತು ಕಲ್ವರ್ಟ್‌ಗಳ ಸುಧಾರಣೆಗಳು (3) ಹೆಚ್‌ಬಿಆರ್ ಲೇಔಟ್, ವಾರ್ಡ್ ಸಂಖ್ಯೆ 78 ರಲ್ಲಿರುವ ಹೆಚ್‌ಬಿಆರ್ ಲೇಔಟ್ 2ನೇ ಬ್ಲಾಕ್‌ನಲ್ಲಿರುವ ಇಂದಿರಾ ಕ್ಯಾಂಟೀನ್‌ನಿಂದ ಬಿಎಸ್‌ಎನ್‌ಎಲ್ ಕಚೇರಿ (ಎಸ್‌ಡಬ್ಲ್ಯೂಡಿ ಸರ್ವಿಸ್ ರಸ್ತೆ) ವರೆಗಿನ ರಸ್ತೆಗಳು, ಚರಂಡಿಗಳು ಮತ್ತು ಕಲ್ವರ್ಟ್‌ಗಳ ಸುಧಾರಣೆಗಳು (4) ಹೆಚ್‌ಬಿಆರ್ ಲೇಔಟ್, ವಾರ್ಡ್ ಸಂಖ್ಯೆ 78 ರಲ್ಲಿರುವ ಟೀಚರ್ಸ್ ಕಾಲೋನಿಯಲ್ಲಿನ ಹೆಚ್‌ಬಿಆರ್ 2ನೇ ಬ್ಲಾಕ್, ಜೆಎಸ್‌ಎಸ್ ಪಬ್ಲಿಕ್ ಸ್ಕೂಲ್ ರಸ್ತೆ, 6ನೇ ಮುಖ್ಯರಸ್ತೆ, 2ನೇ ಎ, 3ನೇ ಎ, 4ನೇ ಎ, 5ನೇ ಎ, 5ನೇ ಬಿ, 2ನೇ, 3ನೇ, 4ನೇ ಕೋಟಿ ರಸ್ತೆಗಳಲ್ಲಿ ರಸ್ತೆಗಳು, ಚರಂಡಿಗಳು ಮತ್ತು ಕಲ್ವರ್ಟ್‌ಗಳ ಸುಧಾರಣೆಗಳು.

ಟೆಂಡರ್‌ಗಿಟ್ಟ ಮೊತ್ತ : **ರೂ.800.00 ಲಕ್ಷಗಳು**. ಇಎಂಡಿ : **ರೂ. 12,00,000/- (ಇ-ಪಾವತಿ ಮೂಲಕ 1.00 ಲಕ್ಷ ಬಾಕಿ ರೂ. 11,00,000/- ಬಿಜಿ/ಎಫ್‌ಡಿಆರ್ ಮೂಲಕ ತಾಂತ್ರಿಕ ಬಿಡ್ ತೆರೆಯುವ ಮೊದಲು ಸಲ್ಲಿಸಬೇಕು.**

ಕಾಮಗಾರಿಯ ವಿವರ : ಪ್ಯಾಕೇಜ್-5 : (1) ವಾರ್ಡ್ ಸಂಖ್ಯೆ-76 ಹೆಣ್ಣೂರಿನ 1ನೇ ಮತ್ತು 2ನೇ ಮುಖ್ಯ ರಸ್ತೆಗಳಾದ ಬಸಪ್ಪ ಲೇಔಟ್, ಹೆಣ್ಣೂರು ಗ್ರಾಮದ ಮುಖ್ಯ ರಸ್ತೆ, ಗೌಡರ ಕಾಲೋನಿ 1ನೇ ಎ, 1ನೇ ಬಿ ಅಡ್ಡ ರಸ್ತೆಗಳು, 5ನೇ ಬ್ಲಾಕ್ 36ನೇ ಎ, ಬಿ ಮತ್ತು ಸಿ ಅಡ್ಡ ರಸ್ತೆಗಳ ರಸ್ತೆಗಳು, ಚರಂಡಿಗಳು ಮತ್ತು ಕಲ್ವರ್ಟ್‌ಗಳ ಸುಧಾರಣೆ (2) ವಾರ್ಡ್ ಸಂಖ್ಯೆ-76 ಹೆಣ್ಣೂರಿನಲ್ಲಿ 1ನೇ, 2ನೇ, 3ನೇ, 4ನೇ, 5ನೇ, 6ನೇ, 7ನೇ ಮತ್ತು 11ನೇ ಅಡ್ಡ ರಸ್ತೆಗಳು, ಶಿವರಾಮಯ್ಯ ಲೇಔಟ್, 3ನೇ ಬ್ಲಾಕ್ 2ನೇ, 8ನೇ, 11ನೇ ಎ, 11ನೇ ಬಿ, 12ನೇ ಮತ್ತು 13ನೇ ಅಡ್ಡರಸ್ತೆಗಳು ಮತ್ತು 1ನೇ ಮುಖ್ಯರಸ್ತೆಗಳ ಚರಂಡಿಗಳು ಮತ್ತು ಕಲ್ವರ್ಟ್‌ಗಳ ಸುಧಾರಣೆ. (3) ವಾರ್ಡ್ ಸಂಖ್ಯೆ-77 ನಾಗವಾರದಲ್ಲಿ ವೀರಣ್ಣಪಾಳ್ಯ 2ನೇ ಮುಖ್ಯರಸ್ತೆ 1ನೇ ಎ ಕ್ರಾಸ್, ಮಹಬೂಬ್ ನಗರ 1ನೇ ಕ್ರಾಸ್, ಇಬ್ರಾಹಿಂ ಸಾಹೇಬ್ ಬೀದಿ ಮುಖ್ಯರಸ್ತೆ, ರಶಾದ್ ನಗರ 1ನೇ ಮುಖ್ಯರಸ್ತೆ, ರಶಾದ್ ನಗರ 30 ಕೆಜಿ 4ನೇ, 30 ಕೆಜಿ 5ನೇ ಕ್ರಾಸ್, ಉಮರ್ ನಗರ 1ನೇ, 2ನೇ, 3ನೇ, 9ನೇ, 14ನೇ ಅಡ್ಡರಸ್ತೆಗಳು, ಕುಪ್ಪುಸ್ವಾಮಿ ಲೇಔಟ್ 1ನೇ ಮುಖ್ಯರಸ್ತೆಯಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸುಧಾರಣೆ.

ಟೆಂಡರ್‌ಗಿಟ್ಟ ಮೊತ್ತ : **ರೂ.896.00 ಲಕ್ಷಗಳು**. ಇಎಂಡಿ : **ರೂ. 13,50,000/- (ಇ-ಪಾವತಿ ಮೂಲಕ 1.00 ಲಕ್ಷ ಬಾಕಿ ರೂ. 12,50,000/- ಬಿಜಿ/ಎಫ್‌ಡಿಆರ್ ಮೂಲಕ ತಾಂತ್ರಿಕ ಬಿಡ್ ತೆರೆಯುವ ಮೊದಲು ಸಲ್ಲಿಸಬೇಕು.**

ಕಾಮಗಾರಿಯ ವಿವರ : ಪ್ಯಾಕೇಜ್-6 : (1) ವಾರ್ಡ್ ಸಂಖ್ಯೆ 80, ಕಾಚರಕನಹಳ್ಳಿಯ ಅಜ್ಮಲ್ಲಪ್ಪ ಲೇಔಟ್ 2ನೇ ಎಫ್, 1ನೇ ಎ, 1ನೇ ಬಿ ಕ್ರಾಸ್ ಬಿಡಿಎ ಲೇಔಟ್, 3ನೇ ಎ ಮೈನ್, ರಾಮಮೂರ್ತಿ ರಸ್ತೆ, 3ನೇ ಮೈನ್, 1ನೇ, 2ನೇ ಮತ್ತು 4ನೇ ಮೈನ್ ಕೀರ್ತಿ ಲೇಔಟ್, 1ನೇ, 5ನೇ, 6ನೇ ಮತ್ತು 11ನೇ ಕ್ರಾಸ್, 1ನೇ ಎ, ಬಿ ಕ್ರಾಸ್, 2ನೇ ಕ್ರಾಸ್ ರಸ್ತೆಗಳು, ಕನಕದಾಸ ರಸ್ತೆ, 14ನೇ ಕ್ರಾಸ್, 2ನೇ ಮುಖ್ಯ ಅಜ್ಮಲ್ಲಪ್ಪ ಲೇಔಟ್, ಸಿಎಂಆರ್ ಪಿಯು ಕಾಲೇಜು ರಸ್ತೆಗಳಲ್ಲಿ ಚರಂಡಿ ಮತ್ತು ಡಾಂಬರೀಕರಣ / ರಸ್ತೆಗಳಿಗೆ ಸಿಸಿ ಸುಧಾರಣೆ. (2) ವಾರ್ಡ್ ಸಂಖ್ಯೆ 81, ಕಮ್ಮನಹಳ್ಳಿಯಲ್ಲಿ 2ನೇ ಕ್ರಾಸ್, 5ನೇ ಕ್ರಾಸ್, 5ನೇ ಮುಖ್ಯ ರಸ್ತೆ, 6ನೇ ಕ್ರಾಸ್ ಕಾಮನಹಳ್ಳಿ, 5ನೇ ಎ ಕ್ರಾಸ್, 7ನೇ ಬಿ ಮುಖ್ಯ ಹೆಚ್‌ಆರ್‌ಬಿಆರ್ 1ನೇ ಬ್ಲಾಕ್, 5ನೇ ಎ ಕ್ರಾಸ್, 5ನೇ ಡಿ ಮುಖ್ಯ ಹೆಚ್‌ಆರ್‌ಬಿಆರ್ 2ನೇ ಬ್ಲಾಕ್ (ಸಿಎಂಆರ್ ಮುಖ್ಯ ರಸ್ತೆಯಿಂದ ಕ್ಲೇವಿಯರ್ಸ್ ಸ್ಟುಡಿಯೋವರೆಗೆ), 3ನೇ ಬಿ ಕ್ರಾಸ್, 3ನೇ ಸಿ ಕ್ರಾಸ್, 3ನೇ ಡಿ ಕ್ರಾಸ್, 6ನೇ ಎ ಮುಖ್ಯ ರಸ್ತೆ, 2ನೇ ಎ ಕ್ರಾಸ್, 5ನೇ ಸಿ ಕ್ರಾಸ್, 5ನೇ ಬಿ ಕ್ರಾಸ್, 1ನೇ ಕ್ರಾಸ್, 4ನೇ ಕ್ರಾಸ್, 6ನೇ ಬಿ ಮುಖ್ಯ ರಸ್ತೆ, 5ನೇ ಕ್ರಾಸ್, 6ನೇ ಕ್ರಾಸ್ ರಸ್ತೆಗಳಿಗೆ ಚರಂಡಿ ಮತ್ತು ಡಾಂಬರೀಕರಣ/ಸಿಸಿ ಸುಧಾರಣೆಗಳು. (3) ವಾರ್ಡ್ ಸಂಖ್ಯೆ 82, ಬಾಣಸವಾಡಿಯಲ್ಲಿನ 1ನೇ ಕ್ರಾಸ್ ಚಂದ್ರಮ್ಮ ಲೇಔಟ್, ದೊಡ್ಡ ಬಾಣಸವಾಡಿ ಕ್ರಾಸ್, ವಿಜಯ ಬ್ಯಾಂಕ್ ಕಾಲೋನಿ 1ನೇ ಮುಖ್ಯ ಮತ್ತು 1ನೇ, 4ನೇ ಮತ್ತು 5ನೇ ಅಡ್ಡ ರಸ್ತೆಗಳು, 2ನೇ ಮುಖ್ಯ ಟಿ ಕೃಷ್ಣಾರೆಡ್ಡಿ ಲೇಔಟ್, ನಂಜುಂಡ ರೆಡ್ಡಿ ಮುಖ್ಯರಸ್ತೆ ಮತ್ತು ಅಡ್ಡರಸ್ತೆಗಳು, ಮುನಿಸ್ವಾಮಪ್ಪ ಲೇಔಟ್ ಮುಖ್ಯ ಮತ್ತು 2ನೇ ಕ್ರಾಸ್ ನಿಂದ 4ನೇ ಸಿ ಅಡ್ಡರಸ್ತೆಗಳು, ಒಎಂಬಿಆರ್ ಲೇಔಟ್ 2ನೇ ಎ ಮತ್ತು ಬಿ ಮುಖ್ಯರಸ್ತೆಗಳು, 3ನೇ ಕ್ರಾಸ್ ರಸ್ತೆ, ಭುವನಗಿರಿ ಲೇಔಟ್ 2ನೇ, 2ನೇ ಜಿ ಮತ್ತು 5ನೇ ಕ್ರಾಸ್, 2ನೇ ಇ ಮುಖ್ಯರಸ್ತೆ, 6ನೇ ಬಿ, ಸಿ ಮತ್ತು ಡಿ ಅಡ್ಡರಸ್ತೆಗಳಲ್ಲಿ ಚರಂಡಿ ಮತ್ತು ಡಾಂಬರೀಕರಣ / ರಸ್ತೆಗಳಿಗೆ ಸಿಸಿ ಸುಧಾರಣೆ.

ಟೆಂಡರ್‌ಗಿಟ್ಟ ಮೊತ್ತ : **ರೂ.856.00 ಲಕ್ಷಗಳು**. ಇಎಂಡಿ : **ರೂ. 13,00,000/- (ಇ-ಪಾವತಿ ಮೂಲಕ 1.00 ಲಕ್ಷ ಬಾಕಿ ರೂ. 12,00,000/- ಬಿಜಿ/ಎಫ್‌ಡಿಆರ್ ಮೂಲಕ ತಾಂತ್ರಿಕ ಬಿಡ್ ತೆರೆಯುವ ಮೊದಲು ಸಲ್ಲಿಸಬೇಕು.**

ಕಾಮಗಾರಿಯ ವಿವರ : ಪ್ಯಾಕೇಜ್-7 : (1) ಐಟಿಸಿ ಕಾಲೋನಿ ಮುಖ್ಯ ಮತ್ತು ಅಡ್ಡರಸ್ತೆಗಳು, ವಿಶ್ವೇಶ್ವರಯ್ಯ ರಸ್ತೆ, 3ನೇ ಕ್ರಾಸ್ ಮರಿಯಮ್ಮ ಬೀದಿ, ಜೀವನಹಳ್ಳಿ 1ನೇ ಕ್ರಾಸ್ ನಿಂದ 8ನೇ ಕ್ರಾಸ್ ರಸ್ತೆ, ವಾರ್ಡ್ ಸಂಖ್ಯೆ 85 ರಲ್ಲಿರುವ ಮರಿಯಾ ನಿಕೇತನ ಶಾಲಾ ರಸ್ತೆ, ಮಾರುತಿಸೇವ ನಗರಗಳಲ್ಲಿ ಚರಂಡಿ ಮತ್ತು ಡಾಂಬರೀಕರಣ / ರಸ್ತೆಗಳಿಗೆ ಸಿಸಿ ಸುಧಾರಣೆಗಳು (2) ವಾರ್ಡ್ ಸಂಖ್ಯೆ 79 ರಲ್ಲಿರುವ 2ನೇ ಮುಖ್ಯ ವಿನೋಭ ನಗರ, 10ನೇ ಕ್ರಾಸ್ ವಿನೋಭ ನಗರ, 10ನೇ ಕ್ರಾಸ್ ಬಿಎಂ ಲೇಔಟ್, ಶ್ರೀ ಅಬಯ ರಾಮ ದೇವಸ್ಥಾನ ರಸ್ತೆ, 2ನೇ ಮುಖ್ಯ ಡಿ ಕ್ರಾಸ್ ಬಿಎಂ ಲೇಔಟ್, 3ನೇ ಮುಖ್ಯ ಎ ಸ್ಟ್ರೀಟ್ ಬಿಎಂ ಲೇಔಟ್, 3ನೇ ಮುಖ್ಯ ಬಿಎಂ ಲೇಔಟ್, 12ನೇ ಮುಖ್ಯ ರಸ್ತೆಗಳಲ್ಲಿ ಚರಂಡಿ ಮತ್ತು ಡಾಂಬರೀಕರಣ / ರಸ್ತೆಗಳಿಗೆ ಸಿಸಿ ಸುಧಾರಣೆಗಳು. (3) ಪಟೇಲ್ ಜಿ ಕುಲ್ಲಪ ರಸ್ತೆ, ಹಚಿನ್ಸ್ ರಸ್ತೆ 3ನೇ, 3ನೇ ಬಿ, 3ನೇ ಸಿ, 4ನೇ ಎ, 4ನೇ ಬಿ ಮತ್ತು 5ನೇ ಅಡ್ಡ ರಸ್ತೆಗಳು, ಸತ್ಯಮೂರ್ತಿ ರಸ್ತೆ, 2ನೇ ಕ್ರಾಸ್ ಮತ್ತು 4ನೇ ಅಡ್ಡ ರಸ್ತೆ, ಅಶೋಕ ರಸ್ತೆ, ಉತ್ತರ ರಸ್ತೆ, ವಾರ್ಡ್ ಸಂಖ್ಯೆ 83, ಸುಬ್ಬಯ್ಯನ ಪಾಳ್ಯ ಮತ್ತು ವಾರ್ಡ್ ಸಂಖ್ಯೆ 84, ಲಿಂಗರಾಜಪುರದಲ್ಲಿ ಚರಂಡಿ ಮತ್ತು ಡಾಂಬರೀಕರಣ / ರಸ್ತೆಗಳಿಗೆ ಸಿಸಿ ಸುಧಾರಣೆಗಳು. (4) ವಾರ್ಡ್ ಸಂಖ್ಯೆ 76 ಹೆಣ್ಣೂರಿನಲ್ಲಿರುವ ಎಚ್‌ಬಿಆರ್ ಲೇಔಟ್ 3ನೇ ಬ್ಲಾಕ್‌ನಲ್ಲಿ 9ನೇ ಮತ್ತು 10ನೇ ಮುಖ್ಯ ರಸ್ತೆಗಳು (ಕೆಪಿಟಿಸಿಎಲ್) ರಸ್ತೆಗಳು ಮತ್ತು ಚರಂಡಿಗಳ ಸುಧಾರಣೆಗಳು. (5) ವಾರ್ಡ್ ಸಂಖ್ಯೆ 80 ರ ಕಾಚರಕನಹಳ್ಳಿಯ 1ನೇ, 2ನೇ, 3ನೇ, 4ನೇ, 5ನೇ ಮುಖ್ಯ ಹೆಚ್‌ಬಿಆರ್ 1ನೇ ಬ್ಲಾಕ್ ಮತ್ತು ವಾರ್ಡ್ ಸಂಖ್ಯೆ 82 ರ ಬಾಣಸವಾಡಿಯ 8ನೇ ಎ, ಬಿ, ಸಿ, ಡಿ, 4ನೇ ಎ, ಬಿ ಕ್ರಾಸ್ ಹೆಚ್‌ಆರ್‌ಬಿಆರ್ 1ನೇ ಬ್ಲಾಕ್‌ನಲ್ಲಿರುವ ರಸ್ತೆಗಳು ಮತ್ತು ಚರಂಡಿಗಳ ಸುಧಾರಣೆ. (6) ವಾರ್ಡ್ ಸಂಖ್ಯೆ 84 ರ ಲಿಂಗರಾಜಪುರದ 1ನೇ ಮತ್ತು 2ನೇ ಕ್ರಾಸ್ ಕೃಷ್ಣಪ್ಪ ಲೇಔಟ್ (ವಿಎಸ್‌ಟಿ ರಸ್ತೆಯಿಂದ ಗುಂಡಪ್ಪ ಮಠದ ರಸ್ತೆಯವರೆಗೆ), ಸೈಟ್ ಪಾಳ್ಯ (ಆಯಿಲ್ ಮಿಲ್ ರಸ್ತೆಯಿಂದ ಮಸೀದಿ ರಸ್ತೆಯವರೆಗೆ), ಮಸೀದಿ ರಸ್ತೆ (ಹೆಣ್ಣೂರು ಮುಖ್ಯ ರಸ್ತೆಯಿಂದ ಅಮೃತ್ ಥಿಯೇಟರ್ ರಸ್ತೆಯವರೆಗೆ) ನಲ್ಲಿರುವ ಸಿಸಿ ರಸ್ತೆಗಳು ಮತ್ತು ಚರಂಡಿಗಳ ಸುಧಾರಣೆ.

ಟೆಂಡರ್‌ಗಿಟ್ಟ ಮೊತ್ತ : **ರೂ.840.00 ಲಕ್ಷಗಳು**. ಇಎಂಡಿ : **ರೂ. 12,60,000/- (ಇ-ಪಾವತಿ ಮೂಲಕ 1.00 ಲಕ್ಷ ಬಾಕಿ ರೂ. 11,60,000/- ಬಿಜಿ/ಎಫ್‌ಡಿಆರ್ ಮೂಲಕ ತಾಂತ್ರಿಕ ಬಿಡ್ ತೆರೆಯುವ ಮೊದಲು ಸಲ್ಲಿಸಬೇಕು.**

ಕಾಮಗಾರಿಯ ವಿವರ : ಪ್ಯಾಕೇಜ್-8 : (1) ವಾರ್ಡ್ ಸಂಖ್ಯೆ 83 ಸುಬ್ಬಯ್ಯನಪಾಳ್ಯದಲ್ಲಿ ಸಮುದಾಯ ಭವನ ನಿರ್ಮಾಣ. (2) ವಾರ್ಡ್ ಸಂಖ್ಯೆ 85 ಮಾರುತಿ ಸೇವಾನಗರದಲ್ಲಿ ಜೀವನಹಳ್ಳಿಯಲ್ಲಿ ಅಂಗಡಿಗಳ ನಿರ್ಮಾಣ ಮತ್ತು ಪಾದಚಾರಿ ಮಾರ್ಗ ಸುಧಾರಣೆ. (3) ಯಾಸೀನ್ ನಗರದಲ್ಲಿ ಧೋಬಿ ಘಾಟ್ ನಿರ್ಮಾಣ, ಮತ್ತು ವಾರ್ಡ್ ಸಂಖ್ಯೆ 78 ರ ಹೆಚ್‌ಬಿಆರ್ ಲೇಔಟ್‌ನಲ್ಲಿ ಯಾಸೀನ್ ನಗರ 5ನೇ ಮುಖ್ಯ ರಸ್ತೆ, 8ನೇ ಮುಖ್ಯರಸ್ತೆ, 10ನೇ, 10ನೇ ಎ ಕ್ರಾಸ್, ರಸ್ತೆಗಳು ಮತ್ತು ವಿನೋಭನಗರ 10ನೇ ಎ, 10ನೇ ಬಿ ಅಡ್ಡ ರಸ್ತೆಗಳಲ್ಲಿ ರಸ್ತೆಗಳು ಮತ್ತು ಚರಂಡಿಗಳ ಸುಧಾರಣೆ.

ಟೆಂಡರ್‌ಗಿಟ್ಟ ಮೊತ್ತ : **ರೂ.768.00 ಲಕ್ಷಗಳು**. ಇಎಂಡಿ : **ರೂ. 11,60,000/- (ಇ-ಪಾವತಿ ಮೂಲಕ 1.00 ಲಕ್ಷ ಬಾಕಿ ರೂ. 10,60,000/- ಬಿಜಿ/ಎಫ್‌ಡಿಆರ್ ಮೂಲಕ ತಾಂತ್ರಿಕ ಬಿಡ್ ತೆರೆಯುವ ಮೊದಲು ಸಲ್ಲಿಸಬೇಕು.**

ಟೆಂಡರ್‌ನ ಕಾರ್ಯಸೂಚಿ: (1) queries ಸ್ವೀಕರಿಸಲು ಕೊನೆಯ ದಿನಾಂಕ, ಸಮಯ ಮತ್ತು ಸ್ಥಳ : **09.12.2025 ರಿಂದ 13:00 ಗಂಟೆಗಳವರೆಗೆ** ಸರ್ವಜ್ಞನಗರ ವಿಭಾಗದ ಕಾರ್ಯಪಾಲಕ ಅಭಿಯಂತರರವರ ಕಚೇರಿಯಲ್ಲಿ ನಡೆಯಲಿದೆ. (ಆನ್‌ಲೈನ್ ಪ್ರಶ್ನೆಗಳು), **(2) ಟೆಂಡರ್ ಪೂರ್ವ ಸಭೆಯು ನಡೆಯುವ ದಿನಾಂಕ, ಸಮಯ ಮತ್ತು ಸ್ಥಳ: 10.12.2025 ರಿಂದ 16:00 ಗಂಟೆಗಳವರೆಗೆ** ಸರ್ವಜ್ಞನಗರ ವಿಭಾಗ, 9ನೇ ಸಿ ಮೇನ್, ಹೆಚ್‌ಆರ್‌ಬಿಆರ್ ಲೇಔಟ್ 1ನೇ ಬ್ಲಾಕ್, ಕಲ್ಯಾಣನಗರ ಬೆಂಗಳೂರು-560043 ರ ಕಾರ್ಯಪಾಲಕ ಅಭಿಯಂತರರವರ ಕಚೇರಿಯಲ್ಲಿ ನಡೆಯಲಿದೆ. **(3) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ 19.12.2025, 16.00 ಗಂಟೆಗಳು,** (4) ತಾಂತ್ರಿಕ ಬಿಡ್‌ಗಳನ್ನು **20.12.2025, 16.30 ಗಂಟೆಗಳು** http://kppp.karnataka.gov.in ವೆಬ್‌ಸೈಟ್‌ನಲ್ಲಿ ಸರ್ವಜ್ಞನಗರ ವಿಭಾಗದ ಕಾರ್ಯಪಾಲಕ ಅಭಿಯಂತರರವರ ಕಚೇರಿಯಲ್ಲಿ ತೆರೆಯಲಾಗುತ್ತದೆ **(5) ಹಣಕಾಸು ಬಿಡ್ ತೆರೆಯುವ ದಿನಾಂಕ ಮತ್ತು ಸಮಯ:** (ತಾಂತ್ರಿಕ ಮೌಲ್ಯಮಾಪನಕ್ಕೆ ಅನುಮೋದನೆ ಪಡೆದ ನಂತರ ತಿಳಿಸಲಾಗುವುದು).

ಸಹಿ/- ಕಾರ್ಯಪಾಲಕ ಅಭಿಯಂತರರು, ಸರ್ವಜ್ಞನಗರ ವಿಭಾಗ, ವಲಯ-1, ಬೆಂ.ಉ.ನ.ಪಾ

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

"ಜ್ಞಾನ ಸಂಗಮ", ಬೆಳಗಾವಿ – 590018, ಕರ್ನಾಟಕ

ಸಂಖ್ಯೆ:ವಿ.ತಾ.ವಿ./ಬೆ/ದಾ/ಸ್ಥಾ.ಅ./ಎಚ್‌ಕೆ/ಎಮ್‌ಪಿ/ಸೆಕ್ಯೂ/2025-26/ಐ.ಎಫ್.ಟಿ. ನಂ.106/4542 ದಿನಾಂಕ: 28-11-2025

ಅಲ್ಪಾವಧಿ ಟೆಂಡರ್ ಪ್ರಕಟಣೆ – (3ನೇ ಕರೆ)

(ದ್ವಿ-ಲಕೋಟೆ ಪದ್ಧತಿಯಲ್ಲಿ) (ಕೆ.ಪಿ.ಪಿ. ಪೋರ್ಟಲ್‌ಮೂಲಕ ಮಾತ್ರ)

ಕುಲಸಚಿವರು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ ಇವರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ – 1999 ನಿಯಮ 2000 ರನ್ವಯ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಕೆಲಸದ ಹೆಸರು: **ಯುಬಿಡಿಟಿ., ತಾಂತ್ರಿಕ ಮಹಾವಿದ್ಯಾಲಯ, ದಾವಣಗೆರೆ ಆವರಣದಲ್ಲಿ ಸ್ವಚ್ಛತಾ ಕೆಲಸಗಳನ್ನು ನಿರ್ವಹಿಸುವ ಸಿಬ್ಬಂದಿ, ಭದ್ರತಾ ಸಿಬ್ಬಂದಿ ಹಾಗೂ ಮಾನವ ಸಂಪನ್ಮೂಲ ಸಿಬ್ಬಂದಿಗಳನ್ನು ಹೊರ ಸಂಪನ್ಮೂಲ ಏಜೆನ್ಸಿಯಿಂದ ಒದಗಿಸುವ ಕೆಲಸದ ಮೊತ್ತ ರೂ. 3,19,58,763/- (3ನೇ ಕರೆ).** ಇತರೆ ಮಾಹಿತಿಗಳನ್ನು ವೆಬ್‌ಸೈಟ್: **https://kppp.karnataka.gov.in** ಮೂಲಕ ದಿನಾಂಕ: **29-11-2025** ರಿಂದ ಪಡೆದುಕೊಳ್ಳಬಹುದು.

ಸಹಿ/- ಕುಲಸಚಿವರು
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ.

ವಾಸಾಸಂಇ/ಬೆಳಗಾವಿ/1406/ಅಡ್ವಟೋರ್/2025-26

ಬೆಂಗಳೂರು ಉತ್ತರ ನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರವರ ಕಛೇರಿ, ಸರ್ವಜ್ಞನಗರ ವಿಭಾಗ, 9ನೇ ಸಿ ಮೇನ್, ಹೆಚ್‌ಆರ್‌ಬಿಆರ್ ಲೇಔಟ್, 1ನೇ ಬ್ಲಾಕ್, ಕಲ್ಯಾಣನಗರ, ಬೆಂಗಳೂರು-560043

ನಂ.: ಕಾಪಾ/ಎಸ್‌ಸಿಎನ್/ಕೆಪಿಪಿಪಿ/ಟೆಂಡರ್/11/ತಿದ್ದುಪಡಿ-02/2025-26 ದಿನಾಂಕ : 28.11.2025

ತಿದ್ದುಪಡಿ-2

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ವಿಷಯ :- ಟೆಂಡರ್ ರದ್ಧತಿಯು ಬಗ್ಗೆ.

ಉಲ್ಲೇಖ:- (1) ಟೆಂಡರ್ ಅಧಿಸೂಚನೆ ಸಂಖ್ಯೆ : EE/SGN/KPPP/ TEND/ 11/2025-26 Dated: 11.11.2025.
(2) ತಿದ್ದುಪಡಿ ನಂ. EE/SGN/KPPP/TEND/11/COR-01/2025-26, Dated: 20.11.2025.

ಮೇಲಿನ ಎಲ್ಲಾ ಸಂಬಂಧಪಟ್ಟ ಗುತ್ತಿಗೆದಾರರಿಗೆ, ವಿಶೇಷವಾಗಿ ಉಲ್ಲೇಖ ಸಂಖ್ಯೆ 1 ಮತ್ತು 2 ರ ಪ್ರಕಾರ ಪ್ರಕಟಿಸಲಾದ ಟೆಂಡರ್ ಅಧಿಸೂಚನೆ ಮತ್ತು ತಿದ್ದುಪಡಿಯನ್ನು ಕೆಲವು ತಾಂತ್ರಿಕ ಸಮಸ್ಯೆಗಳಿಂದಾಗಿ ರದ್ದುಗೊಳಿಸಲಾಗಿದೆ ಎಂದು ಈ ಮೂಲಕ ತಿಳಿಸಲಾಗಿದೆ.

ಸಹಿ/- ಕಾರ್ಯಪಾಲಕ ಅಭಿಯಂತರರು,
ಸರ್ವಜ್ಞನಗರ ವಿಭಾಗ, ವಲಯ-1, ಬೆಂ.ಉ.ನ.ಪಾ

ತುಮಕೂರು ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ,

ಮಲ್ಲಸಂದ್ರ, ಕಛೇರಿ ದೂ.ಸಂ – 0816-2206464, E-mail:kbs.tmu@gmail.com

ಸಂಖ್ಯೆ/ತುಹಾಒ/ಪ.ಆ.ಮೇ/2025-26 ದಿನಾಂಕ: 29.11.2025

ಇ-ಟೆಂಡರ್ ಪ್ರಕಟಣೆ

ತುಮಕೂರು ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ ವ್ಯಾಪ್ತಿಯ ತುಮಕೂರು ವಿಭಾಗಕ್ಕೆ ಗುಬ್ಬಿ ಪಶು ಆಹಾರ ಘಟಕದಿಂದ ತುಮಕೂರು ಉಪವಿಭಾಗ (ತುಮಕೂರು,ಗುಬ್ಬಿ,ಕುಣಿಗಲ್) ತಾಲ್ಲೂಕಿನ ವ್ಯಾಪ್ತಿಯ ಸಂಘಗಳಿಗೆ ಸರಬರಾಜು ಮಾಡಲು ಪಶು ಆಹಾರ ಸಾಗಾಣಿಕೆಯ ವಾಹನಗಳಿಗೆ 2 ವರ್ಷಗಳ ಅವಧಿಗೆ ಟೆಂಡರ್ ಪ್ರಕಟಣೆ ಹೊರಡಿಸಲಾಗಿದೆ. (1) 25 MT ಸಾಮರ್ಥ್ಯದ ಕನಿಷ್ಠ 4 ವಾಹನಗಳನ್ನು ಒದಗಿಸುವುದು. ಆಸಕ್ತಿಯುಳ್ಳ ವಾಹನ ಮಾಲೀಕರು ಮೇಲ್ಕಂಡ ಗುತ್ತಿಗೆ ಮಾರ್ಗಗಳಿಗೆ ಟೆಂಡರ್ ಅರ್ಜಿ ಸಲ್ಲಿಸಬಹುದಾಗಿದೆ.

ಕ್ರಸಂ	ವಿವರ	ದಿನಾಂಕ/ವೇಳೆ
01	ಇ-ಟೆಂಡರ್‌ನಲ್ಲಿ ಟೆಂಡರ್ ಪ್ರಕಟಿಸಿರುವ ದಿನಾಂಕ	ದಿನಾಂಕ: 28.11.2025
02	ಇ-ಟೆಂಡರ್‌ನಲ್ಲಿ ಬಿಡ್ ಸಲ್ಲಿಸಲು ಕೊನೆಯ ದಿನಾಂಕ/ವೇಳೆ	ದಿನಾಂಕ: 08.12.2025 ರಂದು ಸಂಜೆ 4-00 ಗಂಟೆಯವರೆಗೆ
03	ಇ-ಟೆಂಡರ್‌ನಲ್ಲಿ ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ/ವೇಳೆ	ದಿನಾಂಕ: 10.12.2025 ರಂದು ಬೆಳಿಗ್ಗೆ 11.00 ಗಂಟೆಯ ನಂತರ.
04	ಇ-ಟೆಂಡರ್‌ನಲ್ಲಿ ವಾಣಿಜ್ಯ ಟೆಂಡರ್ ತೆರೆಯುವ ದಿನಾಂಕ/ವೇಳೆ	ದಿನಾಂಕ: 15.12.2025 ರಂದು ಬೆಳಿಗ್ಗೆ 11.00 ಗಂಟೆಯನಂತರ.
05	ಇ-ಟೆಂಡರ್ ಬಗೆಗಿನ ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬಹುದಾದ ಅಧಿಕಾರಿಗಳು	ವ್ಯವಸ್ಥಾಪಕರು (ಶೇ&ತಾಂ),ತು.ಸ.ಹಾ.ಉ.ಒ
06	ಇ-ಟೆಂಡರ್ ವೆಬ್ ಸೈಟ್ ವಿಳಾಸ	www.kppp.karnataka.gov.in

ತು.ಸ.ಹಾ.ಉ.ಸ.ಒಕ್ಕೂಟದ ಪರವಾಗಿ,
ಸಹಿ/- ವ್ಯವಸ್ಥಾಪಕ ನಿರ್ದೇಶಕರು

ಕರ್ನಾಟಕ ಸರ್ಕಾರ
ಜಿಲ್ಲಾ ನಗರಾಭಿವೃದ್ಧಿಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ, ಹಾಸನ ಜಿಲ್ಲೆ, ಹಾಸನ.

ದೂ.ಸಂಖ್ಯೆ:08172-234839 E-mail: pdhassandudc@gmail.com

ನಂ:ಮುನಿಸಿ(2)/ಸಿ.ಆರ್/216/2025-26 ದಿನಾಂಕ: 28-11-2025

ಟೆಂಡರ್ ಪ್ರಕಟಣೆ : (E-Proc No.DMA/2025-26/SE6745/Transaction Advisor Appointment)

ಹಾಸನ ಜಿಲ್ಲೆಯ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಾದ ನಗರಸಭೆ, ಅರಸೀಕೆರೆ, ಪುರಸಭೆ, ಚನ್ನರಾಯಪಟ್ಟಣ/ ಹೊಳೆನರಸೀಪುರ/ಸಕಲೇಶಪುರ/ಬೇಲೂರು ಮತ್ತು ಪಟ್ಟಣ ಪಂಚಾಯಿತಿ, ಅರಕಲಗೂಡು ಮತ್ತು ಆಲೂರು ಸ್ಥಳೀಯ ಸಂಸ್ಥೆಗಳಲ್ಲಿ ಸಾಂಪ್ರದಾಯಿಕ ಬೀದಿ ದೀಪಗಳ ಬದಲಾಗಿ ಇಂಧನ ಉಳಿತಾಯ ವಾಗುವ ಎಲ್.ಇ.ಡಿ.ದೀಪಗಳನ್ನು ಕೇಂದ್ರೀಕೃತ ನಿಯಂತ್ರಣ ವ್ಯವಸ್ಥೆ (ಸಿ.ಸಿ.ಎಂ.ಎಸ್) ಗಳೊಂದಿಗೆ ಅಳವಡಿಸಲು ಆಸಕ್ತಿಯುಳ್ಳ ನೋಂದಾಯಿತ ಅರ್ಹ ಸಂಸ್ಥೆಗಳಿಂದ (Transaction Advisor) ದ್ವಿ-ಲಕೋಟೆ ಪದ್ಧತಿಯಡಿ ಕೆ.ಸಿ. ಟೆಂಡರ್ ದಾಸ್ತಾವೇಜು ಮೂಲಕ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಅಹ್ವಾನಿಸಲಾಗಿದೆ. ಕ್ರ.ಸಂ.1.ಇಂಡೆಂಟ್ ನಂಬರ್ (E-Proc No.DMA/2025-26/SE6745/Transaction Advisor Appointment) ಕಾಮಗಾರಿ ವಿವರ ಹಾಸನ ಜಿಲ್ಲೆಯ ಎಲ್ಲಾ ನಗರ ಸ್ಥಳೀಯ ಸಂಸ್ಥೆಗಳಾದ ನಗರಸಭೆ, ಅರಸೀಕೆರೆ, ಪುರಸಭೆ, ಚನ್ನರಾಯಪಟ್ಟಣ/ ಹೊಳೆನರಸೀಪುರ/ ಸಕಲೇಶಪುರ/ ಬೇಲೂರು ಮತ್ತು ಪಟ್ಟಣ ಪಂಚಾಯಿತಿ, ಅರಕಲಗೂಡು ಮತ್ತು ಆಲೂರು ಸ್ಥಳೀಯ ಸಂಸ್ಥೆಗಳಲ್ಲಿ ಸಾಂಪ್ರದಾಯಿಕ ಬೀದಿ ದೀಪಗಳ ಬದಲಾಗಿ ಇಂಧನ ಉಳಿತಾಯ ವಾಗುವ ಎಲ್.ಇ.ಡಿ.ದೀಪಗಳನ್ನು ಹಾಗೂ ಕೇಂದ್ರೀಕೃತ ನಿಯಂತ್ರಣ ವ್ಯವಸ್ಥೆಯನ್ನು (ಸಿ.ಸಿ.ಎಂ.ಎಸ್) ಅಳವಡಿಸಲು ಆಸಕ್ತಿಯುಳ್ಳ ನೋಂದಾಯಿತ ಅರ್ಹ ಸಂಸ್ಥೆಗಳನ್ನು ನೇಮಕಮಾಡಿಕೊಳ್ಳುವ ಬಗ್ಗೆ. ಟೆಂಡರ್‌ನ ವೇಳಾಪಟ್ಟಿ ವಿವರ ಕೆಳಗಿನಂತಿದೆ ಕ್ರ.ಸಂ.ವಿವರ: 1.ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ 16-12-2025 ರ ಸಂಜೆ:5.30ಗಂಟೆಗೆ 2.ಟೆಂಡರ್ ತೆರೆಯುವ ದಿನಾಂಕ (ತಾಂತ್ರಿಕ ಅರ್ಹತೆಯ ಬಿಡ್) ದಿನಾಂಕ 18-12-2025 ರ ಬೆಳಿಗ್ಗೆ:11.00ಗಂಟೆಗೆ 3.ಇ.ಎಂ.ಡಿ. ಮೊತ್ತ ರೂ.2,00,000/- ಲಕ್ಷ ಟೆಂಡರ್‌ನಲ್ಲಿ ಭಾಗವಹಿಸಲು ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು ಹೆಚ್ಚಿನ ವಿವರಗಳನ್ನು ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಅಂತರ್ಜಾಲದ ವೆಬ್‌ಸೈಟ್ www.kppp.karnataka.gov.in ನಲ್ಲಿರುವ ಟೆಂಡರ್ ಡಾಕ್ಯೂಮೆಂಟ್‌ನಲ್ಲಿ ಪಡೆಯಬಹುದಾಗಿದೆ. ಕೆಲಸದ ಕುರಿತು ಯಾವುದೇ ವಿವರಗಳನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/-ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿಕೋಶ, ಹಾಸನ

ವಾಸಾಸಂಇ/ಹಿಸನಿ/ಹಾಸನ/792/ಕೆಎಸ್‌ಎಂಸಿಎ/2025-26

ಆನೇಕಲ್ ಯೋಜನಾ ಪ್ರಾಧಿಕಾರ

'ಅಣ್ಣ' ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು-560099
www.anekal.tpa.gov.in, www.e-vinyasa.kar.nic.in

ಸಂಖ್ಯೆ: ಆಯೋಪ್ರಾ/ಭೂ.ಬ/76/2025-26 ದಿನಾಂಕ:29.11.2025

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 14(ಎ) ಪ್ರಕಾರ ಅರ್ಜಿದಾರರು ಭೂ ಉಪಯೋಗ ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯನ್ನು ಪರಿಶೀಲಿಸಲಾಗಿ, ಅಡಕದಲ್ಲಿನ ಮಾಹಿತಿಯನ್ನು ಆಧರಿಸಿ ಕೆಳಕಂಡಂತೆ ವಿವರಗಳನ್ನು ಕೋಷ್ಟಕದಲ್ಲಿ ಅಳವಡಿಸಿದೆ. ಕಾಯ್ದೆಯಲ್ಲಿನ ಅಂಶಗಳನ್ವಯ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಬದಲಾವಣೆಗೆ ಯಾರಿಂದಲಾದರು ಆಕ್ಷೇಪಣೆಗಳಿದ್ದರೆ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್ ಕಛೇರಿಗೆ ಸಲ್ಲಿಸಲು ಕೋರಲಾಗಿದೆ. ನಿಗಧಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ ಎ/ಗುಂ	ಅನುಮೋದಿತ ಮಹಾಯೋಜನೆ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1.	ಶ್ರೀ ಸುದರ್ಶನ್ ಬಿನ್ ಲೇ. ಎಂ.ಡಿ.ಗೋಪಾಲಯ್ಯ ಮತ್ತು ಶ್ರೀಮತಿ ನಾಗವೇಣಿ ಕೋಂ, ಲೇ. ಎಂ.ಡಿ.ಗೋಪಾಲಯ್ಯ	ಆನೇಕಲ್	ಸರ್ಜಾಪುರ	ಮುತ್ತಾನಲ್ಲೂರು	164/3	0-10	ಕೃಷಿ	ವಸತಿ
2.	ಶ್ರೀ ಪ್ರಕಾಶ್.ಪಿ.ಬನಕರ್ ಬಿನ್ ಪರಮೇಶ್ವರಪ್ಪ ರವರ ಪರವಾಗಿ ಜಿಪಿಎ ಮತ್ತು ಜಂಟಿ ಅಭಿವೃದ್ಧಿದಾರರಾದ ಮೆ:ನಂಬಿಯಾರ್ ಬಿಲ್ಡರ್ ಪ್ರೈವೇಟ್ ಲಿಮಿಟೆಡ್ ಪರವಾಗಿ ಅಧಿಕೃತ ಸಹಿದಾರರಾದ ಬಿಂದು.ಜಿ.ನಾಯರ್	ಆನೇಕಲ್	ಸರ್ಜಾಪುರ	ಮುತ್ತಾನಲ್ಲೂರು	164/4	0-20	ಕೃಷಿ	ವಸತಿ
3.	ಶ್ರೀ ಎಂ.ಕೃಷ್ಣರೆಡ್ಡಿ ಬಿನ್ ಲೇ. ಮುನಿಸ್ವಾಮಿ ರೆಡ್ಡಿ ಹಾಗೂ ಇತರರ ಪರವಾಗಿ ಜಿಪಿಎ ಮತ್ತು ಜಂಟಿ ಅಭಿವೃದ್ಧಿದಾರರಾದ ಮೆ:ನಂಬಿಯಾರ್ ಬಿಲ್ಡರ್ ಪ್ರೈವೇಟ್ ಲಿಮಿಟೆಡ್ ಪರವಾಗಿ ಅಧಿಕೃತ ಸಹಿದಾರರಾದ ಬಿಂದು.ಜಿ.ನಾಯರ್	ಆನೇಕಲ್	ಸರ್ಜಾಪುರ	ಮುತ್ತಾನಲ್ಲೂರು	164/5	0-20	ಕೃಷಿ	ವಸತಿ
4.	ಮೆ:ನಂಬಿಯಾರ್ ಬಿಲ್ಡರ್ ಪ್ರೈವೇಟ್ ಲಿಮಿಟೆಡ್ ಪರವಾಗಿ ಅಧಿಕೃತ ಸಹಿದಾರರಾದ ಶ್ರೀ ಸುರೇಶ್ ಬಾಬು.ಎಂ.ಎಸ್	ಆನೇಕಲ್	ಸರ್ಜಾಪುರ	ಮುತ್ತಾನಲ್ಲೂರು	164/7	0-26	ಕೃಷಿ	ವಸತಿ
5.	ಶ್ರೀಮತಿ ಆರ್.ಶಾರದ ಕೋಂ, ಲೇ. ನಾರಾಯಣ ರೆಡ್ಡಿ ಹಾಗೂ ಇತರರ ಪರವಾಗಿ ಜಿಪಿಎ ಮತ್ತು ಜಂಟಿ ಅಭಿವೃದ್ಧಿದಾರರಾದ ಮೆ:ನಂಬಿಯಾರ್ ಬಿಲ್ಡರ್ ಪ್ರೈವೇಟ್ ಲಿಮಿಟೆಡ್ ಪರವಾಗಿ ಅಧಿಕೃತ ಸಹಿದಾರರಾದ ಬಿಂದು.ಜಿ.ನಾಯರ್	ಆನೇಕಲ್	ಸರ್ಜಾಪುರ	ಮುತ್ತಾನಲ್ಲೂರು	172/12	1-13.08	ಕೃಷಿ	ವಸತಿ

ಪ್ರಸ್ತಾವನೆಯಲ್ಲಿನ ಪ್ರಶ್ನಿತ ಜಮೀನನ್ನು ವಸತಿ ಉದ್ದೇಶಕ್ಕೆ ಅಭಿವೃದ್ಧಿಪಡಿಸುವುದರಿಂದ ಸುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ. ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗವಕಾಶ ಸೃಷ್ಟಿಯಾಗುತ್ತದೆ. ಪ್ರಶ್ನಿತ ಜಮೀನಿನಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳುಳ್ಳ ಸುಸಜ್ಜಿತವಾದ ವಸತಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯ ಜಾಗಗಳು, ಉದ್ಯಾನವನಗಳು ಸಾರ್ವಜನಿಕರಿಗೆ ಲಭ್ಯವಾಗುತ್ತದೆ. ಕಾನೂನು ಬದ್ಧವಾದ ನಿವೇಶನಗಳು ಸಾರ್ವಜನಿಕರಿಗೆ ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು ಕೃಷಿ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/-
ಸದಸ್ಯ-ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್

DIPR/CP/VCPL/4112/2025-26

ಕರ್ನಾಟಕ ಸರ್ಕಾರ
ಹಿರಿಯ ಭೂವಿಜ್ಞಾನಿಯವರ ಕಛೇರಿ, ಗಣಿ ಮತ್ತು ಭೂವಿಜ್ಞಾನ ಇಲಾಖೆ ರಾಯಚೂರು

ಮೊದಲನೇ ಮಹಡಿ ಜಿಲ್ಲಾಡಳಿತ ಭವನ, ಮಿನಿ ವಿಧಾನ ಸೌಧ, ಯಕ್ಲಾಸ್‌ಪುರ-584102

ಸಂ:ಹಿಭೂವಿ:ಗಭೂಇ:2025-26 ದಿನಾಂಕ:27-11-2025

ಮರು ಟೆಂಡರ್ ಪ್ರಕಟಣೆ.

ಕರ್ನಾಟಕ ಹೊಸ ಮರಳು ನೀತಿ ಮತ್ತು ಕೆಎಂಎಂಸಿಆರ್-1994 ರ ತಿದ್ದುಪಡಿ ನಿಯಮಗಳಡಿಯಲ್ಲಿ ಮರಳು ಗಣಿಗಾರಿಕೆ. ಸಂಗ್ರಹಣೆ ಮತ್ತು ಮಾರಾಟಕ್ಕೆ ಸಂಬಂಧಿಸಿದಂತೆ ಇ-ಸಂಗ್ರಹಣಾ ವೇದಿಕೆ (e-procurement) ಮೂಲಕ ಒಟ್ಟು 16 ಬ್ಲಾಕ್‌ಗಳಿಗೆ ಮರು ಟೆಂಡರ್ ಪ್ರಕಟಣೆ.

ರಾಯಚೂರು ಜಿಲ್ಲೆಯ ತುಂಗಭದ್ರಾ ಮತ್ತು ಕೃಷ್ಣಾ ನದಿ ಪಾತ್ರದಲ್ಲಿ ಗುರುತಿಸಿರುವ ಮರಳಿನ ಬ್ಲಾಕ್‌ಗಳನ್ನು e-procurement ಮೂಲಕ ಟೆಕ್ನಿಕಲ್ ಮತ್ತು ಫೈನಾನ್ಸಿಯಲ್ ಇ- ಟೆಂಡರ್‌ಗೆ ಒಳಪಡಿಸಿ ಎಲ್ಲಾ ಕಾರ್ಯ ವಿಧಾನಗಳು ಪೂರೈಸಿದ ನಂತರ ಗುತ್ತಿಗೆ ಕಾರ್ಯಾದೇಶ ನೀಡಿದ ದಿನಾಂಕದಿಂದ 05 ವರ್ಷಗಳ ಅವಧಿಯವರೆಗೆ (ಮಳೆಗಾಲ ಮತ್ತು ಇನ್ನಿತರ ಪ್ರಕೃತಿ ವಿಕೋಪಗಳನೊಳಗೊಂಡ ಅವಧಿಸಹಿತ) ಗುತ್ತಿಗೆ ನೀಡಬೇಕಾಗಿದ್ದು, e-procurement ನಲ್ಲಿ ನೊಂದಾಯಿತ / ಕಂಪನಿ / ಫರ್ಮ್ ಇವರುಗಳು ಟೆಂಡರ್ ಕರೆಯಲಾಗಿರುವ ಬ್ಲಾಕ್‌ಗಳಲ್ಲಿ ಲಭ್ಯವಿರುವ ಮರಳಿನ ಪ್ರಮಾಣ. ರಸ್ತೆ ವ್ಯವಸ್ಥೆ, ಸ್ಥಳೀಯ ಸಮಸ್ಯೆಗಳನ್ನು ಪರಿಶೀಲಿಸಿಕೊಂಡು e-procurement ಮೂಲಕ ಟೆಕ್ನಿಕಲ್ ಮತ್ತು ಫೈನಾನ್ಸಿಯಲ್ ಇ-ಟೆಂಡರ್‌ನಲ್ಲಿ ಭಾಗವಹಿಸಲು ಟೆಂಡರ್ ಸಂಖ್ಯೆ: DMG/2025-26/SE0180 ಮೂಲಕ ಒಟ್ಟು 16 ಬ್ಲಾಕ್‌ಗಳಿಗೆ 3 ನೇ ಕರೆಯ ಟೆಂಡರ್ ಕರೆಯಲಾಗಿರುತ್ತದೆ.

3 ನೇ ಕರೆಯ ಮರು-ಟೆಂಡರ್ ಕರೆದಿರುವ 16 ಬ್ಲಾಕ್‌ಗಳ ಟೆಕ್ನಿಕಲ್ ಮತ್ತು ಫೈನಾನ್ಸಿಯಲ್ ಇ-ಟೆಂಡರ್ ಗುತ್ತಿಗೆ ಪ್ರಕ್ರಿಯೆಯ ವೇಳಾಪಟ್ಟಿ ಈ ಕೆಳಗಿನಂತಿರುತ್ತದೆ.

1) ಟೆಕ್ನಿಕಲ್ ಮತ್ತು ಫೈನಾನ್ಸಿಯಲ್ ಇ-ಟೆಂಡರ್ e-procurement ಮೂಲಕ ಅರ್ಜಿ, ಬಿಡ್ಸ್ ಡಾಂಕ್ಯುಮೆಂಟ್ ಹಾಗೂ ಇನ್ನಿತರೆ ವಿವರಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾದ ದಿನಾಂಕ: 01.12.2025 ರಿಂದ 15.12.2025 ಸಾಯಂಕಾಲ 05:30ಕ್ಕೆ 2) ಇ-ಟೆಂಡರ್ e-procurement ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 15.12.2025. ಸಾಯಂಕಾಲ 05:30 ಕ್ಕೆ 3) ತಾಂತ್ರಿಕ ಬಿಡ್ಡಿ ತೆರೆಯುವ ದಿನಾಂಕ:17.12.2025 ಬೆಳಿಗ್ಗೆ 11 ಗಂಟೆಗೆ. 4) ಪ್ರೀ ಬಿಡ್ ಮೀಟಿಂಗ್ ದಿನಾಂಕ: 05.12.2025 ಬೆಳಿಗ್ಗೆ 11 ಗಂಟೆಗೆ. ಸ್ಥಳ: ಹಿರಿಯ ಭೂವಿಜ್ಞಾನಿಯವರ ಕಛೇರಿ, ಕೊಠಡಿ ಸಂಖ್ಯೆ ಬಿ14, ಮೊದಲನೆ ಮಹಡಿ, ಜಿಲ್ಲಾಡಳಿತ ಭವನ, ರಾಯಚೂರು.

ಟೆಂಡರ್ ಕರೆಯಲಾಗಿರುವ ಮರಳು ಬ್ಲಾಕ್‌ಗಳು 05 ವರ್ಷಗಳ ಅವಧಿಗೆ ಮರಳು ಗುತ್ತಿಗೆ ಪಡೆಯಲು ಇ-ಟೆಂಡರ್ ಮಾಡಲು ಅರ್ಹ ಅರ್ಜಿದಾರರಿಂದ e-procurement ಮೂಲಕ ಈ ಪ್ರಕಟಣೆಯನ್ನು ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಹೊರಡಿಸಲಾಗಿದೆ. ಆಸಕ್ತ e-procurement ನೊಂದಾಯಿತ ಅರ್ಜಿದಾರರು ಟೆಂಡರ್ ಡಾಕ್ಯೂಮೆಂಟ್ ನ್ನು ಕರ್ನಾಟಕ ಸರ್ಕಾರದ c-procurement http:/kppp.karnataka.gov.in ಪಡೆದುಕೊಳ್ಳಬಹುದು. ಅರ್ಜಿ ಸಲ್ಲಿಸಲು ಇಚ್ಚಿಸುವ ಅರ್ಜಿದಾರರು ಮರಳು ಬ್ಲಾಕ್‌ಗಳಿಗೆ ಇ-ಟೆಂಡರ್‌ಗೆ ಅರ್ಜಿ ಸಲ್ಲಿಸುವ ಮುನ್ನ ಆಯಾ ಮರಳು ಬ್ಲಾಕ್‌ಗಳಿಗೆ ಅರ್ಹರಾಗಲು ವಿಧಿಸಲಾದ ಪೂರ್ವಾಹತ ಷರತ್ತು/ ನಿಬಂಧನೆಗಳ ಬಗ್ಗೆ ಖಾತರಿಪಡಿಸಿಕೊಳ್ಳತಕ್ಕದ್ದು.

ವಿಶೇಷ ಸೂಚನೆ: 1. ಟೆಕ್ನಿಕಲ್ ಇ-ಟೆಂಡರ್‌ನಲ್ಲಿ ಅರ್ಹರಾಗುವ ಬಿಡ್ಡುದಾರರು ಮುಂದಿನ ಹಂತದ ಫೈನಾನ್ಸಿಯಲ್ ಇ-ಟೆಂಡರ್ ಅರ್ಹರಾಗುತ್ತಾರೆ. 2) ಇ-ಟೆಂಡರ್‌ಗೆ ಸಂಬಂದಿಸಿದಂತೆ ಅರ್ಜಿ ಶುಲ್ಕ ರೂ 10,000/-ಗಳನ್ನು ಖಜಾನೆ-2/ಡಿಡಿ ಮೂಲಕ ಈ ಇಲಾಖೆಗೆ ಪಾವತಿಸುವುದು ಹಾಗೂ ಪ್ರೋಸಸಿಂಗ್ ಶುಲ್ಕವನ್ನು ಕರ್ನಾಟಕ ಸರ್ಕಾರದ http:/kppp.karnataka.gov.in ಮೂಲಕ ಪಾವತಿಸಬಹುದಾಗಿದೆ. 3) ಪಾಲಿಸಬೇಕಾದ ಷರತ್ತುಗಳು ಮತ್ತು ನಿಬಂಧನೆಗಳು ಹಾಗೂ ಹೆಚ್ಚಿನ ಮಾಹಿತಿಗಾಗಿ ಈ ಕಛೇರಿಯನ್ನು ಸಂಪರ್ಕಿಸಬಹುದು (ದೂರವಾಣಿ ಸಂಖ್ಯೆ: 08532-200647, 9449183943, 7026091877) 4.)ಇ-ಟೆಂಡರ್‌ಗೆ ಸಂಬಂದಿಸಿದಂತೆ ಪುನಃ ಯಾವುದೇ ಪತ್ರಿಕೆ ಪ್ರಕಟಣೆಯನ್ನು ನೀಡಲಾಗುವುದಿಲ್ಲ, e-procurement ಪೋರ್ಟಲ್ ಮೂಲಕ ಇ-ಟೆಂಡರ್‌ಗೆ ಸಂಬಂಧಿಸಿದ ದಿನಾಂಕ ಮತ್ತು ಸಮಯವನ್ನು ತಿಳಿಸಲಾಗುವುದು.

ಸಹಿ/- ಹಿರಿಯ ಭೂವಿಜ್ಞಾನಿ
ರಾಯಚೂರು

DIP/RCR/560KSMCA/567/2025-26

ಧನಸಹಾಯ ಯೋಜನೆ ಪುನರಾರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾಂಸ್ಕೃತಿಕ ವಾತಾವರಣ ರೂಪಿಸಲು ಶ್ರಮಿಸುತ್ತಿರುವ ಸಂಘ–ಸಂಸ್ಥೆಗಳಿಗೆ ಆರ್ಥಿಕ ನೆರವು ಒದಗಿಸುವ 'ಧನಸಹಾಯ' ಯೋಜನೆಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪುನರಾರಂಭಿಸಿದೆ.

2025–26ನೇ ಸಾಲಿಗೆ ಯೋಜನೆಯಡಿ ಆರ್ಥಿಕ ನೆರವಿಗೆ ಸಂಬಂಧಿಸಿ ಡಿ.1ರಿಂದ ಡಿ.30ರವರೆಗೆ ಅರ್ಜಿ ಸಲ್ಲಿಸಲು ಅವಕಾಶ ನೀಡಲಾಗಿದೆ. ಅನುದಾನದ ಕೊರತೆಯಿಂದಾಗಿ ಇಲಾಖೆಯು ಈ ಯೋಜನೆಯಡಿ 2024–25ನೇ ಸಾಲಿಗೆ ಸಾಂಸ್ಕೃತಿಕ ಸಂಘ–ಸಂಸ್ಥೆಗಳಿಗೆ ಆರ್ಥಿಕ ನೆರವು ಒದಗಿಸಿರಲಿಲ್ಲ.

ಅರ್ಹರು ಸೇವಾಸಿಂಧು ಪೋರ್ಟಲ್ ಮೂಲಕ ಅರ್ಜಿ ಸಲ್ಲಿಸಬೇಕಿದೆ. ನಿಗದಿತ ದಿನಾಂಕದ ನಂತರ ಬಂದ ಅರ್ಜಿಗಳನ್ನು ಪರಿಗಣಿಸುವುದಿಲ್ಲ. ನೇರವಾಗಿ ಅರ್ಜಿ ಸ್ವೀಕರಿಸುವುದಿಲ್ಲ. ಧನಸಹಾಯಕ್ಕೆ ಸಂಬಂಧಿಸಿದ ಮಾರ್ಗಸೂಚಿ www.kannadasiri.karnataka.gov.inನಲ್ಲಿ ಲಭ್ಯ ಎಂದು ಇಲಾಖೆ ನಿರ್ದೇಶಕಿ ಕೆ.ಎಂ. ಗಾಯಿತ್ರಿ ತಿಳಿಸಿದ್ದಾರೆ.

'ವಿಎಒ, ಆರ್‌ಐ: ಶೀಘ್ರ ಲ್ಯಾಪ್‌ಟಾಪ್'

'ಇ-ಆಫೀಸ್' ಮೂಲಕವೇ ಕೆಲಸ ಮಾಡಬೇಕೆಂಬ ಉದ್ದೇಶ: ಸಚಿವ

ಪ್ರಜಾವಾಣಿ ವಾರ್ತೆ

ಕೃಷ್ಣ ಬೈರೇಗೌಡ

ಬೆಂಗಳೂರು: 'ಇಲಾಖೆಯ ಅಧಿಕಾರಿ, ಸಿಬ್ಬಂದಿ 'ಇ-ಆಫೀಸ್' ಮೂಲಕವೇ ಕೆಲಸ ಮಾಡಬೇಕೆಂಬ ಉದ್ದೇಶದಿಂದ ಮುಂದಿನ ಮೂರು ತಿಂಗಳಲ್ಲಿ ಎಲ್ಲ ಗ್ರಾಮ ಆಡಳಿತಾಧಿಕಾರಿಗಳು (ವಿಎಒ) ಮತ್ತು ಕಂದಾಯ ನಿರೀಕ್ಷಕರಿಗೆ (ಆರ್‌ಐ) ಲ್ಯಾಪ್‌ಟಾಪ್ ನೀಡಲಾಗುವುದು. ಆ ಮೂಲಕ, ಎಲ್ಲ ಕೆಲಸಗಳನ್ನು ಶೇ 100ರಷ್ಟು ಆನ್‌ಲೈನ್ ವ್ಯಾಪ್ತಿಗೆ ತರಲಾಗುವುದು' ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಜಿಲ್ಲಾಧಿಕಾರಿಗಳ ಜೊತೆ ಶನಿವಾರ ಸಭೆ ನಡೆಸಿದ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಕಾಗದ ವ್ಯವಹಾರಕ್ಕೆ ಇತಿಶ್ರೀ ಹಾಡಬೇಕೆಂಬ ಏಕೈಕ ಕಾರಣಕ್ಕೆ ಸಚಿವ ಸಂಪುಟದ ಅನುಮತಿಯೊಂದಿಗೆ ಈಗಾಗಲೇ 5 ಸಾವಿರ ವಿಎಒಗಳಿಗೆ ಲ್ಯಾಪ್‌ಟಾಪ್ ನೀಡಲಾಗಿದೆ' ಎಂದರು.

'ಕಾಂಗ್ರೆಸ್ ಸರ್ಕಾರ ಆಡಳಿತಕ್ಕೆ ಬಂದ ಎರಡೂವರೆ ವರ್ಷಗಳ ಅವಧಿಯಲ್ಲಿ ಪೋಡಿ ದುರಸ್ತಿ, ಪೌತಿಖಾತೆ, ಭೂ ಸುರಕ್ಷಾ ಅಭಿಯಾನ ಮುಂತಾದ ಸೇವೆಗಳನ್ನು ಜನರ ಮನೆ ಬಾಗಿಲಿಗೆ ತಲುಪಿಸಿದ್ದೇವೆ' ಎಂದರು.

'2018ರಿಂದ 2023ರ ನಡುವೆ ಕೇವಲ 8,500 ಪ್ರಕರಣಗಳಲ್ಲಿ ಮಾತ್ರ ಪೋಡಿ ಮಾಡಲಾಗಿತ್ತು. ಇದೇ ವರ್ಷದ ಜನವರಿ ತಿಂಗಳಲ್ಲಿ 'ನನ್ನ ಭೂಮಿ' ಅಭಿಯಾನ ಆರಂಭಿಸಿ ಒಂದೇ ವರ್ಷದಲ್ಲಿ 1,49,600 ಹಿಡುವಳಿಗಳನ್ನು ದರ್ಖಾಸ್ತು ಪೋಡಿ ಅಳತೆಗೆ ತೆಗೆದುಕೊಂಡಿದ್ದೇವೆ. ಹಾಸನ ಜಿಲ್ಲೆಯಲ್ಲಿ 17 ಸಾವಿರ ಪ್ರಕರಣ ಅಳತೆಗೆ ತೆಗೆದುಕೊಂಡಿದ್ದು, ಇದನ್ನು ಸಾಂಕೇತಿಕವಾಗಿ ಜನಾರ್ಪಣೆ ಮಾಡುವ ಸಲುವಾಗಿ ಡಿ. 6ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ 'ಸಮರ್ಪಣಾ ದಿನ' ಕಾರ್ಯಕ್ರಮ ನಡೆಯಲಿದೆ' ಎಂದರು.

'ಸರ್ಕಾರಿ ಜಮೀನು ಮಂಜೂರುದಾರರಿಗೆ ದರ್ಖಾಸ್ತು ಪೋಡಿ ಅಭಿಯಾನದ ಅಡಿಯಲ್ಲಿ ಜಮೀನು ಸರ್ವೆ ಮಾಡಿ ಪೋಡಿ ಮಾಡಿಕೊಡಲಾಗುತ್ತಿದ್ದರೆ, ಖಾಸಗಿ ಜಮೀನು ಮಾಲೀಕರಿಗೂ ಸಹ ನಾವೇ ಸ್ವಯಂ ಪ್ರೇರಿತರಾಗಿ 'ಪೋಡಿ ಮುಕ್ತ ಗ್ರಾಮ' ಅಭಿಯಾನದ ಅಡಿ ಪೋಡಿ ಮಾಡಿಕೊಡುತ್ತಿದ್ದೇವೆ. ಈ ಹಿಂದೆ ತಿಂಗಳಿಗೆ ಸರಾಸರಿ 90 ಸಾವಿರ ಸರ್ವೆ ಮಾಡಲಾಗುತ್ತಿತ್ತು. ಈಗ ಸರಾಸರಿ 1.34 ಲಕ್ಷ ಸರ್ವೆ ಮಾಡಿಕೊಡುತ್ತಿದ್ದೇವೆ. ಸರ್ವೆ ಕಾರ್ಯಕ್ಕೆ ಸಹಕಾರಿಯಾಗಲು ಈಗಾಗಲೇ 600 ರೋವರ್ ಖರೀದಿ ಮಾಡಲಾಗಿದೆ. ಇನ್ನೂ 1000 ರೋವರ್‌ಗಳನ್ನು ಖರೀದಿಸಲಾಗುವುದು' ಎಂದರು.

ಪೌತಿ ಖಾತೆ ಅಭಿಯಾನ

'ರಾಜ್ಯದಲ್ಲಿ ಸುಮಾರು 40 ಲಕ್ಷ ಹಿಡುವಳಿಗಳಿಗೆ ಸಂಬಂಧಿಸಿದಂತೆ ಪೌತಿ ಖಾತೆ ಅಭಿಯಾನ ಆರಂಭಿಸಿದ್ದು, ಈವರೆಗೆ 3.20 ಲಕ್ಷ ಪೌತಿ ಖಾತೆ ಯಶಸ್ವಿಯಾಗಿದೆ. ಪ್ರತಿಯೊಬ್ಬ ವಿಎಒ ತಿಂಗಳಿಗೆ ಕಡ್ಡಾಯ 100 ಪೌತಿ ಖಾತೆ ಮಾಡಲು ಗುರಿ ನಿಗದಿಪಡಿಸಲಾಗಿದೆ. ಪ್ರಗತಿ ಸಾಧಿಸುವರಿಗೆ ಪ್ರೋತ್ಸಾಹ ಧನ ನೀಡುವಂತೆ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ' ಎಂದು ಸಚಿವರು ತಿಳಿಸಿದರು.

ಭೂ ಸುರಕ್ಷಾ ಅಭಿಯಾನ

'ಭೂ ಸುರಕ್ಷಾ ಅಭಿಯಾನದ ಅಡಿಯಲ್ಲಿ ಈವರೆಗೆ 53 ಕೋಟಿ ಪುಟಗಳನ್ನು ಸ್ಕ್ಯಾನ್ ಮಾಡಲಾಗಿದೆ. ಇನ್ನೂ 40 ಕೋಟಿ ಪುಟಗಳ ಸ್ಕ್ಯಾನ್ ಮಾಡುವ ಕೆಲಸ ಬಾಕಿ ಇದ್ದು, ಪ್ರತಿ ದಿನ ಸುಮಾರು 17,500 ಲಕ್ಷ ಪುಟ ಸ್ಕ್ಯಾನ್ ಮಾಡಲಾಗುತ್ತಿದೆ. ಫೆಬ್ರುವರಿ ಕೊನೆಯ ಒಳಗೆ ಇದನ್ನು ಮುಗಿಸಬೇಕು ಎಂದು ಗಡುವು ನೀಡಲಾಗಿದೆ' ಎಂದರು.

'ಪ್ರಕರಣಗಳ ಇತ್ಯರ್ಥಕ್ಕೆ ಆದ್ಯತೆ'

'ನಾನು ಕಂದಾಯ ಸಚಿವನಾಗಿ ಬಂದಾಗ ತಹಶೀಲ್ದಾರ್ ನ್ಯಾಯಾಲಯದಲ್ಲಿ 10,774 ಪ್ರಕರಣಗಳು ಅವಧಿ ಮೀರಿಯೂ ಇತ್ಯರ್ಥವಾಗದೆ ಬಾಕಿ ಇದ್ದವು. ಆ ಸಂಖ್ಯೆಯನ್ನು 526ಕ್ಕೆ ಇಳಿಸಲಾಗಿದೆ. ಎಸಿ (ಉಪ ವಿಭಾಗಾಧಿಕಾರಿ) ನ್ಯಾಯಾಲಯದಲ್ಲಿ 1 ವರ್ಷಕ್ಕಿಂತ ಹೆಚ್ಚು ಅವಧಿ ಮೀರಿದ 59,339 ಪ್ರಕರಣಗಳು ಬಾಕಿ ಇದ್ದವು. ವಿಶೇಷ ಎಸಿಗಳನ್ನು ನೇಮಿಸಿ ಈ ಸಂಖ್ಯೆಯನ್ನು 9,954ಕ್ಕೆ ಇಳಿಸಲಾಗಿದೆ' ಎಂದು ಕೃಷ್ಣ ಬೈರೇಗೌಡ ತಿಳಿಸಿದರು.

ಸುದ್ದಿ 2 ನಿಮಿಷ

ಜಲ ಜೀವನ: ₹13 ಸಾವಿರ ಕೋಟಿ ಬಾಕಿ ಕೊಡಿ: ಕೇಂದ್ರಕ್ಕೆ ಖರ್ಗೆ ಪತ್ರ

ಬೆಂಗಳೂರು: ರಾಷ್ಟ್ರೀಯ ಜಲಜೀವನ ಮಿಷನ್ ಅಭಿಯಾನದ ಅಡಿಯಲ್ಲಿ ಕರ್ನಾಟಕಕ್ಕೆ, ಕೇಂದ್ರ ಸರ್ಕಾರವು ತನ್ನ ಪಾಲಿನ ₹13,000 ಕೋಟಿ ಬಾಕಿ ಉಳಿಸಿಕೊಂಡಿದೆ. ಇದನ್ನು ತಕ್ಷಣವೇ ಬಿಡುಗಡೆ ಮಾಡಿ ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಪ್ರಿಯಾಂಕ್ ಖರ್ಗೆ ಅವರು ಕೇಂದ್ರ ಜಲಶಕ್ತಿ ಸಚಿವ ಸಿ.ಆರ್.ಪಾಟೀಲ ಅವರಿಗೆ ಪತ್ರ ಬರೆದಿದ್ದಾರೆ.

'ಕರ್ನಾಟಕಕ್ಕೆ ಒಟ್ಟು ₹69,487 ಕೋಟಿ ಮೊತ್ತದಷ್ಟು ಕಾಮಗಾರಿಗಳಿಗೆ ಅನುಮೋದನೆ ದೊರೆತಿದೆ. ಕರ್ನಾಟಕವು ತನ್ನ ಪಾಲಿನಲ್ಲಿ ಈಗಾಗಲೇ ₹24,598 ಕೋಟಿ ವೆಚ್ಚ ಮಾಡಿದೆ. ಈವರೆಗೆ ನಡೆದಿರುವ ಕಾಮಗಾರಿಗಳಿಗೆ ಕೇಂದ್ರ ಸರ್ಕಾರವು ಒಟ್ಟು ₹24,786 ಕೋಟಿ ಬಿಡುಗಡೆ ಮಾಡಬೇಕಿತ್ತು. ಆದರೆ ₹11.786 ಕೋಟಿಯನ್ನಷ್ಟೇ ನೀಡಿದ್ದು, ₹13,000 ಕೋಟಿ ಇನ್ನಷ್ಟೇ ಬಿಡುಗಡೆ ಮಾಡಬೇಕಿದೆ' ಎಂದಿದ್ದಾರೆ.

'ಪ್ರಸಕ್ತ ಆರ್ಥಿಕ ವರ್ಷದಲ್ಲಿ ಕೇಂದ್ರವು ಕರ್ನಟಕಕ್ಕೆ ₹3,804 ಕೋಟಿ ಹಂಚಿಕೆ ಮಾಡಿದೆ. ಆದರೆ ಅದರಲ್ಲಿ ಈವರೆಗೆ ಬಿಡುಗಡೆಯಾಗಿರುವುದು ₹570 ಕೋಟಿ ಮಾತ್ರ. ಆದರೆ ರಾಜ್ಯ ಸರ್ಕಾರವು ತನ್ನ ಪಾಲಿನ ವೆಚ್ಚವನ್ನು ಈಗಾಗಲೇ ಮಾಡಿದೆ. ರಾಜ್ಯದಲ್ಲಿ ಈ ಆರ್ಥಿಕ ವರ್ಷದಲ್ಲಿ ₹1,700 ಕೋಟಿ ಮೊತ್ತದಷ್ಟು ಕಾಮಗಾರಿ ಮುಗಿದಿದ್ದು, ₹2,600 ಕೋಟಿಯಷ್ಟು ಕಾಮಗಾರಿಗಳು ನಡೆಯುತ್ತಿವೆ. ಕೇಂದ್ರವು ಅನುದಾನ ಬಿಡುಗಡೆ ಮಾಡದೇ ಇರುವುದರಿಂದ ಕಾಮಗಾರಿಗಳು ಸ್ಥಗಿತವಾಗುವ ಸಾಧ್ಯತೆ ಇದೆ' ಎಂದಿದ್ದಾರೆ.

'ದೆಹಲಿಗೆ ಸಂಸದರ ನಿಯೋಗ'

ಬೆಂಗಳೂರು: 'ಮೆಕ್ಕೆಜೋಳ, ಕಬ್ಬು ದರ ನಿಗದಿ ಮತ್ತು ನೀರಾವರಿ ಯೋಜನೆ ಕುರಿತು ಸಂಸದರ ಜೊತೆ ಚರ್ಚಿಸಿ, ಈ ವಿಚಾರವಾಗಿ ಕೇಂದ್ರದ ಮೇಲೆ ಒತ್ತಡ ಹಾಕಲು ದೆಹಲಿಗೆ ಹೋಗುತ್ತೇವೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಮುಖ್ಯಮಂತ್ರಿ ಜೊತೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, 'ಮೆಕ್ಕೆ ಜೋಳ, ಕಬ್ಬು ದರ ನಿಗದಿ ಹಾಗೂ ನೀರಾವರಿ ಯೋಜನೆಗಳಿಗೆ ಸಂಬಂಧಿಸಿ ಸಂಸತ್ ಅಧಿವೇಶನದಲ್ಲಿ ಸಂಸದರು ಧ್ವನಿ ಎತ್ತಬೇಕಿದೆ. ಈ ವಿಚಾರವಾಗಿ ಸಂಸದರ ಜೊತೆ ನಾವು ಚರ್ಚೆ ಮಾಡಬೇಕಿದೆ' ಎಂದರು.

'ಮೆಕ್ಕೆಜೋಳ ವಿಚಾರದಲ್ಲಿ ಕೇಂದ್ರ ಸರ್ಕಾರ ರಾಜ್ಯಕ್ಕೆ ಸಹಕಾರ ನೀಡುತ್ತಿಲ್ಲ. ಈ ವಿಚಾರದಲ್ಲಿಯೂ ಕೇಂದ್ರದ ನೆರವು ಪಡೆಯುವುದು ರಾಜ್ಯದ ಹಕ್ಕು. ಮುಖ್ಯಮಂತ್ರಿಯವರು ಪ್ರಧಾನ ಮಂತ್ರಿ ಅವರನ್ನು ಇತ್ತೀಚೆಗೆ ಭೇಟಿ ಮಾಡಿ ಮನವಿ ಸಲ್ಲಿಸಿದ್ದಾರೆ. ನಾವೆಲ್ಲರೂ ಒಟ್ಟಾಗಿ ರಾಜ್ಯದ ಹಿತ ಕಾಪಾಡಬೇಕಿದೆ. ನಿಯೋಗದ ಜೊತೆ ಬರುವಂತೆ ಕೇಂದ್ರ ಸಚಿವರಿಗೂ ತಿಳಿಸಿದ್ದೇವೆ' ಎಂದರು.

'ಮೇಕೆದಾಟು ಯೋಜನೆ ವಿಚಾರದಲ್ಲಿ ಈಗ ಚೆಂಡು ಕೇಂದ್ರ ಸರ್ಕಾರದ ಜಲ ಆಯೋಗದ ಅಂಗಳದಲ್ಲಿದೆ. ನಾವು ಇದಕ್ಕೆ ಪರಿಷ್ಕೃತ ಡಿಪಿಆರ್ ಸಲ್ಲಿಸುತ್ತೇವೆ. ಜೊತೆಗೆ, ಇತರೆ ನೀರಾವರಿ ಯೋಜನೆಗಳ ಬಗ್ಗೆಯೂ ಚರ್ಚೆ ಮಾಡಬೇಕಿದೆ' ಎಂದರು.

'ಮಠಾಧೀಶರಿಗೆ ರಾಜಕಾರಣ ಬೇಡ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸ್ವಾಮೀಜಿಗಳು ಒಬ್ಬ ವ್ಯಕ್ತಿ, ರಾಜಕಾರಣಿಯ ಪರವಾಗಿ ಅಭಿಪ್ರಾಯ ವ್ಯಕ್ತಪಡಿಸುವುದನ್ನು ಬಿಡಬೇಕು. ಕಾಂಗ್ರೆಸ್‌ನ ಆಂತರಿಕ ಕಲಹದಲ್ಲಿ ಸ್ವಾಮೀಜಿಗಳ ಮಧ್ಯಪ್ರವೇಶ ಅನಗತ್ಯ' ಎಂದು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, 'ರಾಜಕಾರಣಿಗಳು ರಾಜಕಾರಣ ಮಾಡಿಕೊಳ್ಳುತ್ತಾರೆ. ಧರ್ಮಾಧಿಕಾರಿಗಳು ಮತ್ತು ಸ್ವಾಮೀಜಿಗಳು ಧಾರ್ಮಿಕ ಕೆಲಸಗಳನ್ನು ಮಾಡಬೇಕು. ರಾಜಕಾರಣಿಗಳ ಪರವಾಗಿ ಮಾತನಾಡುವ ವ್ಯಾಮೋಹ ಬಿಡಬೇಕು' ಎಂದರು.

'ಜಾತಿ–ಧರ್ಮಗಳ ಹೆಸರು ಹೇಳಿಕೊಂಡು ಧಾರ್ಮಿಕ ಕ್ಷೇತ್ರಗಳನ್ನು ದುರುಪಯೋಗ ಮಾಡಿಕೊಳ್ಳುವುದು, ಅದರ ಆಧಾರದಲ್ಲಿ ರಾಜಕಾರಣ ಮಾಡುವುದು ಯಾರಿಗೂ ಶೋಭೆ ತರುವುದಿಲ್ಲ. ಸಮಾಜದಲ್ಲಿ ಜಾತಿ ಸಂಘರ್ಷಕ್ಕೆ ಯಾರೂ ಕಾರಣ ಆಗಬಾರದು. ಕಾಂಗ್ರೆಸ್ ಪಕ್ಷದ ಕಲಹದಲ್ಲಿ ಜಾತಿ–ಧರ್ಮಗಳನ್ನು ಎಳೆದು ತರಬೇಕಾಗಿಲ್ಲ. ಧರ್ಮಗುರುಗಳಿಗೆ ನಾನು ಮಾಡಿಕೊಳ್ಳುವ ಮನವಿ ಇದು' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

> **ರಾಜಕಾರಣಕ್ಕೆ ಜಾತಿಯನ್ನು ತಂದೊಡನೆ ಸಮಾಜದಲ್ಲಿ ಶಾಂತಿ ಕದಡುತ್ತದೆ. ಒಕ್ಕಲಿಗ, ಕುರುಬ, ಹಿಂದುಳಿದ ವರ್ಗದ ಯಾವುದೇ ಸ್ವಾಮೀಜಿ ಆದರೂ ರಾಜಕಾರಣದಿಂದ ದೂರ ಇರಬೇಕು**
> **ಎಚ್.ಡಿ.ಕುಮಾರಸ್ವಾಮಿ,** ಕೇಂದ್ರ ಸಚಿವ

'140 ಜನ ಶಾಸಕರಿದ್ದೂ ಈ ಸರ್ಕಾರ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಅಧಿಕಾರಕ್ಕಾಗಿ ಕಿತ್ತಾಡಿಕೊಂಡು ಕೂತಿದ್ದಾರೆ. ಜಾತಿ ರಾಜಕಾರಣ ಜೋರಾಗಿದೆ. ಸ್ವಾಮೀಜಿಗಳು, ಜಾತಿ ರಾಜಕಾರಣಕ್ಕೆ ಬಳಕೆಯಾಗಬಾರದು' ಎಂದರು.

'ಡಿ.ಕೆ. ಶಿವಕುಮಾರ್ ಅವರಿಗೆ ಮುಖ್ಯಮಂತ್ರಿ ಸ್ಥಾನ ನೀಡಬೇಕು' ಎಂದು ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಹಾಗೂ ಸ್ಫಟಿಕಪುರಿ ಮಠದ ನಂಜಾವಧೂತ ಸ್ವಾಮೀಜಿ ಆಗ್ರಹಿಸಿದ್ದರು. ಕಾಗಿನೆಲೆ ಕನಕ ಗುರುಪೀಠದ ನಿರಂಜನಾನಂದಪುರಿ ಸ್ವಾಮೀಜಿ ಅವರು 'ಸಿದ್ದರಾಮಯ್ಯ ಅವರನ್ನು ಬದಲಿಸಬಾರದು' ಎಂದು ಒತ್ತಾಯಿಸಿದ್ದರು.

ಒಣ ಪ್ರತಿಷ್ಠೆಯಿಂದ ಗೊಂದಲ: ಅಶೋಕ

'ರಾಜ್ಯ ಸರ್ಕಾರದ ನಾಯಕತ್ವ ಬದಲಾವಣೆ ಗೊಂದಲ ಸೃಷ್ಟಿಸಿದ್ದು ಮಾಧ್ಯಮದವರು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿದ್ದಾರೆ. ನಿಜಕ್ಕೂ ಈ ಗೊಂದಲ ನಿರ್ಮಾಣವಾಗಿದ್ದು ಈ ಇಬ್ಬರ ಒಣಪ್ರತಿಷ್ಠೆಯಿಂದ' ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ ಹೇಳಿದ್ದಾರೆ.

'ಎಕ್ಸ್'ನಲ್ಲಿ ಪೋಸ್ಟ್ ಮಾಡಿರುವ ಅವರು, 'ನವೆಂಬರ್‌ನಲ್ಲಿ 'ಕ್ರಾಂತಿ' ಎಂದು ಕರೆ ನೀಡಿ, ಹೇಳಿಕೆಗಳ ಮೇಲೆ ಹೇಳಿಕೆ ಕೊಟ್ಟು, ಪಕ್ಷದಲ್ಲಿ ಗೊಂದಲದ ವಾತಾವರಣ ಸೃಷ್ಟಿಸಿದ್ದು ಪತ್ರಕರ್ತರಾ' ಎಂದು ಪ್ರಶ್ನಿಸಿದ್ದಾರೆ.

"ಕೊಟ್ಟ ಮಾತು ಉಳಿಸಿಕೊಳ್ಳುವವನು ನಿಜವಾದ ನಾಯಕ,' 'ಐದಾರು ಜನರ ಮಧ್ಯೆ ನಡೆದಿರುವ ವ್ಯಾಪಾರ', 'ಐದು ವರ್ಷ ನಾನೇ ಸಿಎಂ' ಎಂದೆಲ್ಲಾ ಬಹಿರಂಗ ಹೇಳಿಕೆಗಳ ಮೂಲಕ ಬಿಕ್ಕಟ್ಟು ಸೃಷ್ಟಿಸಿದ್ದು ಪತ್ರಕರ್ತರಾ? ಶಕ್ತಿ ಪ್ರದರ್ಶನಕ್ಕೆಂದು ಶಾಸಕರ ಗುಂಪುಗಳನ್ನು ಕಟ್ಟಿಕೊಂಡು ದೆಹಲಿಗೆ ಹೋಗಿ, ಗುಪ್ತ ಸಭೆಗಳನ್ನು ನಡೆಸಿದ್ದು ಪತ್ರಕರ್ತರಾ?' ಎಂದಿದ್ದಾರೆ.

ಉತ್ತರ ಕರ್ನಾಟಕದ ಸಮಸ್ಯೆ ಚರ್ಚಿಸಿ: ಜೆಡಿಎಸ್–ಬಿಜೆಪಿ ಆಗ್ರಹ

'20 ದಿನ ಅಧಿವೇಶನ ನಡೆಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಳಗಾವಿ ಅಧಿವೇಶನವನ್ನು ಕನಿಷ್ಠ 20 ದಿನ ನಡೆಸಬೇಕು. ಉತ್ತರ ಕರ್ನಾಟಕದ ಸಮಸ್ಯೆಗಳ ಚರ್ಚೆಗೆ ಹೆಚ್ಚಿನ ಅವಕಾಶ ನೀಡಬೇಕು' ಎಂದು ಬಿಜೆಪಿ ಮತ್ತು ಜೆಡಿಎಸ್ ಆಗ್ರಹಿಸಿವೆ.

ಬೆಳಗಾವಿಯ ಸುವರ್ಣಸೌಧದಲ್ಲಿ ನಡೆಯಲಿರುವ ಚಳಿಗಾಲದ ಅಧಿವೇಶನಕ್ಕೆ ಪೂರ್ವಸಿದ್ಧತೆ ಮಾಡಿಕೊಳ್ಳಲು ಬಿಜೆಪಿ ಮತ್ತು ಜೆಡಿಎಸ್ ಸಮನ್ವಯ ಸಮಿತಿ ಸಭೆ ಶನಿವಾರ ನಡೆಯಿತು.

ಸಭೆಯ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ, '10 ದಿನ ಅಧಿವೇಶನ ನಡೆಸಲು ಸರ್ಕಾರವು ಸಿದ್ಧತೆ ಮಾಡಿಕೊಂಡಿದೆ. ಉತ್ತರ ಕರ್ನಾಟಕಕ್ಕೆ ಸಂಬಂಧಿಸಿದ 10–12 ಗಂಭೀರ ಸಮಸ್ಯೆಗಳು ಇದ್ದು, ಅವುಗಳ ಚರ್ಚೆಗೆ ಇಷ್ಟು ಕಡಿಮೆ ಅವಧಿ ಸಾಲುವುದಿಲ್ಲ. ಹೀಗಾಗಿ 20 ದಿನವಾದರೂ ಅಧಿವೇಶನ ನಡೆಸಬೇಕು' ಎಂದರು.

ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್.ಅಶೋಕ, 'ಕಾಟಾಚಾರಕ್ಕಾಗಿ ಈ ಅಧಿವೇಶನ ನಡೆಸುತ್ತಿದ್ದಾರೆ. ಉತ್ತರ ಕರ್ನಾಟಕದ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಬೇಕು ಎಂದು ಬೆಳಗಾವಿ ಅಧಿವೇಶನ ಆರಂಭಿಸಲಾಗಿತ್ತು. ಆದರೆ ಕಾಂಗ್ರೆಸ್ ಸರ್ಕಾರವು ಅಲ್ಲಿಯೂ ಬೆಂಗಳೂರಿನ ಸಮಸ್ಯೆಗಳನ್ನೇ ಚರ್ಚೆಗೆ ಎತ್ತಿಕೊಳ್ಳುತ್ತದೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ರಾಜ್ಯ ಸರ್ಕಾರದ ದುರಾಡಳಿತ, ಹಗರಣಗಳ ವಿರುದ್ಧ ಬಿಜೆಪಿ ಮತ್ತು ಜೆಡಿಎಸ್ ಒಟ್ಟಾಗಿ ಹೋರಾಟ ನಡೆಸಿವೆ. ಮುಡಾ ಹಗರಣ, ವಾಲ್ಮೀಕಿ ನಿಗಮದ ಹಣ ದುರ್ಬಳಕೆ ಪ್ರಕರಣ, ಚಿನ್ನಸ್ವಾಮಿ ಕ್ರೀಡಾಂಗಣ ಕಾಲ್ತುಳಿತ ಅವಘಡದ ವಿಚಾರದಲ್ಲಿ ಎರಡೂ ಪಕ್ಷದ ಶಾಸಕರು, ಸದಸ್ಯರು ಒಗ್ಗಟ್ಟಿನಿಂದ ಹೋರಾಡಿದ್ದಾರೆ. ನಮ್ಮ ಮಧ್ಯೆ ಯಾವುದೇ ಸಮಸ್ಯೆ ಇಲ್ಲ. ಮುಂದೆಯೂ ಇರುವುದಿಲ್ಲ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

2028ರ ಚುನಾವಣೆಯಲ್ಲಿ ಜೆಡಿಎಸ್ ಅನ್ನು ಸ್ವತಂತ್ರವಾಗಿ ಅಧಿಕಾರಕ್ಕೆ ತರಬೇಕು ಎಂದು ಪಕ್ಷದ ನಾಯಕರು ಕರೆ ನೀಡಿರುವ ಬಗ್ಗೆ ಕೇಳಿದ ಪ್ರಶ್ನೆಗೆ ಎರಡೂ ಪಕ್ಷದ ನಾಯಕರು ಉತ್ತರಿಸಲು ನಿರಾಕರಿಸಿದರು. ಅಧಿವೇಶನದಲ್ಲಿ ಸರ್ಕಾರದ ವಿರುದ್ಧ ಅವಿಶ್ವಾಸ ಗೊತ್ತುವಳಿ ನಿರ್ಣಯ ಮಂಡಿಸುವ ಬಗ್ಗೆ ಕೇಳಿದ ಪ್ರಶ್ನೆಗೂ ಪ್ರತಿಕ್ರಿಯೆ ನೀಡಲಿಲ್ಲ.

ಎನ್‌ಡಿಎ ಸಮನ್ವಯ ಸಮಿತಿ ಸಭೆಯಲ್ಲಿ ಛಲವಾದಿ ನಾರಾಯಣಸ್ವಾಮಿ, ಆರ್.ಅಶೋಕ, ಎಚ್.ಡಿ.ಕುಮಾರಸ್ವಾಮಿ ಭಾಗಿಯಾಗಿದ್ದರು – ಪ್ರಜಾವಾಣಿ ಚಿತ್ರ

ನನ್ನ ಹೇಳಿಕೆ ತಿರುಚಲಾಗಿದೆ: ಡಿ.ಕೆ.ಸುರೇಶ್

ನವದೆಹಲಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಕೊಟ್ಟ ಮಾತಿನಂತೆ ನಡೆದುಕೊಳ್ಳಬೇಕು ಎಂದು ನಾನು ಹೇಳಿಕೆ ನೀಡಿಲ್ಲ. ನಾನು ಹೇಳಿದ್ದು ಬೇರೆ ರೀತಿ. ಅದನ್ನು ನೀವು (ಮಾಧ್ಯಮದವರು) ತಿರುಚಿದ್ದೀರಿ' ಎಂದು ಬಮೂಲ್ ಅಧ್ಯಕ್ಷ ಡಿ.ಕೆ. ಸುರೇಶ್ ದೂಷಿಸಿದರು.

ಶನಿವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿ, 'ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿಯವರು ಎಲ್ಲ ಗೊಂದಲಗಳಿಗೆ ತೆರೆ ಎಳೆಯುವ ಪ್ರಯತ್ನ ಮಾಡಿದ್ದಾರೆ, ಸ್ಪಷ್ಟನೆಯನ್ನೂ ಕೊಟ್ಟಿದ್ದಾರೆ. ಇನ್ನೂ ಹೆಚ್ಚಿನದ್ದೇನಾದರೂ ಇದ್ದರೇ ಅದನ್ನು ವರಿಷ್ಠರು ಬಗೆಹರಿಸುತ್ತಾರೆ' ಎಂದರು.

ಸೋನಿಯಾಗಾಂಧಿ ತ್ಯಾಗದ ಬಗ್ಗೆ ಮುಖ್ಯಮಂತ್ರಿ ಸಮ್ಮುಖದಲ್ಲೇ ಶಿವಕುಮಾರ್ ಹೇಳಿಕೆ ನೀಡಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಡಿಸಿಎಂ ಅವರು ನೆಹರೂ ಕುಟುಂಬದ ತ್ಯಾಗ, ಬಲಿದಾನದ ಬಗ್ಗೆ ಹೇಳುತ್ತಿರುತ್ತಾರೆ. ಇದೇನು ಹೊಸದಲ್ಲ' ಎಂದು ಹೇಳಿದರು.

'ಕೆಪಿಸಿಸಿ ಅಧ್ಯಕ್ಷ ಸ್ಥಾನ, ಉಪಮುಖ್ಯಮಂತ್ರಿ ಹುದ್ದೆ ಇದೆಲ್ಲವೂ ಪಕ್ಷ ನೀಡಿರುವ ಹುದ್ದೆಯೇ. ಆದ ಕಾರಣ ಇದರ ಬಗ್ಗೆ ಮತ್ತೆ ಮಾತನಾಡುವುದು ಸೂಕ್ತವಲ್ಲ' ಎಂದರು.

ಕೆ–ಸೆಟ್ ಪಾಸಾದ ಕಂಡಕ್ಟರ್, ಮಾರ್ಷಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (ಕೆಇಎ) ನಡೆಸಿದ ರಾಜ್ಯ ಸಹಾಯಕ ಪ್ರಾಧ್ಯಾಪಕರ ಅರ್ಹತಾ ಪರೀಕ್ಷೆಯಲ್ಲಿ (ಕೆ–ಸೆಟ್) ಬಿಎಂಟಿಸಿ ಮಹಿಳಾ ಕಂಡಕ್ಟರ್ ಮತ್ತು ಜಿಬಿಎ ಮಾರ್ಷಲ್ ಒಬ್ಬರು ಅರ್ಹತೆ ಪಡೆದಿದ್ದಾರೆ.

ಪರೀಕ್ಷೆಯಲ್ಲಿ ಅರ್ಹತೆ ಪಡೆದವರ ದಾಖಲೆಗಳನ್ನು ಪರಿಶೀಲಿಸುವ ಕಾರ್ಯವನ್ನು ಕೆಇಎ ಕಚೇರಿಯ ನವೀಕೃತ ಸಭಾಂಗಣದಲ್ಲಿ ನಡೆಸಲಾಯಿತು. ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಅವರು ಸಾಂಕೇತಿಕವಾಗಿ ಕೆಲ ಅಭ್ಯರ್ಥಿಗಳಿಗೆ ಪ್ರಮಾಣ ಪತ್ರ ವಿತರಿಸಿದರು.

ಬಿಎಂಟಿಸಿಯಲ್ಲಿ ಕಂಡಕ್ಟರ್ ಆಗಿರುವ ಜಯಮ್ಮ, 'ಕೆಇಎಯ ಪಾರದರ್ಶಕ ವ್ಯವಸ್ಥೆಯ ಕಾರಣದಿಂದ ನಮ್ಮಂತಹ ಬಡವರೂ ಕೆ–ಸೆಟ್ ಪರೀಕ್ಷೆಯಲ್ಲಿ ಅರ್ಹತೆ ಪಡೆಯಲು ಸಾಧ್ಯವಾಗಿದೆ. ಉಪನ್ಯಾಸಕಿಯಾಗಬೇಕು ಎಂಬ ನನ್ನ ಕನಸು' ಎಂದರು.

ಜಿಬಿಎಯ ತ್ಯಾಜ್ಯ ವಿಲೇವಾರಿ ಘಟಕದಲ್ಲಿ ಮಾರ್ಷಲ್ ಆಗಿ ಕಾರ್ಯನಿರ್ವಹಿಸುತ್ತಿರುವ ಅರವಿಂದ ಅವರು, 'ತ್ಯಾಜ್ಯ ವಿಲೇವಾರಿ ಘಟಕದ ಬಳಿಯೂ ಸಮಯ ಸಿಕ್ಕಾಗ ಓದುತ್ತಿದ್ದೆ. ಅದು ನನ್ನ ಕೈಹಿಡಿಯಿತು' ಎಂದರು.

ಚಟಿಕೆ ಸುದ್ದಿ

ಪಿಜಿ ವೈದ್ಯಕೀಯ ಮೊದಲ ಸುತ್ತಿನ ಸೀಟು ಹಂಚಿಕೆ

ಬೆಂಗಳೂರು: ಪಿಜಿ ವೈದ್ಯಕೀಯ ಕೋರ್ಸ್‌ಗಳ ಮೊದಲ ಸುತ್ತಿನ ಸೀಟು ಹಂಚಿಕೆಯ ಪಟ್ಟಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರವು ಶನಿವಾರ ಪ್ರಕಟಿಸಿದೆ.

ಛಾಯ್ಸ್ ದಾಖಲಿಸಲು ಡಿ. 2ರವರೆಗೆ ಕಾಲಾವಕಾಶ ನೀಡಲಾಗಿದೆ. ಛಾಯ್ಸ್–1 ಮತ್ತು ಛಾಯ್ಸ್–2 ದಾಖಲಿಸಿದವರು ಡಿ.4ರ ಒಳಗೆ ಶುಲ್ಕ ಪಾವತಿಸಬೇಕು. ಛಾಯ್ಸ್–1 ಆಯ್ಕೆ ಮಾಡಿಕೊಂಡ ಅಭ್ಯರ್ಥಿಗಳು ಡಿ.2ರಿಂದ 5ರವರೆಗೆ ಪ್ರಾಧಿಕಾರದ ಕಚೇರಿಯಲ್ಲಿ ಮೂಲ ದಾಖಲೆ ಸಲ್ಲಿಸಬೇಕು. ಮೂಲ ದಾಖಲೆ ಸಲ್ಲಿಸಿದ ನಂತರ ಡಿ.6ರ ಒಳಗೆ ಪ್ರವೇಶ ಪತ್ರ ಡೌನ್‌ಲೋಡ್ ಮಾಡಿಕೊಂಡು, ಕಾಲೇಜುಗಳಲ್ಲಿ ವರದಿ ಮಾಡಿಕೊಳ್ಳಬೇಕು ಎಂದು ವಿವರಿಸಿದೆ.

ಕಲೇಸಂ: ಕಣದಲ್ಲಿ ಸುನಂದಮ್ಮ, ನಿರ್ಮಲಾ

ಸುನಂದಮ್ಮ

ನಿರ್ಮಲಾ

ಬೆಂಗಳೂರು: ಕರ್ನಾಟಕ ಲೇಖಕಿಯರ ಸಂಘದ (ಕಲೇಸಂ) ಅಧ್ಯಕ್ಷ ಸ್ಥಾನಕ್ಕೆ ನಡೆಯಲಿರುವ ಚುನಾವಣೆಯಲ್ಲಿ ಲೇಖಕಿಯರಾದ ಆರ್. ಸುನಂದಮ್ಮ ಮತ್ತು ನಿರ್ಮಲಾ ಸಿ. ಎಲಿಗಾರ್ ಕಣದಲ್ಲಿ ಇದ್ದಾರೆ.

ಅಧ್ಯಕ್ಷ ಸ್ಥಾನಕ್ಕೆ ಇಬ್ಬರು ಮಾತ್ರ ನಾಮಪತ್ರ ಸಲ್ಲಿಸಿದ್ದು, ಚುನಾವಣಾಧಿಕಾರಿ ಪ್ರತಿಭಾ ಆರ್. ಶನಿವಾರ ಅಂತಿಮ ಪಟ್ಟಿ ಪ್ರಕಟಿಸಿದ್ದಾರೆ. ಅಂತಿಮ ಕಣದಲ್ಲಿರುವ ಸುನಂದಮ್ಮ ಮತ್ತು ನಿರ್ಮಲಾ ಅವರ ನಡುವೆ ನೇರ ಹಣಾಹಣಿ ಏರ್ಪಟ್ಟಿದೆ.

ಡಿ.14ರಂದು ಬೆಳಿಗ್ಗೆ 10ರಿಂದ ಸಂಜೆ 4 ಗಂಟೆಯವರೆಗೆ ಬೆಂಗಳೂರಿನ ಶಂಕರಪುರದಲ್ಲಿರುವ ಅಶೋಕ ಶಿಶುವಿಹಾರದಲ್ಲಿ ಮತದಾನಕ್ಕೆ ಅವಕಾಶ ನೀಡಲಾಗಿದೆ. ಅದೇ ದಿನ ಸಂಜೆ ಫಲಿತಾಂಶ ಘೋಷಣೆಯಾಗಲಿದೆ.

'ಶರಾವತಿ ಪಂಪ್ಡ್ ಸ್ಟೋರೇಜ್' ಯೋಜನೆಗೆ ವಿರೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ' ವಿರೋಧಿಸಿ ಇಲ್ಲಿನ ಸ್ವಾತಂತ್ರ್ಯ ಉದ್ಯಾನದಲ್ಲಿ 'ಪರಿಸರಕ್ಕಾಗಿ ನಾವು' ಸಂಘಟನೆಯ (ಪರಿಸರ ಕಾರ್ಯಕರ್ತರ ರಾಜ್ಯ ಸಂಘಟನೆ) ನೇತೃತ್ವದಲ್ಲಿ ಶನಿವಾರ ಪ್ರತಿಭಟನೆ ನಡೆಯಿತು.

ಪ್ರತಿಭಟನೆಯಲ್ಲಿ ಪರಿಸರಾಸಕ್ತರು, ಬರಹಗಾರರು, ರೈತ ಪರ ಹೋರಾಟಗಾರರು ಸೇರಿದಂತೆ ವಿವಿಧ ಸಂಘಟನೆಗಳ ಮುಖಂಡರು ಪಾಲ್ಗೊಂಡಿದ್ದರು. ಯೋಜನೆಯನ್ನು ಕೈಬಿಡುವಂತೆ ಪ್ರತಿಭಟನಕಾರರು ಆಗ್ರಹಿಸಿದರು. ಯೋಜನೆ ಕೈಬಿಡದಿದ್ದರೆ ಜನಾಂದೋಲನ ನಡೆಸಲಾಗುವುದು ಎಂದು ಹೋರಾಟಗಾರರು ಎಚ್ಚರಿಸಿದರು. ರಾಜ್ಯ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು.

> **ಬಂಡವಾಳಶಾಹಿಗಳು ಸರ್ಕಾರವನ್ನು ನಿಯಂತ್ರಿಸುತ್ತಿದ್ದಾರೆ. ಇದೇ ಧೋರಣೆ ಮುಂದುವರಿಸಿದರೆ ಎರಡೂವರೆ ವರ್ಷದ ಬಳಿಕ ಅಧಿಕಾರ ಕಳೆದುಕೊಳ್ಳಬೇಕಾಗುತ್ತದೆ**
> **ವಿ.ಗೋಪಾಲಗೌಡ,** ನಿವೃತ್ತ ನ್ಯಾಯಮೂರ್ತಿ

> **ವಿಸ್ತೃತ ಯೋಜನಾ ವರದಿಯನ್ನು ಬಹಿರಂಗ ಪಡಿಸಿಲ್ಲ. ಅಂದಾಜು ₹400 ಕೋಟಿ ವೆಚ್ಚ ಮಾಡಿ ತರಾತುರಿಯಲ್ಲಿ ಯೋಜನೆ ಜಾರಿ ಮಾಡುತ್ತಿರುವುದು ಅನುಮಾನಕ್ಕೆ ಕಾರಣವಾಗಿದೆ**
> **ಸಂತೋಷ ಹೆಗ್ಡೆ,** ನಿವೃತ್ತ ನ್ಯಾಯಮೂರ್ತಿ

ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ವಿ.ಗೋಪಾಲಗೌಡ ಮಾತನಾಡಿ, 'ಪರಿಸರ, ಕೆರೆಗಳನ್ನು ಸಂರಕ್ಷಣೆ ಮಾಡಬೇಕೆಂದು ಸಂವಿಧಾನದಲ್ಲಿ ಉಲ್ಲೇಖಿಸಲಾಗಿದೆ. ಆದರೆ, ಪರಿಸರವನ್ನು ಹಾಳು ಮಾಡಲಾಗುತ್ತಿದೆ' ಎಂದು ಬೇಸರ ವ್ಯಕ್ತಪಡಿಸಿದರು.

ಸಂಘಟನೆಯ ರಾಜ್ಯ ಘಟಕದ ಅಧ್ಯಕ್ಷ ಎ.ಟಿ.ರಾಮಸ್ವಾಮಿ ಮಾತನಾಡಿ, 'ದಕ್ಷಿಣ ಭಾರತದ ಬಹುತೇಕ ನದಿಗಳ ಉಗಮ ಸ್ಥಾನ ಪಶ್ಚಿಮಘಟ್ಟ. ದಕ್ಷಿಣ ಭಾರತದ ಜಲಗೋಪುರ ಎಂದು ಪಶ್ಚಿಮಘಟ್ಟವನ್ನು ಕರೆಯಲಾಗುತ್ತಿದೆ. ಈ ಘಟ್ಟವನ್ನು ಸಂರಕ್ಷಣೆ ಮಾಡಬೇಕು. ಈ ಯೋಜನೆ ಜಾರಿ ಮಾಡಲು ಮುಂದಾಗಿರುವ ಸ್ಥಳವು ವನ್ಯಜೀವಿಗಳ ಸಂರಕ್ಷಣಾ ಪ್ರದೇಶದಲ್ಲಿದೆ. ಯೋಜನೆ ಜಾರಿಯಾದರೆ ವನ್ಯಜೀವಿಗಳಿಗೆ ಆಪತ್ತು ಎದುರಾಗಲಿದೆ' ಎಂದು ಅವರು ಎಚ್ಚರಿಸಿದರು.

ರಾಜ್ಯ ನೀತಿ ಮತ್ತು ಯೋಜನಾ ಆಯೋಗದ ಉಪಾಧ್ಯಕ್ಷ ಬಿ.ಆರ್. ಪಾಟೀಲ, ನಿಡಸೋಸಿ ಮಠದ ನಿಜಲಿಂಗಾನಂದ ಸ್ವಾಮೀಜಿ, ಅರಕಲಗೂಡು ತಾಲ್ಲೂಕಿನ ಕೆಸವತ್ತೂರು ಮಠದ ಬಸವರಾಜೇಂದ್ರ ಸ್ವಾಮೀಜಿ, ಕುಶಾಲನಗರ ತಾಲ್ಲೂಕಿನ ತೊರೆನೂರು ಮಠದ ಮಲ್ಲೇಶ ಸ್ವಾಮೀಜಿ, ಪರಿಸರ ಹೋರಾಟಗಾರ ಸುರೇಶ್ ಹೆಬ್ಳೀಕರ್, ನಾಡಗೌಡ, ಪರಿಸರ ಲೇಖಕ ನಾಗೇಶ ಹೆಗಡೆ, ರೈತ ಮುಖಂಡರಾದ ಕೆ.ಟಿ.ಗಂಗಾಧರ, ಬಡಗಲಪುರ ನಾಗೇಂದ್ರ ಹಾಗೂ ಜಾಣಗೆರೆ ವೆಂಕಟರಾಮಯ್ಯ, ಇಂದೂಧರ ಹೊನ್ನಾಪುರ, ಸಂಘಟನೆಯ ಪ್ರಧಾನ ಕಾರ್ಯದರ್ಶಿ ಪರಶುರಾಮೇಗೌಡ ಹಾಜರಿದ್ದರು.

'ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ' ವಿರೋಧಿಸಿ ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ 'ಪರಿಸರಕ್ಕಾಗಿ ನಾವು' ಸಂಘಟನೆಯ ನೇತೃತ್ವದಲ್ಲಿ ಶನಿವಾರ ಪ್ರತಿಭಟನೆ ನಡೆಯಿತು – ಪ್ರಜಾವಾಣಿ ಚಿತ್ರ

ಅಭಿಯಾನಕ್ಕೆ 5 ಜಿಲ್ಲೆಗಳು ಆಯ್ಕೆ

ಮೈಸೂರು: ಗ್ರಾಮ ಪಂಚಾಯಿತಿಗಳ ವ್ಯಾಪ್ತಿಯಲ್ಲಿನ ಆಸ್ತಿಗಳನ್ನು ತೆರಿಗೆ ವ್ಯಾಪ್ತಿಗೆ ಒಳಪಡಿಸಿ, ಇ-ಸ್ವತ್ತು ತಂತ್ರಾಂಶದಲ್ಲಿ ನಿಯಮಾನುಸಾರ ನಮೂನೆಗಳನ್ನು ವಿತರಿಸಲು ಪ್ರಾಯೋಗಿಕವಾಗಿ ಅಭಿಯಾನ ನಡೆಸಲು ಐದು ಜಿಲ್ಲೆಗಳನ್ನು ಆಯ್ಕೆ ಮಾಡಲಾಗಿದೆ.

ಪ್ರತಿ ಕಂದಾಯ ವಿಭಾಗಕ್ಕೆ ಒಂದರಂತೆ ಹಾಗೂ ಮಲೆನಾಡು ಪ್ರದೇಶದ ಒಂದು ಜಿಲ್ಲೆಯಲ್ಲಿ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳಲಾಗಿದೆ. ಅದರಂತೆ ಮೈಸೂರು, ಕಲಬುರಗಿ, ತುಮಕೂರು, ಬೆಳಗಾವಿ ಹಾಗೂ ಉಡುಪಿ ಜಿಲ್ಲೆಗಳನ್ನು ಆಯ್ಕೆ ಮಾಡಲಾಗಿದೆ. ಅಭಿಯಾನದ ರೂಪದಲ್ಲಿ ಇ–ಸ್ವತ್ತು ತಂತ್ರಾಂಶದ ಮೂಲಕ ನಮೂನೆಗಳನ್ನು ವಿತರಿಸಬೇಕು ಎಂದು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಇಲಾಖೆಯ ನಿರ್ದೇಶಕರು ಆದೇಶದಲ್ಲಿ ತಿಳಿಸಿದ್ದಾರೆ.

ಪಹಣಿ ಜತೆಗೇ ಪೋಡಿ, ಮ್ಯುಟೇಶನ್ ದಾಖಲೆ

ಒಂದನೇ ಪುಟದಿಂದ...

ಆದರೆ, ಪಹಣಿ ಪುಟದ ಹಿಂಬದಿಯಲ್ಲಿಯೇ ಆಕಾರಬಂದ್, ಪೋಡಿ ನಕ್ಷೆ, ಮ್ಯುಟೇಶನ್ ದಾಖಲೆಯನ್ನು ಮುದ್ರಿಸಿಕೊಡುವ ವ್ಯವಸ್ಥೆ ರೂಪಿಸಲಾಗಿದೆ. ಒಂದು ಪಹಣಿಗೆ ಈಗ ₹25 ಶುಲ್ಕ ವಿಧಿಸಲಾಗುತ್ತಿದೆ. ಯಾವುದೇ ಹೆಚ್ಚಿನ ಶುಲ್ಕವಿಲ್ಲದೆ ನಾಲ್ಕೂ ದಾಖಲೆಪತ್ರಗಳನ್ನು ನೀಡಲಾಗುತ್ತದೆ. ಇದರಿಂದ ರೈತರು ಮಧ್ಯವರ್ತಿಗಳ ಹಾವಳಿಯಿಂದ, ದಾಖಲೆ ಪತ್ರಗಳನ್ನು ಪಡೆದುಕೊಳ್ಳುವಲ್ಲಿ ಆಗುತ್ತಿರುವ ವಿಳಂಬದಿಂದ ಪಾರಾಗಲಿದ್ದಾರೆ ಎಂದು ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ಈ ನಾಲ್ಕೂ ದಾಖಲೆ ಪತ್ರಗಳು ಕಂದಾಯ ಇಲಾಖೆಯ ವಿವಿಧ ವಿಭಾಗಗಳ ಅಡಿಯಲ್ಲಿ ಬರುತ್ತವೆ. ಅವುಗಳನ್ನು ಬೇರೆ–ಬೇರೆ ತಂತ್ರಾಂಶಗಳು ನಿರ್ವಹಣೆ ಮಾಡುತ್ತವೆ. ಈ ಎಲ್ಲ ವಿವರಗಳನ್ನು ಸಂಯೋಜಿಸುವ ಮತ್ತು ಒಂದೇ ಪುಟದಲ್ಲಿ ಮುದ್ರಣವಾಗುವಂತೆ ಭೂಮಿ–2 ತಂತ್ರಾಂಶವನ್ನು ಅಭಿವೃದ್ಧಿಪಡಿಸುವ ಕಾರ್ಯ ಪ್ರಗತಿಯಲ್ಲಿದೆ. ಡಿಸೆಂಬರ್‌ನಿಂದಲೇ ಈ ವ್ಯವಸ್ಥೆಯನ್ನು ಜಾರಿಗೆ ತರಲು ಗಡುವು ಹಾಕಿಕೊಳ್ಳಲಾಗಿದೆ ಎಂದರು.

ಏನೆಲ್ಲಾ ಅನುಕೂಲ...

ಒಂದನೇ ಪುಟದಿಂದ...

- ಭೂಮಿ ಹದ್ದುಬಸ್ತಿಗೆ, ಗಡಿಗುರುತಿಗೆ ಅಗತ್ಯವಾಗಿರುವ ಪೋಡಿನಕ್ಷೆಯನ್ನು ಭೂ ದಾಖಲೆಗಳ ಹೆಚ್ಚುವರಿ ನಿರ್ದೇಶಕರ ಕಚೇರಿಯಿಂದ ಪಡೆದುಕೊಳ್ಳುವುದು ತಪ್ಪಲಿದೆ
- ನೂತನ ವ್ಯವಸ್ಥೆಯು ಜಾರಿಗೆ ಬಂದರೆ ಗ್ರಾಮ ಸೇವಾ ಕೇಂದ್ರ, ಬಾಪೂಜಿ ಸೇವಾ ಕೇಂದ್ರ, ನಾಡ ಕಚೇರಿ, ಕರ್ನಾಟಕ ಒನ್ ಕೇಂದ್ರಗಳಲ್ಲಿ ಪಹಣಿಯ ಜತೆಯಲ್ಲಿ ಈ ಮೇಲಿನ ಮೂರೂ ದಾಖಲೆಗಳನ್ನು ಪಡೆದುಕೊಳ್ಳಬಹುದಾಗಿದೆ

ಸಂಘದ ಪ್ರವರ್ತಕರಿಂದ ಅಸಹಕಾರ: ಚುನಾವಣಾ ಅಧಿಕಾರಿಯಿಂದ ಪತ್ರ

ಗೃಹಲಕ್ಷ್ಮಿ ಸಂಘದ ಚುನಾವಣೆ: ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೃಹಲಕ್ಷ್ಮಿ ಯೋಜನೆಯ ಫಲಾನುಭವಿಗಳ ಅನುಕೂಲಕ್ಕೆಂದು ಸ್ಥಾಪಿಸಿರುವ, 'ಗೃಹಲಕ್ಷ್ಮಿ ವಿವಿಧೋದ್ದೇಶ ಸಹಕಾರ ಸಂಘ'ದ ಪದಾಧಿಕಾರಿಗಳ ಆಯ್ಕೆಗೆ ಶನಿವಾರ ನಡೆಯಬೇಕಿದ್ದ ಚುನಾವಣೆಯನ್ನು ದಿಢೀರ್ ಎಂದು ಮುಂದೂಡಲಾಗಿದೆ.

ಸಂಘಕ್ಕೆ 38 ಪದಾಧಿಕಾರಿಗಳ ಆಯ್ಕೆಗೆ ಇದೇ 14ರಂದು ಚುನಾವಣಾ ಪ್ರಕ್ರಿಯೆ ಆರಂಭಿಸಲಾಗಿತ್ತು. ಈ ಪ್ರಕಾರ 28ರ ಶನಿವಾರ ಬೆಂಗಳೂರಿನ ಕಬ್ಬನ್ ಉದ್ಯಾನದ ಬಾಲಭವನ ಸಭಾಂಗಣದಲ್ಲಿ ಚುನಾವಣೆ ನಡೆಯಬೇಕಿತ್ತು. ಇದಕ್ಕಾಗಿ ಸಿದ್ಧತೆ ಮಾಡಿಕೊಂಡಿದ್ದ ಅಭ್ಯರ್ಥಿಗಳು ಹಾಗೂ ಸುಮಾರು 2,000 ಸದಸ್ಯರೊಂದಿಗೆ ಮೂರು ದಿನಗಳ ಹಿಂದೆಯೇ ನಗರಕ್ಕೆ ಬಂದಿದ್ದರು.

ಶನಿವಾರ ಬೆಳಿಗ್ಗೆ ಮತದಾನದ ಪ್ರಕ್ರಿಯೆ ಆಗಬೇಕಿತ್ತು. ಆದರೆ, ಸಂಜೆಯವರೆಗೂ ಚುನಾವಣಾ ಅಧಿಕಾರಿ ಮತ್ತು ಸಂಘದ ಮುಖ್ಯ ಪ್ರವರ್ತಕರು ಸ್ಥಳಕ್ಕೆ ಬಂದಿರಲಿಲ್ಲ. ಆದರೆ ಸಂಜೆಯ ಹೊತ್ತಿಗೆ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆಯ ನಿರ್ದೇಶಕರು, 'ಚುನಾವಣೆಯನ್ನು ಮುಂದೂಡಲಾಗಿದೆ' ಎಂದು ಆದೇಶಿಸಿದ್ದಾರೆ.

'ಸಂಘದ ಚುನಾವಣೆ ನಡೆಸಲು ಅನುದಾನ ಮತ್ತು ಬಾಲ ಭವನದಲ್ಲಿ ಸ್ಥಳವೂ ಲಭ್ಯವಿಲ್ಲ. ಹೀಗಾಗಿ ಚುನಾವಣೆ ಮುಂದೂಡಲಾಗಿದೆ' ಎಂದು ಆದೇಶದಲ್ಲಿ ವಿವರಿಸಿದ್ದಾರೆ.

'ಸಹಕಾರ ಸಿಗುತ್ತಿಲ್ಲ': ಸಂಘದ ಚುನಾವಣಾ ಪ್ರಕ್ರಿಯೆಗೆ ನಿಯೋಜಿಸಲಾಗಿದ್ದ ರಿಟರ್ನಿಂಗ್ ಅಧಿಕಾರಿಯು ಸಹಕಾರ ಚುನಾವಣಾ ಪ್ರಾಧಿಕಾರದ ಸಹಕಾರ ಸಂಘಗಳ ಜಂಟಿ ನಿಬಂಧಕರಿಗೆ ಬರೆದಿರುವ ಪತ್ರದ ಪ್ರತಿ 'ಪ್ರಜಾವಾಣಿ'ಗೆ ಲಭ್ಯವಾಗಿದೆ. 'ಚುನಾವಣಾ ಪ್ರಕ್ರಿಯೆ ನಡೆಸಲು ಗೃಹಲಕ್ಷ್ಮಿ ವಿವಿಧೋದ್ದೇಶ ಸಹಕಾರ ಸಂಘದ ಮುಖ್ಯ ಪ್ರವರ್ತಕರು ಸಹಕಾರ ನೀಡುತ್ತಿಲ್ಲ. ಜತೆಗೆ ಬಾಲ ಭವನದಲ್ಲಿ ಸ್ಥಳವೂ ಇಲ್ಲ. ಹೀಗಾಗಿ ಚುನಾವಣೆ ಮುಂದೂಡಿ' ಎಂದು ಕೋರಿದ್ದಾರೆ.

ಈ ಪತ್ರಕ್ಕೆ ಸಹಕಾರ ಸಂಘಗಳ ಜಂಟಿ ನಿಬಂಧಕರು ಆಕ್ಷೇಪ ವ್ಯಕ್ತಪಡಿಸಿದ್ದು, 'ಎಲ್ಲ ಸಿದ್ಧತೆಗಳು ಪೂರ್ಣಗೊಂಡಿರುವಾಗ ಮತ್ತು ಮತದಾನಕ್ಕೆ ಎರಡು ದಿನ ಇರುವಾಗ ಚುನಾವಣೆ ಮುಂದೂಡುವುದು ಸಾಧ್ಯವಿಲ್ಲ. ಹೀಗಾಗಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಚುನಾವಣಾಧಿಕಾರಿಗೆ ಪತ್ರ ಬರೆದಿದ್ದಾರೆ.

ಆದರೆ ಮತದಾನದ ದಿನವೇ ಚುನಾವಣಾ ಪ್ರಕ್ರಿಯೆಯನ್ನು ಮುಂದೂಡಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆಯ ನಿರ್ದೇಶಕರು ಆದೇಶಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯೆ ಪಡೆದುಕೊಳ್ಳಲು ಇಲಾಖೆಯ ನಿರ್ದೇಶಕರಿಗೆ ಮತ್ತು ಚುನಾವಣಾಧಿಕಾರಿಗೆ ಕರೆ ಮಾಡಿದರೂ ಅವರು ಕರೆ ಸ್ವೀಕರಿಸಲಿಲ್ಲ.

ಅಭ್ಯರ್ಥಿಗಳ ಆಕ್ಷೇಪ

'ಎಲ್ಲ ಸಿದ್ಧತೆ ಮಾಡಿಕೊಂಡು, ಸದಸ್ಯರನ್ನು ಕರೆದುಕೊಂಡು ದೂರದ ಊರಿನಿಂದ ಬೆಂಗಳೂರಿಗೆ ಬಂದಿದ್ದೇವೆ. ಮತದಾನದ ದಿನವೇ ದಿಢೀರ್ ಎಂದು ಚುನಾವಣೆ ಮುಂದೂಡಿರುವುರಿಂದ ನಮಗೆಲ್ಲಾ ನಷ್ಟವಾಗಿದೆ. ತಕ್ಷಣವೇ ಚುನಾವಣೆ ನಡೆಸಿ' ಎಂದು ಅರ್ಪಿತಾ ಎಂಬ ಅಭ್ಯರ್ಥಿ ಒತ್ತಾಯಿಸಿದ್ದಾರೆ.

ಈ ಸಂಬಂಧ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆಯ ನಿರ್ದೇಶಕ, ಚುನಾವಣಾಧಿಕಾರಿ ಮತ್ತು ಸಹಕಾರ ಸಂಘಗಳ ಜಂಟಿ ನಿಬಂಧಕರಿಗೆ ಪತ್ರ ಬರೆದಿದ್ದಾರೆ. ರಾಜ್ಯದ ಬೇರೆ ಬೇರೆ ಜಿಲ್ಲೆಗಳಿಂದ ಬಂದಿರುವ ಅಭ್ಯರ್ಥಿಗಳು, 'ಭಾನುವಾರವಾದರೂ ಚುನಾವಣೆ ನಡೆಸಿದರೆ ಅನುಕೂಲವಾಗುತ್ತದೆ. ಇಲ್ಲದಿದ್ದಲ್ಲಿ ಬಹಳ ನಷ್ಟವಾಗುತ್ತದೆ' ಎಂದು 'ಪ್ರಜಾವಾಣಿ' ಬಳಿ ಅಳಲು ತೋಡಿಕೊಂಡರು.

ಕೋಲಾರದಿಂದ ಮಂತ್ರಾಲಯಕ್ಕೆ ತೆರಳುತ್ತಿದ್ದಾಗ ಅವಘಡ

ಒಂದೇ ಕುಟುಂಬದ ಐವರ ಸಾವು

ಪ್ರಜಾವಾಣಿ ವಾರ್ತೆ

ಬಂಗಾರಪೇಟೆ (ಕೋಲಾರ): ಮಂತ್ರಾಲಯಕ್ಕೆ ತೆರಳುತ್ತಿದ್ದ ತಾಲ್ಲೂಕಿನ ಚಿಕ್ಕಹೊಸಹಳ್ಳಿ ಗ್ರಾಮದ ಇಬ್ಬರು ಮಕ್ಕಳು ಸೇರಿದಂತೆ ಒಂದೇ ಕುಟುಂಬದ ಐವರು ಆಂಧ್ರಪ್ರದೇಶದ ಕರ್ನೂಲ್ ಸಮೀಪ ಶನಿವಾರ ನಸುಕಿನಲ್ಲಿ ಸಂಭವಿಸಿದ ಕಾರು ಅಪಘಾತದಲ್ಲಿ ಮೃತಪಟ್ಟಿದ್ದಾರೆ.

ಮಾಲೂರು ತಾಲ್ಲೂಕಿನ ನೆಲ್ಲಹಳ್ಳಿ ಸತೀಶ್ (38), ಪತ್ನಿ ಮೀನಾಕ್ಷಿ (26), ಪುತ್ರ ರಿತ್ವಿಕ್ ಗೌಡ (4), ಮೀನಾಕ್ಷಿ ಅವರ ತಂದೆ, ಚಿಕ್ಕಹೊಸಳ್ಳಿ ಗ್ರಾಮದ ವೆಂಕಟೇಶಪ್ಪ (76) ಹಾಗೂ ಭವಿತ್ ಗೌಡ (6) ಮೃತರು. ಭವಿತ್ ಗೌಡ ವೆಂಕಟೇಶಪ್ಪ ಅವರ ಪುತ್ರ ಲಿಂಗಮೂರ್ತಿ ಅವರ ಮಗು.

ಕರ್ನೂಲ್ ಜಿಲ್ಲೆ ಎಮ್ಮಿಗನೂರು ತಾಲ್ಲೂಕಿನ ಕೋಟೆಕಲ್ ಗ್ರಾಮದ ಬಳಿಯ ಹೆದ್ದಾರಿಯಲ್ಲಿ ನಸುಕಿನ 5 ಗಂಟೆ ಸುಮಾರಿಗೆ ಎರಡು ಕಾರುಗಳ ನಡುವೆ ಸಂಭವಿಸಿದ ಅಪಘಾತದಲ್ಲಿ ವೆಂಕಟೇಶಪ್ಪ ಅವರ ಪತ್ನಿ ಗಂಗಮ್ಮ, ಸಂಬಂಧಿ ಹಾಗೂ ಚಾಲಕ ಚೇತನ್ ಗಾಯಗೊಂಡಿದ್ದು, ಆದೋನಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.


ಸತೀಶ್


ಮೀನಾಕ್ಷಿ

ವೆಂಕಟೇಶಪ್ಪ

ಭವಿತ್ ಗೌಡ

ರಿತ್ವಿಕ್ ಗೌಡ

ಗ್ರಾಮದ ಏಳು ಮಂದಿ ಕಾರಿನಲ್ಲಿ ಮಂತ್ರಾಲಯಕ್ಕೆ ತೆರಳುತ್ತಿದ್ದರು. ಆದೋನಿಯಿಂದ ವೇಗವಾಗಿ ಬರುತ್ತಿದ್ದ ಕಾರು ಡಿಕ್ಕಿ ಹೊಡೆದಿದೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ಘಟನೆಯಲ್ಲಿ ಆಂಧ್ರದ ಮೂವರು ಗಾಯಗೊಂಡಿದ್ದು, ಅವರು ಕೂಡ ಆದೋನಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ನಗರದ ಕಾರಹಳ್ಳಿ ರಸ್ತೆಯಲ್ಲಿನ ಶ್ಯಾಮ್ ಆಸ್ಪತ್ರೆ ಹಿಂಭಾಗ ವಾಸಿಸುತ್ತಿದ್ದ ಸತೀಶ್ ಮತ್ತು ಮೀನಾಕ್ಷಿ ಬೆಂಗಳೂರಿನ ಖಾಸಗಿ ಕಂಪನಿಯಲ್ಲಿ ಸಾಫ್ಟ್‌ವೇರ್ ಉದ್ಯೋಗಿಗಳು.

ಚಿಕ್ಕಹೊಸಳ್ಳಿಯಲ್ಲಿ ಭಾನುವಾರ ವೆಂಕಟೇಶಪ್ಪ ಹಾಗೂ ಅವರ ಮೊಮ್ಮಗ ಭವಿತ್ ಗೌಡ ಅಂತ್ಯಕ್ರಿಯೆ ನಡೆಯಲಿದೆ. ಮಾಲೂರು ತಾಲ್ಲೂಕಿನ ನೆಲ್ಲಹಳ್ಳಿಯಲ್ಲಿ ಸತೀಶ್, ಅವರ ಪತ್ನಿ ಮೀನಾಕ್ಷಿ ಹಾಗೂ ಪುತ್ರ ರಿತ್ವಿಕ್ ಅಂತ್ಯಕ್ರಿಯೆ ನಡೆಯಲಿದೆ ಎಂದು ಮೃತರ ಕುಟುಂಬ ಸಂಬಂಧಿ ಸಿ.ಎಂ.ಮಹಾಲಿಂಗಯ್ಯ ತಿಳಿಸಿದ್ದಾರೆ.

ಮುಖ್ಯಾಂಶಗಳು

- ಬಂಗಾರಪೇಟೆಯ ಚಿಕ್ಕಹೊಸಹಳ್ಳಿ, ಮಾಲೂರಿನ ನೆಲ್ಲಹಳ್ಳಿ ಗ್ರಾಮದವರು
- ಬೆಂಗಳೂರಿನಲ್ಲಿ ಸಾಫ್ಟ್‌ವೇರ್ ಉದ್ಯೋಗಿಯಾಗಿದ್ದ ಸತೀಶ್, ಮೀನಾಕ್ಷಿ ದಂಪತಿ

‘ಅನುಭವ ಮಂಟಪ ಪ್ರಜಾಪ್ರಭುತ್ವದ ತಳಹದಿ’

ಪ್ರಜಾವಾಣಿ ವಾರ್ತೆ

ಬಸವಕಲ್ಯಾಣ (ಬೀದರ್ ಜಿಲ್ಲೆ): ‘ಯಾರು ಏನೇ ವಾದಿಸಿದರೂ ಬಸವಣ್ಣನವರ ಅನುಭವ ಮಂಟಪವೇ ಪ್ರಜಾಪ್ರಭುತ್ವದ ತಳಹದಿಯ ಪ್ರಥಮ ಸಂಸತ್ತು ಆಗಿತ್ತು’ ಎಂದು ಆಂಧ್ರಪ್ರದೇಶದ ರಾಜ್ಯಪಾಲ ಎಸ್.ಅಬ್ದುಲ್ ನಜೀರ್ ಹೇಳಿದರು.

ವಿಶ್ವ ಬಸವಧರ್ಮ ಟ್ರಸ್ಟ್ ಅನುಭವ ಮಂಟಪದಿಂದ ನಗರದಲ್ಲಿ ಶನಿವಾರ ಏರ್ಪಡಿಸಿದ್ದ 46ನೇ ಶರಣ ಕಮ್ಮಟ ಮತ್ತು ಅನುಭವ ಮಂಟಪ ಉತ್ಸವ ಉದ್ಘಾಟಿಸಿ ಅವರು ಮಾತನಾಡಿದರು.

ಅನುಭವ ಮಂಟಪದಲ್ಲಿ ಎಲ್ಲ ಜಾತಿಯವರೂ ಇದ್ದರು. ಬಸವತತ್ವದ ಪಾಲನೆಯಿಂದ ಸರ್ವರಿಗೂ ಒಳಿತಾಗಬಲ್ಲ ಕಲ್ಯಾಣ ರಾಜ್ಯ ನಿರ್ಮಾಣ ಆಗಬಲ್ಲದು. ವಿಶ್ವ ಬಸವಧರ್ಮ ಟ್ರಸ್ಟ್ ಅಧ್ಯಕ್ಷ ಬಸವಲಿಂಗ ಪಟ್ಟದ್ದೇವರು ಶರಣತತ್ವ ಪ್ರಸಾರಕ್ಕೆ ಅವಿರತವಾಗಿ ಶ್ರಮಿಸುತ್ತಿರುವುದು ಉತ್ತಮ ಕೆಲಸ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಬಿ. ಖಂಡ್ರೆ ಮಾತನಾಡಿ, ‘ಅನುಭವ ಮಂಟಪ ಕಾಮಗಾರಿ 2026ರ ಅಂತ್ಯದೊಳಗೆ ಉದ್ಘಾಟನೆ ಆಗಲಿದೆ’ ಎಂದರು.

ಶಾಸಕ ಶರಣು ಸಲಗರ, ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಬಸವಕಲ್ಯಾಣ ಅನುಭವ ಮಂಟಪ ಟ್ರಸ್ಟ್ ಅಧ್ಯಕ್ಷ ಬಸವಲಿಂಗ ಪಟ್ಟದ್ದೇವರು, ರಾಜ್ಯ ಮಕ್ಕಳ ಹಕ್ಕುಗಳ ರಕ್ಷಣಾ ಆಯೋಗದ ಅಧ್ಯಕ್ಷ ಶಶಿಧರ ಕೋಸಂಬೆ ಮಾತನಾಡಿದರು.

ನಾಲ್ವರಿಗೆ ಪ್ರಶಸ್ತಿ ಪ್ರದಾನ: ಉತ್ಸವದಲ್ಲಿ ನಾಟಕಕಾರ ಬಸವರಾಜ ಬೆಂಗೇರಿ ಅವರಿಗೆ ‘ಬಸವಭಾಸ್ಕರ ರಾಷ್ಟ್ರೀಯ ಪ್ರಶಸ್ತಿ’, ಬೆಂಗಳೂರಿನ ಸುಮಂಗಲಿ ಸೇವಾ ಆಶ್ರಮದ ಸಂಸ್ಥಾಪಕಿ ಎಸ್.ಜಿ.ಸುಶೀಲಮ್ಮ ಅವರಿಗೆ ‘ಅನುಭವ ಮಂಟಪ ರಾಷ್ಟ್ರೀಯ ಪ್ರಶಸ್ತಿ’, ಚಿತ್ರಕಲಾವಿದ ಸಿ.ಬಿ.ಸೋಮಶೆಟ್ಟಿ ಅವರಿಗೆ ‘ಡಾ.ಚನ್ನಬಸವ ಪಟ್ಟದ್ದೇವರು ಅನುಭವ ಮಂಟಪ ಪ್ರಶಸ್ತಿ’ (ತಲಾ ₹ 1 ಲಕ್ಷ ನಗದು), ಸಾಹಿತಿ ಕೆ.ರವೀಂದ್ರನಾಥ ಅವರಿಗೆ ‘ಎಂ.ಎಂ.ಕಲಬುರ್ಗಿ ಸಾಹಿತ್ಯ ಸಂಶೋಧನಾ ಪ್ರಶಸ್ತಿ’ (₹ 51 ಸಾವಿರ ನಗದು) ನೀಡಿ ಗೌರವಿಸಲಾಯಿತು.

ಬಸವಕಲ್ಯಾಣದಲ್ಲಿ ಶನಿವಾರ ನಡೆದ 46 ನೇ ಶರಣ ಕಮ್ಮಟ ಮತ್ತು ಅನುಭವ ಮಂಟಪ ಉತ್ಸವದಲ್ಲಿ ರಾಜ್ಯಪಾಲ ಎಸ್.ಅಬ್ದುಲ್ ನಜೀರ್ ಅವರು ನಾಟಕಕಾರ ಬಸವರಾಜ ಬೆಂಗೇರಿ, ಎಸ್.ಜಿ.ಸುಶೀಲಮ್ಮ, ಸಾಹಿತಿ ಕೆ.ರವೀಂದ್ರನಾಥ, ಚಿತ್ರಕಲಾವಿದ ಸಿ.ಬಿ.ಸೋಮಶೆಟ್ಟಿ ಅವರಿಗೆ ಪ್ರಶಸ್ತಿಗಳನ್ನು ಪ್ರದಾನ ಮಾಡಿದರು

ಫಲಿತಾಂಶ ಹೆಚ್ಚಿಸುವ ಶಿಕ್ಷಕರಿಗೆ ಪ್ರೋತ್ಸಾಹ ಧನ: ಮಧು ಬಂಗಾರಪ್ಪ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ‘ಎಸ್‌ಎಸ್‌ಎಲ್‌ಸಿಯಲ್ಲಿ ಅತ್ಯುತ್ತಮ ಫಲಿತಾಂಶ ತಂದುಕೊಡುವ ಹಾಗೂ ವಿದ್ಯಾರ್ಥಿಗಳ ದಾಖಲಾತಿ ಹೆಚ್ಚಿಸುವ ಸರ್ಕಾರಿ ಶಾಲೆಗಳ ಶಿಕ್ಷಕರಿಗೆ ಪ್ರೋತ್ಸಾಹಧನ (ಇನ್ಸೆಂಟಿವ್) ನೀಡಲು ಸರ್ಕಾರ ನಿರ್ಧರಿಸಿದೆ’ ಎಂದು ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಸಚಿವ ಮಧು ಬಂಗಾರಪ್ಪ ತಿಳಿಸಿದರು.

ನಗರದಲ್ಲಿ ಶನಿವಾರ ಶಿವಮೊಗ್ಗ, ದಾವಣಗೆರೆ, ಚಿತ್ರದುರ್ಗ ಜಿಲ್ಲೆಗಳ ಪ್ರೌಢಶಾಲಾ ಶಿಕ್ಷಕರಿಗೆ ಆಯೋಜಿಸಿದ್ದ ಎಸ್‌ಎಸ್‌ಎಲ್‌ಸಿ ಫಲಿತಾಂಶ ಸುಧಾರಣಾ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

‘ಫಲಿತಾಂಶ ಕುಸಿತ ಕಂಡ ಶಾಲೆಗಳಿಗೆ ಶಿಕ್ಷೆ ನೀಡುವ ವ್ಯವಸ್ಥೆ ಇದೆ. ಈಗ ಫಲಿತಾಂಶ ಹೆಚ್ಚಳಕ್ಕೆ ಕಾರಣರಾದವರ ಗುರುತಿಸುವ ವ್ಯವಸ್ಥೆ ಜಾರಿಗೆ ತರುತ್ತಿದ್ದು, ಪ್ರೋತ್ಸಾಹಧನ ವಿತರಣೆಗೆ ಅಗತ್ಯ ನಿಯಮಾವಳಿ ರೂಪಿಸಲಾಗುವುದು’ ಎಂದು ಹೇಳಿದರು.

‘ಸರ್ಕಾರಿ ಶಾಲೆಗಳ ಫಲಿತಾಂಶ ಹೆಚ್ಚಳದ ಹಾದಿಯಲ್ಲಿ ಆಯಾ ಶಾಲಾಭಿವೃದ್ಧಿ ಸಮಿತಿಯವರನ್ನು ಒಳಗೊಳ್ಳುವ ಕಾರ್ಯ ಆಗಬೇಕು. ಈ ಸಮಿತಿ ಸದಸ್ಯರ ಸಲಹೆ-ಸಹಕಾರ ಪಡೆದುಕೊಳ್ಳಬೇಕು’ ಎಂದು ಸಲಹೆ ನೀಡಿದರು.

‘ಸರ್ಕಾರಿ ಶಾಲೆಗಳನ್ನು ಒತ್ತಾಯಪೂರ್ವಕವಾಗಿ ವಿಲೀನಗೊಳಿಸುವಂತಿಲ್ಲ. ಎಸ್‌ಡಿಎಂಸಿಯವರು ಒಪ್ಪಿದರೆ ಮಾತ್ರ ಆ ಪ್ರಕ್ರಿಯೆ ಕೈಗೊಳ್ಳಬಹುದು’ ಎಂದರು.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ

(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)

49, ಈಸ್ಟ್ ವಿಂಗ್, 4ನೇ ಮತ್ತು 5ನೇ ಮಹಡಿ, ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು–560 001.

ದೂರವಾಣಿ ಸಂಖ್ಯೆ: 080-22265383. Website: www.kiadb.in

ಸಂಖ್ಯೆ: ಐಎಡಿಬಿ/ಜೆಡಿಟಿಪಿ/ಇಐಎ/ಇಟಿಎನ್‌ಡಿ–ಇಸಿ–09/285/2025–26 ದಿನಾಂಕ:28.11.2025

ಪರಿಸರ ವಿಮೋಚನಾ ಪತ್ರ (ಎನ್‌ವಿರಾನ್‌ಮೆಂಟ್ ಕ್ಲಿಯರೆನ್ಸ್) ಪಡೆಯಲು ಸಲಹಾ ಸೇವೆಗಳನ್ನು ಒದಗಿಸಲು ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ

(ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕೆಐಎಡಿಬಿಯು ಪರಿಸರ ಸಮಾಲೋಚಕರಿಂದ ಸಲಹಾ ಸೇವೆಗಳನ್ನು ಒದಗಿಸಲು ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರನ್ನು ಆಹ್ವಾನಿಸಿದೆ. ಪರಿಸರ ಮತ್ತು ಅರಣ್ಯ ಸಚಿವಾಲಯ, ನವದೆಹಲಿ ಇವರಿಂದ ಮಾನ್ಯತೆ ಪಡೆದ ಪಟ್ಟಿಯಲ್ಲಿ 7(C) ವರ್ಗದಲ್ಲಿ ಸಲಹೆಗಾರರಾಗಿ ಹೆಸರು ಸೇರ್ಪಡೆಯಾಗಿರುವ ಅರ್ಹ ಸಂಸ್ಥೆಗಳು NABET & NABL Accredited Consultant / NABET Consultancy MoU with NABL Accredited Consultant ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹರಾಗಿರುತ್ತಾರೆ.

ಕಾಮಗಾರಿಯ ವಿವರ: ಬಳ್ಳಾರಿ ಜಿಲ್ಲೆಯ, ಬಳ್ಳಾರಿ ತಾಲ್ಲೂಕು, ಸಂಜೀವರಾಯನಕೋಟೆ ಗ್ರಾಮದ ವ್ಯಾಪ್ತಿಯಲ್ಲಿ ಬರುವ ವಿವಿಧ ಸರ್ವೆ ನಂಬರ್‌ಗಳ ಒಟ್ಟು ವಿಸ್ತೀರ್ಣ 492.39ಎ ಪ್ರದೇಶದಲ್ಲಿ **ಸಂಜೀವರಾಯನಕೋಟೆ ಕೈಗಾರಿಕಾ ಪ್ರದೇಶ 2ನೇ ಹಂತಕ್ಕೆ** ರಾಜ್ಯ ಪರಿಸರ ಆಘಾತ ಅಂದಾಜೀಕರಣ ಪ್ರಾಧಿಕಾರರವರಿಂದ (SEIAA) / ಕೇಂದ್ರ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಸಚಿವಾಲಯದಿಂದ (MoEF&CC) ಪರಿಸರ ವಿಮೋಚನಾ (EC) ಪತ್ರ ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ(ಕೆಎಸ್‌ಪಿಸಿಬಿ)ಯಿಂದ ಸ್ಥಾಪನೆ ಅನುಮತಿ ಪತ್ರ (CFE) ಪಡೆಯಲು ಹಾಗೂ 3 ವರ್ಷಗಳ ಅವಧಿಯವರೆಗೆ ಪರಿಸರ ವಿಮೋಚನಾ ಪತ್ರ ಮತ್ತು ಸ್ಥಾಪನೆ ಅನುಮತಿ ಪತ್ರಗಳಲ್ಲಿ ವಿಧಿಸುವ ನಿಬಂಧನೆಗಳಿಗೆ ಅರ್ಧವಾರ್ಷಿಕ ಅನುಸರಣಾ ವರದಿಯನ್ನು ತಯಾರಿಸಿ ಸಂಬಂಧಪಟ್ಟ ಪ್ರಾಧಿಕಾರಗಳಿಗೆ ಸಲ್ಲಿಸಲು, ಇಐಎ ವರದಿ, ಎಸ್‌ಐಎಸ್ ಅಧ್ಯಯನಗಳು ಇತ್ಯಾದಿಯನ್ನು ಸಿದ್ಧಪಡಿಸಲು. **(4ನೇ ಕರೆ).**

ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: **16.12.2025ರ ಸಂಜೆ 4.00 ಗಂಟೆಯವರೆಗೆ.**

ಟೆಂಡರ್‌ದಾರರು ಬಿಡ್ಡಿಂಗ್ ದಾಖಲೆಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಂಖ್ಯೆ: ಐಎಡಿಬಿ/ಇಎನ್‌ಜಿಜಿ/ಪಿಎಂಸಿ/ಇಟಿಎನ್‌ಡಿ–ಇಪಿ–04/289/2025–26 ದಿನಾಂಕ:28.11.2025

ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
ಯೋಜನಾ ನಿರ್ವಹಣಾ ಸೇವೆಗಳಿಗಾಗಿ (ಪಿಎಂಸಿ)

(ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಮಾತ್ರ)

ಕೆಐಎಡಿಬಿಯು ಈ ಕೆಳಕಂಡ ಕಾಮಗಾರಿಗೆ ಯೋಜನಾ ನಿರ್ವಹಣಾ ಸೇವೆಗಳಿಗಾಗಿ (ಪಿಎಂಸಿ) ಕ್ವಾಲಿಟಿ ಬೇಸ್ಡ್ ಕನ್ಸಲ್ಟನ್ಸಿ ಸಿಸ್ಟಮ್ (ಕ್ಯೂಬಿಸಿಎಸ್) ಅಡಿಯಲ್ಲಿ ಅರ್ಹ ಸಲಹಾ ಸಂಸ್ಥೆಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಕಾಯ್ದೆ 1999 ಹಾಗೂ ನಿಯಮ 2000 ರನ್ವಯ ದ್ವಿಲಕೋಟೆ ಪದ್ಧತಿಯಡಿಯಲ್ಲಿ ಟೆಂಡರನ್ನು ಆಹ್ವಾನಿಸಲಾಗಿದೆ.

ಕಾಮಗಾರಿಯ ವಿವರ: ಬಳ್ಳಾರಿ ತಾಲ್ಲೂಕು ಮತ್ತು ಜಿಲ್ಲೆಯ ಸಂಜೀವರಾಯನಕೋಟೆ ಹಂತ–I ಕೈಗಾರಿಕಾ ಪ್ರದೇಶಕ್ಕಾಗಿ ಸಾಮಾನ್ಯ ಸೌಲಭ್ಯ ಕೇಂದ್ರ (CFC) ಕಟ್ಟಡ ನಿರ್ಮಾಣಕ್ಕಾಗಿ ಯೋಜನಾ ನಿರ್ವಹಣಾ ಸಲಹಾ ಸೇವೆಗಳನ್ನು ಒದಗಿಸುವುದು.

ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: **10.12.2025ರ ಸಂಜೆ 4.00 ಗಂಟೆಯವರೆಗೆ.**

ಟೆಂಡರ್‌ದಾರರು ಬಿಡ್ಡಿಂಗ್ ದಾಖಲೆಗಳನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/–
ಮುಖ್ಯ ಅಭಿಯಂತರರು–2

ವಾಸಾಸಂಇ/ವಾಪ್ರ/ಜೆಎ/4078/2025–26

ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತ

ಕಲ್ಪಕೃತಿ

(ಕರ್ನಾಟಕ ಸರ್ಕಾರ ಉದ್ಯಮ)

ಎಸ್‌ಎಫ್–4 & ಎಸ್‌ಎಫ್–5, ಸ್ಟರ್ಲಿಂಗ್ ಟವರ್ಸ್, (ಗಾರ್ಮೆಂಟ್ ಕಾಂಪ್ಲೆಕ್ಸ್), ಕೆಎಸ್‌ಎಸ್‌ಐಡಿಸಿ ಕೈಗಾರಿಕಾ ವಸಾಹತು, ರಾಜಾಜಿನಗರ, 6ನೇ ಬ್ಲಾಕ್, ಬೆಂಗಳೂರು–560010. ದೂರವಾಣಿ ಸಂ. 080–23105866 / 23105865

ತೆಂಗಿನ ಸಿಪ್ಪೆ, ತೆಂಗಿನ ನಾರು, ತೆಂಗಿನ ನಾರಿನ ಹುರಿ ಮತ್ತು ತೆಂಗಿನ ನಾರಿನ ಮ್ಯಾಟ್, ಸುರುಳಿ ಹಗ್ಗ, ಕಾಯರ್ ಪಿತ್ ಗೊಬ್ಬರ ಸರಬರಾಜಿಗೆ ಸರಬರಾಜುದಾರರಿಗೆ ಆಹ್ವಾನ (ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮದ ವಿವಿಧ ಘಟಕಗಳಿಗೆ ತೆಂಗಿನ ಸಿಪ್ಪೆ, ತೆಂಗಿನ ನಾರು, ತೆಂಗಿನ ನಾರಿನ ಹುರಿ ಮತ್ತು ತೆಂಗಿನ ನಾರಿನ ಉತ್ಪನ್ನ ಸರಬರಾಜಿಗಾಗಿ ಆಸಕ್ತಿಯುಳ್ಳ ತಯಾರಕರು/ ಸರಬರಾಜುದಾರರನ್ನು ಟೆಂಡರ್ ಮೂಲಕ ಆಹ್ವಾನಿಸಲಾಗಿದೆ.

(1) ಭರ್ತಿ ಮಾಡಿದ ಟೆಂಡರ್ ದಾಖಲಾತಿಯನ್ನು ಸಲ್ಲಿಸುವ ಕೊನೆಯ ದಿನಾಂಕ: **30.12.2025 ಸಂಜೆ 4.00 ಗಂಟೆಯೊಳಗೆ.** (2) ಟೆಂಡರ್ ತೆರೆಯುವ ದಿನಾಂಕ: **31.12.2025ರಂದು ಸಂಜೆ 5.00 ಗಂಟೆಗೆ.** (3) **ಸಂಪರ್ಕಿಸಬೇಕಾದವರು:** ಶ್ರೀ ರವಿಕುಮಾರ್, ಮುಖ್ಯ ವ್ಯವಸ್ಥಾಪಕರು (**ಮೊ.ಸಂ.9141943430**) / ಶ್ರೀ ಹೆಚ್.ಆರ್.ಬಸವರಾಜು, ವ್ಯವಸ್ಥಾಪಕರು–ಉತ್ಪಾದನೆ (**ಮೊ.ಸಂ.9449228749**).

ದಿನಾಂಕ: 29.11.2025 ಸಹಿ/– ಮುಖ್ಯ ವ್ಯವಸ್ಥಾಪಕರು

ಕರ್ನಾಟಕ ಸರ್ಕಾರ GOVERNMENT OF KARNATAKA

ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನ ಕೇಂದ್ರ ಬಳ್ಳಾರಿ.

Reg.No:205/1995-96-Recognized by Medical Council of India, New Delhi vide No:MCI-57(3)/79-Med/1912, Dtd.16-04-1979
e-mail-ids :directorbmcrcballari@gmail.com, directorvimsbellary@gmail.com,
[Web: http://bmcrcballari.karnataka.gov.in]

ಸಂ.ಬವೈಮಸಂಕೇ/ಲೆಕ್ಕಪತ್ರ/ಹರಾಜುಟೆಂಡರ್/01/2025–26 ದಿನಾಂಕ: 24.11.2025

ಇ–ಹರಾಜು–1

ಬಳ್ಳಾರಿ ವೈದ್ಯಕೀಯ ಮಹಾ ವಿದ್ಯಾಲಯ ಮತ್ತು ಸಂಶೋಧನಾ ಸಂಸ್ಥೆ, ಬಳ್ಳಾರಿಯಲ್ಲಿನ ಹೆಚ್ಚುವರಿ ನಿಧಿಯ ಹೂಡಿಕೆಗಾಗಿ ಕರ್ನಾಟಕ ಸರ್ಕಾರದ ‘ಇ–ಪ್ರೊಕ್ಯೂರ್ಮೆಂಟ್ ಪೋರ್ಟಲ್ ಮೂಲಕ ಅರ್ಹ ಟೆಂಡರ್‌ದಾರರಿಂದ ಏಕ–ಲಕೋಟೆ ಪದ್ಧತಿಯನ್ವಯ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಟೆಂಡರ್‌ದಾರರು ಟೆಂಡರ್ ದಸ್ತಾವೇಜುಗಳನ್ನು http://kppp.karnatka.gov.in & http://bmcrcballari.karnataka.gov.in ವೆಬ್‌ಸೈಟ್‌ನಿಂದ ದಿನಾಂಕ:26.11.2025 ರಿಂದ ಡೌನ್ಲೋಡ್ ಮಾಡಿಕೊಳ್ಳಬಹುದು, ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪೋರ್ಟಲ್ ಮೂಲಕ ಸಲ್ಲಿಸಲು ಕೊನೆಯ ದಿನಾಂಕ: 06.12.2025 ಸಂಜೆ4.00 ಗಂಟೆಯವರೆಗೆ.

1.ಬವೈಮಸಂಕೇ ಬಳ್ಳಾರಿಯ ಹೆಚ್ಚುವರಿ ನಿಧಿಯ ಹೂಡಿಕೆಯನ್ನು ಇ–ಹರಾಜು ಮೂಲಕ ಒಂದು ವರ್ಷದ ಅವಧಿಗೆ ಹೂಡಿಕೆ ಮಾಡಲಾಗುವುದು. 2.ಪ್ರಿಬಿಡ್ (Pre-auction meeting) ಸಭೆಯ ದಿನಾಂಕ: 02.12.2025 ಮಧ್ಯಾಹ್ನ 12.30 ಗಂಟೆ. 3.ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ:06.12.2025 ಸಂಜೆ4.00 ಗಂಟೆ. 4.ತಾಂತ್ರಿಕಬಿಡ್ ಪರಿಶೀಲನಾ (Technial bid evaluation ದಿನಾಂಕ: 08.12.2025 ಬೆಳಿಗ್ಗೆ 10.00ಗಂಟೆ. 5.ಇ–ಹರಾಜು (Live Auction) ದಿನಾಂಕ: 10.12.25ಬೆಳಿಗ್ಗೆ 10.00 ಗಂಟೆಯಿಂದ ಮಧ್ಯಾಹ್ನ 3.00 ಗಂಟೆಯವರೆಗೆ. 6.ಟೆಂಡರನ್ನು ಯಾವುದೇ ಕಾರಣ ನೀಡದೆ ಭಾಗಶ: / ಪೂರ್ಣವಾಗಿ ಒಪ್ಪಿಕೊಳ್ಳುವ / ತಿರಸ್ಕರಿಸುವ / ರದ್ದು ಪಡಿಸುವ ಅಧಿಕಾರವನ್ನು ಟೆಂಡರ್ ಅಂಗೀಕರಿಸುವ ಪ್ರಾಧಿಕಾರ ಕಾಯ್ದಿರಿಸಿದೆ. 7.Auction tender No. DME/2025-26/AUCTION45

ಸಹಿ/– ಡೀನ್ ಹಾಗು ನಿರ್ದೇಶಕರು, ಬವೈಮಸಂಕೇ, ಬಳ್ಳಾರಿ.

ಡಿಐಪಿಆರ್/ಬಳ್ಳಾರಿ/713/ಕೆಎಸ್‌ಎಂಸಿಎ/2025–26

ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರದ ಸಚಿವಾಲಯ

ಕಂದಾಯ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.

ಸಂಖ್ಯೆ: ಇ–ಆರ್‌ಡಿ 220 ಜಿಆರ್‌ಸಿ 2025 ದಿನಾಂಕ: 24.11.2025

ಅಧಿಸೂಚನೆ

ಜಿಲ್ಲಾಧಿಕಾರಿಗಳು, ಉಡುಪಿ ಜಿಲ್ಲೆ ಇವರ ವರದಿಯನ್ನು ಪರಿಗಣಿಸಿದ ತರುವಾಯ ಹಾಗೂ ಠೇವಣಿದಾರರ ದೂರುಗಳ ಬಗ್ಗೆ ಯುಕ್ತ ತನಿಖೆಯ ತರುವಾಯ ಸಮೃದ್ಧ ಜೀವನ್ ಮಲ್ಟಿಸ್ಟೇಟ್ ಮಲ್ಟಿಪರ್ಪಸ್ ಕೋ ಅಪರೇಟಿವ್ ಸೊಸೈಟಿ ಲಿ., ಸಮೃದ್ಧ ಜೀವನ್ ಫುಡ್ಸ್ ಇಂಡಿಯ ಲಿ., ಪ್ರಾಸ್ಪರಿಟಿ ಆಗ್ರೊ ಇಂಡಿಯ ಲಿ., ಮತ್ತು ಗ್ರೂಪ್ ಇಂಟಿಟೀಸ್ ಠೇವಣಿದಾರರಿಂದ ಗುಟ್ಟಾಗಿ ಹಾಗೂ ಕಾನೂನುಬಾಹಿರವಾಗಿ ಠೇವಣಿಗಳನ್ನು ಅಥವಾ ಸಾರ್ವಜನಿಕರಿಂದ ಹಣವನ್ನು ಸಂಗ್ರಹಿಸುವ ಮೋಸದ ವ್ಯವಹಾರಗಳಲ್ಲಿ ತೊಡಗಿರುವುದು ಹಾಗೂ ಆ ತರುವಾಯ ಅವಧಿ ಮುಗಿದ ಮೇಲೆ ಅಥವಾ ಠೇವಣಿದಾರರು ಅಥವಾ ಫಿರ್ಯಾದುದಾರು ಸಲ್ಲಿಸಿದ ಬೇಡಿಕೆ ಮೇಲಾಗಲಿ ಆಶ್ವಾಸನೆ ನೀಡಿದ ಬಡ್ಡಿ ಹಾಗೂ ಇತರೆ ಖಾತರಿ ಪ್ರಯೋಜನಗಳನ್ನು ನೀಡಲು ವಿಫಲವಾಗಿರುವುದು ಹಾಗೂ ಅವರಿಗೆ ಆಶ್ವಾಸನೆ ನೀಡಿದ ಸೇವೆಗಳನ್ನು ಒದಗಿಸಲು ವಿಫಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಸಮೃದ್ಧ ಜೀವನ್ ಮಲ್ಟಿಸ್ಟೇಟ್ ಮಲ್ಟಿಪರ್ಪಸ್ ಕೋ ಅಪರೇಟಿವ್ ಸೊಸೈಟಿ ಲಿ., ಸಮೃದ್ಧ ಜೀವನ್ ಫುಡ್ಸ್ ಇಂಡಿಯ ಲಿ., ಪ್ರಾಸ್ಪರಿಟಿ ಆಗ್ರೊ ಇಂಡಿಯ ಲಿ., ಮತ್ತು ಗ್ರೂಪ್ ಇಂಟಿಟೀಸ್ ಹಾಗೂ ಅವರ ಸಹವರ್ತಿ ಜನರು ಠೇವಣಿದಾರರಿಂದ ಅಥವಾ ಫಿರ್ಯಾದುದಾರರಿಂದ ಸಂಗ್ರಹಿಸಲಾದ ಹಣದಿಂದ ಜಮೀನು, ಚರ ಹಾಗೂ ಸ್ಥಿರಾಸ್ತಿಗಳನ್ನು, ನಗದು ಹಾಗೂ ಇತರೆ ವಸ್ತುವನ್ನು ಅರ್ಜಿಸಿರುವುದು ಹಾಗೂ ಆ ಮೂಲಕ ಠೇವಣಿ ಹಾಗೂ ಹಣವನ್ನು ಪಡೆದಿರುವ ಉದ್ದೇಶಿತ ಉದ್ದೇಶಗಳಿಗೆ ಬಳಸದೆ ಬೇರೆ ಕಡೆ ವರ್ಗಾಯಿಸಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

ಸಮೃದ್ಧ ಜೀವನ್ ಮಲ್ಟಿಸ್ಟೇಟ್ ಮಲ್ಟಿಪರ್ಪಸ್ ಕೋ ಅಪರೇಟಿವ್ ಸೊಸೈಟಿ ಲಿ., ಸಮೃದ್ಧ ಜೀವನ್ ಫುಡ್ಸ್ ಇಂಡಿಯ ಲಿ., ಪ್ರಾಸ್ಪರಿಟಿ ಆಗ್ರೊ ಇಂಡಿಯ ಲಿ., ಮತ್ತು ಗ್ರೂಪ್ ಇಂಟಿಟೀಸ್ ಹಾಗೂ ಅವರ ಸಹವರ್ತಿ ಜನರು ಇವರ ಕೃತ್ಯಗಳು ಮುಗ್ಧ ಜನರಿಗೆ ವಂಚಿಸುವ ಉದ್ದೇಶದಿಂದ ಠೇವಣಿದಾರರ ಅಥವಾ ಫಿರ್ಯಾದುದಾರರ ಹಿತಾಸಕ್ತಿಗೆ ವಿರುದ್ಧವಾಗಿ ಕಾರ್ಯನಿರ್ವಹಿಸುತ್ತಿದೆ ಎಂದು ನಂಬಲು ಸರ್ಕಾರವು ಕಾರಣಗಳನ್ನು ಹೊಂದಿದ್ದು, ಸಮೃದ್ಧ ಜೀವನ್ ಮಲ್ಟಿಸ್ಟೇಟ್ ಮಲ್ಟಿಪರ್ಪಸ್ ಕೋ ಅಪರೇಟಿವ್ ಸೊಸೈಟಿ ಲಿ., ಸಮೃದ್ಧ ಜೀವನ್ ಫುಡ್ಸ್ ಇಂಡಿಯ ಲಿ., ಪ್ರಾಸ್ಪರಿಟಿ ಆಗ್ರೊ ಇಂಡಿಯ ಲಿ., ಮತ್ತು ಗ್ರೂಪ್ ಇಂಟಿಟೀಸ್ ಠೇವಣಿದಾರರ ಹಿತಾಸಕ್ತಿಯನ್ನು ಸಂರಕ್ಷಿಸುವುದು ಅಗತ್ಯ ವಾಗಿರುತ್ತದೆ.

ಆದ್ದರಿಂದ, ಸರ್ಕಾರವು ವಿಶೇಷಾಧಿಕಾರಿಗಳು ಹಾಗೂ ಸಕ್ಷಮ ಪ್ರಾಧಿಕಾರಿಗಳು ಐ.ಎಂ.ಎ ಹಾಗು ಇತರೆ ಕೆ.ಪಿ.ಐ.ಡಿ ಪ್ರಕರಣಗಳು ಇವರ ವರದಿಗಳನ್ನು ಪರಿಗಣಿಸಿ ಹಾಗೂ ಠೇವಣಿದಾರರ ಹಿತಾಸಕ್ತಿಯನ್ನು ಸಂರಕ್ಷಿಸುವುದು ತುರ್ತು ಅಗತ್ಯವಿದೆ ಎಂದು ಸ್ವಯಂ ಮನವರಿಕೆ ಮಾಡಿ ಕೊಂಡು ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿನ ಠೇವಣಿದಾರರ ಹಿತಾಸಕ್ತಿಯ ಸಂರಕ್ಷಣಾ ಅಧಿನಿಯಮ, 2004(2005ರ ಕರ್ನಾಟಕ ಅಧಿನಿಯಮ, 30)ರ 3ನೇ ಪ್ರಕರಣದ (2)ನೇ ಉಪ–ಪ್ರಕರಣದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಈ ಕೆಳಕಂಡಂತೆ ಆದೇಶವನ್ನು ಮಾಡುತ್ತದೆ:

“ಆದೇಶ”

ಕರ್ನಾಟಕ ಹಣಕಾಸು ಸಂಸ್ಥೆಗಳಲ್ಲಿ ಠೇವಣಿದಾರರ ಹಿತಾಸಕ್ತಿಯ ಸಂರಕ್ಷಣಾ ಅಧಿನಿಯಮ, 2004 (2005ರ ಕರ್ನಾಟಕ ಅಧಿನಿಯಮ, 30) ರ 3ನೇ ಪ್ರಕರಣದ (2)ನೇ ಉಪ–ಪ್ರಕರಣದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಸರ್ಕಾರವು ಈ ಮೇಲ್ಕಂಡ ಸನ್ನಿವೇಶಗಳ ಹಿನ್ನಲೆಯಲ್ಲಿ ಠೇವಣಿದಾರರ ಹಿತಾಸಕ್ತಿಯನ್ನು ಸಂರಕ್ಷಿಸುವ ಸಲುವಾಗಿ ಸಮೃದ್ಧ ಜೀವನ್ ಮಲ್ಟಿಸ್ಟೇಟ್ ಮಲ್ಟಿಪರ್ಪಸ್ ಕೋ ಅಪರೇಟಿವ್ ಸೊಸೈಟಿ ಲಿ., ಸಮೃದ್ಧ ಜೀವನ್ ಫುಡ್ಸ್ ಇಂಡಿಯ ಲಿ., ಪ್ರಾಸ್ಪರಿಟಿ ಆಗ್ರೊ ಇಂಡಿಯ ಲಿ., ಮತ್ತು ಗ್ರೂಪ್ ಇಂಟಿಟೀಸ್ ಗೆ ಸೇರಿದೆ ಎನ್ನಲಾದ ಸ್ಥಿರಾಸ್ತಿಗಳನ್ನು ಹಾಗೂ ಚರಾಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳುವುದು ಅವಶ್ಯಕವಾಗಿದೆ ಎಂದು ಮನಗಂಡಿರುವುದರಿಂದ, ಸದರಿ ಹಣಕಾಸು ಸಂಸ್ಥೆಯ ಅಂಥ ಹಣ ಅಥವಾ ಅಂಥ ಇತರೆ ಸ್ವತ್ತುಗಳು ಅಥವಾ ಸಂಸ್ಥೆಯ ಪ್ರವರ್ತಕರ, ಪಾಲುದಾರರ, ನಿರ್ದೇಶಕರ, ವ್ಯವಸ್ಥಾಪಕರ ಅಥವಾ ಸದಸ್ಯರ ಅಥವಾ ಯಾರೇ ಇತರೆ ವ್ಯಕ್ತಿಯ ವೈಯಕ್ತಿಕ ಆಸ್ತಿಗಳು ಠೇವಣಿಗಳನ್ನು, ಬಡ್ಡಿ ಅಥವಾ ಇತರೆ ಖಾತ್ರಿ ಪ್ರಯೋಜನಗಳನ್ನು ಠೇವಣಿದಾರರಿಗೆ ಮರುಸಂದಾಯ ಮಾಡುವುದಕ್ಕೆ ಸಂಬಂಧಿಸಿದಂತೆ ಪ್ರಯಾಪ್ತವಾಗಿಲ್ಲವೆಂದು ಗೊತ್ತಾದಲ್ಲಿ ಸಮೃದ್ಧ ಜೀವನ್ ಮಲ್ಟಿಸ್ಟೇಟ್ ಮಲ್ಟಿಪರ್ಪಸ್ ಕೋ ಅಪರೇಟಿವ್ ಸೊಸೈಟಿ ಲಿ., ಸಮೃದ್ಧ ಜೀವನ್ ಫುಡ್ಸ್ ಇಂಡಿಯ ಲಿ., ಪ್ರಾಸ್ಪರಿಟಿ ಆಗ್ರೊ ಇಂಡಿಯ ಲಿ., ಮತ್ತು ಗ್ರೂಪ್ ಇಂಟಿಟೀಸ್ ಸಂಗ್ರಹಿಸಲಾದ ಠೇವಣಿಗಳಿಂದ ತನ್ನ ಹೆಸರಿನಲ್ಲಾಗಲಿ ಅಥವಾ ಯಾರೇ ಇತರೆ ವ್ಯಕ್ತಿಗಳ ಹೆಸರಿನಲ್ಲಿ ಅರ್ಜಿಸಿದೆ ಎನ್ನಲಾದ ಈ ಆದೇಶದ ಅನುಬಂಧ 1, ರಲ್ಲಿ ನಿರ್ದಿಷ್ಟ ಪಡಿಸಲಾದಂತೆ ಸ್ಥಿರಾ ಸ್ವತ್ತುಗಳನ್ನು ಸರ್ಕಾರವು ಈ ಮೂಲಕ ಜಪ್ತಿ ಮಾಡಿಕೊಳ್ಳುತ್ತದೆ.

ಟಿಪ್ಪಣಿ: ವಿಶೇಷ ನ್ಯಾಯಾಲಯದ ಮುಂದಿನ ಆದೇಶದವರೆಗೆ ಬಾಕಿ ಇರಿಸಿ, ಮೇಲೆ ಹೇಳಿದ ಸ್ಥಿರಾಸ್ತಿಗಳನ್ನು ಅಧಿಕೃತ ರಾಜ್ಯಪತ್ರದಲ್ಲಿ ಈ ಆದೇಶವು ಪ್ರಕಟಣೆಗೊಂಡ ದಿನಾಂಕದಿಂದ ಸರ್ಕಾರವು ನೇಮಕ ಮಾಡಿರುವ ಸಕ್ಷಮ ಪ್ರಾಧಿಕಾರದಲ್ಲಿ ಕೂಡಲೇ ನಿಯುತವಾಗತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ
ಸಹಿ/–
(ಅನ್ವರ್ ಬಾಷ)
ಸರ್ಕಾರದ ಉಪ ಕಾರ್ಯದರ್ಶಿ, ಕಂದಾಯ ಇಲಾಖೆ
(ಸೇವೆಗಳು–1, ಭೂಮಾಪನ ಮತ್ತು ವಿಶೇಷ ಕೋಶ)

ಅನುಬಂಧ–1

Details of the immovable properties belonging to M/s Samruddha Jeevan Multi State Multi-Purpose Co-operative Society Ltd., and Samruddha Jeevan Foods India Ltd., and Prosprity Agro India Ltd., and its Group Entities and its Directors

Sl. No.	Property Details	Seller	Purchaser	Sale Deed Number and Date	Present Market Value	Remarks
1	All that piece and parcel of Rubber plantation Agriculture land property bearing Sy.No.27/13 measuring an extent of 1-30 Acre-Cents (along with trees of Rubber, coconut and Betel nut), situated at Mudur Village, Byndoor Hobli, Byndoor Taluk, Udupi District. Bounded By: East: Sy. No. 27/9 & 27/7 West: Portion of Sy. No. 28 & 26 North: Portion of Sy. No. 27/10 & 28 South: Sy. No. 26	Sri C Mohammed S/o Abbu Backar represented by his GPA Holder Sri Mathew K.M S/o late Mathew	M/s Prosperity Agro India Limited represented by its Director Sri Dattatray S/o Madhav Yadav	SKN-1-01094-2014-15, 15-10-2014	Will be obtained from the authorized valuer at the time of valuation	The property stands in the name of the Financial Establishment.
2	All that piece and parcel of Agriculture land bearing Survey No. 11, Khatha No. 221, admeasuring 43-21 Acre-guntas, situated at Gudnurhalli Village, Dharmapura Hobli, Hiriyur Taluk, Chitradurga District. Bounded By: East: Land of Oodo Earappa West: Land of Survey No. 10 North: Land of Oodo Earappa South: Upparahalli Road	Sri. R Rangaiah S/o K.Rangaiah and 44 others represented by their GPA Holders (1) Hanumantharaju S/o Kannamedappa (2) Dr. Leela Lingappa	Sri. Prasad S/o Kishor Paraswar	HYR-1-04913-2012-13, 13-03-2013	Will be obtained from the authorized valuer at the time of valuation	The property stands in the name of Director of the Financial Establishment.
3	All that piece and parcel of Land admeasuring 0 Acre 04 Guntas out of Survey No. 7/3 (New Survey No. 7/1) totally admeasuring about 6 Acres 33 Guntas (Presently 10 Acres 13 Guntas) Situated at Mailar Village, Indi Taluk, Vijayapura District along with all the easmentery as well as egress, ingress, appurtenances, pathways, rights, benefits, consequential and other ancillary rights thereto over the said land, which is bounded with 0 Acre 04 Guntas. Bounded By:East: Malkappa Kapase West: Siddappa GawaliNorth: Govt. NalaSouth: Siddappa Gawali	Siddhappa Chandraram Gavali	Mahesh Kisan Motewar	IND-1-00956-2011-12, 09-05-2011	Will be obtained from the authorized valuer at the time of valuation	The property stands in the name of Director of the Financial Establishment.
4	All that piece and parcel of the property, Agriculture land, situated, lying and being at Mailar Village, Indi Taluk, Vijayapura District and within the jurisdiction of Sub-Registrar, Indi, bearing Block No.21/2/A, admeasuring 7 Acres and Block No. 21/2/B, admeasuring 7 Acres 20 Guntas in area totally admeasuring 14 Acre 20 Guntas. Bounded By: Block No.21/2/A:- East: Mr. Rayappa Valikar's Land West: Mr. Ramachandra Kapse's Land North: Mr. Karuna Irrappa Pattar's Land. South: Mr. Bukki's Land Block No.21/2/B:- East: Mr. Rayappa Valikar's Land West: Mr. Ramachandra Kapse's Land North: Mr. Vitthalgouda Biradar's Land South: Mr.Dhanappa Rathod's Land *Presently New Survey No. 21 measuring 14 Acres 20 Guntas out of land measuring 34 Acres 22 Guntas	1) Sri. Dhanappa Rudrappa Rathod 2) Smt. Kamalakshi Dhanappa Rathod	Smt. Vaishali Mahesh Motewar	IND-1-03948-2010-11, 20-09-2010	Will be obtained from the authorized valuer at the time of valuation	The property was purchased by the Director of the Financial Establishment. Presently RTC stands in the name of "Government of Karnataka" as per court order of AC, Indi sub Division, due to violation of section 79A and 79B of LRF Act, 1961.
5	All that piece and parcel of the property, Agriculture land, situated, lying and being at Mailar Village, Indi Taluk, Vijayapura District and within the jurisdiction of Sub-Registrar, Indi, bearing Block No.22, Hissa No.1, admeasuring 13 Acres in area.Bounded By:East: Land of Dhunddap AgarsurWest: Land of Vitthal PatilNorth: Land of selfSouth: Land of Rayappa Walikar *Presently New Survey No. 22 measuring 13 Acres out of land measuring 38 Acres 30 Guntas	Sri Tulajaram Babu Burudkar	Smt. Vaishali Mahesh Motewar	IND-1-03729-2010-11, 09-09-2010	Will be obtained from the authorized valuer at the time of valuation	The property was purchased by the Director of the Financial Establishment. Presently RTC stands in the name of "Government of Karnataka" as per court order of AC, Indi sub Division, due to violation of section 79A and 79B of LRF Act, 1961.
6	All that piece and parcel of the property, Agriculture land, bearing Survey No.22/2 admeasuring 05 Acres, having Assessment Rs.2 Ps.08, situated at Mailar Village, Indi Taluk, Vijayapura District and within the jurisdiction of Sub-Registrar, Indi. Bounded By: East: Land of Dhunddap Akshar West: Vaishali Mahesh Motewar North: Vaishali Mahesh Motewar South: Survey No.22/5 (Rayappa Dundappa Walikar) *Presently New Survey No. 22 measuring 05 Acres out of land measuring 38 Acres 30 Guntas	Sri Mallikarjun S/o Jagdish Ankalagi	Smt. Vaishali W/o Mahesh Motewar	IND-1-00219-2014-15, 08-04-2014	Will be obtained from the authorized valuer at the time of valuation	The property was purchased by the Director of the Financial Establishment. Presently RTC stands in the name of "Government of Karnataka" as per court order of AC, Indi sub Division, due to violation of section 79A and 79B of LRF Act, 1961.

ಸಹಿ/– (ಅನ್ವರ್ ಬಾಷ)
ಸರ್ಕಾರದ ಉಪ ಕಾರ್ಯದರ್ಶಿ,
ಕಂದಾಯ ಇಲಾಖೆ (ಸೇವೆಗಳು–1, ಭೂಮಾಪನ ಮತ್ತು ವಿಶೇಷ ಕೋಶ)

ವಾಸಾಸಂಇ/ವಾಪ್ರ/ಜೆಎ/4091/2025–26

ವಿಮಾನಗಳ ಸೇವೆಯಲ್ಲಿ ವ್ಯತ್ಯಯ

ಏರ್‌ಬಸ್ ಎ320 ಸರಣಿಯ ವಿಮಾನಗಳಲ್ಲಿ ತಾಂತ್ರಿಕ ದೋಷ: ಎಚ್ಚರಿಕೆ

ನವದೆಹಲಿ (ಪಿಟಿಐ): ವಿಮಾನ ತಯಾರಿಕಾ ಸಂಸ್ಥೆಯಾದ ಏರ್‌ಬಸ್, ತನ್ನ ಎ320 ಸರಣಿಯ ವಿಮಾನಗಳಲ್ಲಿ ತಾಂತ್ರಿಕ ದೋಷದ ಸಾಧ್ಯತೆಯ ಬಗ್ಗೆ ಎಚ್ಚರಿಕೆ ನೀಡಿರುವ ಕಾರಣ ಇಂಡಿಗೊ, ಏರ್ ಇಂಡಿಯಾ ಮತ್ತು ಏರ್ ಇಂಡಿಯಾ ಎಕ್ಸ್‌ಪ್ರೆಸ್ ವಿಮಾನಯಾನ ಸಂಸ್ಥೆಗಳು ದುರಸ್ತಿ ಕಾರ್ಯದಲ್ಲಿ ನಿರತವಾಗಿವೆ. ಹೀಗಾಗಿ ವಾರಾಂತ್ಯದಲ್ಲಿ ವಿಮಾನ ಸೇವೆಯಲ್ಲಿ ವ್ಯತ್ಯಯ ಉಂಟಾಗಿದೆ ಎಂದು ಮೂಲಗಳು ತಿಳಿಸಿವೆ.

ಭಾರತದಲ್ಲಿ ಸುಮಾರು 200ರಿಂದ 250 ವಿಮಾನಗಳ ಸೇವೆಯಲ್ಲಿ ವ್ಯತ್ಯಯ ಉಂಟಾಗಿದೆ ಎಂದು ಅವು ತಿಳಿಸಿವೆ.

'ತೀವ್ರವಾದ ಸೌರ ವಿಕಿರಣಗಳು ಎ320 ವಿಮಾನಗಳ ಹಾರಾಟ ನಿಯಂತ್ರಣದ ಪ್ರಮುಖ ಡೇಟಾವನ್ನು ಹಾಳುಮಾಡುವ ಅಪಾಯವಿದ್ದು, ಇದಕ್ಕಾಗಿ ಸಾಫ್ಟ್‌ವೇರ್ ಬದಲಾಯಿಸಬೇಕಾದ ಅಥವಾ ಮಾರ್ಪಾಡು ಮಾಡಬೇಕಾದ ಅಗತ್ಯವಿದೆ. ಹೀಗಾಗಿ ನಿಗದಿತ ವಿಮಾನಗಳ ಹಾರಾಟದಲ್ಲಿ ವ್ಯತ್ಯಯ ಉಂಟಾಗುವ ಸಾಧ್ಯತೆ ಇದೆ' ಎಂದು ಏರ್‌ಬಸ್ ಶುಕ್ರವಾರ ತಿಳಿಸಿದೆ.

ಇತ್ತೀಚೆಗೆ ಎ320 ವಿಮಾನವೊಂದರಲ್ಲಿ ಹಾರಾಟದ ವೇಳೆ ತಾಂತ್ರಿಕ ದೋಷ ಕಂಡುಬಂದು ತುರ್ತು ಭೂಸ್ಪರ್ಶ ಮಾಡಿದ ಘಟನೆಯ ನಂತರ ಪರಿಶೀಲನೆ ನಡೆಸಿದಾಗ ಈ ದೋಷ ಪತ್ತೆಯಾಗಿದೆ. ಈ ಬೆನ್ನಲ್ಲೇ, ವಿಮಾನಗಳು ಮುಂದಿನ ಹಾರಾಟ ನಡೆಸುವ ಮುನ್ನವೇ ದೋಷಪೂರಿತ ಭಾಗಗಳನ್ನು ಬದಲಾಯಿಸಬೇಕು ಅಥವಾ ಸಾಫ್ಟ್‌ವೇರ್ ಅಪ್‌ಡೇಟ್ ಮಾಡಬೇಕು ಎಂದು ಯುರೋಪಿಯನ್ ಯೂನಿಯನ್ ಏವಿಯೇಷನ್ ಸೇಫ್ಟಿ ಏಜೆನ್ಸಿ (ಇಎಎಸ್‌ಎ) ಸೂಚಿಸಿದೆ. ಆದ್ದರಿಂದ ವಿಮಾನಯಾನ ಸಂಸ್ಥೆಗಳು ತಾಂತ್ರಿಕ ದೋಷವನ್ನು ಸರಿಪಡಿಸುವ ನಿಟ್ಟಿನಲ್ಲಿ ಕಾರ್ಯನಿರತವಾಗಿವೆ.

ಭಾರತದಲ್ಲಿ ಏನು ಪರಿಣಾಮ?: ಭಾರತದಲ್ಲಿ ಕಾರ್ಯಾಚರಣೆ ನಡೆಸುತ್ತಿರುವ ವಿಮಾನಯಾನ ಸಂಸ್ಥೆಗಳ ಬಳಿ ಸುಮಾರು 560 ಎ320 ಮಾದರಿಯ ವಿಮಾನಗಳಿವೆ. ಈ ಪೈಕಿ 200–250 ವಿಮಾನಗಳ ಸಾಫ್ಟ್‌ವೇರ್ ಅಥವಾ ಹಾರ್ಡ್‌ವೇರ್ ಬದಲಾಯಿಸುವ ಅಗತ್ಯವಿದೆ ಎಂದು ಮೂಲಗಳು ತಿಳಿಸಿವೆ.

'ಏರ್‌ಬಸ್ ಪ್ರಕಟಣೆ ಅನುಸಾರವಾಗಿ ಸಂಸ್ಥೆಯೊಂದಿಗೆ ಕೆಲಸ ಮಾಡುತ್ತಿದ್ದೇವೆ. ಅಗತ್ಯ ತಪಾಸಣೆಯನ್ನೂ ನಡೆಸಿದ್ದೇವೆ. ಪ್ರಯಾಣಿಕರಿಗೆ ಅನನುಕೂಲ ಉಂಟಾಗದ ನಿಟ್ಟಿನಲ್ಲಿ ಪ್ರಯತ್ನಿಸುತ್ತಿದ್ದೇವೆ' ಎಂದು ಇಂಡಿಗೊ ವಿಮಾನಯಾನ ಸಂಸ್ಥೆ ತಿಳಿಸಿದೆ.

ಏರ್ ಇಂಡಿಯಾ ಎಕ್ಸ್‌ಪ್ರೆಸ್ ಸಹ, 'ಏರ್‌ಬಸ್‌ನಿಂದ ಎಚ್ಚರಿಕೆಯ ಸಂದೇಶ ಬರುತ್ತಿದ್ದಂತೆಯೇ ತುರ್ತಾಗಿ ಮುಂಜಾಗ್ರತಾ ಕ್ರಮ ಕೈಗೊಂಡಿದ್ದೇವೆ. ತಾಂತ್ರಿಕ ದೋಷ ಸರಿಪಡಿಸುವವರೆಗೂ ವಿಮಾನಗಳ ವೇಳಾಪಟ್ಟಿಯಲ್ಲಿ ಬದಲಾವಣೆ ಅನಿವಾರ್ಯ. ಪ್ರಯಾಣಿಕರು ಸಹಕರಿಸಬೇಕು' ಎಂದು ಕೋರಿದೆ. ಏರ್ ಇಂಡಿಯಾ ಎಕ್ಸ್‌ಪ್ರೆಸ್‌ನ 31 ವಿಮಾನಗಳ ಸೇವೆಯು ಇದರಿಂದ ಬಾಧಿತವಾಗಲಿವೆ ಎಂದು ಮೂಲಗಳು ತಿಳಿಸಿವೆ.

'ತಾಂತ್ರಿಕ ದೋಷದ ಕಾರಣ ನಿಗದಿತ ವಿಮಾನಗಳ ಸೇವೆಯಲ್ಲಿ ವ್ಯತ್ಯಯ ಉಂಟಾಗಬಹುದು. ಇದರಿಂದ ಪ್ರಯಾಣಿಕರಿಗೆ ಆಗುವ ಅನನುಕೂಲಕ್ಕಾಗಿ ವಿಷಾದಿಸುತ್ತೇವೆ' ಎಂದ ಏರ್ ಇಂಡಿಯಾ ತಿಳಿಸಿದೆ.

ಭಾರತೀಯ ವಿಮಾನಯಾನ ಸಂಸ್ಥೆಗಳು ಈ ವಿಮಾನಗಳಲ್ಲಿ ಶೇ 80ರಷ್ಟು ವಿಮಾನಗಳಿಗೆ ಸಾಫ್ಟ್‌ವೇರ್ ಅಪ್‌ಡೇಟ್ ಅನ್ನು ಪೂರ್ಣಗೊಳಿಸಿವೆ.

ಜಗತ್ತಿನಾದ್ಯಂತ ಸೇವೆಯಲ್ಲಿ ವಿಳಂಬ

ವಾಷಿಂಗ್ಟನ್(ಎಪಿ): ತಾಂತ್ರಿಕ ದೋಷ ನಿವಾರಣೆ ಕಾರಣದಿಂದ ಭಾರತದಲ್ಲಿ ಮಾತ್ರವಲ್ಲದೆ ಜಗತ್ತಿನಾದ್ಯಂತ ಹಲವು ವಿಮಾನಯಾನ ಸಂಸ್ಥೆಗಳ ಸೇವೆಯು ಶನಿವಾರ ರದ್ದಾಗಿತ್ತು.

ಎ320 ವಿಮಾನಗಳಲ್ಲಿನ ತಾಂತ್ರಿಕ ಸಮಸ್ಯೆಯನ್ನು ಶೀಘ್ರ ಪರಿಹರಿಸಲು ಯುರೋಪಿಯನ್ ಯೂನಿಯನ್ ಏವಿಯೇಷನ್ ಸೇಫ್ಟಿ ಏಜೆನ್ಸಿ (ಇಎಎಸ್‌ಎ) ಮತ್ತು ಫೆಡರಲ್ ಏವಿಯೇಷನ್ ಅಡ್ಮಿನಿಸ್ಟ್ರೇಷನ್ (ಎಫ್‌ಎಎ) ನಿರ್ದೇಶನ ನೀಡಿವೆ. ಸಾಫ್ಟ್‌ವೇರ್ ಬದಲಾವಣೆ ಕಾರ್ಯದಿಂದಾಗಿ ಅಮೆರಿಕದ 500ಕ್ಕೂ ಹೆಚ್ಚು ನೋಂದಾಯಿತ ವಿಮಾನಗಳ ಸೇವೆಯು ಬಾಧಿತವಾಗಲಿದೆ.

ಜಪಾನ್‌ನ ಆಲ್ ನಿಪ್ಪಾನ್ ಏರ್‌ವೇಸ್, 65 ದೇಶೀಯ ವಿಮಾನಗಳ ಸೇವೆಯನ್ನು ರದ್ದುಗೊಳಿಸಿದೆ. ಭಾನುವಾರವೂ ವಿಮಾನಗಳ ಕಾರ್ಯಾಚರಣೆಯಲ್ಲಿ ವ್ಯತ್ಯಯ ಉಂಟಾಗುವ ಸಾಧ್ಯತೆ ಇದೆ ಎಂದು ಅದು ತಿಳಿಸಿದೆ.

'50 ವಿಮಾನಗಳ ಸೇವೆಯಲ್ಲಿ ವ್ಯತ್ಯಯವಾಗಲಿದೆ' ಎಂದು ಡೆಲ್ಟಾ ವಿಮಾನಯಾನ ಸಂಸ್ಥೆ ತಿಳಿಸಿದೆ.

ಚಿಟಿಕೆ ಸುದ್ದಿ

ಸಿಬಿಐಸಿ ಮುಖ್ಯಸ್ಥರಾಗಿ ವಿವೇಕ್ ಚತುರ್ವೇದಿ

ನವದೆಹಲಿ (ಪಿಟಿಐ): ಪರೋಕ್ಷ ತೆರಿಗೆಗಳು ಮತ್ತು ಸುಂಕಗಳ ಕೇಂದ್ರೀಯ ಮಂಡಳಿಯ (ಸಿಬಿಐಸಿ) ಹೊಸ ಮುಖ್ಯಸ್ಥರಾಗಿ ಭಾರತೀಯ ಕಂದಾಯ ಸೇವೆಯ (ಐಆರ್‌ಎಸ್) ಅಧಿಕಾರಿ ವಿವೇಕ್ ಚತುರ್ವೇದಿ ಅವರನ್ನು ಕೇಂದ್ರ ಸರ್ಕಾರ ನೇಮಿಸಿದೆ.

ಸಂಜಯ್ ಕುಮಾರ್ ಅಗರ್ವಾಲ್ ಅವರು ನವೆಂಬರ್ 28 ನಿವೃತ್ತಿಯಾದರು. ಹೀಗಾಗಿ ಈ ಸ್ಥಾನಕ್ಕೆ ಚತುರ್ವೇದಿ ಅವರನ್ನು ನೇಮಿಸಲಾಗಿದೆ.

ಚೋಕ್ಸಿ ಮನವಿ ತಿರಸ್ಕರಿಸಿದ ಕೋರ್ಟ್

ನವದೆಹಲಿ(ಪಿಟಿಐ): ಪಂಜಾಬ್ ನ್ಯಾಷನಲ್ ಬ್ಯಾಂಕಿಗೆ ಕೋಟ್ಯಂತರ ರೂಪಾಯಿ ವಂಚಿಸಿದ ಆರೋಪ ಎದುರಿಸುತ್ತಿರುವ ಪ್ರಕರಣದಲ್ಲಿ ತನ್ನನ್ನು ತಲೆಮರೆಸಿಕೊಂಡ ಆರ್ಥಿಕ ಅಪರಾಧಿ (ಎಫ್‌ಇಒ) ಎಂದು ಘೋಷಿಸುವಂತೆ ಕೋರಿದ್ದ ಅರ್ಜಿಯ ವಿಚಾರಣೆಯನ್ನು ಕೈ ಬಿಡುವಂತೆ ಕೋರಿ ವಜ್ರಾಭರಣ ವ್ಯಾಪಾರಿ ಮೆಹುಲ್ ಚೋಕ್ಸಿ ಮಾಡಿದ್ದ ಮನವಿಯನ್ನು ಇಲ್ಲಿನ ವಿಶೇಷ ನ್ಯಾಯಾಲಯವು ತಿರಸ್ಕರಿಸಿದೆ.

ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್‌ಎ) ಪ್ರಕರಣದ ಅರ್ಜಿ ವಿಚಾರಣೆ ವೇಳೆ ತನ್ನನ್ನು ಎಫ್‌ಇಒ ಎಂದು ಘೋಷಿಸುವಂತೆ ಕೋರಿ ಜಾರಿ ನಿರ್ದೇಶನಾಲಯ (ಇ.ಡಿ) ಅರ್ಜಿಯನ್ನು ಅರ್ಜಿಯನ್ನು ಕೈಬಿಡಬೇಕು ಎಂದು ಮನವಿ ಮಾಡಿದ್ದರು.

ಮುಂಬೈ ಧಾರಣೆ (ಶೇಂಗಾ)

29 -11-2025

ಜಾವಾ 70/80(ಹೊಸ)	10700-10800
ಜಾವಾ 80/90(ಹೊಸ)	10000-10100
ದಪ್ಪ ಮಧ್ಯಪ್ರದೇಶ (ಹೊಸ)	7900-8000
ದಪ್ಪ ಗುಜರಾತ್ (ಹೊಸ)	9000-9100
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1555 (1560)
ಒಂದು ವಾರದ ಡೆಲಿವರಿ	1550 (1555)
ಪಾಮ್ ವಾರದ ಡೆಲಿವರಿ	1238 (1243)
ಸೂರ್ಯಕಾಂತಿ ಎಣ್ಣೆ ಕಚ್ಚಾ	1405 (1410)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,27,600 (1,26,200)
ಬೆಳ್ಳಿ ಕೆ.ಜಿಗೆ	1,72,300 (1,64,400)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು		
	100 ಕ್ಕೆ	₹675
	12 ಕ್ಕೆ	₹96
ಮೈಸೂರು:	100 ಕ್ಕೆ	₹675

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹182
ಆರ್‌ಎಸ್‌ಎಸ್-5	₹177
ಗುಡ್ ಲಾಟ್	₹164

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹509-795
ದ್ವಿತಳಿ (ಬಿ.ವಿ)	₹533-915

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹28750
ಎಸಿ	₹15540
ಆರ್‌ಪಿ	₹18900
ಆರ್‌ಸಿ	₹10600

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1545 (1550)
ಸೋಯಾ (ರಿಫೈನ್ಡ್)	₹1270 (1275)
ಸೂರ್ಯಕಾಂತಿ (ರಿಫೈನ್ಡ್)	₹1470 (1475)
ಪಾಮೋಲಿನ್	₹1240 (1245)

ಹೆಚ್ಚುವರಿ ಸುಂಕದಿಂದ ಭಾರತದ ವಹಿವಾಟು ಕುಸಿತ: ಜಿಟಿಆರ್‌ಐ ವರದಿ

ಅಮೆರಿಕಕ್ಕೆ ರಫ್ತು ಶೇ 28ರಷ್ಟು ಇಳಿಕೆ

ನವದೆಹಲಿ (ಪಿಟಿಐ): ಭಾರತದ ಸರಕುಗಳ ಆಮದಿನ ಮೇಲೆ ಅಮೆರಿಕ ಹೇರಿರುವ ಹೆಚ್ಚುವರಿ ಸುಂಕದಿಂದ ದೇಶದ ರಫ್ತು ಕಳೆದ ಐದು ತಿಂಗಳಿನಲ್ಲಿ ಶೇ 28.5ರಷ್ಟು ಇಳಿಕೆಯಾಗಿದೆ ಎಂದು ಗ್ಲೋಬಲ್ ಟ್ರೇಡ್ ರಿಸರ್ಚ್ ಇನಿಷಿಯೇಟಿವ್ (ಜಿಟಿಆರ್‌ಐ) ವರದಿ ಶನಿವಾರ ತಿಳಿಸಿದೆ.

ಭಾರತಕ್ಕೆ ಅಮೆರಿಕವು ಅತಿದೊಡ್ಡ ಮಾರುಕಟ್ಟೆಯಾಗಿದ್ದು, ಹೆಚ್ಚಿನ ಪ್ರಮಾಣದಲ್ಲಿ ರಫ್ತು ಮಾಡುತ್ತದೆ. ಆದರೆ, ಸುಂಕ ಹೆಚ್ಚಳವು ರಫ್ತು ಇಳಿಕೆಗೆ ಪ್ರಮುಖ ಕಾರಣವಾಗಿದೆ ಎಂದು ತಿಳಿಸಿದೆ.

ಪ್ರಸಕ್ತ ವರ್ಷದ ಮೇ ತಿಂಗಳಿನಿಂದ ಅಕ್ಟೋಬರ್ ವರೆಗೆ ರಫ್ತಾದ ಸರಕುಗಳ ಹಣಕಾಸಿನ ಮೌಲ್ಯ ₹78,894 ಕೋಟಿಯಿಂದ ₹56,378 ಕೋಟಿಗೆ ಇಳಿದಿದೆ ಎಂದು ಜಿಟಿಆರ್‌ಐ ತಿಳಿಸಿದೆ.

ಏಪ್ರಿಲ್‌ನಲ್ಲಿ ಅಮೆರಿಕವು, ಭಾರತದಿಂದ ಆಮದು ಮಾಡಿಕೊಳ್ಳುವ ಸರಕುಗಳ ಮೇಲೆ ಶೇ 10ರಷ್ಟು ಸುಂಕ ವಿಧಿಸಿತ್ತು. ಈ ಸುಂಕವನ್ನು ಆಗಸ್ಟ್ ತಿಂಗಳ ಅಂತ್ಯದ ವೇಳೆಗೆ ಶೇ 50ಕ್ಕೆ ಹೆಚ್ಚಿಸಿತು.

ಅಕ್ಟೋಬರ್ ತಿಂಗಳಿನಲ್ಲಿನ ಒಟ್ಟು ರಫ್ತಿನ ಪೈಕಿ ಸ್ಮಾರ್ಟ್‌ಫೋನ್, ಔಷಧಗಳು ಮತ್ತು ಪೆಟ್ರೋಲಿಯಂ ಉತ್ಪನ್ನಗಳ ರಫ್ತು ಪಾಲು ಶೇ 40.3ರಷ್ಟಿದೆ. ಮೇ ತಿಂಗಳಿನಲ್ಲಿ ಈ ವಸ್ತುಗಳ ರಫ್ತು ಹಣಕಾಸಿನ ಮೌಲ್ಯದಲ್ಲಿ ₹30,556 ಕೋಟಿಯಷ್ಟಿತ್ತು. ಆದರೆ, ಅಕ್ಟೋಬರ್ ವೇಳೆಗೆ ₹22,694 ಕೋಟಿಗೆ ಇಳಿದಿದೆ. ಒಟ್ಟಾರೆ ರಫ್ತು ಮೌಲ್ಯ ಶೇ 25.8ರಷ್ಟು ಕಡಿಮೆಯಾಗಿದೆ.





ಕಬ್ಬಿಣ, ಉಕ್ಕು, ಅಲ್ಯೂಮಿನಿಯಂ, ತಾಮ್ರ ಮತ್ತು ವಾಹನದ ಬಿಡಿ ಭಾಗಗಳ ರಫ್ತು ಕಳೆದ ಐದು ತಿಂಗಳಿನಲ್ಲಿ ಶೇ 23.8ರಷ್ಟು ಇಳಿಕೆಯಾಗಿದೆ. ಮೇ ತಿಂಗಳಿನಲ್ಲಿ ₹5,619 ಕೋಟಿ ಮೊತ್ತದ ಸರಕುಗಳು ರಫ್ತಾಗಿತ್ತು. ಅಕ್ಟೋಬರ್ ವೇಳೆಗೆ ಇದು ₹4,288 ಕೋಟಿಗೆ ಇಳಿದಿದೆ.

ಕಾರ್ಮಿಕ ಕೇಂದ್ರಿತ ವಲಯದ ಸರಕುಗಳ ರಫ್ತು ಮೌಲ್ಯವು ₹42,708 ಕೋಟಿಯಿಂದ ₹29,395 ಕೋಟಿಗೆ ಇಳಿದಿದೆ. ಸ್ಮಾರ್ಟ್‌ಫೋನ್‌ಗಳ ರಫ್ತು ಶೇ 36ರಷ್ಟು ಕುಸಿತ ಕಂಡಿದೆ. ಮೇ ತಿಂಗಳಿನಲ್ಲಿ ₹20,460 ಕೋಟಿಯಷ್ಟಿತ್ತು. ಅಕ್ಟೋಬರ್ ವೇಳೆಗೆ ₹13,402 ಕೋಟಿಗೆ ಇಳಿದಿದೆ ಎಂದು ಜಿಟಿಆರ್‌ಐ ಸಂಸ್ಥಾಪಕ ಅಜಯ್ ಶ್ರೀವಾಸ್ತವ ಹೇಳಿದ್ದಾರೆ.

ದೇಶದ ಔಷಧ ಸರಕುಗಳ ರಫ್ತು ₹6,661 ಕೋಟಿಯಿಂದ ₹6,554 ಕೋಟಿಗೆ ಇಳಿಕೆಯಾಗಿದೆ. ಪೆಟ್ರೋಲಿಯಂ ಉತ್ಪನ್ನಗಳ ರಫ್ತು ಶೇ 15.5ರಷ್ಟು ಕಡಿಮೆಯಾಗಿದ್ದು,₹2,197 ಕೋಟಿಯಾಗಿದೆ. ಮೇ ತಿಂಗಳಿನಲ್ಲಿ ₹2,600 ಕೋಟಿಯಷ್ಟಾಗಿತ್ತು.

ರಾಸಾಯನಿಕಗಳ ರಫ್ತು ಶೇ 38ರಷ್ಟು ಕುಸಿದು, ₹4,797 ಕೋಟಿಯಿಂದ ₹2,975 ಕೋಟಿಗೆ ಇಳಿದಿದೆ ಎಂದು ತಿಳಿಸಿದೆ.

ಇಂಡೋನೇಷ್ಯಾ: ಮೃತರ ಸಂಖ್ಯೆ 248ಕ್ಕೆ

ಆಗಂ (ಎಪಿ): ಇಂಡೋನೇಷ್ಯಾದಲ್ಲಿ ಭೂಕಂಪ ಮತ್ತು ಸುನಾಮಿಯಿಂದ ಮೃತಪಟ್ಟವರ ಸಂಖ್ಯೆ 248ಕ್ಕೆ ಏರಿಕೆಯಾಗಿದೆ. ಶನಿವಾರವೂ ರಕ್ಷಣಾ ಕಾರ್ಯಾಚರಣೆ ಮುಂದುವರಿದಿದ್ದು ಸಾವಿನ ಸಂಖ್ಯೆ ಇನ್ನಷ್ಟು ಹೆಚ್ಚಾಗುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ಶನಿವಾರ ತಿಳಿಸಿದರು.

ರಸ್ತೆ ಮತ್ತು ಸೇತುವೆಗಳು ಕುಸಿದಿರುವುದರಿಂದ ಸಂತ್ರಸ್ತರನ್ನು ತಲುಪುವುದು ಕಷ್ಟವಾಗಿದೆ. ಹೆಲಿಕಾಪ್ಟರ್ ಮೂಲಕ ಅಗತ್ಯ ವಸ್ತುಗಳನ್ನು ಪೂರೈಸಲಾಗುತ್ತಿದೆ.

ಸುದ್ದಿ 2 ನಿಮಿಷ

ಜಿಯೊಗೆ 20 ಲಕ್ಷ ಹೊಸ ಚಂದಾದಾರರ ಸೇರ್ಪಡೆ

ನವದೆಹಲಿ (ಪಿಟಿಐ): ಪ್ರಸಕ್ತ ವರ್ಷದ ಅಕ್ಟೋಬರ್ ತಿಂಗಳಿನಲ್ಲಿ ದೇಶದ ದೂರಸಂಪರ್ಕ ಸೇವಾ ಕಂಪನಿ, ರಿಲಯನ್ಸ್ ಜಿಯೊಗೆ ಹೊಸದಾಗಿ 19.97 ಲಕ್ಷ ಚಂದಾದಾರರು ಸೇರ್ಪಡೆ ಆಗಿದ್ದಾರೆ. ಈ ಸೇರ್ಪಡೆಯಿಂದ ಕಂಪನಿಯ ಒಟ್ಟು ಚಂದಾದಾರರ ಸಂಖ್ಯೆ 48.47 ಕೋಟಿಗೆ ಏರಿಕೆಯಾಗಿದೆ ಎಂದು ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರ (ಟ್ರಾಯ್) ತಿಳಿಸಿದೆ.

ಭಾರ್ತಿ ಏರ್‌ಟೆಲ್ ಚಂದಾದಾರರ ಪ್ರಮಾಣ 12.52 ಲಕ್ಷ ಹೆಚ್ಚಳವಾಗಿದೆ. ಇದರಿಂದ ಕಂಪನಿಯ ಒಟ್ಟು ಚಂದಾದಾರರ ಸಂಖ್ಯೆ 39.36 ಕೋಟಿಗೆ ಏರಿಕೆಯಾಗಿದೆ. ಸೆಪ್ಟೆಂಬರ್‌ನಲ್ಲಿ ಇದು 39.24 ಕೋಟಿಯಷ್ಟಿತ್ತು.

ಸರ್ಕಾರಿ ಸ್ವಾಮ್ಯದ ಭಾರತ್ ಸಂಚಾರ ನಿಗಮ ಲಿಮಿಟೆಡ್‌ಗೆ (ಬಿಎಸ್‌ಎನ್‌ಎಲ್) 2.69 ಲಕ್ಷ ಮೊಬೈಲ್ ಚಂದಾದಾರರು ಸೇರ್ಪಡೆಯಾಗಿದ್ದು, ಒಟ್ಟು ಚಂದಾದಾರರು 9.25 ಕೋಟಿಯಾಗಿದೆ.

ಆದರೆ, ಇದೇ ಅವಧಿಯಲ್ಲಿ ವೊಡಾಫೋನ್ ಐಡಿಯಾ (ವಿಐಎಲ್) 20.83 ಲಕ್ಷ ಚಂದಾದಾರನ್ನು ಕಳೆದುಕೊಂಡಿದ್ದು, 20.07 ಕೋಟಿಗೆ ಚಂದಾದಾರರ ಸಂಖ್ಯೆ ಇಳಿದಿದೆ.

ದೇಶದ ಒಟ್ಟು ಮೊಬೈಲ್ ಚಂದಾದಾರರ ಸಂಖ್ಯೆ 123.1 ಕೋಟಿಯಾಗಿದೆ. ಅಕ್ಟೋಬರ್ ಅಂತ್ಯದ ವೇಳೆಗೆ ಒಟ್ಟು ಬ್ರಾಡ್‌ಬ್ಯಾಂಡ್ ಚಂದಾದಾರರ ಸಂಖ್ಯೆ 99.98 ಕೋಟಿಗೆ ಏರಿದೆ ಎಂದು ತಿಳಿಸಿದೆ.

ಸರ್ಕಾರದ ಕ್ರಮಗಳಿಂದ ಜಿಡಿಪಿ ಹೆಚ್ಚಳ: ಗೋಯಲ್

ವಡೋದರಾ (ಪಿಟಿಐ): 'ಸರ್ಕಾರ ಕೈಗೊಂಡ ಹಲವು ಕ್ರಮಗಳು, ತಯಾರಿಕಾ ವಲಯದಲ್ಲಿನ ಪ್ರಗತಿಯು ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ದೇಶದ ಜಿಡಿಪಿ ಬೆಳವಣಿಗೆ ಶೇ 8.2ರಷ್ಟು ದಾಖಲಾಗಲು ನೆರವಾಗಿವೆ' ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಹೇಳಿದ್ದಾರೆ.

ಜಾಗತಿಕ ಅನಿಶ್ಚಿತತೆಗಳ ನಡುವೆಯೂ ದೇಶದ ರಫ್ತು ಆರೋಗ್ಯಕರ ಬೆಳವಣಿಗೆ ದಾಖಲಿಸುತ್ತಿದೆ ಎಂದು ಶನಿವಾರ ಹೇಳಿದ್ದಾರೆ.

ಶೇ 8.2ರಷ್ಟು ಜಿಡಿಪಿ ಪ್ರಗತಿಯು ಸರ್ಕಾರ ಕೈಗೊಂಡ ಹಲವು ಸುಧಾರಣಾ ಕ್ರಮಗಳನ್ನು ಪ್ರತಿಬಿಂಬಿಸುತ್ತಿದೆ. ದೇಶೀಯ ತಯಾರಿಕಾ ವಲಯಕ್ಕೆ ಉತ್ತೇಜನ ನೀಡಲು ಮತ್ತು ಸುಲಲಿತ ಉದ್ದಿಮೆ ವಹಿವಾಟು ನಡೆಸಲು ಕೈಗೊಂಡ ಹಲವಾರು ಕ್ರಮಗಳಿಂದ ಪ್ರಗತಿ ಹೆಚ್ಚಳ ಕಂಡಿದೆ ಎಂದು ತಿಳಿಸಿದ್ದಾರೆ.

ಭಾರತವು ವಿಶ್ವದ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಪ್ರಮುಖ ಆರ್ಥಿಕತೆಯಾಗಿದೆ ಎಂಬುದನ್ನು ಈ ಅಂಕಿ–ಅಂಶಗಳು ತೋರಿಸಿದ್ದು, ದೇಶವು ನಿರಂತರ ಬೆಳವಣಿಗೆ ಕಾಣಲಿದೆ ಎಂದು ಹೇಳಿದ್ದಾರೆ.

ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಅಕ್ಟೋಬರ್ ಅವಧಿಯಲ್ಲಿ ದೇಶದ ಸರಕು ಮತ್ತು ಸೇವೆಗಳ ರಫ್ತು ಹೆಚ್ಚಳ ಕಂಡಿದೆ ಎಂದು ಹೇಳಿದ್ದಾರೆ.

'ಜೀವಂತವಾಗಿರುವುದಕ್ಕೆ ಸಾಕ್ಷ್ಯ ನೀಡಿ'

ಲಾಹೋರ್ (ಪಿಟಿಐ): 'ಪಾಕಿಸ್ತಾನ್ ತೆಹ್ರೀಕ್ ಇ ಇನ್ಸಾಫ್ (ಪಿಟಿಐ) ಪಕ್ಷದ ಸಂಸ್ಥಾಪಕ ಇಮ್ರಾನ್ ಖಾನ್ ಅವರು ಜೈಲಿನಲ್ಲಿ ಜೀವಂತ ವಾಗಿದ್ದಾರೆ ಎಂಬುದಕ್ಕೆ ಸಾಕ್ಷ್ಯ ನೀಡಿ' ಎಂದು ಅವರ ಪುತ್ರ ಕಾಸಿಂ ಖಾನ್ ಪಾಕಿಸ್ತಾನ ಸರ್ಕಾರವನ್ನು ಆಗ್ರಹಿಸಿದ್ದಾರೆ.

ಇಮ್ರಾನ್ ಖಾನ್

'ತಿಂಗಳಿಗೂ ಹೆಚ್ಚು ಅವಧಿಯಿಂದ ಕುಟುಂಬಸ್ಥರು, ವಕೀಲರು ಹಾಗೂ ಪಿಟಿಐ ಮುಖಂಡರಿಗೆ ಪಕ್ಷದ ವರಿಷ್ಠರನ್ನು ಭೇಟಿ ಮಾಡಲು ಅವಕಾಶ ಸಿಕ್ಕಿಲ್ಲ. ಮಾಜಿ ಕ್ರಿಕೆಟಿಗರೂ ಆಗಿರುವ ಇಮ್ರಾನ್ ಖಾನ್ ಅವರನ್ನು ಜೈಲಿನಲ್ಲಿ ಹತ್ಯೆ ಮಾಡಲಾಗಿದೆ ಎಂಬ ವದಂತಿ ಕೇಳಿಬರುತ್ತಿದೆ' ಎಂದು ಸಾಮಾಜಿಕ ಮಾಧ್ಯಮದಲ್ಲಿ ಶುಕ್ರವಾರ ಸಂಜೆ ಪೋಸ್ಟ್‌ವೊಂದನ್ನು ಅವರು ಹಾಕಿದ್ದಾರೆ.

ಹಲವು ಪ್ರಕರಣಗಳಿಗೆ ಸಂಬಂಧಿಸಿದಂತೆ ಎರಡು ವರ್ಷಕ್ಕೂ ಹೆಚ್ಚು ಅವಧಿಯಿಂದ ಇಮ್ರಾನ್ ಖಾನ್ ಅವರು ರಾವಲ್ಪಿಂಡಿಯ ಅಡಿಯಾಲಾ ಜೈಲಿನಲ್ಲಿದ್ದಾರೆ.

'ನನ್ನ ತಂದೆಯು 845 ದಿನಗಳಿಂದ ಬಂಧನದಲ್ಲಿದ್ದಾರೆ. ಟುಂಬಸ್ಥರ ಭೇಟಿಗೆ ಅವಕಾಶ ಕಲ್ಪಿಸುವಂತೆ ನ್ಯಾಯಾಲಯದ ಆದೇಶವಿದ್ದರೂ, ಭೇಟಿಯನ್ನು ನಿರಾಕರಿಸಲಾಗಿದೆ' ಎಂದು ಕಾಸಿಂ ಹೇಳಿಕೊಂಡಿದ್ದಾರೆ.

ಆಹಾರ ಉತ್ಪನ್ನಗಳ ರಫ್ತು: ಡಿ.3ರಿಂದ ತರಬೇತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೃಷಿ ಮತ್ತು ಆಹಾರ ಉತ್ಪನ್ನಗಳ ರಫ್ತು ಪ್ರಕ್ರಿಯೆ ಕುರಿತು ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು, ನಿಗಮ ನಿಯಮಿತ (ಕೆಪೆಕ್) ಡಿ.3ರಿಂದ 5ರವರೆಗೆ ಕೃಷಿ ತಂತ್ರಜ್ಞರ ಸಂಸ್ಥೆಯ ಸಭಾಂಗಣದಲ್ಲಿ ಸುವಿಸ್ತಾರ ತರಬೇತಿ ಕಾರ್ಯಕ್ರಮ ಹಮ್ಮಿಕೊಂಡಿದೆ.

ಕರ್ನಾಟಕ ಕೃಷಿ ವಾಣಿಜ್ಯ ಅಭಿವೃದ್ಧಿ ನಿಗಮ (ಕೆಎಬಿಡಿಸಿ) ಮತ್ತು ಕೇಂದ್ರ ಸರ್ಕಾರದ ವಾಣಿಜ್ಯ ಮಂತ್ರಾಲಯದ ಅಡಿಯಲ್ಲಿ ಬರುವ ಭಾರತೀಯ ರಫ್ತುದಾರರ ಸಂಘಟನೆಗಳ ಒಕ್ಕೂಟದ (ಎಫ್‌ಐಇಒ) ಸಹಯೋಗದಲ್ಲಿ ಕೆಪೆಕ್ ಈ ತರಬೇತಿ ನಡೆಸುತ್ತಿದೆ.

ರಾಜ್ಯದಿಂದ ಕಾಫಿ, ಕಾಳುಮೆಣಸು, ಏಲಕ್ಕಿ, ಅರಿಶಿಣ, ಶುಂಠಿ, ದ್ರಾಕ್ಷಿ, ಮಾವು, ಬಾಳೆ, ನಿಂಬೆ, ಬೆಲ್ಲ, ಜೇನುತುಪ್ಪ, ನುಗ್ಗೆ ಪುಡಿ, ಅಕ್ಕಿ, ರಾಗಿ, ಮೆಕ್ಕೆಜೋಳ, ಮೀನು ಹಾಗೂ ಸಿಗಡಿ ಸೇರಿದಂತೆ ಅನೇಕ ಉತ್ಪನ್ನಗಳು ವಿವಿಧ ದೇಶಗಳಿಗೆ ರಫ್ತಾಗುತ್ತಿವೆ. ಅಮೆರಿಕ, ಯುಎಇ, ಚೀನಾ, ಬಾಂಗ್ಲಾದೇಶ, ಜರ್ಮನಿ, ನೇಪಾಳ ಹಾಗೂ ಶ್ರೀಲಂಕಾವು ಕರ್ನಾಟಕದಿಂದ ಆಮದು ಮಾಡಿಕೊಳ್ಳುವ ಪ್ರಮುಖ ದೇಶಗಳಾಗಿವೆ. ಇಲ್ಲಿನ ವೈವಿಧ್ಯಮಯ ಹವಾಮಾನ, ವಿಶಾಲ ಬೆಳೆ ಪ್ರದೇಶಗಳು, ಆಧುನಿಕ ಮೂಲ ಸೌಲಭ್ಯಗಳಿಂದಾಗಿ ಕೃಷಿ ರಫ್ತಿಗೆ ವಿಪುಲ ಅವಕಾಶಗಳಿವೆ. ಆದರೆ, ರೈತರು ಮತ್ತು ಕೃಷಿ ಆಧಾರಿತ ಉದ್ದಿಮೆದಾರರು ರಫ್ತು ಮಾಡಲು ಅನುಸರಿಸಬೇಕಾದ ನಿಯಮಗಳು, ಪ್ರಮಾಣಪತ್ರಗಳು, ಅಗತ್ಯ ದಾಖಲೆಗಳು, ಗುಣಮಟ್ಟ ಪರೀಕ್ಷೆಗಳು, ಲಾಜಿಸ್ಟಿಕ್ಸ್ ಮತ್ತು ವಿದೇಶ ಮಾರುಕಟ್ಟೆ ತಂತ್ರಗಳು ಕುರಿತು ಸಂಪೂರ್ಣ ಮಾಹಿತಿ ಹೊಂದಿಲ್ಲ ಎಂದು ಕೆಪೆಕ್ ವ್ಯವಸ್ಥಾಪಕ ನಿರ್ದೇಶಕ ಸಿ.ಎನ್. ಶಿವಪ್ರಕಾಶ್ ತಿಳಿಸಿದ್ದಾರೆ.

ಕೃಷಿ ಹಾಗೂ ಆಹಾರ ಸಂಸ್ಕರಣಾ ಕ್ಷೇತ್ರದಲ್ಲಿ ರಾಜ್ಯವು ಮಹತ್ವದ ಸ್ಥಾನ ಪಡೆದಿದೆ. ಸಂಭಾವ್ಯ ರಫ್ತುದಾರರಿಗೆ ನೆರವು ನೀಡಲು ತರಬೇತಿ ಆಯೋಜಿಸಲಾಗಿದೆ

ಸಿ.ಎನ್. ಶಿವಪ್ರಕಾಶ್, ಕೆಪೆಕ್ ವ್ಯವಸ್ಥಾಪಕ ನಿರ್ದೇಶಕ

ಡಿಜಿಎಫ್‌ಟಿ, ಎಪಿಇಡಿ, ಸ್ಪೈಸಿ ಬೋರ್ಡ್, ಇಸಿಜಿಸಿ, ಕಸ್ಟಮ್ಸ್ ಕ್ವಾರಂಟೈನ್ ಬ್ಯಾಂಕಿಂಗ್ ಮತ್ತು ಲಾಜಿಸ್ಟಿಕ್ಸ್ ಸಂಸ್ಥೆಗಳ ನುರಿತ ಅಧಿಕಾರಿ, ತಜ್ಞರು ಸಂಪನ್ಮೂಲ ವ್ಯಕ್ತಿಗಳಾಗಿ ಪಾಲ್ಗೊಳ್ಳಲಿದ್ದಾರೆ. ಮಾಹಿತಿಗಾಗಿ ಕೆಪೆಕ್ ಸಂಸ್ಥೆಯ ಸಹಾಯವಾಣಿ: 7618786813/ 14/15 ಸಂಪರ್ಕಿಸಬಹುದು.

'ಏರ್ ಇಂಡಿಯಾ ಟಾಟಾದ ಹೊಣೆ'

ಮುಂಬೈ (ಪಿಟಿಐ): 'ಏರ್ ಇಂಡಿಯಾವನ್ನು ವ್ಯವಹಾರದ ರೀತಿ ಮಾತ್ರ ನೋಡಬೇಡಿ. ಅದನ್ನು ಬೆಳೆಸುವುದು ಟಾಟಾ ಸಮೂಹದ ಜವಾಬ್ದಾರಿಯೂ ಆಗಿದೆ' ಎಂದು ಟಾಟಾ ಸನ್ಸ್ ಅಧ್ಯಕ್ಷ ಎನ್.ಚಂದ್ರಶೇಖರನ್ ಹೇಳಿದ್ದಾರೆ.

ಟಾಟಾ ಸಮೂಹದ ಸಂಸ್ಥಾಪಕ ಜೆ.ಆರ್.ಡಿ.ಟಾಟಾ ಅವರ 121ನೇ ಜನ್ಮದಿನಾಚರಣೆಯ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿಮಾನದ ಬಿಡಿ ಭಾಗಗಳ ಲಭ್ಯತೆಯಲ್ಲಿ ಸಮಸ್ಯೆ, ಮೂಲಸೌಕರ್ಯ ಕೊರತೆ ಮತ್ತು ಹೊಸ ವಿಮಾನಗಳ ಪೂರೈಕೆಯಲ್ಲಿ ವಿಳಂಬ ಸೇರಿದಂತೆ ವಿಮಾನಯಾನ ವಲಯವು ನಿರಂತರವಾಗಿ ಸವಾಲುಗಳನ್ನು ಎದುರಿಸುತ್ತಿದೆ. ಪ್ರತಿಯೊಂದು ಯೋಜನೆಯು ಈ ಸವಾಲುಗಳಿಂದ ಕಷ್ಟಕರವಾಗುತ್ತಿದೆ ಎಂದಿದ್ದಾರೆ.

ವಿಮಾನಯಾನ ಉದ್ಯಮವು ಹೆಚ್ಚು ಬಂಡವಾಳ ಬೇಡುವ ಕ್ಷೇತ್ರವಾಗಿದೆ. ಆದರೆ, ಲಾಭವು ಅತಿ ಕಡಿಮೆ ಪ್ರಮಾಣದಲ್ಲಿದೆ ಎಂದರು.

2022ರ ಜನವರಿಯಲ್ಲಿ, ನಷ್ಟದಲ್ಲಿದ್ದ ಏರ್ ಇಂಡಿಯಾ ಎಕ್ಸ್‌ಪ್ರೆಸ್ ಜೊತೆಗೆ ಏರ್ ಇಂಡಿಯಾವನ್ನು ಟಾಟಾ ಸಮೂಹವು ಸ್ವಾಧೀನಪಡಿಸಿಕೊಂಡಿತು. ಅಂದಿನಿಂದ ಸಮೂಹವು ಐದು ವರ್ಷದ ಮಹತ್ವಾಕಾಂಕ್ಷೆಯ ಯೋಜನೆ ಹೊಂದಿದ್ದು, ಕೆಲಸ ಮಾಡುತ್ತಿದೆ. ಆದರೆ, ವಿಮಾನಗಳ ಮೇಲ್ದರ್ಜೆಗೇರಿಸುವಿಕೆ, ವಿಮಾನಗಳ ವಿತರಣೆಯಲ್ಲಿ ವಿಳಂಬ ಸೇರಿದಂತೆ ಜಾಗತಿಕ ಪೂರೈಕೆ ಸರಪಳಿಯಲ್ಲಿ ಸಮಸ್ಯೆಯನ್ನು ಎದುರಿಸುತ್ತಿದೆ. ಇದರಿಂದಾಗಿ ಅಂದುಕೊಂಡಿದ್ದಕ್ಕಿಂತಲೂ ಪ್ರಗತಿ ನಿಧಾನವಾಗಿದೆ ಎಂದು ಹೇಳಿದ್ದಾರೆ.

ಜಿಡಿಪಿಯಲ್ಲಿನ ಪ್ರತಿ ಶೇಕಡಾವಾರು ಬೆಳವಣಿಗೆಯು ದೇಶೀಯ ವಿಮಾನಯಾನ ಉದ್ಯಮಕ್ಕೆ ಶೇ 2ರಷ್ಟು ಬೆಳವಣಿಗೆಯನ್ನು ನೀಡುತ್ತದೆ. ಭಾರತವು ಶೇ 8ರಷ್ಟು ಬೆಳವಣಿಗೆ ಕಂಡರೆ, ಉದ್ಯಮವು ಶೇ 16ರಷ್ಟು ಬೆಳವಣಿಗೆ ಕಂಡಿದೆ. ಈ ಪ್ರಗತಿ ಹೀಗೆ ಮುಂದುವರಿಯುತ್ತದೆ ಎಂದು ಹೇಳಿದ್ದಾರೆ.

ಪ್ರಜಾವಾಣಿ ಪತ್ರಿಕೆ ಚಂದಾದಾರರಾಗಲು/ ದೂರುಗಳಿಗೆ
(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)
ಸಂಪರ್ಕಿಸಿ 90083 66666
support@deccanherald.co.in
ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ https://bit.ly/40dPCqy

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

15ನೇ ವರ್ಷದ ಚಿರಸ್ಮರಣೆ

ಶ್ರೀಮತಿ ಕಮಲ ಮರಣ:30.11.2010
ಪತಿ: ಎಂ.ನಂಜೇಗೌಡ ಮತ್ತು
ಶ್ರೀಮತಿ, ಶ್ರೀ. ಪ್ರಶಾಂತ್ ಮತ್ತು ಮಕ್ಕಳು,
ಶ್ರೀಮತಿ, ಶ್ರೀ. ಡಾ|| ಅರುಣ್ ಮತ್ತು ಮಕ್ಕಳು
ನಾಗಶೆಟ್ಟಿಹಳ್ಳಿ, ಬೆಂಗಳೂರು

ಚಿರಸ್ಮರಣೆ



ದಿವಂಗತ ಶ್ರೀ ಕೆ. ವೆಂಕಟಪ್ಪ
(ಅಕ್ಕೂರ್ ಮಾಸ್ಟರ್) ಬ್ಯಾಂಕಿನ ಪ್ರಥಮ ಸ್ಥಾಪಕರು
ನಿಧನ : 30-11-1993
ಸದಾ ತಮ್ಮನ್ನು ಸ್ಮರಿಸುವ:
ಆಡಳಿತ ಮಂಡಳಿಯವರು,
ಸಿಬ್ಬಂದಿವರ್ಗ ಹಾಗೂ ಸದಸ್ಯರು,
ಶ್ರೀ ಲಕ್ಷ್ಮೀ ನಾರಾಯಣ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್. ಬೆಂಗಳೂರು.

'ದಿತ್ವಾ' ಅಬ್ಬರ: ಶ್ರೀಲಂಕಾ ತತ್ತರ

ಒಂದನೇ ಪುಟದಿಂದ...

'ಚಂಡಮಾರುತವು ಶನಿವಾರ ಶ್ರೀಲಂಕಾ ತೊರೆದು, ದಕ್ಷಿಣ ಭಾರತದ ಕರಾವಳಿಯತ್ತ ಸಾಗಿದ್ದನ್ನು ಗಮನಿಸಿದ್ದೇವೆ' ಎಂದು ಶ್ರೀಲಂಕಾದ ಹವಾಮಾನ ಇಲಾಖೆಯ ಮಹಾ ನಿರ್ದೇಶಕ ಅತುಲಾ ಕರುಣನಾಯಕೆ ತಿಳಿಸಿದ್ದಾರೆ.

'ಭಾರಿ ಗಾಳಿ, ಮಳೆ, ಪ್ರವಾಹದಿಂದ ಹಲವು ಪ್ರದೇಶಗಳು ಬಾಧಿತವಾಗಿದ್ದು, ಸಂವಹನ ಮತ್ತು ಸಂಪರ್ಕ ಕಳೆದುಕೊಂಡಿವೆ. ಶ್ರೀಲಂಕಾದ ಶೇಕಡ 35ರಷ್ಟು ಭೂ ಪ್ರದೇಶದ ಜನರು ಶುಕ್ರವಾರದಿಂದ ವಿದ್ಯುತ್ ಸಂಪರ್ಕವಿಲ್ಲದೆ ಪರಿತಪಿಸುತ್ತಿದ್ದಾರೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕ್ಯಾಂಡಿ, ಬದುಲ್ಲಾ ಜಿಲ್ಲೆಗಳು, ನುವಾರಾ ಎಲಿಯಾ ಪ್ರದೇಶದ ವ್ಯಾಪ್ತಿಯಲ್ಲಿ ಹೆಚ್ಚಿನ ಹಾನಿಯಾಗಿದ್ದು, ಹೆಚ್ಚಿನ ಸಂಖ್ಯೆಯಲ್ಲಿ ಜನರು ಅಸುನೀಗಿದ್ದಾರೆ ಎಂದು ಅವರು ಮಾಹಿತಿ ನೀಡಿದ್ದಾರೆ.

68 ಜನರ ರಕ್ಷಣೆ: ವಾಯವ್ಯ ಪ್ರಾಂತ್ಯದ ಕಲಾಯೋಯ ಪ್ರದೇಶದಲ್ಲಿ ಬಸ್‌ನಲ್ಲಿ ಸಿಲುಕಿದ್ದ 68 ಜನರನ್ನು ಶನಿವಾರ ಮುಂಜಾನೆ ನೌಕಾಪಡೆ ರಕ್ಷಿಸಿದೆ. ಭಾರಿ ಗಾಳಿ ಮತ್ತು ಪ್ರವಾಹದ ಹೊಡೆತಕ್ಕೆ ಸಿಕ್ಕಿದ್ದ ಬಸ್, ಸೇತುವೆಯೊಂದರ ಬಳಿ ಸಿಲುಕಿಕೊಂಡಿತ್ತು. ಜನರು ಬಸ್‌ನ ಚಾವಣಿ ಮೇಲೆ ಸುಮಾರು 29 ಗಂಟೆಗಳವರೆಗೆ ಕಾದು ಕುಳಿತಿದ್ದರು. ಹಲವು ಗಂಟೆಗಳ ಕಾರ್ಯಾಚರಣೆ ಬಳಿಕ ಅವರನ್ನು ಸುರಕ್ಷಿತವಾಗಿ ರಕ್ಷಿಸಲಾಗಿದೆ ಎಂದು ಸೇನೆ ತಿಳಿಸಿದೆ.

ಪ್ರವಾಹ ಪೀಡಿತ ಶ್ರೀಲಂಕಾಕ್ಕೆ ಭಾರತ ಪರಿಹಾರ ಸಾಮಗ್ರಿಗಳನ್ನು ರವಾನಿಸಿದೆ ಪಿಟಿಐ ಚಿತ್ರ

ತಮಿಳುನಾಡಿನತ್ತ 'ದಿತ್ವಾ'

ಒಂದನೇ ಪುಟದಿಂದ...

ತಂಜಾವೂರು, ನಾಗಪಟ್ಟಣಂ, ಮೈಲಾಡುತುರೈ, ಕುಂಭಕೋಣಂ, ಪಾಪನಾಸಂ, ಕಡಲೂರು ಮತ್ತು ಚೆನ್ನೈನ ಕೆಲವು ಭಾಗಗಳಲ್ಲಿ ಭಾರಿ ಮಳೆ ಸುರಿದಿದೆ. ಮಳೆ ಬಾಧಿತ ಜಿಲ್ಲೆಗಳಲ್ಲಿ ಶನಿವಾರ ಶಾಲೆಗಳಿಗೆ ರಜೆ ನೀಡಲಾಗಿತ್ತು.

ಪುದುಚೇರಿಯ ಕೇಂದ್ರೀಯ ವಿಶ್ವವಿದ್ಯಾಲಯವು ಶನಿವಾರ ನಡೆಯಬೇಕಿದ್ದ ಎಲ್ಲ ಪರೀಕ್ಷೆಗಳನ್ನು ಮುಂದೂಡಿದೆ. ಅಲ್ಲದೆ ತರಗತಿಗಳಿಗೆ ರಜೆ ಘೋಷಿಸಿದೆ.

ಚಂಡಮಾರುತವು ಉತ್ತರ ತಮಿಳುನಾಡು, ಪುದುಚೇರಿ ಮತ್ತು ದಕ್ಷಿಣ ಆಂಧ್ರಪ್ರದೇಶದ ಕರಾವಳಿಗೆ ಭಾನುವಾರ (ನ. 30) ಮುಂಜಾನೆ ಅಪ್ಪಳಿಸಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

'ದಿತ್ವಾ' ನಾಗಪಟ್ಟಣಂ ಜಿಲ್ಲೆಯ ವೇದಾರಣ್ಯಂ ಕರಾವಳಿ ಸಮೀಪಿಸಿದ್ದು, ಎಸ್‌ಡಿಆರ್‌ಎಫ್, ಎನ್‌ಡಿಆರ್‌ಎಫ್ ಸೇರಿದಂತೆ 28 ವಿಪತ್ತು ನಿರ್ವಹಣಾ ತಂಡಗಳನ್ನು ಸನ್ನದ್ಧ ಸ್ಥಿತಿಯಲ್ಲಿ ಇಡಲಾಗಿದೆ ಎಂದು ತಮಿಳುನಾಡಿನ ಕಂದಾಯ ಸಚಿವ ಕೆ.ಕೆ.ಎಸ್.ಎಸ್.ಆರ್. ರಾಮಚಂದ್ರನ್ ಹೇಳಿದರು.

54 ವಿಮಾನಗಳ ಹಾರಾಟ ರದ್ದು: ಹವಾಮಾನ ಇಲಾಖೆ ಮುನ್ಸೂಚನೆ ನೀಡಿದ ಬೆನ್ನಲ್ಲೇ, ಚೆನ್ನೈ ವಿಮಾನ ನಿಲ್ದಾಣವು 54 ವಿಮಾನ ಹಾರಾಟ ರದ್ದುಗೊಳಿಸಿದೆ.

ತುರ್ತುಪರಿಸ್ಥಿತಿ ಘೋಷಣೆ

ಚಂಡಮಾರುತದಿಂದ ಆಗಿರುವ ಹಾನಿ ಮತ್ತು ಉದ್ಭವಿಸಿರುವ ಪರಿಸ್ಥಿತಿಯನ್ನು ಸಮರ್ಪಕವಾಗಿ ನಿಭಾಯಿಸಲು ಶ್ರೀಲಂಕಾ ಅಧ್ಯಕ್ಷ ಅನುರಾ ಕುಮಾರ ದಿಸ್ಸನಾಯಕೆ ಅವರು ದ್ವೀಪ ರಾಷ್ಟ್ರದಾದ್ಯಂತ ಶನಿವಾರ ತುರ್ತು ಪರಿಸ್ಥಿತಿ ಘೋಷಿಸಿದ್ದಾರೆ. ಅಲ್ಲದೆ ಅಂತರರಾಷ್ಟ್ರೀಯ ನೆರವಿಗೆ ಮನವಿ ಮಾಡಿದ್ದಾರೆ.

ಶುಕ್ರವಾರ ನಡೆದ ಸರ್ವಪಕ್ಷಗಳ ಸಭೆಯಲ್ಲಿ ತುರ್ತು ಪರಿಸ್ಥಿತಿ ಘೋಷಿಸುವಂತೆ ವಿರೋಧ ಪಕ್ಷದ ನಾಯಕರು ಆಗ್ರಹಿಸಿದ್ದರು. ವೈದ್ಯರ ಒಕ್ಕೂಟ ಸಹ ತುರ್ತು ಪರಿಸ್ಥಿತಿ ಹೇರುವ ಅಗತ್ಯವಿದೆ ಎಂದು ಅಧ್ಯಕ್ಷರಿಗೆ ಪತ್ರ ಬರೆದಿತ್ತು.

ನೆರವಿನ ಹಸ್ತ ಚಾಚಿದ ಭಾರತ: ಸಂಕಷ್ಟದಲ್ಲಿರುವ ಶ್ರೀಲಂಕಾಕ್ಕೆ ನೆರವು ನೀಡಲು ಭಾರತೀಯ ವಾಯುಪಡೆ ಶನಿವಾರ 21 ಟನ್ ಪರಿಹಾರ ಸಾಮಗ್ರಿಗಳು, 80ಕ್ಕೂ ಹೆಚ್ಚು ಎನ್‌ಡಿಆರ್‌ಎಫ್ ಸಿಬ್ಬಂದಿ ಮತ್ತು ಎಂಟು ಟನ್ ಉಪಕರಣಗಳನ್ನು ರವಾನಿಸಿದೆ. ಪಡಿತರ ಮತ್ತು ಇತರ ಅಗತ್ಯ ವಸ್ತುಗಳು ಇದರಲ್ಲಿ ಸೇರಿವೆ.

ನೆರೆಹೊರೆಯವರಿಗೆ ಆದ್ಯತೆಯನ್ನು ದೃಢೀಕರಿಸುತ್ತಾ ಭಾರತವು 'ಆಪರೇಷನ್ ಸಾಗರ್ ಬಂಧು' ಆರಂಭಿಸಿದೆ. ಈ ಮೂಲಕ ದ್ವೀಪರಾಷ್ಟ್ರದ ಪರಿಹಾರ ಕಾರ್ಯಗಳ ಜತೆ ಕೈಜೋಡಿಸಿದೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Teachers/ Professors

VELAMMAL NEXUS
WALK IN INTERVIEW
on 06th December 2025
between 10.00 am & 3.00 pm
CAREER OPPORTUNITIES FOR TEACHING & NON - TEACHING
We invite highly qualified, dynamic and passionate educators and staff for our new CBSE schools commencing from Academic year 2026-27.
KINDERGARTEN - KGT (PRE-KG to UKG)
Montessori Certified Minimum of 2 to 5 years of experience
PRIMARY - PRT (CLASSES I to V)
Graduate with B.Ed, Minimum of 2 to 5 years of experience
MIDDLE SCHOOL - SGT (CLASSES VI & VII)
Graduate with B.Ed, Minimum of 2 to 5 years of experience
ENGLISH | KANNADA | HINDI
MATHS | PHYSICS | CHEMISTRY
BIOLOGY | HISTORY & GEOGRAPHY
COMPUTER SCIENCE | LIBRARIAN
PET | MUSIC | DANCE
NON TEACHING POSITIONS
PRO | STAFF NURSE | OFFICE ASSISTANT
COMPUTER OPERATOR
LAB ASSISTANT | SECURITY GUARD
DRIVERS & CONDUCTORS
VENUE
VELAMMAL VIDYALAYA
No. 78/1 Singanayakanahalli, Yelahanka Hobli, Bengaluru 560 064.
hr@velammalnexus.com
FOR MORE DETAILS
89259 93076

General

ಬೆಂಗಳೂರು
ಬೊಮ್ಮನಹಳ್ಳಿಯಲ್ಲಿರುವ ಕಂಪನಿಗೆ ಆಫೀಸ್ ಸಹಾಯಕರು ಬೇಕಾಗಿದ್ದಾರೆ. ಮೊ: 9980140661/ Email: starsilks@gmail.com

ರಿಯಲ್ ಎಸ್ಟೇಟ್ ಸೆಲ್ಲಿಂಗ್

Residential/ Commercial

Nagarabhavi

A-KHATA NEWLY built fully furnished G+3 house(1200 sqft) for sale in Herohalli - Nagarbhavi Bangalore-560091 7259676076

Sites

Vishweshwariah Layout

VISHWESHWARAIAH LAYOUT 6th Block 40'*60'- site available, near to KLE Law College. Direct Owner. Contact: - 9845061398, 9880245430

Jigani

KHB Sites in Bangalore
Land Owner Share
Prime Location, Fully Developed Layout, Ready for Registration, SBI & Nationalised Bank Loan Call : 74115 54412

Mysore Road

ದೊಡ್ಡಆಲದ ಮರದ ಹತ್ತಿರ, ಪುರದಪಾಳ್ಯದಲ್ಲಿ 2 ಎಕ್ಕರೆ ಜಮೀನು ಮಾರಾಟಕ್ಕಿದೆ. ಸಂಪರ್ಕಿಸಿ. 9036004347/ 9845594059.

Villas/Bunglows

Mysore

ಸಂಪರ್ಕಿಸಿ ಮೈಸೂರಿನ ಪ್ರತಿಷ್ಠಿತ ಬಡಾವಣೆಗಳಲ್ಲಿ ಸೈಟ್‌ಗಳು ಮತ್ತು ಫಾಮ್ ಹೌಸ್ ಮಾರುವವರು ಹಾಗೂ ಕೊಳ್ಳುವವರು ಸಂಪರ್ಕಿಸಿ : 9611881632 / 8310470889

ರೆಂಟಲ್ ಪ್ರಾಪರ್ಟೀಸ್

Accommodation Available

Commercial

RENT COMMERCIAL Ground floor 2900sqft Beml 3stge Rajarajeshwari nagara Bangalore-9945479966

House

ವಾಸದ ಮನೆ ಬಾಡಿಗೆಗೆ ದೊರೆಯುತ್ತದೆ ತುಮಕೂರು, ಚಿಕ್ಕಪೇಟೆಯ ಹೇಮಹನುಮಂತರಾಯರ ಬೀದಿಯಲ್ಲಿ 2 ಬೆಡ್ ರೂಮ್ ಉಳ್ಳ ಮನೆ ಬಾಡಿಗೆಗೆ ದೊರೆಯುತ್ತದೆ.ಸಂಪರ್ಕಿಸಿ: ಹೆಚ್ ಅಶೋಕ್ ಕುಮಾರ್: 9845783673

ವೈಯಕ್ತಿಕ

Change of Name

CHANGE OF NAME
I, Gopadi Subbarao Nagaraj Upadhyaya, G S Nagaraj Upadhyaya and G S Nagaraj Upadhya, residing at No. 1529/1, B.S Road, 9th Ward, Turuvekere, Tumkur District- 572227, declare that the above names pertain to me only & henceforth I shall be known as G S NAGARAJ UPADHYA vide affidavit dated 27.11.2025 before notary Eshwaar, Turuvekere.

ಪ್ರವಾಸ

Travel

09.01.2026 ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್ 7/11 ದಿನಗಳು. 22.01.2026 ದುಬೈ,ಅಬುದಾಬಿ 5 ದಿನಗಳು. 16.01.2026 ಶ್ರೀಲಂಕಾ 7 ದಿನಗಳು. 30.01.2026 ಕಾಶಿ,ಗಯಾ,ಅಯೋಧ್ಯ 7 ದಿನಗಳು. ಜೈನ್ ಟ್ರಾವೆಲ್ಸ್ ಮಲ್ಲೇಶ್ವರಂ ಬೆಂಗಳೂರು.03. 9448402248 7022547922

ಜಪಾನ್, ದಕ್ಷಿಣ ಕೊರಿಯಾ (11 ದಿನಗಳು), ಯುಕೆ, ಯುರೋಪ್ (15ದಿನಗಳು), ದುಬೈ (5 ದಿನಗಳು), ಶ್ರೀಲಂಕಾ (6 ದಿನಗಳು). ಯಾನಾ ಟೂರ್ಸ್, ಬೆಂಗಳೂರು: 9353987595

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಚಿಟಿಕೆ ಸುದ್ದಿ

ಕೆಮ್ಮಿನ ಸಿರಪ್: 12 ಕಂಪನಿಗಳ ವಿರುದ್ಧ ಪ್ರಕರಣ

ವಾರಾಣಸಿ (ಪಿಟಿಐ): ಕೋಡೈನ್ (ಮಾದಕವಸ್ತು: ಔಷಧಗಳಲ್ಲಿಯೂ ಬಳಸಲಾಗುತ್ತದೆ) ಬಳಕೆ ಮಾಡಿದ್ದ ಕೆಮ್ಮಿನ ಸಿರಪ್‌ನ ಕಳ್ಳಸಾಗಣೆ ಪ್ರಕರಣದಲ್ಲಿ 12ಕ್ಕೂ ಅಧಿಕ ಔಷಧ ಕಂಪನಿಗಳ ವಿರುದ್ಧ ಆಹಾರ ಮತ್ತು ಔಷಧೀಯ ಇಲಾಖೆಯು ಪ್ರಕರಣ ದಾಖಲಿಸಿದೆ.

ಈ ಹಿಂದೆ ಇಂಥದ್ದೇ ಪ್ರಕರಣದಲ್ಲಿ 26 ಔಷಧ ಕಂಪನಿಗಳ ವಿರುದ್ಧ ಇಲಾಖೆ ಪ್ರಕರಣ ದಾಖಲಿಸಿತ್ತು.

‘12 ಕಂಪನಿಗಳಲ್ಲಿ ತಪಾಸಣೆ ನಡೆಸಲು ತೆರಳಿದ್ದಾಗ ಕೆಲವು ಕಂಪನಿಗಳ ಕಚೇರಿಗಳನ್ನು ಮುಚ್ಚಲಾಗಿತ್ತು. ಕೆಲವು ಕಂಪನಿಗಳು ಇದ್ದ ವಿಳಾಸದಲ್ಲಿಯೇ ಬೇರೆ ಕಂಪನಿಗಳು ವ್ಯಾಪಾರ ನಡೆಸುತ್ತಿದ್ದವು. ಇವುಗಳ ಮಾಲೀಕರಿಗೆ ನೋಟಿಸ್ ನೀಡಲಾಗಿತ್ತು. ಇದಕ್ಕೆ ಮಾಲೀಕರು ಉತ್ತರಿಸದಿದ್ದಾಗ ಅವರ ವಿರುದ್ಧ ಪ್ರಕರಣ ದಾಖಲಿಸಲಾಯಿತು’ ಎಂದು ಇಲಾಖೆಯ ನಿರೀಕ್ಷಕ ಜನಾಬ್ ಅಲಿ ಮಾಹಿತಿ ನೀಡಿದರು.

ಅನ್ಮೋಲ್ ಬಿಷ್ಣೋಯಿ ಕಸ್ಟಡಿ ಅವಧಿ ವಿಸ್ತರಣೆ

ನವದೆಹಲಿ (ಪಿಟಿಐ): ಗ್ಯಾಂಗ್‌ಸ್ಟರ್ ಅನ್ಮೋಲ್ ಬಿಷ್ಣೋಯಿಯನ್ನು ಇನ್ನೂ ಏಳು ದಿನಗಳ ಕಾಲ ರಾಷ್ಟ್ರೀಯ ತನಿಖಾ ಸಂಸ್ಥೆಯ (ಎನ್‌ಐಎ) ಕಸ್ಟಡಿಗೆ ನೀಡಿ ದೆಹಲಿಯ ಎನ್‌ಐಎ ವಿಶೇಷ ನ್ಯಾಯಾಲಯ ಆದೇಶ ಹೊರಡಿಸಿದೆ.

ಅನ್ಮೋಲ್

ಹೆಚ್ಚಿನ ಭದ್ರತೆಯ ನಡುವೆ ಎನ್‌ಐಎ ಪ್ರಧಾನ ಕಚೇರಿಯಲ್ಲಿ ನಡೆದ ವಿಚಾರಣೆಯಲ್ಲಿ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಪ್ರಶಾಂತ್ ಶರ್ಮಾ ಡಿಸೆಂಬರ್ 5ರವರೆಗೆ ಕಸ್ಟಡಿ ಅವಧಿ ವಿಸ್ತರಿಸಿ ಆದೇಶ ಹೊರಡಿಸಿದರು.

2022ರಿಂದ ತಲೆಮರೆಸಿಕೊಂಡಿದ್ದ ಅನ್ಮೋಲ್‌ನನ್ನು ಕಳೆದ ವರ್ಷದ ಅಮೆರಿಕದಲ್ಲಿ ಬಂಧಿಸಲಾಗಿತ್ತು. ನವೆಂಬರ್ 18ರಂದು ಆರೋಪಿಯನ್ನು ಗಡಿಪಾರು ಮಾಡಲಾಗಿತ್ತು. ಎನ್‌ಸಿಪಿ ನಾಯಕ ಬಾಬಾ ಸಿದ್ದೀಕಿ ಹತ್ಯೆ, ನಟ ಸಲ್ಮಾನ್ ಖಾನ್ ನಿವಾಸದ ಮೇಲಿನ ಗುಂಡಿನ ದಾಳಿ, ಪಂಜಾಬಿ ಗಾಯಕ ಸಿಧು ಮೂಸೆವಾಲಾ ಹತ್ಯೆ ಸೇರಿದಂತೆ ಇತರ ಅಪರಾಧ ಪ್ರಕರಣಗಳಲ್ಲಿ ಅನ್ಮೋಲ್ ಬೇಕಾಗಿದ್ದ.

ಸ್ಕೈ ಡೈನಿಂಗ್: ರೆಸ್ಟೋರೆಂಟ್ ವಿರುದ್ಧ ಎಫ್‌ಐಆರ್

ಇಡುಕ್ಕಿ (ಪಿಟಿಐ): ಕ್ರೇನ್ ಸರಿಯಾಗಿ ಕಾರ್ಯನಿರ್ವಹಿಸದೇ ಇದ್ದುದಕ್ಕೆ ಇಬ್ಬರು ಮಕ್ಕಳು ಸೇರಿ ನಾಲ್ವರು ಪ್ರವಾಸಿಗರು ಅಪಾಯದಲ್ಲಿ ಸಿಲುಕಿದ ಕಾರಣ ಇಲ್ಲಿನ ‘ಸ್ಕೈ ಡೈನಿಂಗ್’ ರೆಸ್ಟೋರೆಂಟ್ ವಿರುದ್ಧ ಪ್ರಕರಣ ದಾಖಲಿಸಲಾಗಿದೆ.

ಭೂಮೇಲ್ಮೈನಿಂದ 150 ಅಡಿ ಎತ್ತರದಲ್ಲಿ 2 ಗಂಟೆಗೂ ಹೆಚ್ಚು ಕಾಲ ಒಂದೇ ಕುಟುಂಬದ ನಾಲ್ವರು ಪ್ರವಾಸಿಗರು ಶುಕ್ರವಾರ ಮಧ್ಯಾಹ್ನ ಸಿಲುಕಿಕೊಂಡಿದ್ದರು. ಬಳಿಕ ಕಾರ್ಯಾಚರಣೆ ನಡೆಸಿ ಅವರನ್ನು ರಕ್ಷಿಸಲಾಯಿತು.

ಚೈತನ್ಯಾನಂದ ಪ್ರಕರಣ: ಮೂವರಿಗೆ ಜಾಮೀನು

ನವದೆಹಲಿ (ಪಿಟಿಐ): ದೆಹಲಿಯ ಖಾಸಗಿ ಮ್ಯಾನೇಜ್‌ಮೆಂಟ್ ಸಂಸ್ಥೆಯೊಂದರ ಕಾಲೇಜಿನ 16 ವಿದ್ಯಾರ್ಥಿನಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ ಆರೋಪದಡಿ ಸ್ವಯಂ ಘೋಷಿತ ದೇವಮಾನವ ಸ್ವಾಮಿ ಚೈತನ್ಯಾನಂದ ಸರಸ್ವತಿ ವಿರುದ್ಧ ದಾಖಲಾಗಿರುವ ಪ್ರಕರಣದಲ್ಲಿ ಮೂವರು ಆರೋಪಿಗಳಿಗೆ ದೆಹಲಿಯ ನ್ಯಾಯಾಲಯವೊಂದು ಶನಿವಾರ ಜಾಮೀನು ಮಂಜೂರು ಮಾಡಿದೆ.

ಸ್ವಾಮಿ ಚೈತನ್ಯಾನಂದ ಅವರು ಖಾಸಗಿ ಮ್ಯಾನೇಜ್‌ಮೆಂಟ್ ಸಂಸ್ಥೆಯ ಮುಖ್ಯಸ್ಥರಾಗಿದ್ದರು. ಕಾಜಲ್, ಭಾವನಾ ಮತ್ತು ಶ್ವೇತಾ ಅವರಿಗೆ ಕೋರ್ಟ್ ಜಾಮೀನು ನೀಡಿದೆ. ದೋಷಾರೋಪ ಪಟ್ಟಿಯಲ್ಲಿ ಈ ಮೂವರು ಆರೋಪಿಗಳ ಹೆಸರಿತ್ತು. ಆದರೆ, ಇವರನ್ನು ಬಂಧಿಸಿರಲಿಲ್ಲ. ಪ್ರತಿಯೊಬ್ಬರೂ ₹20 ಸಾವಿರ ಮೌಲ್ಯದ ಬಾಂಡ್ ನೀಡುವಂತೆ ನ್ಯಾಯಾಲಯ ಸೂಚಿಸಿತು. ಪ್ರಕರಣದ ವಿಚಾರಣೆಯನ್ನು ಡಿ.2ಕ್ಕೆ ಮುಂದೂಡಿತು.

ಕೋಲ್ಕತ್ತ: ‘ಲೋಕ ಭವನ’

ಕೋಲ್ಕತ್ತ (ಪಿಟಿಐ): ಕೇಂದ್ರ ಗೃಹ ಸಚಿವಾಲಯದ ನಿರ್ದೇಶನದಂತೆ ಪಶ್ಚಿಮ ಬಂಗಾಳ ರಾಜ್ಯಪಾಲ ಸಿ.ವಿ. ಆನಂದ್ ಬೋಸ್ ಅವರು ‘ರಾಜಭವನ’ವನ್ನು ‘ಲೋಕ ಭವನ’ ಎಂದು ಮರುನಾಮಕರಣ ಮಾಡಿ ಶನಿವಾರ ಅಧಿಸೂಚನೆ ಹೊರಡಿಸಿದ್ದಾರೆ.

ಕೇಂದ್ರ ಗೃಹ ಸಚಿವಾಲಯವು ನ. 25ರಂದು ನೀಡಿರುವ ನಿರ್ದೇಶನದಂತೆ ಕೋಲ್ಕತ್ತದಲ್ಲಿ ಇರುವ ರಾಜಭವನ, ಬೈರಕಪುರದಲ್ಲಿರುವ ರಾಜ್ಯಪಾಲರ ನಿವಾಸ ಮತ್ತು ಡಾರ್ಜಿಲಿಂಗ್‌ನಲ್ಲಿರುವ ರಾಜಭವನದ ಹೆಸರನ್ನು ಮರುನಾಮಕರಣ ಮಾಡಲಾಗಿದೆ.

‘ಸಾಂವಿಧಾನಿಕ ಹಕ್ಕು ದುರ್ಬಲಕ್ಕೆ ಯತ್ನ’

ಉತ್ತರ ಪ್ರದೇಶದಲ್ಲಿ ಎಸ್‌ಐಆರ್: ಚುನಾವಣಾ ಆಯೋಗ, ಬಿಜೆಪಿ ವಿರುದ್ಧ ಅಖಿಲೇಶ್ ಯಾದವ್ ವಾಗ್ದಾಳಿ

ಲಖನೌ (ಪಿಟಿಐ): ‘ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಮೂಲಕ ಮತದಾರರ ಹಕ್ಕುಗಳನ್ನು ದುರ್ಬಲಗೊಳಿಸಲು ಚುನಾವಣಾ ಆಯೋಗ ಮತ್ತು ಬಿಜೆಪಿ ಜತೆಗೂಡಿ ಕೆಲಸ ಮಾಡುತ್ತಿವೆ’ ಎಂದು ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಆರೋಪಿಸಿದರು.

ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಉತ್ತರ ಪ್ರದೇಶದಲ್ಲಿ ಎಸ್‌ಐಆರ್ ಜಾರಿಗೊಳಿಸಲು ಬಿಜೆಪಿ ಯಾಕೆ ಇಷ್ಟೊಂದು ಅವಸರ ಮಾಡುತ್ತಿದೆ’ ಎಂದು ಪ್ರಶ್ನಿಸಿದರು.

ಬಿಜೆಪಿ ಮತ್ತು ಆಯೋಗ ಕೈಜೋಡಿಸಿ ತರಾತುರಿಯಲ್ಲಿ ನಡೆಸುತ್ತಿರುವ ಈ ಕಸರತ್ತು ಗಮನಿಸಿದರೆ, ಇದೊಂದು ಯೋಜಿತ ಕಾರ್ಯತಂತ್ರ’ ಎನ್ನುವುದು ತಿಳಿಯುತ್ತದೆ. ಇದರಿಂದ ಜನರ ಸಾಂವಿಧಾನಿಕ ಹಕ್ಕುಗಳು ದುರ್ಬಲಗೊಳ್ಳುತ್ತವೆ’ ಎಂದರು.

ಉತ್ತರ ಪ್ರದೇಶದಲ್ಲಿ ಈಗ ಜನರು ಮದುವೆ ಕಾರ್ಯಕ್ರಮಗಳಲ್ಲಿ ತೊಡಗಿದ್ದಾರೆ. ಈ ಸಂದರ್ಭದಲ್ಲಿ ಎಸ್‌ಐಆರ್ ನಡೆಯುತ್ತಿರುವುದರಿಂದ ದೊಡ್ಡ ಸಂಖ್ಯೆಯ ಅರ್ಹ ಮತದಾರರು ಪಟ್ಟಿಯಿಂದ ಹೊರಗುಳಿಯುತ್ತಾರೆ. ಮುಖ್ಯವಾಗಿ ಬೂತ್ ಮಟ್ಟದ ಮತಗಟ್ಟೆ ಅಧಿಕಾರಿಗಳಾಗಿ (ಬಿಎಲ್‌ಒ) ಸಹಾಯಕರಾಗಿ ಯಾವುದೇ ತಾಂತ್ರಿಕ ಪರಿಣತಿ ಇಲ್ಲದ ಸ್ವಚ್ಛತಾ ಕಾರ್ಮಿಕರನ್ನು ನಿಯೋಜಿಸಲಾಗಿದೆ. ಅವರು ಹೇಗೆ ಮತದಾರರ ಪಟ್ಟಿ ಪರಿಷ್ಕರಣೆ ಮಾಡುತ್ತಾರೆ ಎಂದು ಅವರು ಪ್ರಶ್ನಿಸಿದರು. ಎಸ್‌ಐಆರ್ ವಿಷಯದಲ್ಲಿ ಸರ್ಕಾರದ ನಿರಂಕುಶ ಪ್ರಭುತ್ವವನ್ನು ಒಪ್ಪಲು ಸಾಧ್ಯವಿಲ್ಲ’ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ವಿಶೇಷ ವೀಕ್ಷಕರಾಗಿ ಸುಬ್ರತಾ ಗುಪ್ತಾ (ಕೋಲ್ಕತ್ತ ವರದಿ): ನಿವೃತ್ತ ಐಎಎಸ್ ಅಧಿಕಾರಿ ಸುಬ್ರತಾ ಗುಪ್ತಾ ಅವರನ್ನು ಪಶ್ಚಿಮ ಬಂಗಾಳದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯ(ಎಸ್‌ಐಆರ್) ವಿಶೇಷ ವೀಕ್ಷಕರನ್ನಾಗಿ ಚುನಾವಣಾ ಆಯೋಗವು ನೇಮಿಸಿದೆ.

ಇವರ ಜತೆಗೆ ಒಟ್ಟು 12 ಐಎಎಸ್ ಅಧಿಕಾರಿಗಳನ್ನು ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆಯ ವೀಕ್ಷಕರನ್ನಾಗಿ ನಿಯೋಜನೆ ಮಾಡಲಾಗಿದೆ. ಇವರು ಜಿಲ್ಲಾ ಮಟ್ಟದ ಚುನಾವಣಾ ಅಧಿಕಾರಿಗಳು ಮತ್ತು ಚುನಾವಣಾ ನೋಂದಣಿ ಅಧಿಕಾರಿಗಳಿಗೆ ಅಗತ್ಯ ಮಾರ್ಗದರ್ಶನ ನೀಡುವರು ಎಂದು ಪ್ರಕಟಣೆ ತಿಳಿಸಿದೆ.

ಬಿಎಲ್‌ಒ ಹಕ್ಕುಗಳ ವೇದಿಕೆ ಪ್ರತಿಭಟನೆ: ‘ಎಸ್‌ಐಆರ್’ ಕೆಲಸದ ಒತ್ತಡದಿಂದ ಇತ್ತೀಚೆಗೆ ಮುರ್ಶಿದಾಬಾದ್‌ನಲ್ಲಿ ಕುಸಿದುಬಿದ್ದು ಮೃತಪಟ್ಟ ಬೂತ್ ಮಟ್ಟದ ಅಧಿಕಾರಿಯ (ಬಿಎಲ್‌ಒ) ಕುಟುಂಬಕ್ಕೆ ಪರಿಹಾರ ನೀಡುವಂತೆ ಆಗ್ರಹಿಸಿ, ತೃಣಮೂಲ ಕಾಂಗ್ರೆಸ್ ಜತೆಗೆ ಗುರುತಿಸಿಕೊಂಡಿರುವ ಬಿಎಲ್‌ಒ ಹಕ್ಕುಗಳ ವೇದಿಕೆ ಕಾರ್ಯಕರ್ತರು ಇಲ್ಲಿನ ಮುಖ್ಯ ಚುನಾವಣಾ ಅಧಿಕಾರಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು.

ಸಿಇಒ ಕಚೇರಿ ಎದುರು ಗಂಟೆಗಟ್ಟಲೆ ಕಾದರೂ, ಅಧಿಕಾರಿಗಳ ಭೇಟಿಗೆ ಅವಕಾಶ ನೀಡುತ್ತಿಲ್ಲ. ಚುನಾವಣಾ ಆಯೋಗವು ಬಿಎಲ್‌ಒಗಳ ಕೆಲಸದ ಒತ್ತಡದ ಬಗ್ಗೆ ನಿರ್ಲಕ್ಷ್ಯ ವಹಿಸಿದೆ ಎಂದು ‘ಬಿಎಲ್‌ಒ ಅಧಿಕಾರ್ ರಕ್ಷಾ ಸಮಿತಿ’ಯ ಸದಸ್ಯರು ಆರೋಪಿಸಿದರು.

ಮುಖ್ಯ ಚುನಾವಣಾ ಅಧಿಕಾರಿಯ ಕಾರಿನ ಎದುರು ಮಲಗಿ ಪ್ರತಿಭಟಿಸಲು ಮುಂದಾದ ಸಮಿತಿಯ ಸದಸ್ಯರೊಬ್ಬರನ್ನು ಪೊಲೀಸರು ವಶಕ್ಕೆ ಪಡೆದರು.

ಸಭೆಯ ವಿವರ ಒದಗಿಸಿ: ಟಿಎಂಸಿ

ನವದೆಹಲಿ: ‘ಎಸ್‌ಐಆರ್’ ಸಂಬಂಧಿಸಿ ಚುನಾವಣಾ ಆಯೋಗದ ಜತೆಗೆ ಶುಕ್ರವಾರ ನಡೆಸಿದ ಸಭೆಯ ನಡಾವಳಿ ಬಿಡುಗಡೆ ಮಾಡುವಂತೆ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಒತ್ತಾಯಿಸಿದೆ.

‘ಸಭೆಯಲ್ಲಿ ಏನು ನಡೆಯಿತು ಎನ್ನುವುದರ ವಿವರ ಬೇಕು. ಇದನ್ನು ಇಂದು ಅಥವಾ ನಾಳೆಯೇ ಕೊಡಬೇಕು ಎಂದು ನಾವು ಆಗ್ರಹಿಸುತ್ತಿಲ್ಲ. ಆಯೋಗವು ಸ್ವಲ್ಪ ಸಮಯ ತೆಗೆದುಕೊಂಡು ಈ ವಿವರವನ್ನು ಬಿಡುಗಡೆ ಮಾಡಲಿ’ ಎಂದು ಸಂಸದ ಡೆರಿಕ್ ಒಬ್ರಯಾನ್ ಆಗ್ರಹಿಸಿದ್ದಾರೆ.

ಎಸ್‌ಐಆರ್ ವಿಸ್ತರಣೆಗೆ ಮನವಿ

ನವದೆಹಲಿ (ಪಿಟಿಐ): ಉತ್ತರ ಪ್ರದೇಶದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆಯನ್ನು (ಎಸ್‌ಐಆರ್) ಮೂರು ತಿಂಗಳು ವಿಸ್ತರಿಸುವಂತೆ ಕೋರಿ ಭಾರತೀಯ ಕಿಸಾನ್ ಯೂನಿಯನ್ ಆಜಾದ್ ಟ್ರಸ್ಟ್ ಸುಪ್ರೀಂ ಕೋರ್ಟ್ ಮೊರೆ ಹೋಗಿದೆ.

15.35 ಕೋಟಿ ಮತದಾರರಿರುವ ಉತ್ತರ ಪ್ರದೇಶದಲ್ಲಿ ನಾಲ್ಕು ವಾರಗಳಲ್ಲಿ ಎಸ್‌ಐಆರ್ ಪೂರ್ಣಗೊಳಿಸುವುದು ಆಡಳಿತಾತ್ಮಕವಾಗಿ ಅಸಾಧ್ಯ. ಅವಸರದಲ್ಲಿ ಎಸ್‌ಐಆರ್ ಪೂರ್ಣಗೊಳಿಸುವುದರಿಂದ ದೊಡ್ಡ ಸಂಖ್ಯೆಯ ಜನರು ಸಾಂವಿಧಾನಿಕ ಹಕ್ಕುಗಳಿಂದ ವಂಚಿತರಾಗಬೇಕಾಗುತ್ತದೆ ಎಂದು ಟ್ರಸ್ಟ್ ಹೇಳಿದೆ.

ಇತ್ತೀಚೆಗೆ ಆತ್ಮಹತ್ಯೆ ಮಾಡಿಕೊಂಡ ಎಸ್‌ಐಆರ್ ಮೇಲ್ವಿಚಾರಕ ಸುಧೀರ್ ಕುಮಾರ್ ಅವರ ಫತೇಪುರದ ನಿವಾಸಕ್ಕೆ ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಯಾದವ್ ಭೇಟಿ ನೀಡಿ, ಕುಟುಂಬ ಸದಸ್ಯರೊಂದಿಗೆ ಮಾತುಕತೆ ನಡೆಸಿದರು – ಪಿಟಿಐ ಚಿತ್ರ

‘ಬಿಎಲ್‌ಒಗಳಿಗೆ ಭದ್ರತೆಗೆ ನಿರ್ದೇಶನ’

ಕೋಲ್ಕತ್ತ (ಪಿಟಿಐ): ಎಸ್‌ಐಆರ್ ಸಂದರ್ಭದಲ್ಲಿ ಬೂತ್ ಮಟ್ಟದ ಅಧಿಕಾರಿಗಳ (ಬಿಎಲ್‌ಒ) ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳುವಂತೆ ಪಶ್ಚಿಮ ಬಂಗಾಳದ ಡಿಜಿಪಿ ರಾಜೀವ್ ಕುಮಾರ್ ಅವರಿಗೆ ಚುನಾವಣಾ ಆಯೋಗವು ನಿರ್ದೇಶಿಸಿದೆ.

ಪಶ್ಚಿಮ ಬಂಗಾಳದಲ್ಲಿ ಎಸ್‌ಐಆರ್ ಕಾರ್ಯಕ್ಕೆ ನಿಯೋಜನೆಗೊಂಡಿರುವ ಅಧಿಕಾರಿಗಳಿಗೆ ಭದ್ರತೆ ಒದಗಿಸುವಂತೆ ಕೋರಿ ಆಯೋಗವು ಈಗಾಗಲೇ ಎರಡು ಬಾರಿ ಪೊಲೀಸ್ ಇಲಾಖೆಗೆ ಲಿಖಿತ ಸೂಚನೆ ನೀಡಿದೆ.

ನ. 26ರಂದು ಕೋಲ್ಕತ್ತದ ಪೊಲೀಸ್ ಆಯುಕ್ತ ಮನೋಜ್ ಕುಮಾರ್ ವರ್ಮಾ ಅವರಿಗೆ ಪತ್ರ ಬರೆದಿದ್ದ ಆಯೋಗವು, ಮುಖ್ಯ ಚುನಾವಣಾ ಅಧಿಕಾರಿಯ ಕಾರ್ಯಾಲಯದಲ್ಲಿ ‘ಗಂಭೀರ ಭದ್ರತಾ ಲೋಪ’ ಆಗಿದೆ ಎಂದು ದೂರಿತ್ತು. ‘ಇಡೀ ರಾಜ್ಯದಲ್ಲಿ ಬಿಎಲ್‌ಒಗಳಿಗೆ ತೃಣಮೂಲ ಕಾಂಗ್ರೆಸ್ ಕಾರ್ಯಕರ್ತರಿಂದ ಬಲವಂತ ಮತ್ತು ಬೆದರಿಕೆಯ ವಾತಾವರಣ ಸೃಷ್ಟಿಯಾಗಿದೆ. ಅಗತ್ಯ ಭದ್ರತಾ ಕ್ರಮಗಳನ್ನು ಕೈಗೊಳ್ಳಬೇಕು’ ಎಂದು ಬಿಜೆಪಿ ಮುಖಂಡ ಸಮಿಕ್ ಭಟ್ಟಾಚಾರ್ಯ ಚುನಾವಣಾ ಆಯೋಗಕ್ಕೆ ಮನವಿ ಮಾಡಿಕೊಂಡಿದ್ದರು.

> **ಚುನಾವಣಾ ಆಯೋಗವು ಎಸ್‌ಐಆರ್ ಮೂಲಕ ಮತದಾರರಲ್ಲಿ ಭಯ ಮತ್ತು ಅನುಮಾನ ಹುಟ್ಟುಹಾಕಿದೆ. ಅಧಿಕಾರಿಗಳ ಮೇಲೆ ಅತಿಯಾದ ಒತ್ತಡ ಹೇರಲಾಗಿದೆ**
> **ಸಚಿನ್ ಪೈಲಟ್,** ಕಾಂಗ್ರೆಸ್ ಮುಖಂಡ

ಬ್ರಿಟಿಷರ ಆಳ್ವಿಕೆಗೂ ಮೊದಲೇ ಒಗ್ಗಟ್ಟು ಇತ್ತು: ಭಾಗವತ್

ನಾಗ್ಪುರ (ಪಿಟಿಐ): ‘ಬ್ರಿಟಿಷರ ಆಳ್ವಿಕೆಗೂ ಮೊದಲು ಭಾರತೀಯರಲ್ಲಿ ಒಗ್ಗಟ್ಟು ಇರಲಿಲ್ಲ ಎಂದು ಮಹಾತ್ಮ ಗಾಂಧಿ ತಮ್ಮ ‘ಹಿಂದ್ ಸ್ವರಾಜ್’ ಕೃತಿಯಲ್ಲಿ ಹೇಳಿದ್ದಾರೆ. ಇವರ ಈ ತಪ್ಪು ಆಲೋಚನೆಯು ವಸಾಹತುಶಾಹಿ ಬೋಧನೆಯ ಪ್ರಭಾವದಿಂದ ರೂಪುಗೊಂಡದ್ದು’ ಎಂದು ಆರ್‌ಎಸ್‌ಎಸ್ ಸರಸಂಘಚಾಲಕ ಮೋಹನ್ ಭಾಗವತ್ ಅಭಿಪ್ರಾಯಪಟ್ಟರು. ಇಲ್ಲಿ ಶನಿವಾರ ನಡೆದ ರಾಷ್ಟ್ರೀಯ ಪುಸ್ತಕ ಹಬ್ಬದಲ್ಲಿ ಮಾತನಾಡಿದರು.

ಮೋಹನ್ ಭಾಗವತ್

‘ಪಾಶ್ಚಿಮಾತ್ಯ ದೇಶಗಳಲ್ಲಿನ ‘ದೇಶ’ ಎಂಬ ಪರಿಕಲ್ಪನೆಗೂ ಭಾರತದ ‘ರಾಷ್ಟ್ರ’ ಎಂಬ ಪರಿಕಲ್ಪನೆಗೂ ಮೂಲಭೂತವಾಗಿರುವ ವ್ಯತ್ಯಾಸವಿದೆ. ನಮಗೆ ಯಾರ ಜೊತೆಗೂ ಜಗಳವಿಲ್ಲ. ವಿವಾದಗಳು ನಮ್ಮ ದೇಶದ ಸ್ವಭಾವವೇ ಅಲ್ಲ. ಒಗ್ಗೂಡಿ ಇರುವುದು ಮತ್ತು ಭ್ರಾತೃತ್ವವು ನಮ್ಮ ಪರಂಪರೆ’ ಎಂದರು.

‘ಅಭಿಪ್ರಾಯವೊಂದು ರೂಪುಗೊಂಡರೆ, ಅದರಿಂದ ಹೊರತಾದ ಯಾವ ವಿಚಾರಗಳೂ ಒಪ್ಪಿಗೆಯಾಗುವುದಿಲ್ಲ. ವ್ಯತಿರಿಕ್ತ ವಿಚಾರಗಳಿಗೆ ಬಾಗಿಲು ಮುಚ್ಚಲಾಗುತ್ತದೆ. ಆಮೇಲೆ ಇಂಥ ವಿಚಾರಗಳಿಗೆ ‘ಇಸಂ’ ಎನ್ನಲಾಗುತ್ತದೆ. ನಾವು ರಾಷ್ಟ್ರೀಯತೆ ಎನ್ನುತ್ತೇವೆಯೇ ಹೊರತು ರಾಷ್ಟ್ರೀಯವಾದ ಎನ್ನುವುದಿಲ್ಲ’ ಎಂದು ಹೇಳಿದರು.

> **ನಾವೆಲ್ಲರೂ ಭಾರತ ಮಾತೆಯ ಮಕ್ಕಳು. ಧರ್ಮ, ಜಾತಿ, ಆಹಾರ ಪದ್ಧತಿ, ಭಾಷೆ ಎಲ್ಲವೂ ಮಾನವ ಸೃಷ್ಟಿ. ವೈವಿಧ್ಯದಲ್ಲಿಯೂ ನಾವು ಒಗ್ಗಟ್ಟಾಗಿದ್ದೇವೆ. ಇದು ನಮ್ಮ ಸಂಸ್ಕೃತಿ**
> **ಮೋಹನ್ ಭಾಗವತ್**
> ಆರ್‌ಎಸ್‌ಎಸ್ ಸರಸಂಘಚಾಲಕ

ಆಪರೇಷನ್ ಸಿಂಧೂರ 2.0 ಕಾರ್ಯಾಚರಣೆಗೆ ಬಿಎಸ್‌ಎಫ್ ಸನ್ನದ್ಧ

72 ಭಯೋತ್ಪಾದಕ ಶಿಬಿರ ಸ್ಥಳಾಂತರ

ಜಮ್ಮು (ಪಿಟಿಐ): ಆಪರೇಷನ್ ಸಿಂಧೂರ 2.0 ಕಾರ್ಯಾಚರಣೆಗೆ ಭಾರತ ಸನ್ನದ್ಧವಾಗಿರುವ ಬೆನ್ನಲ್ಲೇ, ಪಾಕಿಸ್ತಾನವು ಗಡಿಭಾಗದಲ್ಲಿನ 72ಕ್ಕೂ ಹೆಚ್ಚು ಭಯೋತ್ಪಾದಕ ಶಿಬಿರಗಳನ್ನು ಸ್ಥಳಾಂತರಿಸಿದೆ ಎಂದು ಬಿಎಸ್‌ಎಫ್ ಅಧಿಕಾರಿಯೊಬ್ಬರು ಹೇಳಿದ್ದಾರೆ.

ಮೇ 7ರಿಂದ 10ರವರೆಗೆ ಭಾರತವು ಪಾಕ್ ವಿರುದ್ಧ ನಡೆಸಿದ ಸೇನಾ ಕಾರ್ಯಾಚರಣೆಯಲ್ಲಿ, ಗಡಿ ಭಾಗದ ಹಲವು ಭಯೋತ್ಪಾದಕ ಶಿಬಿರಗಳನ್ನು ಭದ್ರತಾ ಪಡೆ ನೆಲಸಮಗೊಳಿಸಿತ್ತು. ಇದರ ಬೆನ್ನಲ್ಲೇ, ಪಾಕಿಸ್ತಾನವು ಈ ಎಲ್ಲ ಶಿಬಿರಗಳನ್ನು ಗಡಿಯಿಂದ ದೂರದ ಪ್ರದೇಶಗಳಿಗೆ ಸ್ಥಳಾಂತರಿಸಿದೆ. ಸದ್ಯ 12ಕ್ಕೂ ಹೆಚ್ಚು ಭಯೋತ್ಪಾದಕ ಶಿಬಿರಗಳು ಸಿಯಾಲ್‌ಕೋಟ್ ಮತ್ತು ಜಫರ್ವಾಲ್ ಪ್ರದೇಶದಲ್ಲಿವೆ ಎಂದು ಬಿಎಸ್‌ಎಫ್ ಮೂಲಗಳು ತಿಳಿಸಿವೆ.

‘60ಕ್ಕೂ ಹೆಚ್ಚು ಭಯೋತ್ಪಾದಕ ಶಿಬಿರಗಳು ಗಡಿಯಿಂದ ದೂರ ಪ್ರದೇಶದಲ್ಲಿ ಕಾರ್ಯನಿರ್ವಹಿಸುತ್ತಿವೆ’ ಎಂದು ಬಿಎಸ್‌ಎಫ್‌ನ ಡಿಐಜಿ ವಿಕ್ರಂ ಕುನ್ವರ್ ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

‘ಭಯೋತ್ಪಾದಕರ ಒಳನುಸುಳುವಿಕೆಗೆ ಇದ್ದಾಗ ಈ ಶಿಬಿರಗಳು ಸಕ್ರಿಯವಾಗಿರುತ್ತವೆ. ಇಂತಹ ಶಿಬಿರಗಳನ್ನು ಆಗಾಗ್ಗೆ ಸ್ಥಳಾಂತರಿಸಲಾಗುತ್ತದೆ. ಸದ್ಯ ಅಂತರರಾಷ್ಟ್ರೀಯ ಗಡಿರೇಖೆಗೆ ಹೊಂದಿಕೊಂಡ ಪ್ರದೇಶದಲ್ಲಿ ಇಂತಹ ಯಾವುದೇ ಶಿಬಿರಗಳು ಕಾರ್ಯನಿರ್ವಹಿಸುತ್ತಿಲ್ಲ. ಗಡಿಯು ಬಿಎಸ್‌ಎಫ್‌ನ ಸತತ ನಿಗಾದಲ್ಲಿದೆ’ ಎಂದುಅವರುಹೇಳಿದರು.

ಆಪರೇಷನ್ ಸಿಂಧೂರ ಕಾರ್ಯಾಚರಣೆಗಿಂತ ಮೊದಲು ಗಡಿ ಭಾಗದಲ್ಲಿ ಜೈಷ್‌-ಎ-ಮೊಹಮ್ಮದ್ ಮತ್ತು ಲಷ್ಕರ್ ಎ ತೈಯಬಾ ಶಿಬಿರಗಳು ಸಕ್ರಿಯವಾಗಿದ್ದವು. ಕಾರ್ಯಾಚರಣೆ ನಂತರ ಈ ಗುಂಪುಗಳು ಚದುರಿ ಹೋಗಿವೆ.

> **ಆಪರೇಷನ್ ಸಿಂಧೂರ ಕಾರ್ಯಾಚರಣೆಯನ್ನು ಪುನರಾರಂಭಿಸಲು ನಿರ್ಧರಿಸಿದರೆ ಸರ್ಕಾರದ ಆದೇಶವನ್ನು ಪಾಲಿಸಲು ಬಿಎಸ್‌ಎಫ್ ಸನ್ನದ್ಧವಾಗಿದೆ**
> **ಶಶಾಂಕ್ ಆನಂದ್**
> ಬಿಎಸ್‌ಎಫ್ ಐಜಿ, ಜಮ್ಮು ವಿಭಾಗ

‘ದುಪ್ಪಟ್ಟು ಹಾನಿ ಮಾಡುತ್ತೇವೆ’

‘1965, 1971, 1999ರ ಕಾರ್ಗಿಲ್ ಯುದ್ಧ, ಇತ್ತೀಚಿನ ಆಪರೇಷನ್ ಸಿಂಧೂರ ಯಾವುದೇ ಕಾರ್ಯಾಚರಣೆ ತೆಗೆದುಕೊಂಡರೂ ಬಿಎಸ್‌ಎಫ್‌ಗೆ ಅಪಾರ ಅನುಭವ ಇದೆ. ಯುದ್ಧ ಸಾಂಪ್ರದಾಯಿಕವಾಗಿರಬಹುದು ಅಥವಾ ಹೈಬ್ರಿಡ್ ಮಾದರಿ ಇರಬಹುದು, ನಮಗೆ ಅವಕಾಶ ಲಭಿಸಿದರೆ, ಕಳೆದ ಮೇ ತಿಂಗಳಲ್ಲಿ ಆಗಿರುವ ಹಾನಿಗಿಂತಲೂ ದುಪ್ಪಟ್ಟು ಹಾನಿಯನ್ನು ಶತ್ರುವಿಗೆ ಮಾಡುತ್ತೇವೆ’ ಎಂದು ಐಜಿ ಆನಂದ್ ಹೇಳಿದರು.

‘ಸಂವಿಧಾನ ರಕ್ಷಿಸಿದರಷ್ಟೇ ಸುಪ್ರೀಂ’

ಪ್ರಜಾವಾಣಿ ವಾರ್ತೆ

ಭೋಪಾಲ್: ‘ಸುಪ್ರೀಂ ಕೋರ್ಟ್‌ನಲ್ಲಿ ಸಂವಿಧಾನದ ರಕ್ಷಣೆಯಾಗುತ್ತಿದ್ದರೆ ಮಾತ್ರವೇ ಅದು ‘ಸುಪ್ರೀಂ’ ಎಂದು ಕರೆಸಿಕೊಳ್ಳುತ್ತದೆ. ಇಲ್ಲವಾದಲ್ಲಿ ಅದು ‘ಸುಪ್ರೀಂ’ ಎಂದು ಕರೆಸಿಕೊಳ್ಳಲು ಅರ್ಹವಲ್ಲ’ ಎಂದು ಜಮಿಯತ್ ಉಲೇಮಾ ಎ ಹಿಂದ್ ಸಂಘಟನೆಯ ಅಧ್ಯಕ್ಷ ಮೊಹಮೂದ್ ಮದಾನಿ ಶನಿವಾರ ಹೇಳಿದ್ದಾರೆ.

ಮಧ್ಯಪ್ರದೇಶದ ಭೋಪಾಲ್‌ನಲ್ಲಿ ನಡೆಯುತ್ತಿರುವ ಜಮಾತ್ ಸಮ್ಮೇಳನದಲ್ಲಿ ಈ ಕುರಿತು ಮಾತನಾಡಿರುವ ಅವರು, ‘ಭಾರತದ ನ್ಯಾಯಾಂಗವು ಸರ್ಕಾರದ ಒತ್ತಡದಲ್ಲಿ ಕಾರ್ಯನಿರ್ವಹಿಸುತ್ತಿದೆ. ಬಾಬರಿ ಮಸೀದಿ ಹಾಗೂ ತ್ರಿವಳಿ ತಲಾಖ್‌ಗೆ ಸಂಬಂಧಿಸಿದ ಇತ್ತೀಚೆಗಿನ ತೀರ್ಪುಗಳೇ ಇದಕ್ಕೆ ಸಾಕ್ಷಿ’ ಎಂದಿದ್ದಾರೆ.

1991ರ ಪೂಜಾ ಸ್ಥಳಗಳ ಕಾಯ್ದೆ ಇದ್ದರೂ ನ್ಯಾಯಾಲಯಗಳಲ್ಲಿ ಗ್ಯಾನವಾಪಿ ಹಾಗೂ ಶ್ರೀಕೃಷ್ಣ ಜನ್ಮಭೂಮಿ ಪ್ರಕರಣಗಳ ವಿಚಾರಣೆ ನಡೆಯುತ್ತಿರುವುದನ್ನು ಉಲ್ಲೇಖಿಸಿ ಮದಾನಿ ಈ ಹೇಳಿಕೆ ನೀಡಿದ್ದಾರೆ.

ಮದಾನಿ

ಭಾರತೀಯ ಮುಸ್ಲಿಮರು ಅನುಭವಿಸುತ್ತಿರುವ ಸಮಸ್ಯೆಗಳ ಬಗ್ಗೆ ತಿಳಿಸಲು ಇತರೆ ಸಮುದಾಯಗಳ ಜತೆಗೆ ಸಂವಾದಗಳನ್ನು ನಡೆಸುವಂತೆಯೂ ಮುಸ್ಲಿಂ ಸಮುದಾಯಕ್ಕೆ ಅವರು ಕರೆ ನೀಡಿದ್ದಾರೆ.

ಧಾರ್ಮಿಕ ಪರಿಭಾಷೆಗಳನ್ನು ಬದಲಿಸಲು ನಡೆಯುತ್ತಿರುವ ಪ್ರಯತ್ನಗಳು, ವಿಶೇಷವಾಗಿ ‘ಜಿಹಾದ್’ ಎಂಬ ಪದಕ್ಕೆ ಕಲ್ಪಿಸುತ್ತಿರುವ ಅರ್ಥಗಳನ್ನು ಖಂಡಿಸುವ ನಿರ್ಣಯವನ್ನೂ ಸಮ್ಮೇಳನದಲ್ಲಿ ಅಂಗೀಕರಿಸಲಾಗಿದೆ.

‘ದೌರ್ಜನ್ಯ, ದಬ್ಬಾಳಿಕೆಯ ವಿರುದ್ಧ ಶಾಂತಿ, ನ್ಯಾಯ, ಮಾನವನ ಘನತೆಗಾಗಿ ನಡೆಸುವ ಹೋರಾಟವನ್ನು ‘ಜಿಹಾದ್’ ಎಂದು ಕರೆಯಲಾಗುತ್ತದೆಯೇ ವಿನಃ ಅವ್ಯವಸ್ಥೆ, ಅರಾಜಕತೆ, ರಕ್ತಪಾತ ಎಂದಿಗೂ ‘ಜಿಹಾದ್’ ಆಗಲಾರದು’ ಎಂದೂ ನಿರ್ಣಯದಲ್ಲಿ ತಿಳಿಸಲಾಗಿದೆ.

ಜತೆಗೆ ಬಿಜೆಪಿ ಆಡಳಿತವಿರುವ ರಾಜ್ಯಗಳಲ್ಲಿ ಏಕರೂಪ ನಾಗರಿಕ ಸಂಹಿತೆ ಜಾರಿಗೊಳಿಸುವ ಮೂಲಕ ಧಾರ್ಮಿಕ ಸ್ವಾತಂತ್ರ್ಯ, ಸಂವಿಧಾನಾತ್ಮಕವಾಗಿ ಖಾತರಿಪಡಿಸಿದ ಹಕ್ಕುಗಳನ್ನು ಕಸಿಯುವ ಪ್ರಯತ್ನ ನಡೆಯುತ್ತಿದೆ. ಇದನ್ನು ವಿರೋಧಿಸಬೇಕು. ಜತೆಗೆ ಚುನಾವಣಾ ಆಯೋಗವು ನಡೆಸುತ್ತಿರುವ ಮತದಾರರ ಪಟ್ಟಿಯ ಸಮಗ್ರ ವಿಶೇಷ ಪರಿಷ್ಕರಣೆಯನ್ನು ಪ್ರಶ್ನಿಸಬೇಕು, ಅಲ್ಪಸಂಖ್ಯಾತರ ಹಕ್ಕುಗಳನ್ನು ರಕ್ಷಿಸಲು ಸರ್ಕಾರ ಮೇಲೆ ಒತ್ತಡ ಹೇರಬೇಕು ಎನ್ನುವ ಪ್ರಸ್ತಾವಗಳನ್ನೂ ನಿರ್ಣಯ ಒಳಗೊಂಡಿದೆ.

ಅಧಿವೇಶನಕ್ಕೆ ಬೇಕು ₹21 ಕೋಟಿ

ಒಂದನೇ ಪುಟದಿಂದ...

2023ರಲ್ಲಿ ಒಟ್ಟಾರೆ ₹17 ಕೋಟಿ ವೆಚ್ಚವನ್ನು ಅಂದಾಜಿಸಲಾಗಿತ್ತು. ಕೊನೆಗೆ ₹23 ಕೋಟಿಯಷ್ಟಾಗಿತ್ತು. 2024ರಲ್ಲಿ ವೆಚ್ಚಗಳನ್ನು ತಗ್ಗಿಸಿ ₹15.30 ಕೋಟಿಗೆ ಇಳಿಸಲಾಯಿತು. ಈ ಬಾರಿ ಅಂಥ ಪ್ರಯತ್ನ ನಡೆದಿಲ್ಲ.

ಊಟಕ್ಕೂ ಹೆಚ್ಚಿನ ವೆಚ್ಚ: ಈ ವರ್ಷ ಊಟಕ್ಕೂ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ. ಒಂದೊಂದು ದಿನ ರಾಜ್ಯದ ಒಂದೊಂದು ಪ್ರದೇಶದ ವಿಶೇಷ ಖಾದ್ಯಗಳನ್ನು ಉಣಬಡಿಸಲಾಗುವುದು. ದೈನಂದಿನ ಊಟದಲ್ಲಿ ಜೋಳದ ರೊಟ್ಟಿ, ಸಜ್ಜಿ ಖಡಕ್ ರೊಟ್ಟಿ, ಅಕ್ಕಿರೊಟ್ಟಿ, ಚಪಾತಿ, ತರಹೇವಾರು ಚಟ್ನಿ, ಮೂರು ತರಹದ ಪಲ್ಯ, ಕುಚಲಕ್ಕಿ, ಸಾದಾ ಅನ್ನ, ಮೊಸರನ್ನ, ಮಸಾಲೆ ಅನ್ನ ಸಿದ್ಧಪಡಿಸಲಾಗುವುದು. ಕುಂದಾ, ಕರದಂಟು, ಮೈಸೂರು ಶ್ರೀ, ಬೇಳೆ ಹಲ್ವ, ಗಜ್ಜರಿ ಹಲ್ವ, ಮೋತಿಚೂರ್ ಉಂಡಿ, ಜಾಮೂನ್, ಗೋಧಿಹುಗ್ಗಿ, ರಸ್‌ಮಲಾಯ್... ಹೀಗೆ ಹಲವಾರು ಸಿಹಿ ಖಾದ್ಯಗಳನ್ನೂ ಹೆಚ್ಚುವರಿಯಾಗಿ ಸೇರಿಸಲಾಗಿದೆ.

ಕಳೆದ ಬಾರಿ ಜನಪ್ರತಿನಿಧಿಗಳು, ಅಧಿಕಾರಿಗಳು ಮತ್ತು ಸಿಬ್ಬಂದಿಯ ಊಟಕ್ಕೆ ಪ್ರತಿದಿನ ₹5 ಲಕ್ಷ ಖರ್ಚಾಗಿತ್ತು. ಈ ಬಾರಿ ಅದು ದುಪ್ಪಟ್ಟಾಗುವ ಅಂದಾಜು ಇದೆ ಎಂದು ಮೂಲಗಳು ತಿಳಿಸಿವೆ.

ಈವರೆಗೆ ₹169.6 ಕೋಟಿ ವೆಚ್ಚ: 2023ರವರೆಗೆ ಒಟ್ಟು 13 ಅಧಿವೇಶನಗಳು ನಡೆದಿದ್ದು, ₹169.6 ಕೋಟಿ ಹಣ ಖರ್ಚಾಗಿದೆ. ಸುವರ್ಣ ವಿಧಾನಸೌಧದ ಬಳಿ ಶಾಸಕರ ಭವನ ನಿರ್ಮಿಸಿದರೆ ವಸತಿ ವೆಚ್ಚ ತಗ್ಗಿಸಬಹುದು ಎಂಬ ಆಗ್ರಹವನ್ನು ಈ ಭಾಗದ ಸಂಘಟನೆಗಳು ಮಾಡುತ್ತಲೇ ಬಂದಿವೆ. ಪ್ರಸಕ್ತ ವರ್ಷವೂ 4,100ಕ್ಕೂ ಹೆಚ್ಚು ಕೋಣೆಗಳನ್ನು ಜಿಲ್ಲಾಡಳಿತ ಬುಕ್ ಮಾಡಿದೆ.

ಮುಖ್ಯಮಂತ್ರಿ ಸೇರಿ ಸಚಿವರು, ಶಾಸಕರು, ವಿಧಾನಸಭೆ ಮತ್ತು ವಿಧಾನ ಪರಿಷತ್ ಸಚಿವಾಲಯದ ಅಧಿಕಾರಿಗಳು, ಪತ್ರಕರ್ತರು, ಮಾರ್ಷಲ್‌ಗಳು, ವಾಹನಗಳ ಚಾಲಕರೆಲ್ಲರೂ ಬೆಳಗಾವಿ ನಗರದಲ್ಲೇ ವಾಸ್ತವ್ಯ ಹೂಡಬೇಕು. ಪ್ರತಿದಿನ ಇಲ್ಲಿಂದ ಸೌಧಕ್ಕೆ ಹೋಗಬೇಕು. ಹೀಗಾಗಿ, ವಸತಿಯ ಜತೆಗೆ ಸಾರಿಗೆ ವೆಚ್ಚವೂ ಬೆಳೆಯುತ್ತಿದೆ ಎಂಬುದು ಹೋರಾಟಗಾರರ ತಕರಾರು.

ಹಿಂದಿನ ಅಧಿವೇಶನಗಳ ವೆಚ್ಚ



ಸಭಾಧ್ಯಕ್ಷರ ಪೀಠಕ್ಕೆ ₹ 42.93 ಲಕ್ಷ

ಒಂದನೇ ಪುಟದಿಂದ...

2024ರ ಅ.25ರಂದು ಸರ್ಕಾರ ಮತ್ತೆ ₹28.49 ಲಕ್ಷ ವೆಚ್ಚ ಮಾಡಿ, ತೈಲವರ್ಣದ ಹೊಸ ಭಾವಚಿತ್ರಗಳನ್ನು ಅಳವಡಿಸಿತು. ಇದರೊಂದಿಗೆ, ಅನುಭವ ಮಂಟಪದ ಚಿತ್ರಪಟ ಹಾಗೂ ಗಾಂಧೀಜಿ ಭಾವಚಿತ್ರ ಸೇರಿ ಇದೇ ವರ್ಷ (2025) ಫೆ.4ರಂದು ₹25.84 ಲಕ್ಷ ನೀಡಲಾಗಿದೆ. ಇದನ್ನು ನೋಡಿದರೆ ಅನಗತ್ಯ ವೆಚ್ಚವೇ ಹೆಚ್ಚಾಗುತ್ತಿರುವುದು ಖಾತ್ರಿ ಎಂದು ಗಡಾದ ದೂರುತ್ತಾರೆ.

ಉಪಾಹಾರ ಸಭೆ ನಾನಿರಲಿಲ್ಲ– ಪೊನ್ನಣ್ಣ

‘ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ನಡುವಿನ ಉಪಾಹಾರ ಸಭೆಯಲ್ಲಿ ನಾನು ಇರಲಿಲ್ಲ’ ಎಂದು ಶಾಸಕರೂ ಆಗಿರುವ ಮುಖ್ಯಮಂತ್ರಿಯವರ ಕಾನೂನು ಸಲಹೆಗಾರ ಎ.ಎಸ್. ಪೊನ್ನಣ್ಣ ಹೇಳಿದರು.

ಶಿವಕುಮಾರ್ ಅವರು ಸಿದ್ದರಾಮಯ್ಯ ಮನೆಗೆ ಬಂದಾಗ ಎ.ಎಸ್. ಪೊನ್ನಣ್ಣ ಕೂಡಾ ‘ಕಾವೇರಿ’ಯಲ್ಲಿ ಇದ್ದರು.

ಈ ಬಗ್ಗೆ ಸುದ್ದಿಗಾರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಪೊನ್ನಣ್ಣ, ‘ಅವರಿಬ್ಬರೂ ಏನು ಚರ್ಚಿಸಿದರೆಂದು ನನಗೆ ಗೊತ್ತಿಲ್ಲ. ಹೈಕಮಾಂಡ್ ಸೂಚನೆಯಂತೆ ನಡೆದ ಈ ರಹಸ್ಯ ಸಭೆಯ ವಿವರ ನಿಮಗೆಷ್ಟು ಗೊತ್ತಿದೆಯೊ, ನನಗೂ ಅಷ್ಟೇ ಗೊತ್ತು’ ಎಂದೂ ಹೇಳಿದರು.

‘ಮುಖ್ಯಮಂತ್ರಿ ಮತ್ತು ಉಪ ಮುಖ್ಯಮಂತ್ರಿ ಇಬ್ಬರೂ ಮಾತನಾಡಲು ಸಭೆ ನಿಗದಿಯಾಗಿತ್ತು. ಸೌಜನ್ಯದ ಭೇಟಿಗಾಗಿ ಮುಖ್ಯಮಂತ್ರಿ ನಿವಾಸಕ್ಕೆ ಹೋಗಿದ್ದೆ’ ಎಂದರು.

ಹಿಡಿದ ಪಟ್ಟು ಬಿಟ್ಟು ಸದ್ಯ ಒಗ್ಗಟ್ಟು

ಒಟ್ಟಿಗೆ ಸಾಗುವುದೇ ನಮ್ಮ ಒಪ್ಪಂದ: ಸಿ.ಎಂ

ಒಂದನೇ ಪುಟದಿಂದ...

ಸಚಿವರಾಗಲಿ, ಶಾಸಕರಾಗಿ ಸರ್ಕಾರದ ವಿರುದ್ಧವಿಲ್ಲ. ಕೆಲವು ಶಾಸಕರು ಸಚಿವ ಸಂಪುಟ ಪುನರ್ ರಚನೆಗೆ ಸಂಬಂಧಿಸಿದಂತೆ ದೆಹಲಿಗೆ ಭೇಟಿ ನೀಡಿರಬಹುದು. ಹಾಗೆಂದು ಬೇರೆ ಅರ್ಥ ಕಲ್ಪಿಸಬೇಕಿಲ್ಲ. ಕೆಲವರು ಇಂಥ ಕಾರಣಕ್ಕೆ ಭೇಟಿ ನೀಡಿರುವುದಾಗಿ ತಿಳಿಸಿದ್ದಾರೆ.

ಶಿವಕುಮಾರ್ ಮತ್ತು ನಾನು ನಮ್ಮ ಮನೆಯಲ್ಲಿ ಒಟ್ಟಿಗೆ ಉಪಾಹಾರ ಸೇವಿಸಿದ್ದೇವೆ. ಪಕ್ಷದ ವರಿಷ್ಠರಾದ ಕೆ.ಸಿ. ವೇಣುಗೋಪಾಲ್ ಅವರು ಎ.ಎಸ್. ಪೊನ್ನಣ್ಣ ಅವರಿಗೆ ಕರೆ ಮಾಡಿ, ಡಿ.ಕೆ. ಶಿವಕುಮಾರ್ ಅವರನ್ನು ಉಪಾಹಾರಕ್ಕೆ ಕರೆಯಲು ಸೂಚಿಸಿದ್ದರು. ಡಿ.ಕೆ ಶಿವಕುಮಾರ್ ಅವರಿಗೂ ಇದನ್ನೇ ತಿಳಿಸಿದ್ದರು. ಡಿ.ಕೆ. ಶಿವಕುಮಾರ್ ಅವರೇ, ನಮ್ಮ ಮನೆಗೆ ಊಟಕ್ಕೆ ಬನ್ನಿ ಎಂದು ಆಹ್ವಾನವಿತ್ತಿದ್ದರು. ಮತ್ತೊಂದು ದಿನ ಊಟಕ್ಕೆ ಬರೋಣ ಎಂದು ತಿಳಿಸಿ ನಮ್ಮ ಮನೆಗೇ ಉಪಾಹಾರಕ್ಕೆ ಕರೆದೆ. ಇತ್ತೀಚಿನ ದಿನಗಳಲ್ಲಿ ಅನಗತ್ಯವಾಗಿ ಕೆಲವು ಗೊಂದಲಗಳು ನಿರ್ಮಾಣವಾಗಿವೆ. ನಾವು ಈ ಬಗ್ಗೆ ಮಾತನಾಡಿದ್ದೇವೆ. 2028ರ ಚುನಾವಣೆ ಹಾಗೂ ಸ್ಥಳೀಯ ಸಂಸ್ಥೆಗಳ ನಗರಪಾಲಿಕೆ, ತಾಲ್ಲೂಕು , ಜಿಲ್ಲಾ ಹಾಗೂ ಗ್ರಾಮ ಪಂಚಾಯತ್ ಚುನಾವಣೆಗಳು ಬಹಳ ಮುಖ್ಯವಾಗಿದ್ದು, ಈ ಬಗ್ಗೆ ಚರ್ಚಿಸಿದ್ದೇವೆ. 2023ರ ವಿಧಾನಸಭಾ ಚುನಾವಣೆಯಲ್ಲಿ ಕೆಲಸ ಮಾಡಿದಂತೆಯೇ ಮುಂದೆಯೂ ಒಟ್ಟಿಗೆ ಸಾಗಲು ತೀರ್ಮಾನಿಸಿದ್ದೇವೆ.

ಅಧಿಕಾರ ಹಸ್ತಾಂತರದ ಬಗ್ಗೆ ಉಂಟಾಗಿರುವ ಗೊಂದಲಕ್ಕೆ ಮಾಧ್ಯಮಗಳೇ ಕಾರಣ. ಅವಿಶ್ವಾಸ ನಿರ್ಣಯ ಮಂಡಿಸುವುದಾಗಿ ಬಿಜೆಪಿ , ಜೆಡಿಎಸ್‌ನವರು ನೀಡಿದ್ದಾರೆ. ಇದು ಅಸಂಭವ. ನಾವು 142 ಜನರಿದ್ದು, ಅವರು 64 ಜನ ಮಾತ್ರ. ಜೆಡಿಎಸ್‌ನವರು 18 ಇದ್ದಾರೆ. ಅವರಿಬ್ಬರೂ ಸೇರಿದರೆ 82 ಜನರಾಗುತ್ತಾರೆ. ಇದೊಂದು ವಿಫಲ ಪ್ರಯತ್ನ.

ಇಬ್ಬರ ನಿಲುವು ಒಂದೇ–ಡಿಕೆಶಿ

ಒಂದನೇ ಪುಟದಿಂದ...

ನಮ್ಮಲ್ಲಿ ಯಾವುದೇ ಗುಂಪು ಇಲ್ಲ. ಕೃಷ್ಣ ಅವರ ಕಾಲದಲ್ಲೂ ಗುಂಪುಗಾರಿಕೆ ಮಾಡಿಲ್ಲ. ಇವತ್ತಿಗೂ ಅವಕಾಶ ಕೊಟ್ಟಿಲ್ಲ. ನನಗೆ ಇರುವುದು ಒಂದೇ ಗುಂಪು, ಅದು ಕಾಂಗ್ರೆಸ್ ಗುಂಪು.

ಎಲ್ಲರನ್ನೂ ಒಟ್ಟಾಗಿ ತೆಗೆದುಕೊಂಡು, ಪ್ರತಿಯೊಬ್ಬ ಶಾಸಕರಿಗೆ ಶಕ್ತಿ ತುಂಬಿ, ಪಕ್ಷವನ್ನು ಬಲಿಷ್ಠವಾಗಿ ಸಂಘಟಿಸುವುದು ನಮ್ಮಿಬ್ಬರ ಕರ್ತವ್ಯ. 2028ಕ್ಕೆ ಮತ್ತೆ ಕಾಂಗ್ರೆಸ್ ಸರ್ಕಾರವನ್ನು ಅಧಿಕಾರಕ್ಕೆ ತರಲು ಅನೇಕ ಕಾರ್ಯಕ್ರಮ ರೂಪಿಸಿದ್ದು, ಅದಕ್ಕೆ ತಕ್ಕಂತೆ ಕೆಲಸ ಮಾಡುತ್ತಿದ್ದೇವೆ. ಮುಖ್ಯಮಂತ್ರಿ ನೀಡಿರುವ ಸಂದೇಶಕ್ಕೆ ನನ್ನ ಸಹಮತವಿದೆ.

ಚುನಾವಣೆಗೆ 90ರ ವೃದ್ಧ ಸ್ಪರ್ಧೆ

ಕೊಚ್ಚಿ (ಪಿಟಿಐ): ಕೇರಳದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ 90 ವರ್ಷದ ವೃದ್ಧ ನಾರಾಯಣನ್ ನಾಯರ್ ಎಂಬುವವರು ಪಕ್ಷೇತರ ಅಭ್ಯರ್ಥಿಯಾಗಿ ಸ್ಪರ್ಧಿಸುವ ಮೂಲಕ ವಯಸ್ಸು ಕೇವಲ ಸಂಖ್ಯೆಯಷ್ಟೇ ಎಂದು ಸಾಬೀತು ಮಾಡಿದ್ದಾರೆ.

ಹಲವು ರಾಜಕೀಯ ಪಕ್ಷಗಳು ಭರ್ಜರಿ ಪ್ರಚಾರದಲ್ಲಿ ತೊಡಗಿದ್ದರೆ, ನಾಯರ್ ಅವರು ಬಿಳಿ ಶರ್ಟ್ ಮತ್ತು ಧೋತಿ ಧರಿಸಿ, ಕಪ್ಪು ಬಣ್ಣದ ಚೀಲವನ್ನು ಹೆಗಲಿಗೆ ನೇತು ಹಾಕಿಕೊಂಡು ಒಬ್ಬರೇ ಮನೆಮನೆಗೆ ಭೇಟಿ ನೀಡಿ ಮತ ಯಾಚಿಸುತ್ತಿದ್ದಾರೆ.

ಸ್ಥಳೀಯ ಸಂಸ್ಥೆಗಳಿಗೆ ಡಿಸೆಂಬರ್‌ನಲ್ಲಿ ಚುನಾವಣೆ ನಡೆಯಲಿದ್ದು, ನಾಯರ್ ಅವರು ಆಶಾಮನ್ನೂರ್ ಗ್ರಾಮ ಪಂಚಾಯಿತಿಯ ಎರಡನೇ ವಾರ್ಡ್‌ನಿಂದ ಸ್ಪರ್ಧಿಸಿದ್ದಾರೆ. ನಿವೃತ್ತ ಸರ್ಕಾರಿ ಉದ್ಯೋಗಿ ನಾಯರ್ ಅವರು ಇದೇ ಮೊದಲ ಬಾರಿಗೆ ಚುನಾವಣೆಯಲ್ಲಿ ಸ್ಪರ್ಧಿಸಿ ಅದೃಷ್ಟ ಪರೀಕ್ಷೆಗಿಳಿದಿದ್ದಾರೆ. ನಾಯರ್ ಅವರ ಚೈತನ್ಯ, ಹುರುಪನ್ನು ಕಂಡ ಸ್ಥಳೀಯರು ‘ಇದು ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯ ಚೆಲುವು’ ಎಂದು ಉದ್ಗರಿಸುತ್ತಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ನಾಯರ್ ಅವರು, ‘ನನ್ನ ವಾರ್ಡ್‌ಗಾಗಿ ಹಲವು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬೇಕು. ಚುನಾಯಿತ ಪ್ರತಿನಿಧಿಯಾದಾಗ ಮಾತ್ರ ಅದೆಲ್ಲವೂ ಸಾಧ್ಯ. ಹೀಗಾಗಿ ಸ್ಪರ್ಧಿಸಿದ್ದೇನೆ. ವಯಸ್ಸು ಯಾವುದಕ್ಕೂ ಅಡ್ಡಿಯಾಗದು’ ಎಂದು ಹೇಳುತ್ತಾರೆ.

ಶೀತಮಾರುತ ಚಳಿ ವಿಪರೀತ

ಒಂದನೇ ಪುಟದಿಂದ...

ಗರಿಷ್ಠ ಮತ್ತು ಕನಿಷ್ಠ ತಾಪಮಾನ ಕ್ರಮವಾಗಿ 24 ಡಿಗ್ರಿ ಸೆಲ್ಸಿಯಸ್ ಮತ್ತು 16 ಡಿಗ್ರಿ ಸೆಲ್ಸಿಯಸ್ ಇರಲಿದೆ.

ಕಳೆದ 24 ಗಂಟೆಯಲ್ಲಿ ಬೀದರ್‌ನಲ್ಲಿ ಗರಿಷ್ಠ 27.4 ಡಿಗ್ರಿ ಸೆಲ್ಸಿಯಸ್ ಇದ್ದರೆ, ಕನಿಷ್ಠ 12 ಡಿಗ್ರಿ ಸೆಲ್ಸಿಯಸ್‌ಗೆ ಇಳಿದಿದೆ. ವಿಜಯಪುರದಲ್ಲಿ ಗರಿಷ್ಠ 28.5 ಇದ್ದರೆ, ಕನಿಷ್ಠ 12 ಡಿಗ್ರಿ ಸೆಲ್ಸಿಯಸ್‌ಗೆ ಕುಸಿದಿದೆ.

ಗದಗದಲ್ಲಿ ಗರಿಷ್ಠ 28.2 ಡಿಗ್ರಿ ಸೆಲ್ಸಿಯಸ್ ಇದ್ದರೆ, ಕನಿಷ್ಠ 13.6 ಡಿಗ್ರಿ ಸೆಲ್ಸಿಯಸ್‌ಗೆ ಇಳಿದಿದೆ. ರಾಯಚೂರಿನಲ್ಲಿ ಗರಿಷ್ಠ 29.2 ಡಿಗ್ರಿ ಸೆ. ಇದ್ದರೆ, ಕನಿಷ್ಠ 14.2 ಡಿಗ್ರಿ ಸೆಲ್ಸಿಯಸ್‌ಗೆ ಕುಸಿದಿದೆ. ಹಾಗಾಗಿ ವಿಪರೀತ ಚಳಿ ಇದೆ.

ಮುಸ್ಲಿಂ ಸ್ತ್ರೀ ಸುನ್ನತಿ ನಿಷೇಧ ಕೋರಿ ಎನ್‌ಜಿಒದಿಂದ ಅರ್ಜಿ

ಕೇಂದ್ರಕ್ಕೆ ‘ಸುಪ್ರೀಂ’ ನೋಟಿಸ್

ನವದೆಹಲಿ (ಪಿಟಿಐ): ಮುಸಲ್ಮಾನರಲ್ಲಿ ಅದರಲ್ಲೂ ವಿಶೇಷವಾಗಿ ದಾವೂದಿ ಬೊಹ್ರಾ ಪಂಗಡದಲ್ಲಿ ಜಾರಿಯಲ್ಲಿರುವ ಸ್ತ್ರೀ ಸುನ್ನತಿ ನಿಷೇಧಿಸುವಂತೆ ಕೋರಿ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಲು ಸುಪ್ರೀಂಕೋರ್ಟ್ ಶುಕ್ರವಾರ ಸಮ್ಮತಿ ನೀಡಿದೆ.

ಈ ಕುರಿತು ಸ್ವಯಂಸೇವಾ ಸಂಸ್ಥೆಯೊಂದು ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಬಿ.ವಿ.ನಾಗರತ್ನ, ಆರ್.ಮಹಾದೇವನ್ ನೇತೃತ್ವದ ನ್ಯಾಯಪೀಠವು ಕೇಂದ್ರ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿದೆ.

ಚಾಲ್ತಿಯಲ್ಲಿರುವ ಈ ಪದ್ಧತಿಯು ಇಸ್ಲಾಂನ ಭಾಗವಲ್ಲ, ಮಕ್ಕಳ ಹಕ್ಕುಗಳನ್ನು ಉಲ್ಲಂಘಿಸುತ್ತದೆ ಎಂದು ಎನ್‌ಜಿಒ ಚೇತನಾ ವೆಲ್ಫೇರ್ ಸೊಸೈಟಿಯು ತನ್ನ ಅರ್ಜಿಯಲ್ಲಿ ತಿಳಿಸಿತ್ತು.

‘ಈ ಪದ್ಧತಿಯನ್ನು ನಿರ್ದಿಷ್ಟವಾಗಿ ನಿಷೇಧಿಸುವ ಯಾವುದೇ ಸ್ವಾತಂತ್ರ್ಯ ಕಾನೂನು ಜಾರಿಯಲ್ಲಿಲ್ಲ. ಈ ಕೃತ್ಯವು ಬಿಎನ್‌ಎಸ್ ಕಲಂ 113, 118(1) ಹಾಗೂ 118(3)ರ ಅಡಿ ಕೂಡ ಅಪರಾಧವಾಗಿದೆ. ಪೋಕ್ಸೊ ಕಾಯ್ದೆ ಪ್ರಕಾರ, ಅಪ್ರಾಪ್ತರ ಜನನಾಂಗವನ್ನು ವೈದ್ಯಕೀಯ ಕಾರಣ ಹೊರತುಪಡಿಸಿ ಮುಟ್ಟುವುದು ಕೂಡ ಅಪರಾಧವಾಗಿದೆ. ವಿಶ್ವ ಆರೋಗ್ಯ ಸಂಸ್ಥೆ ಪ್ರಕಾರವೂ, ಎಫ್‌ಜಿಎಂ ಎಂಬುದು ಹೆಣ್ಣು ಮಕ್ಕಳು ಹಾಗೂ ಮಹಿಳೆಯರ ಮಾನವ ಹಕ್ಕುಗಳ ಘೋರ ಉಲ್ಲಂಘನೆಯಾಗಿದೆ’ ಎಂದು ಅರ್ಜಿಯಲ್ಲಿ ಎನ್‌ಜಿಒ ತಿಳಿಸಿದೆ.

ಜಾತಿ ತಾರತಮ್ಯ: 6 ಜನರಿಗೆ 2 ವರ್ಷ ಜೈಲು

ತಿರುಪುರ (ತಮಿಳುನಾಡು) (ಪಿಟಿಐ): ಪರಿಶಿಷ್ಟ ಜಾತಿಯ ಮಹಿಳೆಯೊಬ್ಬರು ಸರ್ಕಾರಿ ಶಾಲೆಯಲ್ಲಿ ಮಧ್ಯಾಹ್ನದ ಬಿಸಿಯೂಟದ ಅಡುಗೆ ಕೆಲಸ ಮಾಡುವುದನ್ನು ತಡೆದ ಪ್ರಕರಣದಲ್ಲಿ, ಆರು ಜನರಿಗೆ ಇಲ್ಲಿನ ನ್ಯಾಯಾಲಯವು ಎರಡು ವರ್ಷಗಳ ಜೈಲು ಶಿಕ್ಷೆ ಮತ್ತು ತಲಾ ₹5,000 ದಂಡ ವಿಧಿಸಿದೆ.

2018ರಲ್ಲಿ ಈ ಪ್ರಕರಣ ನಡೆದಿತ್ತು. ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಜನರ ಮೇಲಿನ ದೌರ್ಜನ್ಯ ತಡೆ ಕಾಯ್ದೆಯ ಅಡಿಯಲ್ಲಿ 35 ಜನರ ವಿರುದ್ಧ ಪ್ರಕರಣ ದಾಖಲಾಗಿತ್ತು. ಪ್ರಕರಣಗಳ ವಿಚಾರಣೆ ನಡೆಸಿದ ನ್ಯಾಯಾಲಯವು ಸಾಕ್ಷ್ಯಾಧಾರಗಳ ಕೊರತೆಯಿಂದ 25 ಆರೋಪಿಗಳನ್ನು ಖುಲಾಸೆಗೊಳಿಸಿದ್ದು, 6 ಜನರನ್ನು ತಪ್ಪಿತಸ್ಥರು ಎಂದು ತೀರ್ಮಾನ ಪ್ರಕಟಿಸಿದೆ. ಉಳಿದ ನಾಲ್ವರು ವಿಚಾರಣೆಯ ಸಮಯದಲ್ಲಿ ಮೃತಪಟ್ಟಿದ್ದಾರೆ.

ಪಿ. ಪಳನಿಸಾಮಿ ಗೌಂಡರ್, ಎನ್. ಶಕ್ತಿವೇಲ್, ಆರ್. ಷಣ್ಮುಗಂ, ಸಿ ವೆಲ್ಲಿಂಗಿರಿ, ಎ. ದುರೈಸಾಮಿ ಮತ್ತು ವಿ. ಸೀತಾ ಲಕ್ಷ್ಮಿ ಶಿಕ್ಷೆಗೊಳಗಾದವರು. ಜಿಲ್ಲೆಯ ತಿರುಮಲೈ ಗೌಡಂಪಾಳಯಂನಲ್ಲಿರುವ ಶಾಲೆಯಲ್ಲಿ ಪರಿಶಿಷ್ಟ ಜಾತಿಯ 44 ವರ್ಷದ ಪಿ. ಪಪ್ಪಲ್ ಅವರು ಅಡುಗೆ ಮಾಡುವುದಕ್ಕೆ ಪೋಷಕರು ಆಕ್ಷೇಪ ವ್ಯಕ್ತಪಡಿಸಿದ್ದರು. ಅವರ ವಿರುದ್ಧ ಜಾತಿ ತಾರತಮ್ಯ ಎಸಗಿದ್ದಲ್ಲದೆ, ನಂತರ ಅವರನ್ನು ವರ್ಗಾವಣೆ ಕೂಡಾ ಮಾಡಲಾಗಿತ್ತು.

ಬೆರಗಿನ ಬಿಲಂ ಗುಹೆ

ಶ್ರೀಶೈಲಂನಲ್ಲಿರುವ ಗುಹೆಗಳೊಳಗಿನ ಸುತ್ತಾಟ ಮಾಯಾಲೋಕದಲ್ಲಿ ಸಂಚರಿಸಿದ ಅನುಭವ ನೀಡುತ್ತದೆ. 13

ಸಿದ್ದೇಶ ಕೆ.

ಯಶಸ್ಸಿನ ರಹದಾರಿ ಈ ಕೋಲುದಾರಿ

• ರಶ್ಮಿ ಎಸ್

‘ಇದ್ದಕ್ಕಿದ್ದಂತೆ ಕಣ್ಣಬೆಳಕು ಕಾಣೆಯಾಗಿ, ಬದುಕೆಲ್ಲ ಕತ್ತಲಾಯ್ತು. ಹದಿಹರೆಯದ ವಯಸ್ಸದು. ಹದಿನೆಂಟರ ವಯಸ್ಸು. ಹುಚ್ಚು ಖೋಡಿ ಮನಸಿನ ಹಲವಾರು ಕನಸು ಕಾಣುವ ಹರೆಯ. ಕಣ್ತೆರೆದರೂ ಕಣ್ಮುಚ್ಚಿದರೂ ಅದೇ ಕತ್ತಲೆ, ಕಾಡಕತ್ತಲೆ, ಕಾಡತೊಡಗಿತು ಕತ್ತಲೆ’.

‘ಇದೀಗ ಅಭ್ಯಾಸವಾಗಿದೆ. ಆ ಕತ್ತಲೆ ಮತ್ತು ಸದ್ದುಗಳು. ಬದುಕೆಲ್ಲವೂ ಸದ್ದುಗಳ ಮೇಲೆ ನಿಂತಂತೆ. ಆ ಕ್ಷಣಕ್ಕೆ ಆ ಕತ್ತಲೆಯಲ್ಲಿ ಎಲ್ಲವೂ ಕಳೆದುಹೋಗಬಹುದಿತ್ತು. ಕರಗಿಹೋಗಬಹುದಿತ್ತು. ಪರಿಸ್ಥಿತಿಯ ಕುರಿತು ಕೊರಗಿಯೂ ಹೋಗಬಹುದಾಗಿತ್ತು. ಆದರೆ ಕಳೆದುಕೊಂಡಿದ್ದು ಬೆಳಕಿನ ಕುಡಿಯನ್ನು. ಬಾಳ ಜ್ಯೋತಿಯನ್ನಲ್ಲ ಎಂಬ ಕಿಚ್ಚು ಹೊತ್ತಿಸಿಯೂ ಹೋಯಿತು’.

–ಹೀಗೆ ತಮ್ಮ ಬದುಕಿನ ಬಗ್ಗೆ ಸಿದ್ದೇಶ್ ಕೆ. ನಿರ್ಲಿಪ್ತರಾಗಿ ಹೇಳುತ್ತಿದ್ದರು. ಇಲ್ಲಿ ಕಳೆದುಕೊಂಡೆನೆಂಬ ಹಲುಬುವಿಕೆ ಇಲ್ಲ. ಗೆದ್ದು ಸಾಧಿಸಿದೆನೆಂಬ ಅಹಮಿಕೆಯೂ ಇಲ್ಲ. ಬಂದ ಪರಿಸ್ಥಿತಿಯನ್ನು ಸ್ವೀಕರಿಸುತ್ತ ಮುನ್ನಡೆದ ಬಗೆಗಿನ ಕತೆಗಳಿವೆ. ಕತೆಗಳೆಂದರೆ ಕತೆಗಳಷ್ಟೆ. ಅನುಭವಿಸಿದರೆ ಸ್ಫೂರ್ತಿ ಕಥನ. ಎಲ್ಲ ಇದ್ದೂ ನಾವೇನು ಮಾಡುತ್ತಿದ್ದೇವೆ ಎಂಬ ಕೂರಂಬುವಿನ ಪ್ರಶ್ನೆಗಳೂ.

ಸಿದ್ದೇಶ್, ಚಿತ್ರದುರ್ಗದ ಹಿರೇಗುಂಟೂರಿನವರು. ದೃಷ್ಟಿ ಕಳೆದುಕೊಂಡಾಗ ಹದಿನೆಂಟರ ಹರೆಯ. ಅಪ್ಪ ಅಮ್ಮನ ಆಸರೆಯಾಗಬೇಕಾದ ಸಮಯದಲ್ಲಿ ಅವರಿಗೇ ಆಸರೆ ಬೇಕಾಯಿತು. ಅಪ್ಪನಿಗೆ ಎಲ್ಲವನ್ನೂ ತಾನೇ ನಿಭಾಯಿಸಬೇಕು ಎಂಬ ಕಕ್ಕುಲಾತಿ, ಅಮ್ಮನಿಗೆ ನಾವಿಲ್ಲದಾಗಲೂ ಬದುಕುವಂತಾಗಲಿ ಎಂಬ ಕಾಳಜಿ. ಇವರಿಬ್ಬರ ಜೊತೆಗೆ ತಮ್ಮ ಸ್ವಾವಲಂಬಿಯಾಗಲಿ ಎಂಬ ಅಭಿಮಾನದ ಅಕ್ಕರೆ ಅಕ್ಕನದು, ಅಣ್ಣನದು.

ಸ್ಫೂರ್ತಿಯಾದ ಆ ಗೀತೆ...

ಅಂತರ್ಯದ ಧೀಃಶಕ್ತಿಯನ್ನು ಜಾಗೃತಾವಸ್ಥೆಗೆ ತಂದದ್ದು ಕವಿ ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟರ ಈ ಗೀತೆ– ‘ಯಾರೋ ಬೇಡುವ, ಯಾರೋ ಹಾಡುವ... ಉಣ್ಣುವ ಬಾಯಿಗೆ ದುಡಿಯುವ ಕೈಗಳು ಅವರವರದೇ ಆಗಿರಲಿ, ಅನುಭವಿಸುವ ಸುಖವೆಲ್ಲಕೆ ತಮ್ಮದೇ ಬೆವರಿನ ಬೆಲೆ ಇರಲಿ’. ಈ ಸಾಲುಗಳು ಸಿದ್ದೇಶ್ ಅವರ ಚಿತ್ತಭಿತ್ತಿಯಲ್ಲಿ ಗಟ್ಟಿಯಾದವು.

ಚಿತ್ರದುರ್ಗದಿಂದ ಬೆಂಗಳೂರಿನ ಅಂಧರ ಶಾಲೆಗೆ ಬಂದರು. ಸ್ಪರ್ಶದಿಂದ, ಕೇಳ್ವಿಕೆಯಿಂದ ನಡೆಯುವುದನ್ನೂ, ದಾರಿ ಸವೆಸುವುದನ್ನೂ, ಸವಿಯುವುದನ್ನೂ ಕಲಿತರು. ಸಾಮಾನ್ಯ ಫಲಿತಾಂಶ ತರುತ್ತಿದ್ದ ಯುವಕ, ಅಂಧನಾದ ಮೇಲೆ ಓದಿನತ್ತ ಹೆಚ್ಚು ಗಮನ ಕೊಡಲು ಸಾಧ್ಯವಾಯಿತು. ಈ ನಡುವೆ ಬ್ರೈಲ್ ಲಿಪಿ ಕಲಿಕೆ, ಸಾಮಾನ್ಯರೊಂದಿಗೆ ಪರೀಕ್ಷೆ ಬರೆಯುವ ಪ್ರಯತ್ನ. ಸಹಾಯಕರ ಸಹಾಯದಿಂದ ಪರೀಕ್ಷೆ ಬರೆಯುತ್ತಲೇ ಕಂಪ್ಯೂಟರ್ ಸಹ ಕಲಿತರು.

ಬೆಂಗಳೂರು, ಮೈಸೂರು, ಚಿತ್ರದುರ್ಗ, ದಾವಣಗೆರೆ ಸುತ್ತಸುತ್ತುತ್ತಲೇ ಬದುಕು ಗಟ್ಟಿಯಾಗತೊಡಗಿತು. ಕೆಲವೆಡೆ ಅವಮಾನ ಸಹಿಸಬೇಕಾಯಿತು. ಸರ್ಕಾರಿ ವ್ಯವಸ್ಥೆಯಲ್ಲಿ ಅವಕಾಶಗಳಿಗಾಗಿ ಸಂಯಮದಿಂದ ಕಾಯಬೇಕಾಯಿತು. ಬದುಕಿಗೆ ಶಿಸ್ತು ಮೂಲ ಮಂತ್ರವೆಂಬುದು ಈ ಅವಧಿಯಲ್ಲಿ ಅವರೇ ಕಂಡುಕೊಂಡ ಸೂತ್ರವಾಗಿತ್ತು.

ಪತ್ನಿ ಶ್ರೀದೇವಿ ಜೊತೆ ಸಿದ್ದೇಶ ಕೆ.

ಸಿದ್ದೇಶ್ ಕೈಬದಲಿಸದ ಕೆಲಸಗಳು ಹಲವಾರು. ಆದರೆ ಓದು ಜೊತೆಯಾಗುತ್ತಲೇ ಬಂತು. ಪ್ರತಿ ಸಲ ಕೆಲಸ ಕೇಳುವಾಗಲೆಲ್ಲ ಮೈಹಿಡಿಯಾಗುತ್ತಿತ್ತು. ಕೆಲವೆಡೆ ನೆಲೆಸಲು ತಾಣ, ಊಟ ಎರಡನ್ನೇ ಕೊಟ್ಟು ಕೆಲಸ ಮಾಡಿಸಿಕೊಳ್ಳುತ್ತಿದ್ದರು.

‘ಸ್ವಾವಲಂಬಿಯಾಗುವುದೆಂದರೆ ಎಂಬ ಪ್ರಶ್ನೆ ಸದಾ ನನ್ನ ಮುಂದೆ ಇರುತ್ತಿತ್ತು. ಕಣ್ಣು ಕಾಣದ ಅಭ್ಯರ್ಥಿಗಳಿಗೆ ಉತ್ತರ ಭಾರತದ ಕೆಲವು ರಾಜ್ಯಗಳಲ್ಲಿ ಮತ್ತು ನೆರೆಯ ಆಂಧ್ರದಲ್ಲಿಯೂ ಮೀಸಲಾತಿಯಲ್ಲಿ ಶಿಕ್ಷಕರಾಗಲು ವ್ಯವಸ್ಥೆ ಇದೆ. ನಮ್ಮಲ್ಲಿ ಅರ್ಜಿ ಸಲ್ಲಿಸಿದ್ದರೂ ಏನೂ ಪ್ರತಿಕ್ರಿಯೆಯೇ ಸಿಗುತ್ತಿರಲಿಲ್ಲ. ನಮ್ಮಂಥ ಹಲವಾರು ಸಂಘ ಕಟ್ಟಿಕೊಂಡು ಸಾಮುದಾಯಿಕ ಪ್ರಯತ್ನ ಮಾಡುತ್ತಲೇ ಇರುತ್ತೇವೆ. ಅಧಿಕಾರಿ ವಲಯದ ಇಚ್ಛಾಶಕ್ತಿ ಇದ್ದರೂ, ವ್ಯವಸ್ಥೆಯಲ್ಲಿ ಸಾಕಷ್ಟು ಬದಲಾವಣೆಗಳು ಬೇಕಾಗುತ್ತವೆ. ನಮಗೆ ಬೇಕಿರುವುದು ಅನುಕಂಪವಲ್ಲ. ಅವಕಾಶಗಳು. ಕೊಟ್ಟ ಅವಕಾಶಗಳನ್ನು ನಾವು ಸಾಬೀತು ಪಡಿಸುತ್ತೇವೆ ಎಂಬ ನಂಬಿಕೆ ಇಟ್ಟರೆ ಸಾಕು. ಆದರೆ ಹಾಗೆಲ್ಲ ಆಗುವುದಿಲ್ಲ. ನಮ್ಮ ಊರುಗೋಲು ತಡಕಾಡಿದಂತೆ ನಾವೂ ತಡಕಾಡುತ್ತಲೇ ಇರುತ್ತೇವೆ. ಆದರೆ ಕೊನೆಗೂ ಸ್ಪರ್ಧಾತ್ಮಕ ಪರೀಕ್ಷೆಗೆ ಕೂರಬೇಕು ಎಂದುಕೊಂಡಾಗ ಸ್ನೇಹಿತರೆಲ್ಲ ಬೆಂಬಲಿಸಿದರು ಎನ್ನುವುದು ಸಿದ್ದೇಶ್ ಅವರ ಮಾತು.

ಬದುಕಿನ ಸಿರಿದೇವಿ

ಮೊಬೈಲ್ ಕರೆಯೊಂದಿಗೆ ಆರಂಭವಾದ ಬಾಂಧವ್ಯ ಬಾಳ ಸಂಗಾತಿಯನ್ನು ದೊರಕಿಸಿಕೊಟ್ಟಿತು. ಶ್ರೀದೇವಿ ಅವರ ಸಂಯಮ, ಬದುಕಿಗೆ ಶಿಸ್ತು ಬೇಕು ಎಂಬ ಸಿದ್ದೇಶ ಅವರ ನಂಬಿಕೆ ಇಬ್ಬರ ಬದುಕನ್ನೂ ಹಸನುಗೊಳಿಸಿತು. ಶ್ರೀದೇವಿ ಅವರೂ ಮೂರಂಕಿಯ ಸಂಬಳ ಪಡೆಯುತ್ತಿದ್ದಾಗ ಪರಿಚಯವಾಗಿದ್ದು, ಮದುವೆಯಾದಾಗ ನಾಲ್ಕಂಕಿ ಸಂಬಳಕ್ಕೆ ಬಂದಿದ್ದರು. ತಮಗಿಂತಲೂ ತಮ್ಮ ಸಂಗಾತಿಗೆ ಹೆಚ್ಚು ಸಂಬಳ ಎಂದು ಗೊತ್ತಾದಾಗ ಸಂಭ್ರಮಿಸಿದ್ದೂ ಸಿದ್ದೇಶ್ ಅವರೇ. 13ನೇ ಪುಟಕ್ಕೆ...

ಜಲಮೂಲ ಸಂರಕ್ಷಣೆ ಮಹಿಳೆಯರ ಕಾಯಕ

ಆರೋಹಣ ಗ್ರಾಮೀಣಾಭಿವೃದ್ಧಿ ಸಂಸ್ಥೆಯನ್ನು ಮಹಿಳೆಯರೇ ಕಟ್ಟಿ ಮುನ್ನಡೆಸುತ್ತಿದ್ದಾರೆ. ಇದು ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕಿನ ಊರುಕುಂಟೆ ಮಿಟ್ಟೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಳ್ಳಿಗಳನ್ನು ಆಯ್ಕೆ ಮಾಡಿಕೊಂಡು ನೆಸಿ ಹೋಗುವ ಹಂತದಲ್ಲಿರುವ ಕೆರೆ, ಕಟ್ಟೆ, ಕಾಲುವೆಗಳನ್ನು ಪುನಶ್ಚೇತನಗೊಳಿಸುತ್ತಿದೆ.

ಪಿಚ್ಚಗುಂಟ್ಲಹಳ್ಳಿ ಹೊಸಕೆರೆಯ ನೋಟ

• ಕೆ.ಓಂಕಾರ ಮೂರ್ತಿ

ರಾಜ್ಯದಲ್ಲಿ ಒಂದೂ ನದಿ ಮೂಲ ಇಲ್ಲದ ಜಿಲ್ಲೆ ಕೋಲಾರ. ಇಲ್ಲಿನ ಶ್ರಮಜೀವಿ ರೈತರು ಮಳೆ, ಕೆರೆ, ಕೊಳವೆಬಾವಿ ನೀರನ್ನು ನಂಬಿಕೊಂಡೇ ಕೃಷಿಯಲ್ಲಿ ತೊಡಗಿಸಿಕೊಂಡಿದ್ದಾರೆ. ಬರಪೀಡಿತ, ಬಯಲುಸೀಮೆಯ ಈ ಜಿಲ್ಲೆಯಲ್ಲಿ ಒಂದು ಕಾಲದಲ್ಲಿ ನಾಲ್ಕೂವರೆ ಸಾವಿರಕ್ಕೂ ಅಧಿಕ ಕೆರೆಗಳಿದ್ದವು. ಕಾಲಾಂತರದಲ್ಲಿ ಈ ಸಂಖ್ಯೆ ತಗ್ಗುತ್ತಾ ಬರುತ್ತಿದ್ದು, ಇದೀಗ ಎರಡೂವರೆ ಸಾವಿರಕ್ಕೆ ಬಂದು ನಿಂತಿದೆ. ಇದಕ್ಕೆ ಕಾರಣ ಜೀವನಾಡಿಗಳಾಗಿರುವ ಕೆರೆಗಳತ್ತ ನಿರ್ಲಕ್ಷ್ಯ ಧೋರಣೆ, ಜೊತೆಗೆ ಬಲಾಢ್ಯರ ಒತ್ತುವರಿ. ಇದರಿಂದ ಜಿಲ್ಲೆಯ ಜನರು ಜಮೀನು ಪಾಳು ಬಿಟ್ಟು ಕೂಲಿ ಹುಡುಕಿಕೊಂಡು ನಿತ್ಯ ಬೆಂಗಳೂರಿಗೆ ಹೋಗಿಬರಬೇಕು.

ಕೆರೆಯೊಂದು ರೈತರ ಬದುಕನ್ನು ಮುನ್ನಡೆಸುತ್ತದೆ. ಜೀವರಾಶಿಗಳ ಹೊಟ್ಟೆ ತುಂಬಿಸುತ್ತದೆ. ಮರಗಿಡಗಳಿಗೆ ಉಸಿರು ತುಂಬುತ್ತದೆ. ಅದರಲ್ಲೂ ಕೋಲಾರ ಜಿಲ್ಲೆಯ ಜನರಿಗೆ ಕೆರೆಗಳೇ ದೇವರು, ಕೆರೆಗಳೇ ಅನ್ನದಾತ!

ಇಂಥ ಜಿಲ್ಲೆಯಲ್ಲಿ ಒಂದಿಷ್ಟು ಹಳ್ಳಿಗಳನ್ನು ಆಯ್ಕೆ ಮಾಡಿಕೊಂಡು ಕೆರೆಗಳ ಉಳಿವಿಗಾಗಿ, ಅವುಗಳ ಪುನಶ್ಚೇತನಕ್ಕಾಗಿ ಟೊಂಕಕಟ್ಟಿ ನಿಂತ ಸ್ವಯಂ ಸೇವಾ ಸಂಸ್ಥೆಗಳಲ್ಲಿ ‘ಆರೋಹಣ ಗ್ರಾಮೀಣಾಭಿವೃದ್ಧಿ ಸಂಸ್ಥೆ’ಯೂ ಒಂದು. ಗಾಂಧೀಜಿ ಕಂಡ ಗ್ರಾಮ ಸ್ವರಾಜ್ ಕನಸು, ಹಳ್ಳಿ ಅಭಿವೃದ್ಧಿಯಾದರೆ ದೇಶದ ಅಭಿವೃದ್ಧಿ, ಕೆರೆಗಳಿಂದಲೇ ನಾಡು ಎಂಬ ಮಾತಿನಲ್ಲಿ ನಂಬಿಕೆ ಇಟ್ಟು ಈ ಸಂಸ್ಥೆ ಕೆಲಸ ಮಾಡುತ್ತಿದೆ.

2020ರ ನಂತರವಷ್ಟೇ ಕೋಲಾರ ಜಿಲ್ಲೆಯ ಕೆರೆಗಳು ಭರ್ತಿಯಾಗಿದ್ದು. ಕೆ.ಸಿ.ವ್ಯಾಲಿ ಯೋಜನೆ ಕೂಡ ಇದಕ್ಕೊಂದು ಕಾರಣ. ಇದಕ್ಕೂ ಮೊದಲು ಮಳೆ ಇಲ್ಲದೆ ನೂರಾರು ಕೆರೆಗಳು ಬತ್ತಿ ಹೋಗಿದ್ದವು. ಹೀಗಾಗಿ, ಕೆರೆ ಅಂಗಳದಲ್ಲೇ ಕೊಳವೆಬಾವಿ ಕೊರೆಯಲಾಯಿತು. 1,500 ಅಡಿ ಕೊರೆದರೂ ನೀರು ಸಿಗುತ್ತಿರಲಿಲ್ಲ. ನೀರಿಗಾಗಿ ಜಿಲ್ಲೆಯ ಜನ ಪರದಾಡಿದ್ದು ಅಷ್ಟಿಷ್ಟಲ್ಲ. ನೀರು ಹುಡುಕಿಕೊಂಡು ಕುರಿ ಕಾಯುವವರು ಏಳೆಂಟು ಕಿಲೋಮೀಟರ್ ಹೋಗಬೇಕಿತ್ತು. ಶುದ್ಧ ಕುಡಿಯುವ ನೀರು ಈಗಲೂ ಮರೀಚಿಕೆಯಾಗಿದೆ.

ಕೆರೆಗಳತ್ತ ನೆಟ್ಟ ದೃಷ್ಟಿ

ಈ ಹಂತದಲ್ಲಿ ಕೆರೆಗಳು ಹೂಳು ತುಂಬಿಕೊಂಡು, ಕಳೆ ಬೆಳೆದು ಪಾಳುಬಿದ್ದವು. ಆಗ ಆರೋಹಣ ಸಂಸ್ಥೆಯ ಸದಸ್ಯರ ಕಣ್ಣು ಕೆರೆಗಳತ್ತ ನೆಟ್ಟಿತು. ಮುಳಬಾಗಿಲು ತಾಲ್ಲೂಕಿನ ಊರುಕುಂಟೆ ಮಿಟ್ಟೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಹಳ್ಳಿಗಳಲ್ಲಿ ಕೆರೆ ಅಭಿವೃದ್ಧಿಗೆ ಮುಂದಾದರು. ಇಲ್ಲಿನ ಇಪ್ಪತ್ತಾರು ಕೆರೆಗಳ ಸ್ಥಿತಿಗತಿಯನ್ನು ಪಟ್ಟಿ ಮಾಡಿಕೊಂಡು ಕೆಲಸ ಶುರು ಮಾಡಿದರು. ಜೊತೆಗೆ ಬಾವಿಗಳು, ಕಲ್ಯಾಣಿಗಳ ಪುನರುಜ್ಜೀವನಕ್ಕೆ ಮುಂದಾದರು. ಹದಿನಾಲ್ಕು ಕೆರೆ, ನಾಲ್ಕು ಕಲ್ಯಾಣಿ, ಆರು ಬಾವಿ ಹಾಗೂ ಹತ್ತಾರು ಕಾಲುವೆಗಳ ಹೂಳನ್ನು ತೆಗೆದಿದ್ದಾರೆ. ಹತ್ತು ಮನೆಗಳು ಹಾಗೂ ನಾಲ್ಕು ಶಾಲೆಗಳಲ್ಲಿ ಮಳೆ ನೀರು ಸಂಗ್ರಹಕ್ಕೆ ವ್ಯವಸ್ಥೆ ಮಾಡಿದ್ದಾರೆ. ಮಳೆ ನೀರು ಹರಿಯುವ ಕಾಲುವೆಗಳನ್ನು ಸ್ವಚ್ಛಗೊಳಿಸಿದ್ದಾರೆ. ಕೆರೆಗಳಿಂದ ತೆಗೆದ 48 ಸಾವಿರ ಟ್ರ್ಯಾಕ್ಟರ್ ಲೋಡ್ ಮಣ್ಣನ್ನು 400ಕ್ಕೂ ಅಧಿಕ ರೈತರು ಕೃಷಿ ಜಮೀನಿಗೆ ಬಳಸಿಕೊಂಡಿದ್ದಾರೆ. ಇದರಿಂದ ಉತ್ತಮ ಬೆಳೆಯನ್ನು ಕಂಡಿದ್ದಾರೆ. ಕೆರೆಯಲ್ಲಿ ಮೀನುಗಾರಿಕೆಗಾಗಿ ಟೆಂಡರ್ ನೀಡಿದ್ದು, ಗ್ರಾಮ ಪಂಚಾಯಿತಿಗೆ ಆದಾಯ ಬರುತ್ತಿದೆ.

ಗ್ರಾಮದಲ್ಲಿ ಈ ಎನ್‌ಜಿಒ ಕೈಗೆತ್ತಿಕೊಂಡಿದ್ದ ಕಾಲುವೆ ಹೂಳೆತ್ತುವ ಕಾಮಗಾರಿಯನ್ನು ಮಹಿಳೆಯರ ಕೈಯಲ್ಲೇ ಮಾಡಿಸಿರುವುದು ವಿಶೇಷ. ಈ ಕೆಲಸಕ್ಕೆ ಆಗ ಸಂಸ್ಥೆಯಿಂದ ನಿತ್ಯ ₹450 ಕೂಲಿ ಹಾಗೂ ಊಟ ಕೊಡಲಾಗಿತ್ತು. ಈಗ ₹ 500ಕ್ಕೆ ಏರಿಸಿದ್ದಾರೆ. ಕೂಲಿಯಿಂದ ಬರುವ ಹಣದಿಂದ ಹಲವು ಮಹಿಳೆಯರು ಸ್ವಾವಲಂಬಿಗಳಾಗಿದ್ದಾರೆ. ಕೆರೆ ಹೂಳೆತ್ತಲು ಮಾತ್ರ ಜೆಸಿಬಿ ಬಳಸಿಕೊಳ್ಳುತ್ತಾರೆ. ಈ ಸಂಸ್ಥೆಯಿಂದ ಈಗಲೂ ಹೂಳು ತೆಗೆದು ಕಾಲುವೆ ವಿಸ್ತರಿಸುವ ಕೆಲಸಕ್ಕೆ ಮಹಿಳಾ ಕಾರ್ಮಿಕರಿಗೆ ಆದ್ಯತೆ ನೀಡಲಾಗುತ್ತಿದೆ.

‘ಅಭಿವೃದ್ಧಿ ಕೆಲಸ ಮಾಡಲು ದಾನಿಗಳು ಬೇಕಾಗುತ್ತದೆ. ಕಂಪನಿಗಳನ್ನು ಹುಡುಕಿ, ಕಾಡಿಬೇಡಿ ಸಿಎಸ್‌ಆರ್ ಅನುದಾನ ತಂದು ಕೆಲಸ ಮಾಡಿದ್ದೇವೆ. ಗ್ರಾಮ ಪಂಚಾಯಿತಿಯಿಂದ ಅನುಮತಿ ಪಡೆದು ಜೆಸಿಬಿ ಬಳಸಿ ಹೂಳೆತ್ತುವ ಕೆಲಸ ಮಾಡಿದ್ದೇವೆ. ಮುಂದಿನ ಪೀಳಿಗೆಗೆ ಕೆರೆಗಳನ್ನು ಉಳಿಸುವುದು ನಮ್ಮ ಉದ್ದೇಶ. ಸ್ಥಳೀಯ ಸಂಸ್ಥೆಗಳು ಹಾಗೂ ಗ್ರಾಮಸ್ಥರು ಪೂರಕವಾಗಿ ಸ್ಪಂದಿಸಿದರು’ ಎಂದು ಸಂಸ್ಥೆಯ ಸಂಸ್ಥಾಪಕ ಕಾರ್ಯದರ್ಶಿ ಎಸ್.ಆಶಾ ಹೇಳುತ್ತಾರೆ.

ಪಿಚ್ಚಗುಂಟ್ಲಹಳ್ಳಿಯ ಹೊಸಕೆರೆ ಸುತ್ತಿನ ಭಾಗದಲ್ಲಿ ಹಿಂದೆ ಕೆಲವೇ ರೈತರು ಭತ್ತ ಬೆಳೆಯುತ್ತಿದ್ದರು. ಕೆರೆ ಪುನಶ್ಚೇತನದ ಬಳಿಕ 58 ರೈತರು ವರ್ಷಕ್ಕೆ ಎರಡು ಬೆಳೆ ಬೆಳೆಯುತ್ತಿದ್ದಾರೆ. ಪ್ರತಿ ಮನೆಯಲ್ಲಿ ಮೂರು ವರ್ಷಕ್ಕೆ ಆಗುವಷ್ಟು ಭತ್ತ ಸಂಗ್ರಹಿಸಿ ಉಳಿದಿದ್ದನ್ನು ಮಾರಾಟ ಮಾಡಿದ್ದಾರೆ. ಇನ್ನು ಮೂರು ವರ್ಷ ಬರ ಬಂದರೂ ಅವರಿಗೆ ಚಿಂತೆ ಇಲ್ಲ ಎನ್ನುವುದನ್ನು ಹೇಳಲು ಆಶಾ ಮರೆಯಲಿಲ್ಲ.

ತಮ್ಮ ತಮ್ಮ ಮನೆ ಮುಂದೆ ಎರಡೆರಡು ಹಣ್ಣಿನ ಗಿಡ ನೆಟ್ಟು ಬೆಳೆಸಲು ಮಹಿಳೆಯರಿಗೆ ಹೇಳಿದ್ದೇವೆ. ಊರುಕುಂಟೆ ಮಿಟ್ಟೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ 1,225 ಮನೆಗಳಿದ್ದು, ಇಲ್ಲಿ ಈ ಕೆಲಸ ನಡೆಯುತ್ತಿದೆ. ಮೂರು ಕೆರೆ ಅಂಗಳದಲ್ಲಿ ಪಕ್ಷಿಗಳಿಗೆ ನೆರವಾಗುವ ಗಿಡ ನೆಟ್ಟು ಬೆಳೆಸುತ್ತಿದ್ದೇವೆ. ಕೆರೆಗಳ ಹೂಳು ತೆಗೆದಿದ್ದರಿಂದ ಅಂತರ್ಜಲ ಮಟ್ಟವೂ ಹೆಚ್ಚಾಗಿದೆ. ಕೃಷಿಯಿಂದ ದೂರ ಉಳಿದಿದ್ದ ರೈತರು ಮತ್ತೆ ಕೃಷಿ ಚಟುವಟಿಕೆಗಳಲ್ಲಿ ತೊಡಗಿದ್ದಾರೆ. ಜಾನುವಾರುಗಳಿಗೆ ಹಸಿರು ಮೇವು ಸಿಗುತ್ತಿದೆ. ಕುಡಿಯುವ ನೀರು ಕೂಡ ಸಿಗುತ್ತಿದೆ. ದೊಡ್ಡ ದೊಡ್ಡ ರೈತರು ವ್ಯವಸಾಯದಲ್ಲಿ ತೊಡಗಿದಾಗ ಹಳ್ಳಿಯ ಜನರಿಗೆ ಕೆಲಸವೂ ಸಿಕ್ಕಿತು. ಬೆಂಗಳೂರಿಗೆ ಕೂಲಿಗೆ ಹೋಗುವುದೂ ತಪ್ಪಿತು ಎಂದು ಸಂಸ್ಥೆ ಹೇಳುತ್ತದೆ.

ಮುಳಬಾಗಿಲು ನಗರಕ್ಕೆ ಹೋದರೆ ಕುಡಿಯಲು ಒಂದು ಲೋಟ ನೀರು ಕೂಡ ಸಿಗುವುದಿಲ್ಲ. ದುಡ್ಡು ಕೊಟ್ಟು ನೀರಿನ ಬಾಟಲಿ ಖರೀದಿಸಬೇಕು. ಹೀಗಾಗಿ, ನೀರಿನ ರಕ್ಷಣೆ ಅತ್ಯಗತ್ಯ. ಪಂಚಾಯಿತಿಗಳಲ್ಲಿ ನರೇಗಾದಲ್ಲಿ ಕೆಲಸ ಮಾಡಿಸಲು ಅವಕಾಶವಿದೆ. ಇದನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬೇಕಿದೆ ಎಂದು ಆಶಾ ಹೇಳುತ್ತಾರೆ.

ಇಂಥ ಕೆಲಸಗಳ ಮೂಲಕ ಆರೋಹಣ ಸಂಸ್ಥೆ ಮಾದರಿಯಾಗಿದೆ. ಕೋಲಾರ ಭಾಗದಲ್ಲಿ ಕೆರೆಗಳ ಬಗ್ಗೆ ಜನರಿಗೆ ಅಪಾರ ಪ್ರೀತಿ. ಮೊದಲೇ ಹೇಳಿದಂತೆ ಕೆರೆಗಳು ಬದುಕು ಕಟ್ಟಿಕೊಟ್ಟಿವೆ. ಈ ಕೆರೆಗಳ ಮೇಲೆ ಜನಪದರು ಹಾಡು ಕಟ್ಟಿದ್ದು, ಜನ ಈಗಲೂ ಅವುಗಳನ್ನು ಗುನುಗುತ್ತಾರೆ. ರಾಜ್ಯದ ವಿವಿಧೆಡೆ ಜಲಾಶಯಗಳು ತುಂಬಿದಾಗ ಬಾಗಿನ ಅರ್ಪಿಸಲಾಗುತ್ತದೆ. 12ನೇ ಪುಟಕ್ಕೆ...

‘ಕೆರೆಗಳು ಹಳ್ಳಿಗಳ ಜೀವನಾಡಿ’

ನನ್ನ ತಾಯಿ ಮನೆ ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ. ಅಲ್ಲಿನ ಮಳೆ, ನದಿ, ತೊರೆ, ಹಸಿರು ನೋಡುತ್ತಾ ಬೆಳೆದಿದ್ದ ನನ್ನನ್ನು ಕೋಲಾರ ಜಿಲ್ಲೆಗೆ ಮದುವೆ ಮಾಡಿಕೊಟ್ಟರು. ಈ ಬಯಲುಸೀಮೆ ಜಿಲ್ಲೆಯಲ್ಲಿ ನೋಡಿದರೆ ನೀರೇ ಇಲ್ಲ. ಕೆರೆಗಳ ಜಿಲ್ಲೆ ಎನಿಸಿದರೂ ಮಳೆ ಇಲ್ಲದೆ ಬತ್ತಿ ಹೋಗಿದ್ದವು. ಈ ಪರಿಸ್ಥಿತಿ ನೋಡಿ ಸಂಕಟವಾಯಿತು. ಇರುವ ನೀರಿನ ಮೂಲಗಳನ್ನು ರಕ್ಷಣೆ ಮಾಡಬೇಕೆನಿಸಿತು. ಆ ನಂತರ ಸ್ವಯಂ ಸೇವಾ ಸಂಸ್ಥೆ ಕಟ್ಟಿ ನೀರು, ಮಣ್ಣು, ಹಸಿರೀಕರಣ ಕೆಲಸದಲ್ಲಿ ತೊಡಗಿದೆ.

ಕೆರೆಗಳು ಹಳ್ಳಿಗಳ ಜೀವನಾಡಿ. ಒಂದು ಕೆರೆ ಅಭಿವೃದ್ಧಿಯಾದರೆ ಇಡೀ ಹಳ್ಳಿಯೇ ಅಭಿವೃದ್ಧಿಯಾದಂತೆ. ಹೂಳು ತೆಗೆದು ಒಂದು ಕೆರೆ ಪುನಶ್ಚೇತನ ಮಾಡಿದರೆ ನೀರು ಹಿಡಿದಿಡುವ ಸಾಮರ್ಥ್ಯ ಹೆಚ್ಚಾಗುತ್ತದೆ. ಅಂತರ್ಜಲ ಮಟ್ಟ ಹೆಚ್ಚುತ್ತದೆ. ಫಲವತ್ತಾದ ಮಣ್ಣು ಸಿಗುತ್ತದೆ. ಸುತ್ತಲಿನ ಪ್ರದೇಶದ ಕೊಳವೆಬಾವಿಗಳಲ್ಲಿ ನೀರು ಹೆಚ್ಚಾಗುತ್ತದೆ. ಮೀನುಗಾರಿಕೆ ಮಾಡಬಹುದು. ಜೀವ ವೈವಿಧ್ಯಕ್ಕೆ ನೆರವಾಗುತ್ತದೆ.

ನಾವು ವಿವಿಧ ಕಂಪನಿಗಳು, ರೋಟರಿ ಕ್ಲಬ್‌ಗಳ ಸಿಎಸ್‌ಆರ್ ಅನುದಾನ ಪಡೆದು ಕೆಲಸ ಮಾಡುತ್ತಿದ್ದೇವೆ. ಲೆಕ್ಕಪತ್ರಗಳಲ್ಲಿ ಪಾರದರ್ಶಕತೆ ಕಾಯ್ದುಕೊಂಡಿದ್ದೇವೆ. ಹಲವರು ಅಡ್ಡಿ ಮಾಡಿದ್ದುಂಟು, ಅವ್ಯವಹಾರ ನಡೆಯಬಹುದೆಂದು ಅನುಮಾನ ಕೂಡ ವ್ಯಕ್ತಪಡಿಸುತ್ತಾರೆ. ಮಹಿಳೆಯರು ಏನು ಕೆಲಸ ಮಾಡುತ್ತಾರೆ ಎಂದು ಹೀಯಾಳಿಸಿ ಕಾಲೆಳೆದಿದ್ದೂ ಉಂಟು. ಆ ಎಲ್ಲಾ ಅಡೆತಡೆ, ಸವಾಲುಗಳೊಂದಿಗೆ ಕೆಲಸ ಮಾಡುತ್ತಿದ್ದೇವೆ.

ಆಶಾ, ಆರೋಹಣ ಗ್ರಾಮೀಣಾಭಿವೃದ್ಧಿ ಸಂಸ್ಥೆ ಸಂಸ್ಥಾಪಕ ಕಾರ್ಯದರ್ಶಿ

ಊರುಕುಂಟೆ ಮಿಟ್ಟೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕಾಲುವೆ ನಿರ್ಮಾಣ ನಿರತ ಮಹಿಳೆಯರು

ಪಿಚ್ಚಗುಂಟ್ಲಹಳ್ಳಿ ಗ್ರಾಮದಲ್ಲಿ ಪುನಶ್ಚೇತನ ಬಳಿಕ ಕಲ್ಯಾಣಿ ತುಂಬಿರುವುದು

ಮಹಿಳೆಯರೇ ಕಟ್ಟಿ ನಡೆಸುತ್ತಿರುವ ಎನ್‌ಜಿಒ

ಆರೋಹಣ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಆಡಳಿತ ಮಂಡಳಿಯಲ್ಲಿ ನಿರ್ದೇಶಕರಾಗಿ ಏಳು ಜನರಿದ್ದು, ಎಲ್ಲರೂ ಮಹಿಳೆಯರು ಎನ್ನುವುದು ವಿಶೇಷ. ಮಿಣಜೇನಹಳ್ಳಿಯ ಎಸ್.ಆಶಾ ಸಂಸ್ಥಾಪಕ ಕಾರ್ಯದರ್ಶಿ, ಕೋಲಾರ ತಾಲ್ಲೂಕಿನ ಶಿಲ್ಪಾ ಅಧ್ಯಕ್ಷೆ, ಮುಳಬಾಗಿಲು ನಗರದ ಶಾರದಾ ಖಜಾಂಚಿ. ಇನ್ನುಳಿದಂತೆ ಪ್ರಜ್ಞಾ, ಪ್ರೇಮಾವತಿ, ಪುಂಗೋಡಿ ಹಾಗೂ ಶೋಭಾ ನಿರ್ದೇಶಕರಾಗಿದ್ದಾರೆ.

‘ಇಂಡಿಯನ್ ವಾಟರ್ ವಾರಿಯರ್ಸ್’ ಪ್ರಶಸ್ತಿ ಸೇರಿದಂತೆ ಹಲವಾರು ಪ್ರಶಸ್ತಿಗಳು ಲಭಿಸಿವೆ.

ಮುಕ್ತಿವನದಲ್ಲಿರುವ ಶವದಹನ ಸ್ಥಳ

ಸ್ಮಶಾನದೊಳಗೆ ಉದ್ಯಾನವೋ..!

• ಕೆ.ಎಂ.ಸತೀಶ್ ಬೆಳ್ಳಕ್ಕಿ

ಗದಗ ಸಮೀಪವಿರುವ ಹುಲಕೋಟಿಯ ‘ಮುಕ್ತಿವನ’ದಲ್ಲಿ ಸುತ್ತಾಡುವಾಗ ಸುಂದರ ಉದ್ಯಾನದಲ್ಲಿದ್ದೇವೆಯೇ ಎನ್ನುವ ಭಾವನೆ ಮೂಡುತ್ತದೆ. ಮನಸ್ಸು ಉಲ್ಲಾಸಗೊಳ್ಳುತ್ತದೆ. ಒಂದಷ್ಟು ಹೊತ್ತು ಅಲ್ಲೇ ಕುಳಿತು ವಿಶ್ರಮಿಸಬೇಕು ಅನಿಸುತ್ತದೆ. ಆದರೆ, ಮುಕ್ತಿವನ ನಿಜಕ್ಕೂ ಉದ್ಯಾನವನವಲ್ಲ, ಅದು ಸ್ಮಶಾನ!

ಇಲ್ಲಿ ನೂರಾರು ಬೈಕು, ಕಾರುಗಳನ್ನು ನಿಲ್ಲಿಸಬಹುದಾದಷ್ಟು ದೊಡ್ಡ ಪಾರ್ಕಿಂಗ್ ಜಾಗವಿದೆ. ಬಲಕ್ಕೆ ತಿರುಗಿದರೆ ಮಸೀದಿ ಮಾದರಿಯ ಕಲ್ಲಿನ ಪ್ರತಿಕೃತಿ ಮತ್ತು ನಮಾಜ್ ಮಾಡಲು ದೊಡ್ಡದಾದ ಜಾಗವಿದೆ. ಅದರ ಎದುರಿಗೆ ಒಂದು ಬದಿಯಲ್ಲಿ ಖಾಲಿ ಜಾಗ. ಮತ್ತೊಂದು ಬದಿಯಲ್ಲಿ ಕುಳಿತುಕೊಳ್ಳಲು ಬೆಂಚುಗಳ ವ್ಯವಸ್ಥೆ ಮಾಡಲಾಗಿದೆ. ಹೂವು, ಹಣ್ಣಿನ ಗಿಡಗಳೂ ಇವೆ.

ಮುಕ್ತಿವನದಲ್ಲಿ ಸರ್ವಧರ್ಮದವರ ಶವಗಳನ್ನು ಹೂಳಲು, ಸುಡಲು ಅನುವು ಮಾಡಿಕೊಡಲಾಗಿದೆ. ಆದರೆ, ಗೋರಿಗಳ ನಿರ್ಮಾಣಕ್ಕೆ ಅವಕಾಶವಿಲ್ಲ. ಮುಸ್ಲಿಮರ ಶವಸಂಸ್ಕಾರಕ್ಕೆ ಪ್ರತ್ಯೇಕ ಜಾಗ ಮೀಸಲಿಡಲಾಗಿದೆ. ನಿಗದಿತ ಜಾಗ ಮುಗಿದ ನಂತರ ಮತ್ತೆ ಮೊದಲಿನ ಸ್ಥಳದಿಂದಲೇ ಶವ ಸಂಸ್ಕಾರಕ್ಕೆ ಅವಕಾಶ ಮಾಡಿಕೊಡಲಾಗುವುದು. ಅಂದರೆ, ಮೊದಲು ಶವ ಹೂತ ಸ್ಥಳವನ್ನು ಸ್ವಚ್ಛಗೊಳಿಸಲಾಗುವುದು.

ಇಷ್ಟೆಲ್ಲಾ ಸೌಲಭ್ಯ

ಅಚ್ಚುಕಟ್ಟಾದ ರಸ್ತೆ ಮತ್ತು ಚರಂಡಿ ವ್ಯವಸ್ಥೆ, ನೀರಿನ ಸೌಲಭ್ಯ, ಎಲ್ಲ ಕಡೆ ವಿದ್ಯುತ್‌ದೀಪ, ಸೋಲಾರ್‌ದೀಪ, ಶೌಚಾಲಯ, ಜನರೇಟರ್ ಸೌಲಭ್ಯ, ಹೂವಿನಗಿಡಗಳು, ಹಣ್ಣಿನಗಿಡಗಳು, ನೆರಳು ಕೊಡುವ ದೊಡ್ಡ ದೊಡ್ಡ ಮರಗಳು ಮನಸ್ಸಿಗೆ ಮುದ ನೀಡುತ್ತವೆ.

ಮುಕ್ತಿವನದೊಳಗಿನ ರಸ್ತೆಯಲ್ಲಿ ನಡೆಯುವಾಗ ಎಲ್ಲೂ ಕಸ ಕಾಣಿಸುವುದಿಲ್ಲ. ಹಾಗೆಯೇ ಸ್ವಲ್ಪ ಮುಂದಕ್ಕೆ ಹೋದರೆ ಶವದಹನ ಮಾಡುವ ಜಾಗ ಕಾಣಿಸುತ್ತದೆ. ಅದು ಭಿನ್ನವಾಗಿದೆ. ಅದು ದೂರಕ್ಕೆ ಬಯಲು ರಂಗಮಂದಿರ ಅಥವಾ ಪುಟ್ಟ ಕ್ರೀಡಾಂಗಣದಂತೆ ಕಾಣಿಸುತ್ತದೆ.

ಶವದಹನ ಸ್ಥಳವನ್ನು ಇಂಗ್ಲಿಷ್ ವರ್ಣಮಾಲೆಯ ‘O’ ಆಕಾರದಲ್ಲಿ ವಿನ್ಯಾಸಗೊಳಿಸಲಾಗಿದೆ. ಆಕರ್ಷಕ ವಿನ್ಯಾಸದ ದೊಡ್ಡ ವೇದಿಕೆ, ಅದರ ಮಧ್ಯಭಾಗದಲ್ಲಿ ಕಬ್ಬಿಣದಿಂದ ತಯಾರಿಸಿದ ದೊಡ್ಡ ತೊಟ್ಟಿಲು ಮಾದರಿಯ ಎರಡು ಶವದಹನ ಯಂತ್ರ ಇರಿಸಲಾಗಿದೆ. ಶವದಹನ ಮಾಡುವ ವೇಳೆ ಅಂತ್ಯಸಂಸ್ಕಾರಕ್ಕೆ ಬಂದ ಜನರು ಕುಳಿತುಕೊಳ್ಳಲು ಬೆಂಚಿನ ವ್ಯವಸ್ಥೆ ಮಾಡಲಾಗಿದೆ. ಇಲ್ಲಿನ ಶವದಹನ ಸ್ಥಳ ನೋಡುವಾಗ ಅದು ವಾಸ್ತುಶಿಲ್ಪದ ಸೂತ್ರದೊಳಗೆ ಅದ್ದಿ ತೆಗೆದಿಟ್ಟ ಕಲಾಕೃತಿಯಂತೆ ಗೋಚರಿಸುತ್ತದೆ.

ಈ ಜಾಗದಲ್ಲಿ ಏಕಕಾಲಕ್ಕೆ ಎರಡು ಶವದಹನ ಮಾಡುವ ಸೌಲಭ್ಯ ಇದೆ. ಶವ ಸುಡಲು ಶೇಂಗಾ ಲಡ್ಡು (ಶೇಂಗಾ ಸಿಪ್ಪೆಯಿಂದ ತಯಾರಿಸಿದ ಗಟ್ಟಿಯಾದ ಉಂಡೆ) ಬಳಸಲಾಗುತ್ತದೆ.

ಶವ ಹೂಳಲು ಮೀಸಲಿಟ್ಟ ಜಾಗದಲ್ಲೂ ಕೂಡ ಅಚ್ಚುಕಟ್ಟುತನವಿದೆ. ಹಸಿರು ಗಿಡಮರಗಳು, ಜೋಡಿಸಿಟ್ಟ ಬೆಂಚುಗಳ ವಿನ್ಯಾಸ ಗಮನ ಸೆಳೆಯುತ್ತವೆ. ಹಸುಗೂಸುಗಳ ಶವಸಂಸ್ಕಾರಕ್ಕೆ ಪ್ರತ್ಯೇಕ ಜಾಗ ಮೀಸಲಿಡಲಾಗಿದೆ.

‘ಹುಲಕೋಟಿಯಲ್ಲಿ ಸರ್ವಧರ್ಮ ಸಮಾನತೆ ಕಾಣಬಹುದು. ಶವ ಹೂಳುವ ಸಂದರ್ಭದಲ್ಲಿ ಜಾತಿ ನೋಡುವುದಿಲ್ಲ’ ಎನ್ನುತ್ತಾರೆ ಸಿಬ್ಬಂದಿ ಕಿರಣ್.

ಹುಲಕೋಟಿಗೆ ಸಾಕಷ್ಟು ಅನುಕೂಲ ಮಾಡಿಕೊಟ್ಟಿರುವ ಕೆ.ಎಚ್.ಪಾಟೀಲರ ನೆನಪು ಶಾಶ್ವತವಾಗಿ ಇರಬೇಕು ಎಂಬ ಗ್ರಾಮಸ್ಥರ ಒತ್ತಾಯದ ಮೇರೆಗೆ ಮುಕ್ತಿವನದಲ್ಲಿ ಅವರ ಸಮಾಧಿ ಕಟ್ಟಲಾಗಿದೆ. ಉಳಿದಂತೆ, ಬೇರೆ ಯಾರೊಬ್ಬರ ಸಮಾಧಿಯೂ ಅಲ್ಲಿಲ್ಲ. ಗ್ರಾಮಸಭೆಯ ನಿರ್ಣಯದಂತೆ ಅಲ್ಲಿ ಹೂಳುವ ಯಾವುದೇ ಶವಕ್ಕೆ ಗೋರಿ ಕಟ್ಟುವಂತಿಲ್ಲ.

ಮುಕ್ತಿವನದಲ್ಲಿ ಜಾತಿ ವ್ಯವಸ್ಥೆ ಇಲ್ಲ. ಶವ ಹೂಳುವವರು ಸಿಬ್ಬಂದಿ ಹೇಳಿದ ಜಾಗದಲ್ಲೇ ಗುಂಡಿ ತೆಗೆಯಬೇಕು. ಇಲ್ಲೇ ಕೊಡಿ; ಅಲ್ಲೇ ಕೊಡಿ ಅಂತ ಯಾರೂ ಕೇಳುವಂತಿಲ್ಲ. ಒಂದು ಶವಸಂಸ್ಕಾರಕ್ಕೆ ₹100 ಶುಲ್ಕವನ್ನು ಪಂಚಾಯಿತಿಗೆ ಪಾವತಿಸಬೇಕು. ಉಳಿದಂತೆ ಶವದಹನಕ್ಕೆ ತಗಲುವ ಕಟ್ಟಿಗೆ, ಶೇಂಗಾ ಲಡ್ಡು ಹಾಗೂ ಶವಸಂಸ್ಕಾರಕ್ಕೆ ಬೇಕಿರುವ ಸಾಮಾನುಗಳಿಗೆ ಪ್ರತ್ಯೇಕ ಶುಲ್ಕ ಭರಿಸಬೇಕು. ಅನಾಥ ಶವಗಳು, ಹಸುಗೂಸುಗಳ ಅಂತ್ಯಸಂಸ್ಕಾರವನ್ನು ಉಚಿತವಾಗಿ ಮಾಡಲಾಗುತ್ತದೆ.

ಹನ್ನೊಂದು ಎಕರೆಯಲ್ಲಿ...

ಮುಕ್ತಿವನ ಹನ್ನೊಂದು ಎಕರೆಯಲ್ಲಿದೆ. ಅದರಲ್ಲಿ ಮೂರು ಎಕರೆ ಮುಸ್ಲಿಮರಿಗೆ ಮೀಸಲಿಡಲಾಗಿದೆ. ಉಳಿದ ಒಂಬತ್ತು ಎಕರೆಯಲ್ಲಿ ಒಂದು ಎಕರೆಯನ್ನು ಹಿಂದೂಗಳ ಅಂತ್ಯಸಂಸ್ಕಾರಕ್ಕೆ ಮೀಸಲಿಡಲಾಗಿದೆ. ಎಂಟು ಎಕರೆಯಲ್ಲಿ ಉದ್ಯಾನ ನಿರ್ಮಿಸಲಾಗಿದೆ. ಇಲ್ಲಿ ಸೀತಾಫಲ, ಪೇರಲ, ಚಿಕ್ಕು, ನುಗ್ಗೆಕಾಯಿ, ರಾಮಫಲ ಸೇರಿದಂತೆ ವಿವಿಧ ಹಣ್ಣು, ತರಕಾರಿ ಗಿಡಗಳನ್ನು ಬೆಳೆಸಲಾಗಿದೆ. 12ನೇ ಪುಟಕ್ಕೆ...

ಅಚ್ಚುಕಟ್ಟಾದ ರಸ್ತೆ, ಚರಂಡಿ ವ್ಯವಸ್ಥೆ ಜತೆಗೆ ಹಸಿರು ಉದ್ಯಾನ

ಗುಜರಿ ಅಂಗಡಿಯಲ್ಲೊಂದು ಮ್ಯೂಸಿಯಂ!

ಮನೆಯೊಳಗಿನ ಎಷ್ಟೋ ಅಮೂಲ್ಯ ವಸ್ತುಗಳು ಕೆಲವೊಮ್ಮೆ ರದ್ದಿ ಸೇರುವ ಅನಿವಾರ್ಯತೆ ಎದುರಾಗುತ್ತದೆ. ಎಷ್ಟೋ ಉತ್ತಮ ಪುಸ್ತಕಗಳನ್ನು ವಿಧಿಯಿಲ್ಲದೆ ಗುಜರಿಗೆ ಹಾಕುತ್ತೇವೆ. ಬೆಲೆ ಕಟ್ಟಲಾಗದ ಅಂಥ ವಸ್ತುಗಳನ್ನೆಲ್ಲ ಎತ್ತಿಟ್ಟು ತಮ್ಮ ಗುಜರಿಯಂಗಡಿಯನ್ನೆ ಮ್ಯೂಸಿಯಂ, ಗ್ರಂಥಾಲಯವನ್ನಾಗಿ ಪರಿವರ್ತಿಸಿದ್ದಾರೆ ಮಂಗಳೂರಿನ ವ್ಯಾಪಾರಿ ಖಲೀಲ್. ಜತೆಗೆ ಬಡ ಮಕ್ಕಳಿಗೆ ಕೈಲಾದ ಸಹಾಯವನ್ನೂ ಮಾಡುತ್ತಿದ್ದಾರೆ...

• ಸುರೇಂದ್ರಪೈ

ಇದು ಮಂಗಳೂರಿನ ಕೊಟ್ಟಾರ ಮಾಲೇಮಾರ್‌ನಲ್ಲಿರುವ ಗುಜರಿ ಅಂಗಡಿ. ಒಳ ಪ್ರವೇಶಿಸಿದರೆ ಮ್ಯೂಸಿಯಂಗೆ ಭೇಟಿ ಕೊಟ್ಟ ಅನುಭವವಾಗುತ್ತದೆ. ಅಲ್ಲಿ ಏನುಂಟು, ಏನಿಲ್ಲ!

ಈ ಗುಜರಿ ವಸ್ತುಸಂಗ್ರಹಾಲಯದಲ್ಲಿ ಶತಮಾನಗಳಷ್ಟು ಹಳೆಯದಾದ ನಾಣ್ಯಗಳು, ಭಾರತ ಹಾಗೂ ಪಾಶ್ಚಾತ್ಯ ದೇಶಗಳ ಅಪರೂಪದ ಹಳೆಯ ನೋಟುಗಳು, ಭಾರತ, ಯುಎಇ, ಯುಎಸ್‌ಎ, ಕತಾರ್, ಓಮನ್, ಬುಡಪೆಸ್ಟ್, ಕೆನಡಾ, ಹಾಂಗ್‌ಕಾಂಗ್, ಡಚ್ ದೇಶಗಳ ಹಳೆಯ ನೂರಾರು ಸ್ಟ್ಯಾಂಪ್‌ಗಳು ಇವೆ. ಐದಾರು ದಶಕದ ಹಿಂದಿನ ವಿವಿಧ ಕಂಪನಿಯ ಕೈಗಡಿಯಾರಗಳು, ಟೇಪ್ ರೆಕಾರ್ಡರ್‌ಗಳು, ಗ್ರಾಮಫೋನ್‌ಗಳು, ವಿಂಟೇಜ್ ದೂರವಾಣಿಗಳು, ಹಳೆಯ ಟೈಪ್‌ರೈಟರ್, ಗೋಡೆ ಗಡಿಯಾರಗಳು, ರೀಲ್ ಕ್ಯಾಮೆರಾಗಳು, ಹಳೆಯ ಹಿತ್ತಾಳೆ, ಕಂಚಿನ ಸಾಂಪ್ರದಾಯಿಕ ಗೃಹೋಪಯೋಗಿ ಪಾತ್ರೆಗಳು ಗಮನ ಸೆಳೆಯುತ್ತವೆ. ಒಡೆದ ಪಿಂಗಾಣಿ ಕಲಾಕೃತಿಗಳು, ಹಳೆಯ ಕಾಲದ ಮರದ ಆಟಿಕೆಗಳು, ಚೆನ್ನಮಣೆ, ಅನ್ನ ಬಸಿಯುವ ಮರದ ಪಾತ್ರ, ಕೈಲ್ (ಗೆರಟೆಯ ಸೌಟು), ಬಿದಿರಿನ ಬುಟ್ಟಿ, ಬೀಸಣಿಕೆ, ರೇಡಿಯೊಗಳು ಹಳೆಯ ನೆನಪನ್ನು ಮರುಕಳಿಸುತ್ತವೆ. ಇಸ್ತ್ರಿ ಪೆಟ್ಟಿಗೆ, ಬೈನಾಕ್ಯೂಲರ್, ವಿವಿಧ ಕಾಲಘಟ್ಟಗಳ ಮೊಬೈಲ್‌ಗಳು, ಸೈಕಲ್ ಸೇರಿದಂತೆ ಇನ್ನಿತರ ವಸ್ತುಗಳು ಇಲ್ಲಿವೆ. ಇದರ ಮಾಲೀಕ ಇಬ್ರಾಹಿಂ ಖಲೀಲ್ ತಮ್ಮ ಗುಜರಿ ಅಂಗಡಿಯ ಒಳಗಡೆಯೇ ಇವುಗಳಿಗೆ ಸ್ಥಳವನ್ನು ಮೀಸಲಿಟ್ಟು ಅಚ್ಚುಕಟ್ಟಾಗಿ ಜೋಡಿಸಿದ್ದಾರೆ.

ಇವರು ಬಡತನದ ಕಾರಣದಿಂದ ಶಾಲೆಗೆ ಹೋಗುವಾಗ ಹೊಸ ನೋಟ್‌ಬುಕ್‌ಗಳನ್ನು ಖರೀದಿಸಲು ಸಾಧ್ಯವಾಗುತ್ತಿರಲಿಲ್ಲ. ಓದಲು ಪುಸ್ತಕ ಸಹ ಇರುತ್ತಿರಲಿಲ್ಲ. ಹೀಗಾಗಿ ಮ್ಯೂಸಿಯಂನಲ್ಲೇ ಮಕ್ಕಳಿಗಾಗಿ ಪುಟ್ಟ ಗ್ರಂಥಾಲಯವನ್ನು ತೆರೆದಿಟ್ಟಿದ್ದಾರೆ.

ಖಲೀಲ್ 8 ನೇ ತರಗತಿವರೆಗೆ ಕಲಿತಿದ್ದಾರೆ. ಇವರ ತಂದೆಯವರು ಬಾಲಮಂಗಳ, ಚಂಪಕ, ಚಂದಮಾಮ ಹೀಗೆ ಹಲವಾರು ಮ್ಯಾಗಝೀನ್‌ಗಳನ್ನು ಓದುತ್ತಿದ್ದರು. ಅವರಿಂದ ಓದುವ ಹವ್ಯಾಸ ರೂಢಿಸಿಕೊಂಡು ಗುಜರಿಗೆ ಬರುವ ಪುಸ್ತಕ, ನೋಟ್‌ಬುಕ್, ಪೆನ್ನು, ರಬ್ಬರ್, ಕಂಪಾಸ ಬಾಕ್ಸ್ ಇತ್ಯಾದಿಗಳನ್ನು ಸಂಗ್ರಹಿಸಿ ಗ್ರಂಥಾಲಯದ ಮೂಲಕ ಸರ್ಕಾರಿ ಶಾಲೆ ಹಾಗೂ ಇತರ ಮಕ್ಕಳಿಗೆ ಉಚಿತವಾಗಿ ನೀಡುತ್ತಿದ್ದಾರೆ. ಸುತ್ತಮುತ್ತಲಿನ ಮಕ್ಕಳು ಬಿಡುವಿನ ವೇಳೆಯಲ್ಲಿ ಬಂದು ತಮ್ಮಿಷ್ಟದ ಪುಸ್ತಕವನ್ನು ಓದಲು ಕೊಂಡೊಯ್ಯುತ್ತಾರೆ. ಶಾಲೆಯ ಮಕ್ಕಳು ಇಲ್ಲಿಗೆ ಬಂದು ಹೋಗುತ್ತಾರೆ.

ಇಬ್ರಾಹಿಂ ಖಲೀಲ್ ಅವರು ಎರಡು ದಶಕಗಳ ಹಿಂದೆ ಸಣ್ಣದಾಗಿ ಗುಜರಿ ವ್ಯಾಪರ ಶುರು ಮಾಡಿದರು. ಆದರೆ ಎಂಟು ವರ್ಷಗಳ ಹಿಂದೆ ವಿಶಿಷ್ಟ ವಸ್ತುಸಂಗ್ರಹಾಲಯವಾಗಿ ರೂಪಿಸಿದರು. ಈ ವಸ್ತುಸಂಗ್ರಹಾಲಯವು ಅಪರೂಪದ ಕಲಾಕೃತಿಗಳ ಆಕರ್ಷಕ ಸಂಗ್ರಹದೊಂದಿಗೆ ಸಂದರ್ಶಕರ ಗಮನ ಸೆಳೆಯುತ್ತಿದೆ. ಇದೆಲ್ಲವೂ ಅವರ ವಿಶಿಷ್ಟ ಹವ್ಯಾಸ ಹಾಗೂ ಆಸಕ್ತಿಯಿಂದ ಸಾಧ್ಯವಾಗಿದೆ.

ಶಾಲಾ ಮಕ್ಕಳೊಂದಿಗೆ ಖಲೀಲ್

ಚಿತ್ರಗಳು: ಫಕ್ರುದ್ದೀನ್ ಎಚ್.

‘ಮೌಲ್ಯಯುತ ವಸ್ತುಗಳು ಬಂದಾಗ ಗುಜರಿ ಅಂಗಡಿ ಮಾಲೀಕರು ಅದನ್ನು ಮಾರಾಟ ಮಾಡುತ್ತಿದ್ದರು. ಆದರೆ ನಾನು ಅಂತಹವುಗಳನ್ನು ಮಾರುವ ಬದಲು ಸಂಗ್ರಹಿಸುವ ಆಲೋಚನೆ ಬಂತು. ಗುಜರಿಗೆ ಬರುತ್ತಿದ್ದ ಪೋಸ್ಟ್ ಕವರ್‌ನಿಂದ ದೇಶ ವಿದೇಶಗಳ ಅಂಚೆಚೀಟಿಗಳನ್ನು ಸಂಗ್ರಹಿಸಿದ್ದೇನೆ. ಇದನ್ನು ಜನರಿಗೆ ತೋರಿಸುವುದು ಖುಷಿ ಆಗುತ್ತದೆ. ತುಂಬಾ ಮಂದಿ ನೋಡಲು ಬರುತ್ತಾರೆ. ದೇವಸ್ಥಾನ, ದೈವಸ್ಥಾನದ ಆಟಿಡೊಂಜಿ ಕೂಟ ಮೊದಲಾದ ಕಾರ್ಯಕ್ರಮಗಳಿಗೆ ಅಗತ್ಯವಿದ್ದರೆ ಕೊಂಡೊಯ್ಯುತ್ತಾರೆ’ ಎಂದು ಖಲೀಲ್ ಹೇಳುತ್ತಾರೆ.

ಗುಜರಿಯೊಳಗಿನ ಗ್ರಂಥಾಲಯ

ಭವಿಷ್ಯದ ಪೀಳಿಗೆಗೆ ಅವುಗಳನ್ನು ಸಂರಕ್ಷಿಸುವ ದೃಢನಿಶ್ಚಯದಿಂದ ಅವರು ತಮ್ಮ ಅಂಗಡಿಯಿಂದ ಮಾತ್ರವಲ್ಲದೆ ಮನೆಗಳು ಮತ್ತು ಇತರ ಸ್ಕ್ರ್ಯಾಪ್ ವ್ಯಾಪಾರಿಗಳಿಂದಲೂ ವಸ್ತುಗಳನ್ನು ಸಂಗ್ರಹಿಸಲು ಪ್ರಾರಂಭಿಸಿದರು. ಜನರು ತಮ್ಮ ಮನೆಯಿಂದ ಕಸವೆಂದು ಗುಜರಿಗೆ ನೀಡಿದ ವಸ್ತುಗಳನ್ನೆ ಅಮೂಲ್ಯವಾದ ಸ್ಮರಣಿಕೆಯನ್ನಾಗಿ ಪರಿವರ್ತಿಸಿ ‘ಕಸದಿಂದ ರಸ’ ಮಾತನ್ನು ಸತ್ಯವನ್ನಾಗಿಸಿದರು.

‘ಈ ಅಂಗಡಿಯನ್ನು ನೋಡುವಾಗ ಗುಜರಿ ಅಂಗಡಿಯಂತೆ ಕಾಣುತ್ತಿಲ್ಲ. ನಮ್ಮ ಸ್ಮೃತಿ ಪಟಲದಲ್ಲಿರುವ ಬಾಲ್ಯದ ಹಲವು ವಸ್ತುಗಳನ್ನು ನಾವಿಲ್ಲಿ ನೋಡಬಹುದು. ಇದನ್ನೆಲ್ಲ ನೋಡುವಾಗ ನನಗೂ ಹಳೆಯ ವಸ್ತುಗಳನ್ನು ಜೋಡಿಸಬೇಕೆಂಬ ಮನಸ್ಸಾಗುತ್ತದೆ’ ಎನ್ನುತ್ತಾರೆ ಸ್ಥಳೀಯ ಜಯಂತ್ ಪೂಜಾರಿ.

ಖಲೀಲ್ ಪರಿಸರ ಪ್ರೇಮಿಯೂ ಹೌದು. ಪ್ಲಾಸ್ಟಿಕ್, ಪೇಪರ್, ರಬ್ಬರ ಇತ್ಯಾದಿಗಳನ್ನು ಸುಡುವುದನ್ನು ಸುತಾರಾಂ ಒಪ್ಪುವುದಿಲ್ಲ. ಹಾಗಾಗಿ ತ್ಯಾಜ್ಯ ಕಾಗದಗಳನ್ನು ಚೂರುಚೂರು ಮಾಡಲು, ಸೂಕ್ಷ್ಮ ದಾಖಲೆಗಳನ್ನು ದುರುಪಯೋಗಪಡಿಸಿಕೊಳ್ಳದಂತೆ ನೋಡಿಕೊಳ್ಳಲು ಮತ್ತು ಪರಿಣಾಮಕಾರಿ ಮರುಬಳಕೆಗಾಗಿ ತಾಮ್ರದಿಂದ ಕೇಬಲ್ ತಂತಿಗಳನ್ನು ಬೇರ್ಪಡಿಸಲು ಖಲೀಲ್ ಯಂತ್ರಗಳಲ್ಲಿ ಹೂಡಿಕೆ ಮಾಡಿದ್ದಾರೆ.

ಪದೇ ಪದೇ ಕಾಡುವ ಹಳೆಯ ನೆನಪುಗಳನ್ನು ಮೆಲುಕು ಹಾಕಲು ಸಂಗ್ರಹಿಸಿರುವ ಸಾಕಷ್ಟು ಪುರಾತನ ವಸ್ತುಗಳನ್ನು ಸುರಕ್ಷಿತವಾಗಿ ಮುಂದಿನ ತಲೆಮಾರಿಗೂ ಮುಟ್ಟಿಸಲು ಸಾಧ್ಯವಾಗುವಂತೆ ಪ್ರತ್ಯೇಕವಾದ ವಸ್ತುಸಂಗ್ರಹಾಲಯವನ್ನು ನಿರ್ಮಿಸುವ ಆಶಯವನ್ನು ಖಲೀಲ್ ಹೊಂದಿದ್ದಾರೆ.

ಖಲೀಲ್‌ನ ಸ್ಕ್ರ್ಯಾಪ್ ವಸ್ತುಸಂಗ್ರಹಾಲಯವು ಕೇವಲ ಹಳೆಯ ವಸ್ತುಗಳ ಸಂಗ್ರಹವಲ್ಲ; ಇದು ಇತಿಹಾಸವು ಜೀವಂತವಾಗಿರುವ, ಬದುಕಿನ ಹಳೆಯ ನೆನಪುಗಳನ್ನು ತಾಜಾಗೊಳಿಸುವ, ಅರಳಿಸುವ ಸ್ಥಳವಾಗಿದೆ. ಮಾಲೆಮಾರ್‌ಗೆ ಭೇಟಿ ನೀಡುವ ಯಾರಿಗಾದರೂ, ಇದು ನಿಸ್ಸಂದೇಹವಾಗಿ ನೋಡಲೇಬೇಕಾದ ತಾಣವಾಗಿದೆ.

ಮಕ್ಕಳಿಗೆ ಗುಜರಿಯೊಳಗಿನ ವಸ್ತುಗಳ ಕುರಿತು ತಿಳಿಸುತ್ತಿರುವ ಖಲೀಲ್

ಬೆಂಕಿಕಡ್ಡಿಯಲ್ಲಿ ಕಲೆಯ ಕಿಚ್ಚು

• ಸ್ವರೂಪ್ ಕೊಟ್ಟೂರು

ಬೆಂಕಿ ಅಂದರೆ ಭಯ ಯಾರಿಗಿಲ್ಲ ಹೇಳಿ? ಅದರಲ್ಲೂ ಮಕ್ಕಳ ಕೈಯಲ್ಲಿ ಬೆಂಕಿಕಡ್ಡಿಗಳನ್ನು ನೋಡಿದರಂತೂ ಪೋಷಕರಿಗೆ ದಿಗಿಲಾಗುವುದು ಖಚಿತ. ಹೀಗಾಗಿ ಮಕ್ಕಳಿಗೆ ಬೆಂಕಿಪೊಟ್ಟಣ, ಬೆಂಕಿಕಡ್ಡಿಗಳಿಂದ ದೂರ ಇರಲು ಹೆತ್ತವರು ಎಚ್ಚರಿಸುತ್ತಲೇ ಇರುತ್ತಾರೆ. ಅವುಗಳ ಹತ್ತಿರ ಸುಳಿಯದಂತೆ ಸದಾ ನಿಗಾ ಇಡುತ್ತಾರೆ. ಅಕಸ್ಮಾತ್ ಮಕ್ಕಳು ಬೆಂಕಿಕಡ್ಡಿಗಳನ್ನು ಆಟಿಕೆ ಮಾಡಿಕೊಂಡಾಗ, ಅದರಿಂದ ಬೆಂಕಿ ಹೊತ್ತಿಸಿದಾಗ ಸಾಮಾನ್ಯವಾಗಿ ಪೋಷಕರಿಂದ ಮಕ್ಕಳಿಗೆ ಬೈಗುಳ, ದಂಡನೆ ಶತಸಿದ್ಧ. ಆದರೆ ಕಲಾವಿದ ಜಯಸಿಂಹ ಜೋಶಿ ಅವರ ಬಾಲ್ಯದ ಅನುಭವ ಇದಕ್ಕಿಂತ ಭಿನ್ನ ಹಾಗೂ ಸ್ವಾರಸ್ಯಕರ. ತಂದೆ ನರಸಿಂಗ ಆಚಾರ್, ಇವರ ಕೈಗೆ ಖುದ್ದು ಬೆಂಕಿಕಡ್ಡಿಗಳನ್ನು ಕೊಟ್ಟು ಕಲೆಯ ಕಿಚ್ಚನ್ನು ಹೊತ್ತಿಸುತ್ತಿದ್ದರು! ಜಯಸಿಂಹ ಜೋಶಿ ಕಡ್ಡಿಗಳನ್ನು ಗೀರಿ ಬೆಂಕಿಯೊಂದಿಗೆ ಸರಸ ಆಡುವ ಬದಲು ಅವುಗಳನ್ನು ತಮ್ಮ ಕಲ್ಪನೆಯ ಅಭಿವ್ಯಕ್ತಿಯ ಸಾಧನವನ್ನಾಗಿ ಮಾಡಿಕೊಂಡಿದ್ದೇ ಇದಕ್ಕೆ ಕಾರಣ.

‘ನಾನಾಗ ಏಳನೇ ತರಗತಿ ಓದುತ್ತಿದ್ದೆ. ಅಂದು ಶಾಲೆಗೆ ರಜೆ ಇತ್ತು. ಪೌರೋಹಿತ್ಯ ಕೆಲಸಕ್ಕೆ ಹೊರಟ್ಟಿದ್ದ ಅಪ್ಪನೊಟ್ಟಿಗೆ ಹಟಕ್ಕೆ ಬಿದ್ದು ಹೊರಟು ನಿಂತೆ. ಅಪ್ಪನೋ ಪೌರೋಹಿತ್ಯ ಕೆಲಸದಲ್ಲಿ ಕಳೆದು ಹೋಗಿದ್ದರು. ನನಗೆ ಸಿಕ್ಕಾಪಟ್ಟೆ ಬೇಸರವಾಗ ತೊಡಗಿತು. ಅಪ್ಪನ ಬಳಿ ಇದ್ದ ಬೆಂಕಿಕಡ್ಡಿ ಪೊಟ್ಟಣವನ್ನು ಒಯ್ದು ಒಂದೆಡೆ ಕುಳಿತೆ. ಒಂದೊಂದೇ ಬೆಂಕಿಕಡ್ಡಿಯನ್ನು ಬಳಸಿ ನನ್ನ ಮನದಲ್ಲಿ ಮೂಡಿದ ಕೃಷ್ಣನ ರೂಪಕ್ಕೆ ನೆಲದ ಮೇಲೆ ಜನ್ಮ ನೀಡಿದೆ. ನನ್ನ ಹುಡುಕುತ್ತಾ ಬಂದ ಅಪ್ಪ ಸುತ್ತಲೂ ಹರಡಿಕೊಂಡಿದ್ದ ಬೆಂಕಿಕಡ್ಡಿಗಳನ್ನು ಕಂಡು ಕೋಪಗೊಂಡರು. ಮರುಕ್ಷಣ ಬೆಂಕಿಕಡ್ಡಿಗಳಿಂದಲೇ ರಚಿಸಿದ ಕೃಷ್ಣನ ಆಕರ್ಷಕ ಚಿತ್ರ ಕಂಡು ಕಣ್ಣಲ್ಲಿ ನೀರು ತುಂಬಿಕೊಂಡರು. ಬೆನ್ನು ತಟ್ಟಿ ಹುರಿದುಂಬಿಸಿದರು. ಅಂದಿನಿಂದ ಬೆಂಕಿಕಡ್ಡಿಗಳನ್ನು ಕಲಾಕೃತಿಗಳ ರಚನೆಗೆ ಬಳಸುತ್ತಾ, ಕಲೆಯನ್ನು ಸಿದ್ಧಿಸಿಕೊಳ್ಳುತ್ತಾ ಬಂದೆ’ ಎನ್ನುತ್ತಾ ಜಯಸಿಂಹ ಜೋಶಿ, ಒಂದಿಷ್ಟು ಬೆಂಕಿಕಡ್ಡಿಗಳನ್ನು ಎತ್ತಿಕೊಂಡು ಕಲಾಕೃತಿ ರಚಿಸುವಲ್ಲಿ ಮಗ್ನರಾದರು.

ಜಯಸಿಂಹ ಜೋಶಿ

ಬೆಂಗಳೂರಿನಲ್ಲಿ ಉದ್ಯೋಗ ಮಾಡುತ್ತಿರುವ ಜಯಸಿಂಹ ಜೋಶಿ, ಆಂಧ್ರಪ್ರದೇಶದ ಕರ್ನೂಲ್ ಜಿಲ್ಲೆಯ ಆದೋನಿ ತಾಲ್ಲೂಕಿನ ಗಡಿನಾಡು ದೊಡ್ಡ ಹರಿವಾಣದವರು. ಎಳವೆಯಿಂದಲೇ ಪ್ರತಿಭಾನ್ವಿತ ಆಗಿದ್ದ ಜಯಸಿಂಹ ಜೋಶಿ ಚಿತ್ರಕಲೆ, ಫೋಟೋಗ್ರಫಿ, ಪಕ್ಷಿ ವೀಕ್ಷಣೆ ಮತ್ತು ಅಧ್ಯಯನ ಹೀಗೆ ವಿವಿಧ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿದ್ದಾರೆ.

ವಿಶೇಷವಾಗಿ ಬೆಂಕಿಕಡ್ಡಿಗಳನ್ನು ಬಳಸಿ ಗಮ್‌ನ ಸಹಾಯದಿಂದ ಮಾಡುವ ಆಕರ್ಷಕ ಕಲಾಕೃತಿಗಳು ಮನಸೂರೆಗೊಳ್ಳುತ್ತವೆ. ಇವರ ಚಿಂತನೆಗಳು, ಮೂರ್ತ ಮತ್ತು ಅಮೂರ್ತ ಕಲ್ಪನೆಗಳು ಬೆಂಕಿಕಡ್ಡಿಗಳ ಮೂಲಕ ಕಲಾಕೃತಿಗಳಾಗಿ ಅನಾವರಣಗೊಂಡು ಕಲಾರಾಧಕರ ಕಣ್ಮನ ಸೆಳೆಯುತ್ತವೆ. ಇಲ್ಲಿ ಬೆಂಕಿಕಡ್ಡಿಗಳೇ ಕಲೆಯ ಪ್ರಧಾನ ವಸ್ತು. ಅಗತ್ಯ ಬಿದ್ದರೆ ಮಾತ್ರ ಕಲಾಕೃತಿಗಳಿಗೆ ಒಪ್ಪುವ ಹಾಗೆ ಮೆರಗು ನೀಡುವ ಮತ್ತೊಂದಿಷ್ಟು ವಸ್ತುಗಳನ್ನು ಹದವಾಗಿ ಬಳಸುತ್ತಾರೆ. ಸೂಕ್ತ ಬಣ್ಣದ ಕಾಗದಗಳು, ನೈಸರ್ಗಿಕ ಬಣ್ಣಗಳ ನಾಜೂಕು ಲೇಪನವೂ ಇಂತಹ ಕಲಾಕೃತಿಗಳ ಸೌಂದರ್ಯವನ್ನು ನೂರ್ಮಡಿಸುತ್ತದೆ.

ಇನ್ನು ಪ್ರತಿ ಕಲಾಕೃತಿಗಳು ಇವರಲ್ಲಿ ಅರಿವು, ಕಲೆಯ ಹರಿವು ಹಾಗೂ ಸೃಜನಶೀಲತೆಗೆ ಸಾಕ್ಷಿಯಾಗಿವೆ. ಇವರ ಕಲಾಕೃತಿಗಳಲ್ಲಿ ಸೌಂದರ್ಯ ದೃಷ್ಟಿಯಿಂದ ಗಮನಸೆಳೆಯುವುದಿಲ್ಲ. ಸಮಾಜಕ್ಕೆ ಸಂದೇಶ ನೀಡುವ ಜಾಣ್ಮೆ ತೋರಿದ್ದಾರೆ. ಪರಿಸರ ಜಾಗೃತಿ, ಸಂಬಂಧ- ಬಾಂಧವ್ಯಗಳ ಮಹತ್ವ, ಆರೋಗ್ಯದ ಕಳಕಳಿ, ನೆಲದ ಸಂಸ್ಕೃತಿ, ಜೀವನ ಶೈಲಿ, ರಾಷ್ಟ್ರ ಭಕ್ತಿ ಹೀಗೆ ವೈವಿಧ್ಯಮಯ ಕ್ಷೇತ್ರಗಳಲ್ಲಿ ಕಲಾ ಪ್ರೌಢಿಮೆ ಮೆರೆದಿದ್ದಾರೆ.

ಇಲ್ಲಿಯವರೆಗೂ ನೂರಕ್ಕೂ ಹೆಚ್ಚು ಬೆಂಕಿಕಡ್ಡಿಗಳ ಕಲಾಕೃತಿಗಳನ್ನು ರಚಿಸಿರುವ ಇವರು, ಅವುಗಳನ್ನು ಬೆಂಗಳೂರು, ಕೋಲ್ಕತ್ತ, ಮುಂಬೈ, ಮೈಸೂರು ಸೇರಿದಂತೆ ಹಲವು ಕಡೆಗಳಲ್ಲಿ ಆಯೋಜಿಸಿದ್ದ ‘ಮೈಕ್ರೋ ಆರ್ಟ್ಸ್ ಎಕ್ಸಿಬಿಷನ್' ನಲ್ಲಿ ಪ್ರದರ್ಶಿಸಿದ್ದಾರೆ. ‘ಮಿಸ್ಟರ್ ಕ್ರಿಯೇಟಿವ್’ ಎನ್ನುವ ಪ್ರಶಂಸೆಗೂ ಪಾತ್ರರಾಗಿದ್ದಾರೆ. ಒಟ್ಟಾರೆ ಬೆಂಕಿಕಡ್ಡಿ ಕಲಾಕೃತಿಗಳನ್ನು ರಚಿಸುವುದರಲ್ಲಿ ನಿಷ್ಣಾತವಾಗಿರುವ ಜಯಸಿಂಹ ಜೋಶಿ ಸಂವೇದನಾಶೀಲ ಕಲಾವಿದರು.

ಬಾರಿಸು ಕನ್ನಡ ಡಿಂಡಿಮವ



ರಾವಣನತ್ತ ಗುರಿ

ಧೂಮಪಾನ ಆರೋಗ್ಯಕ್ಕೆ ಹಾನಿಕಾರಕ

ಹಿತ್ತಂಡೆ ಹುಲ್ಲಿನ ಕಸಪೊರಕೆ

• ಜಿ.ಎಂ.ಬೊಮ್ನಳ್ಳಿ

ತೆಂಗಿನಗರಿ, ಒಣಹುಲ್ಲು, ಈಚಲು ಗರಿಯ ಕಸಪೊರಕೆಗಳು ಸಾಮಾನ್ಯ. ಆದರೆ ಮಲೆನಾಡು ಭಾಗದಲ್ಲಿ ಹಿತ್ತಂಡೆ ಹುಲ್ಲಿನ ಕಸಪೊರಕೆ ಹೆಚ್ಚು ಬಳಕೆಯಲ್ಲಿದೆ. ಗದ್ದೆಗಳಲ್ಲಿ ಬೆಳೆಯುವ ಹಿತ್ತಂಡೆ ಎಂಬ ವಿಶಿಷ್ಟ ಜಾತಿಯ ಹುಲ್ಲಿನಿಂದ ತಯಾರಾಗುವ ಈ ಕಸಪೊರಕೆಯಲ್ಲಿ ಹುಲ್ಲಿನ ಧೂಳು ಹೆಚ್ಚು ಉದುರುವುದಿಲ್ಲ. ನಯವಾದ ಜಾಗಗಳನ್ನು ಸ್ವಚ್ಛಗೊಳಿಸಲು ಅತ್ಯುತ್ತಮ ಪೊರಕೆ ಇದು.

ಭತ್ತ ಬೆಳೆಯುವ ಗದ್ದೆಯನ್ನು ಒಂದೆರೆಡು ವರ್ಷ ಪಾಳು ಬಿಟ್ಟರೆ ಅದರಲ್ಲಿ ಒಂದು ಬಗೆಯ ಚಿಕ್ಕ ಚಿಕ್ಕ ಬಟನ್ ರೂಪದ, ಹೂವು ಅರಳಿಸುವ ಕಳೆರೂಪದ ಹುಲ್ಲು ಆವರಿಸಿಕೊಂಡು ಬೆಳೆಯುತ್ತದೆ. ಸ್ಥಳೀಯರು ಈ ಹುಲ್ಲನ್ನು ‘ಹಿತ್ತಂಡೆ’ ಹುಲ್ಲು ಎನ್ನುತ್ತಾರೆ. ಇದನ್ನು ಕಸಬರಿಕೆ ತಯಾರಿಸಲು ಬಳಸುವುದು ಹಿಂದಿನಿಂದಲೂ ರೂಢಿಯಲ್ಲಿದೆ. ತೆಂಗಿನಗರಿಯ ಕಡ್ಡಿಗಳನ್ನು ಮಲೆನಾಡಿನಲ್ಲಿ ಹಿಡಿಕಡ್ಡಿ ಎಂದೇ ಕರೆಯುತ್ತಾರೆ. ಮನೆಯ ಅಂಗಳ, ಹೊರಭಾಗಗಳಲ್ಲಿ ಸ್ವಚ್ಛಗೊಳಿಸಲು ಹಿಡಿಕಡ್ಡಿಯ ಪೊರಕೆಗಳನ್ನು ಬಳಸಿದರೆ ಮನೆಯ ಒಳಭಾಗಕ್ಕೆ ‘ಹಿತ್ತಂಡೆ’ ಹಿಡಿ ಬಳಕೆ ಮಲೆನಾಡಿನಲ್ಲಿ ಸಾಮಾನ್ಯವಾಗಿತ್ತು. ಹಳ್ಳಿಮನೆಗಳಲ್ಲಿ ಈ ಕಾಲದಲ್ಲೂ ದೇವರ ಕೋಣೆಯನ್ನು ಸ್ವಚ್ಛಗೊಳಿಸಲು ಹುಲ್ಲಿನಿಂದ ತಯಾರಿಸಿದ ಹಿತ್ತಂಡೆ ಹುಲ್ಲಿನ ಕಸಪೊರಕೆಯನ್ನೇ ಬಳಸುವುದು ರೂಢಿಯಲ್ಲಿದೆ.

ಮಳೆಗಾಲದಲ್ಲಿ ಪಾಳುಬಿದ್ದ ಗದ್ದೆಗಳಲ್ಲಿ ಹಿತ್ತಂಡೆ ಹುಲ್ಲು ಸಹಜವಾಗಿ ಬೆಳೆಯುತ್ತದೆ. ಹೆಚ್ಚೆಂದರೆ ಎರಡು ಅಡಿಯಷ್ಟು ಎತ್ತರ ಬೆಳೆಯುವ ಕುಬ್ಜ ಹುಲ್ಲಿದು. ಈ ಹುಲ್ಲಿಗೆ ಮೇಲ್ಭಾಗದ ತುದಿಗೆ ಚಿಕ್ಕ ಬಟನ್ ರೂಪದಲ್ಲಿ ಹೂ ಅರಳಿದಾಗ ಅದನ್ನು ಕಿತ್ತು ಪೊರಕೆ ಮಾಡಲು ಬಳಸುವುದು ರೂಢಿ. ಸೆಣಬಿನ ದಾರಕ್ಕೆ ಹಿತ್ತಂಡೆ ಹುಲ್ಲನ್ನು ಒತ್ತಾಗಿ ಹೂವಂತೆ ನೇಯ್ದು, ನಂತರ ಅದನ್ನು ಕಲಾತ್ಮಕವಾಗಿ ಸುತ್ತಿ ಹಿಡಿ ತಯಾರಿಸಲಾಗುತ್ತದೆ. ಹೀಗೆ ತಯಾರಿಸಿ ಚೆನ್ನಾಗಿ ಒಣಗಿಸಿಟ್ಟ ಕಸಪೊರಕೆಗಳು ಕಡಿಮೆ ಎಂದರೂ ಎರಡು ವರ್ಷ ಬಾಳಿಕೆ ಬರುತ್ತವೆ.

ಅಡುಗೆ ಕೋಣೆಯಂತಹ ಸದಾ ಸ್ವಚ್ಛತೆಯನ್ನೇ ಬಯಸುವ ಜಾಗಗಳನ್ನು ಸ್ವಚ್ಛಗೊಳಿಸಲೂ ಈ ಪೊರಕೆಗಳನ್ನೇ ಬಳಸುತ್ತಾರೆ.

ಮುನ್ನೋಟ 30-11-2025 ರಿಂದ 06-12-2025

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಮುನ್ನುಗ್ಗುವ ಉತ್ಸಾಹವಿರುತ್ತದೆ. ಆದಾಯವು ಸ್ವಲ್ಪ ಮಟ್ಟಿಗೆ ಉತ್ತಮವಾಗುತ್ತದೆ. ಬಂಧುಗಳಿಂದ ನಿಮಗೆ ಸ್ವಲ್ಪ ಅನುಕೂಲವಾಗುತ್ತದೆ. ಆಸ್ತಿಯನ್ನು ಕೊಳ್ಳಲು ಬೇಕಾದ ಹಣಕಾಸಿನ ಮಾರ್ಗ ಗೋಚರಿಸುತ್ತದೆ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶವಿರುವುದಿಲ್ಲ. ಕೃಷಿಗಾಗಿ ಹಣಕಾಸು ಸಂಸ್ಥೆಗಳ ಮೊರೆ ಹೋಗುವಿರಿ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ವಾರದ ಆರಂಭದಲ್ಲಿ ಬಹಳ ಚುರುಕಾಗಿರುವಿರಿ. ಆದಾಯವು ಸಾಧಾರಣವಾಗಿರುತ್ತದೆ. ಗುರುಹಿರಿಯರಿಂದ ಅನುಕೂಲಗಳಾಗುತ್ತವೆ. ಆಸ್ತಿ ವಿಚಾರದಲ್ಲಿ ಬಹಳ ಆತುರ ಬೇಡ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶ ಕಷ್ಟ. ನರಸಂಬಂಧಿ ದೋಷಗಳಿದ್ದವರು ಎಚ್ಚರ ವಹಿಸಿ. ಸಂಗಾತಿ ಕಡೆಯವರಿಂದ ಸಾಕಷ್ಟು ಅನುಕೂಲಗಳಾಗುತ್ತವೆ. ವ್ಯವಹಾರಕ್ಕೆ ತಾಯಿಯಿಂದ ಮಾರ್ಗದರ್ಶನದ ಜತೆಗೆ ಸ್ವಲ್ಪ ಹಣ ಸಹಾಯವೂ ಸಿಗುತ್ತದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಬಹಳ ಬುದ್ಧಿವಂತಿಕೆಯಿಂದ ವ್ಯವಹಾರ ಮಾಡುವಿರಿ. ಆದಾಯವು ನಿರೀಕ್ಷೆಯ ಮಟ್ಟಕ್ಕೆ ಬರುತ್ತದೆ. ಬಂಧುಗಳಿಂದ ಸೂಕ್ತ ಸಹಕಾರ ಸಿಗುವುದಿಲ್ಲ. ಭೂಮಿಯ ವ್ಯವಹಾರ ಮಾಡುವವರ ಆದಾಯ ಹೆಚ್ಚುತ್ತದೆ. ವಿದ್ಯಾರ್ಥಿಗಳಿಗೆ ಉತ್ತಮ ಫಲಿತಾಂಶವಿರುತ್ತದೆ. ವೈಯಕ್ತಿಕ ವಿಚಾರಗಳತ್ತ ಹೆಚ್ಚಿನ ಗಮನವನ್ನು ಕೊಡಿ. ಮೂಳೆಯ ನೋವು ಕಾಡಬಹುದು. ದಲ್ಲಾಳಿಗಳ ಆದಾಯದಲ್ಲಿ ಹೆಚ್ಚಳವಿರುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಆದಾಯವು ಕಡಿಮೆ ಇರುತ್ತದೆ. ಮಹಿಳೆಯರ ಕೆಲವು ಇಷ್ಟಾರ್ಥಗಳು ಪೂರ್ಣಗೊಳ್ಳುತ್ತವೆ. ವಿದೇಶಿ ವ್ಯವಹಾರ ಮಾಡುವವರಿಗೆ ಹೆಚ್ಚಿನ ಅಭಿವೃದ್ಧಿ ಇರುತ್ತದೆ. ವಿದ್ಯಾರ್ಥಿಗಳಿಗೆ ಹೆಚ್ಚಿನ ಅನುಕೂಲವಿರುತ್ತದೆ. ಸಂಬಂಧಿಕರ ಮಧ್ಯಸ್ಥಿಕೆಯಿಂದ ಕುಟುಂಬದ ಕೆಲವು ಸಮಸ್ಯೆಗಳು ದೂರವಾಗುತ್ತವೆ. ಜನಸಾಮಾನ್ಯರಿಗೆ ಉಪಕಾರ ಮಾಡಿ ಸಂತೋಷಪಡುವಿರಿ. ಪ್ರಾಮಾಣಿಕ ಪ್ರಯತ್ನದಿಂದ ಹಿಡಿದ ಕೆಲಸವನ್ನು ಪೂರ್ಣಗೊಳಿಸುವಿರಿ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಬಹಳ ಗಂಭೀರವಾದ ನಡವಳಿಕೆ ನಿಮ್ಮಲ್ಲಿ ಇರುತ್ತದೆ. ಸಮಾಜದಿಂದ ಗೌರವವನ್ನು ನಿರೀಕ್ಷೆ ಮಾಡುವಿರಿ. ಆದಾಯವು ಮಧ್ಯಮ ಗತಿಯಲ್ಲಿರುತ್ತದೆ. ಇತರೆ ಚಟುವಟಿಕೆಗಳಿಂದ ಆದಾಯ ವೃದ್ಧಿ ಮಾಡಿಕೊಳ್ಳಬಹುದು. ರಾಜಕೀಯ ವ್ಯಕ್ತಿಗಳಿಗೆ ಹಿನ್ನಡೆ ಇರುತ್ತದೆ. ಕೆಲವು ಅರೆಕಾಲಿಕ ನೌಕರರಿಗೆ ಈಗ ನೌಕರಿ ಖಾಯಂ ಆಗುವ ಸಾಧ್ಯತೆ ಇದೆ. ವಿದೇಶದಲ್ಲಿ ಉದ್ಯೋಗವನ್ನು ಮಾಡುತ್ತಿರುವವರಿಗೆ ಹೆಚ್ಚಿನ ಪ್ರೋತ್ಸಾಹ ದೊರೆಯುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ವಾರದ ಆರಂಭದಲ್ಲಿ ಬಹಳ ಆಲಸಿತನವಿರುತ್ತದೆ. ಆದಾಯವು ಸಾಮಾನ್ಯ ಗತಿಯಲ್ಲಿರುತ್ತದೆ. ನಿಮ್ಮ ಬಂಧುಗಳಲ್ಲಿ ಕೆಲವರು ನಿಮಗೆ ಸಹಕರಿಸಿದರೂ, ಹಲವರು ವಿರೋಧಿಸುವರು. ಪುಸ್ತಕ ವ್ಯಾಪಾರಿಗಳಿಗೆ ಲಾಭ ಹೆಚ್ಚು. ಹಣಕಾಸಿನ ವ್ಯವಹಾರ ಮಾಡುವವರಿಗೆ ಹಳೆಯ ಬಾಕಿ ವಸೂಲಾಗುತ್ತದೆ. ಅಧ್ಯಯನದಲ್ಲಿ ಆಸಕ್ತಿಯು ಸ್ವಲ್ಪ ಕಡಿಮೆಯಾಗಬಹುದು.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ವ್ಯವಹಾರದ ಬುದ್ಧಿವಂತಿಕೆ ನಿಮ್ಮಲ್ಲಿರುತ್ತದೆ. ವೃತ್ತಿಯಲ್ಲಿ ಅನುಕೂಲತೆ ಹೆಚ್ಚುತ್ತದೆ. ಆಸ್ತಿಯ ವಿಷಯಕ್ಕೆ ಸಂಬಂಧಿಸಿದಂತೆ ಮನಸ್ತಾಪ ಎದುರಾಗುವ ಸಂದರ್ಭವಿದೆ. ಜಮೀನಿನಲ್ಲಿ ಹೆಚ್ಚಿನ ಕೃಷಿ ಕೆಲಸಗಳನ್ನು ಆರಂಭಿಸುವಿರಿ. ಹಣಕಾಸು ಸಂಸ್ಥೆಗಳಿಂದ ಅಪೇಕ್ಷಿತ ಸಾಲ ದೊರೆಯುತ್ತದೆ. ವಿದೇಶಿ ಕಂಪನಿಯೊಂದು ನಿಮಗೆ ಪಾಲುದಾರಿಕೆಗೆ ಆಹ್ವಾನ ನೀಡಬಹುದು. ರಾಜಕೀಯ ವ್ಯಕ್ತಿಗಳಿಗೆ ನಿರೀಕ್ಷಿಸಿದ್ದ ಸ್ಥಾನಮಾನಗಳು ಸಿಗದಿರಬಹುದು.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಯಾವುದೇ ಕೆಲಸಗಳಲ್ಲಿ ಅತಿಯಾದ ಆತುರ ಬೇಡ. ಆದಾಯವು ಉತ್ತಮವಾಗಿರುತ್ತದೆ. ವಿದ್ಯಾರ್ಥಿಗಳಿಗೆ ಸ್ವಲ್ಪ ಹಿನ್ನಡೆ ಇರುತ್ತದೆ. ಮಕ್ಕಳಿಂದ ನಿರೀಕ್ಷಿತ ಸಹಾಯ ದೊರೆಯುವುದಿಲ್ಲ. ಹಿರಿಯರಿಂದ ಹಣ ಸಹಾಯ ಸಿಗುತ್ತದೆ. ಹೂವುಗಳ ವ್ಯಾಪಾರಿಗಳಿಗೆ ವ್ಯಾಪಾರ ವೃದ್ಧಿಸಿ, ಆದಾಯ ಹೆಚ್ಚುತ್ತದೆ. ಮಕ್ಕಳಿಗಾಗಿ ಹೆಚ್ಚಿನ ಹಣ ಖರ್ಚು ಮಾಡಬೇಕಾಗುತ್ತದೆ. ರಾಜಕಾರಣಿಗಳಿಗೆ ಆಪಾದನೆಗಳಿಂದ ಮಾನಸಿಕ ಒತ್ತಡಗಳು ಹೆಚ್ಚಬಹುದು.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ವಾರದ ಆರಂಭದಲ್ಲಿ ಹೆಚ್ಚಿನ ಉತ್ಸಾಹ ಇರುವುದಿಲ್ಲ. ಆದಾಯವು ಕಡಿಮೆ ಇರುತ್ತದೆ. ತಾಯಿಯ ಕಡೆಯ ಸಂಬಂಧಿಕರು ನಿಮಗೆ ಸಹಕಾರ ನೀಡುವವರು. ಕೃಷಿ ಜಮೀನು ವ್ಯಾಪಾರ ಮಾಡುವರಿಗೆ ಆದಾಯ ಹೆಚ್ಚುತ್ತದೆ. ಉದ್ಯೋಗದಲ್ಲಿ ಅಭಿವೃದ್ಧಿಯಾಗಿ, ಆರ್ಥಿಕವಾಗಿ ಚೇತರಿಸಿ ಕೊಳ್ಳುವಿರಿ. ಹಿರಿಯ ಅಧಿಕಾರಿಗಳಿಗೆ ಹೆಚ್ಚಿನ ರೀತಿಯ ಅಧಿಕಾರ ದೊರೆತು ಮೇಲ್ದರ್ಜೆಗೇರುವ ಸಂದರ್ಭವಿದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ವೃತ್ತಿ ಶ್ರದ್ಧೆ ನಿಮ್ಮಲ್ಲಿ ಇರುತ್ತದೆ. ಆದಾಯದಲ್ಲಿ ಚೇತರಿಕೆಯನ್ನು ಕಾಣಬಹುದು. ಯಾರ ವಿರೋಧವನ್ನು ಲೆಕ್ಕಿಸದೆ ನಿಮ್ಮ ಪಾಡಿಗೆ ನೀವು ಮುನ್ನುಗ್ಗುವಿರಿ. ಕೃಷಿಯಿಂದ ಲಾಭವಿರುತ್ತದೆ. ಆಸ್ತಿ ವ್ಯವಹಾರ ಮಾಡುವವರಿಗೆ ಲಾಭವಿರುತ್ತದೆ. ಸಂಗಾತಿಯ ಸಹಕಾರದಿಂದ ನಿಮ್ಮ ಕೆಲಸ ಕಾರ್ಯಗಳಲ್ಲಿ ಮುನ್ನಡೆ ಇರುತ್ತದೆ. ಅವಿವಾಹಿತರಿಗೆ ವಿವಾಹ ಸಂಬಂಧಗಳು ಒದಗಿ ಬರುವ ಸಾಧ್ಯತೆಗಳಿವೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಮನಸ್ಸಿನಲ್ಲಿ ಹೊಸ ಚೇತನವಿರುತ್ತದೆ. ಲೇವಾದೇವಿ ವ್ಯವಹಾರವನ್ನು ಮಾಡುವವರಿಗೆ ಅಂತಹ ಪ್ರಗತಿ ಇರುವುದಿಲ್ಲ. ಮಕ್ಕಳಿಂದ ಹಿರಿಯರಿಗೆ ಬೇಸರ ಉಂಟಾಗಬಹುದು. ಪ್ರೀತಿ ಪ್ರೇಮಗಳ ವಿಚಾರದಲ್ಲಿ ಬಹಳ ಎಚ್ಚರದಿಂದ ಇರುವುದು ಒಳ್ಳೆಯದು. ಸರ್ಕಾರಿ ಮಟ್ಟದ ಕೆಲಸಕಾರ್ಯಗಳಲ್ಲಿ ಮುನ್ನಡೆ ಇರುತ್ತದೆ. ವೃತ್ತಿಯಲ್ಲಿ ಅಭಿವೃದ್ಧಿ ಇರುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಧಾನ್ಯಗಳ ಸಗಟು ವ್ಯಾಪಾರವನ್ನು ಮಾಡುತ್ತಿರುವವರಿಗೆ ವ್ಯವಹಾರದಲ್ಲಿ ಅಭಿವೃದ್ಧಿ ಇದ್ದೇ ಇರುತ್ತದೆ. ಕೈಗೆತ್ತಿಕೊಂಡ ಕೆಲಸಗಳನ್ನು ಶಕ್ತ್ಯಾನುಸಾರ ಮಾಡಿ ಪೂರೈಸುವಿರಿ. ವೃತ್ತಿಯಲ್ಲಿ ಆದಾಯ ಹೆಚ್ಚುವ ಸಾಧ್ಯತೆ ಇದೆ. ಸರ್ಕಾರಿ ಕೆಲಸಗಳಲ್ಲಿ ಮುನ್ನಡೆಯನ್ನು ಕಾಣುವಿರಿ. ವಿದ್ಯಾರ್ಥಿಗಳಿಗೆ ಈಗ ಉತ್ತಮ ಫಲಿತಾಂಶ ಪಡೆಯುವ ಯೋಗವಿದೆ.

ಪದಬಂಧ 2920

ಮೇಲಿನಿಂದ ಕೆಳಕ್ಕೆ

1. ಮರ್ಯಾದೆಯಲ್ಲಿ ಸರಿತೂಗುವಿಕೆ 3
2. ಯುದ್ಧದಲ್ಲಿ ಹೋರಾಡುವ ತರುಣ 3
3. ಸರಿಗಟ್ಟುವವನ ಕನ್ನಡ ರೂಪ 3
4. ಮಹಾರಾಷ್ಟ್ರದ ಹಾಸ್ಯ ಪ್ರಕಾರ 3
7. ಕಲುಷಿತ ರಹಿತ ಸ್ವಚ್ಛವಾದ ಹೆಣ್ಣಿನ ಹೆಸರು 3
9. ಹಾಡುಗಾರಿಕೆಯಲ್ಲಿ ದೇವಮಾನವ 5
11. ವರಸೆಯಲ್ಲಿ ಝಳಪಿಸುವ ಖಡ್ಗ 2
13. ಯಾವುದೇ ಆಡಂಬರವಿಲ್ಲದ್ದು ಹಾರದಿಂದಿಳಿದಿದೆ 3
14. ಕಾಡು ಹೆಚ್ಚಾದಷ್ಟು ನಾಡಿಗೆ ಇರಬಹುದಾದ ಮರಗಳ ಐಶ್ವರ್ಯ 5
15. ಹಿಂದಿಯಲ್ಲಿ ಸರಿ ಎಂದಾಗ ಕನ್ನಡದಲ್ಲಿ ಹಾಕುವ ರುಜು 2
17. ಕರುಣೆಯೇ ಇಲ್ಲದೆ ಹತ್ಯೆ ಮಾಡುವ ಕ್ರೂರಿ 3
18. ಕಾಲನೊಡನೆ ಸೇರುವ ಭಯಂಕರ ರೂಪದ ಶಿವ 3
19. ಮಿಥಿಲೆಯ ರಾಜಧಾನಿ ಜನಕನ ಊರು 3
20. ಮುರಿದ ಚಕ್ಕುಲಿಯ ಚೂರು 3
21. ಕುದುರೆ ಕಟ್ಟಿದ ಗಾಡಿ 3

ಎಡದಿಂದ ಬಲಕ್ಕೆ

1. ಕೊಳದಲ್ಲಿ ಹುಟ್ಟಿದ ತಾವರೆಗೆ ಸಮಾನ 4
3. ಒಪ್ಪಂದಕ್ಕೆ ನೀಡುವ ಹೌದು ಎನ್ನುವ ಒಪ್ಪಿಗೆ 3
5. ಮಾತಿನೊಡತಿ ಸಾಕ್ಷಾತ್ ಸರಸ್ವತಿ 4
6. ಬದಲಾದ ಧ್ವನಿ 3
8. ಹೊಸ ಜೀವನಕ್ಕೆ, ಹೊಸ ದಿನಕ್ಕೆ, ಹೊಸ ಕ್ಷಣಕ್ಕೆ ಹಾಡುವ ಹಾಡು 4
10. ಹೃದಯವನ್ನಾವರಿಸುವ ಕೊಳೆ 3
11. ಕುಶಲತೆಯ ಹೆಣ್ಣಿಗೆ ಇಡಬಹುದಾದ ಹೆಸರು 2
12. ಶೂನ್ಯ ಪಡೆದ ಸಂಸ್ಕೃತ ಸರ್ಪ 3
13. ಸಾವಿರ ಸುತ್ತಿನ ಮಂಡಲ 5
15. ಯಾವಾಗಲೂ ಎಲ್ಲರಿಗೂ ಶುಭಪ್ರದ 5
16. ಕುಟುಂಬಕ್ಕೆ ಕಟ್ಟುಬಿದ್ದವ 3
17. ಹಾಗಲಕಾಯಿ ಬೇವಿನಕಾಯಿಯ ರುಚಿ 2
18. ಭಯ ಸ್ವರೂಪದ ರಾಗ ಮಾತೆ 3
20. ಚುಂಬನದಂತಹ ಹರಳಿನ ಅರಸ 4
22. ಕರದಲ್ಲಿ ಬರುವ ಕಾವೇರಿಯ ತಂದೆ 3
23. ಹಿಮಪರ್ವತಗಳಲ್ಲಿ ಪರಮಾತ್ಮನೇ ಬೆಳಸಿದ ವೃಕ್ಷ 4
24. ದೈವ ಸ್ವರೂಪ ಸೂಕರ 3
25. ಚೂಪಾದ ಅಸ್ತ್ರವನ್ನು ಹಿಡಿದ ದೇವಿ 4



ಪದಬಂಧ ಉತ್ತರ -2919

ಮೇಲಿಂದ ಕೆಳಕ್ಕೆ

1.ಶುನಕ 2.ಭವಾನಿ 3.ತವಕ 4. ಕುಲಾವಿ 6.ಸುರಾಪಾನ 8.ವಿನಾಶಂ 10.ಲಾವಣ್ಯವತಿ 11.ದವಳಗಿರಿ 12.ಸಮಾನಪದ 13.ಖಗವಾಹನ 14.ಮಾರಕ 15.ಕಮಾಲು 19.ಡಕಾಯಿತ 21.ಜೋಕಾಲಿ 23.ಶಾಲಿನಿ 24.ನವಲ 25.ಸುನರ 26.ತನುಜ

ಎಡದಿಂದ ಬಲಕ್ಕೆ

1.ಶುಭಾರಂಭ 3.ತಳಕು 5.ವಾಲಿಸುಗ್ರೀವ 7.ಕವಿಧ್ವನಿ 9.ಕಲಾವಿದ 12.ಸಶಂಖ 14.ಮಾನಕ 16.ಗತಾರ 17.ಮಾಧವ 18.ಕಡಲು 20.ತಿಜೋರಿ 22.ದಶಾನನ 25.ಸುಲಲಿತ 27.ವಸಂತಗಾನ 28.ನಿರ್ಮಲ 29.ರಜನಿಜ

ಪುರಂದರದಾಸರು ಮತ್ತು ಯಕ್ಷಗಾನ

• ಕಬ್ಬಿನಾಲೆ ವಸಂತ ಭಾರದ್ವಾಜ

‘ಕರ್ನಾಟಕ ಸಂಗೀತ ಪಿತಾಮಹ’ರೆನಿಸಿದ ಪುರಂದರದಾಸರು ಯಕ್ಷಗಾನವನ್ನು ರಚಿಸಿದ್ದರೆಂಬ ಉಲ್ಲೇಖಗಳು ಇದ್ದರೂ ಕೃತಿ ಮಾತ್ರ ಇದುವರೆಗೆ ಲಭ್ಯವಾಗಿರಲಿಲ್ಲ. ಆದರೆ ಅವರು ಬರೆದ ‘ಅನಸೂಯಾ ಚರಿತ್ರೆ’ ಎಂಬ ಯಕ್ಷಗಾನವು ಇತ್ತೀಚೆಗೆ ಲಭ್ಯವಾಗಿದೆಯಲ್ಲದೆ ಪ್ರಕಟವೂ ಆಗಿದೆ.

ಅದರಲ್ಲಿ ‘ಪುರಂದರದಾಸರಾಯರು ಪೇಳಿದ ಸಂಭ್ರಮವನ್ನು ಕೇಳಿ’ ಎಂಬ ವಾಕ್ಯವು ನಾಂದಿಯಲ್ಲೇ ಬರುವುದರಿಂದ ಅದನ್ನು ರಚಿಸುವ ವೇಳೆಗಾಗಲೇ ಅವರಿಗೆ ದಾಸದೀಕ್ಷೆಯಾಗಿತ್ತು ಎಂದು ನಿರ್ಧರಿಸಬಹುದು. ಈ ಕೃತಿಯಲ್ಲಿ ‘ಪುರಂದರದಾಸ’ ಮತ್ತು ‘ಪುರಂದರವಿಠಲ’ ಎಂಬ ಪ್ರಯೋಗಗಳು ಒಟ್ಟು ಹತ್ತೊಂಬತ್ತು ಕಡೆಗಳಲ್ಲಿ ಪ್ರಯೋಗಗೊಂಡಿರುವುದು ಗಮನಾರ್ಹವಾಗಿದೆ.

ಪ್ರತಿಯೊಂದು ಪದ್ಯಗುಚ್ಛದ ಕೊನೆಗೆ ‘ಪುರಂದರವಿಠಲ’ ಅಂಕಿತವಿರುವುದರಿಂದ ಇದರ ಕರ್ತೃತ್ವ ಪ್ರಶ್ನಾತೀತವಾದುದು. ಧರ್ಮಸ್ಥಳದಲ್ಲಿರುವ ‘ಶ್ರೀಮಂಜುನಾಥೇಶ್ವರ ಸಂಸ್ಕೃತಿ ಸಂಶೋಧನ ಪ್ರತಿಷ್ಠಾನ’ದ ಹಸ್ತಪ್ರತಿ ಭಂಡಾರದಲ್ಲಿರುವ ‘ಗುರುರಾಮವಿಠಲ’ ಅಂಕಿತದ ಬಾಗೇಪಲ್ಲಿ ಸುಬ್ರಹ್ಮಣ್ಯದಾಸ (1850-1915) ವಿರಚಿತವಾದ ‘ಪಂಚಕಥಾ’ ಎಂಬ ಐದು ಕೃತಿಗಳ ಮುದ್ರಿತ (1905) ಸಂಕಲನದಲ್ಲಿ ‘ಅನಸೂಯಾ ಚರಿತ್ರೆ’ ಎಂಬ ಯಕ್ಷಗಾನಕೃತಿಯಿದೆ. ಅದರ ಮಂಗಳಪದ್ಯದ ಮೊದಲಿಗೆ: “ಸೂತಪುರಾಣಿಕನು ನೈಮಿಷಾರಣ್ಯದೋಳ್ ಶೌನಕಾದಿ ಮುನಿಗಳಿಗೆ ನಾರದೀಯ ಪುರಾಣದೋಳ್ ಪೇಳಿದನೆಂಬರ್ಥವ ಪುರಂದರದಾಸರಿಂದ ಯಕ್ಷಗಾನದೋಳ್ ರಚಿಸಿರುವ ಚರಿತ್ರೆಯನನುಸರಿಸಿ ಗುರುರಾಮವಿಠಲ ಪೇಳಿಸಿದಂತೆ ಹಿರಿಯರನುಗ್ರಹದಿಂದ ನಾ ಪೇಳಿದೆಂ” ಎಂಬ ಒಂದು ವಚನವಿದೆ.

‘ಗುರುರಾಮವಿಠಲ’ ಅಂಕಿತದ ಸುಬ್ರಹ್ಮಣ್ಯದಾಸನು ತನನಿಗಿಂತಲೂ ಮೊದಲು ಪುರಂದರದಾಸರು ಯಕ್ಷಗಾನವನ್ನು ರಚಿಸಿದುದು ಮತ್ತು ಅದನ್ನು ಅನುಸರಿಸಿ ತಾನು ಕೃತಿಯನ್ನು ಬರೆದಿರುವೆನೆಂದು ಇದರಲ್ಲಿ ಹೇಳಿರುವುದು ಗಮನಾರ್ಹವಾಗಿದೆ. ಪುರಂದರದಾಸರು ಶ್ರೀಕೃಷ್ಣದೇವರಾಯನು ಪಟ್ಟವೇರಿದ ಕಾಲಘಟ್ಟದಲ್ಲಿ (1509) ವಿಜಯನಗರದಲ್ಲಿ ಶ್ರೀವ್ಯಾಸರಾಯರಿಂದ ದಾಸದೀಕ್ಷೆಯನ್ನು ಪಡೆದಿದ್ದರೆಂಬ ಆಧಾರದಿಂದ ಈ ಕೃತಿಯ ಕಾಲವನ್ನು ಕ್ರಿ.ಶ. 1510 ಎಂದು ತರ್ಕಿಸಬಹುದು.

‘ಅನಸೂಯಾಚರಿತ್ರೆ’ಯು ಚಿಕ್ಕದಾದ ಯಕ್ಷಗಾನ ಪ್ರಸಂಗ ಕೃತಿ. ಇದರಲ್ಲಿ ಒಂದು ನೂರು ಪದ್ಯಗಳಿವೆ. ಎಲ್ಲ ಪದ್ಯಬಂಧಗಳಿಗೆ ರಾಗ ಸೂಚನೆಯಿದೆಯಾದರೂ ಒಂದೆರಡು ಪದ್ಯಗಳಿಗೆ ತಾಳದ ಸೂಚನೆಯಿದೆ. ಅದೂ ಅಟ್ಟತಾಳ ಮಾತ್ರ. ಉಳಿದ ತಾಳಗಳನ್ನು ಯಾಕೆ ಸೂಚಿಸಿಲ್ಲ ಎನ್ನುವುದು ಅಚ್ಚರಿಯ ಸಂಗತಿಯಾಗಿದೆ. ಇದರಲ್ಲಿ ಕಲ್ಯಾಣಿ, ವರಾಳಿ, ಧನ್ಯಾಸಿ, ತೋಡಿ, ಕಾಂಭೋದಿ, ಹುಸೇನಿ, ಭೈರವಿ, ಮೋಹನ, ಆನಂದಭೈರವಿ, ಧನಾಸರಿ, ಜಂಜೂಟಿ, ಮಾಂಜಿ ಮತ್ತು ಸೌರಾಷ್ಟ್ರ ಎಂಬ ಹದಿಮೂರು ರಾಗಗಳನ್ನು ಬಳಸಲಾಗಿದೆ. ಒಂದು ಕಡೆ ‘ರಾಗ-ಆರ್ಯಾ’ ಎಂಬ ಸೂಚನೆಯಿದ್ದರೂ ಅದು ಛಂದಃಸೂಚನೆ ಎಂಬುದು ಗಮನಾರ್ಹ. ಹೆಚ್ಚಿನ ಛಂದೋಬಂಧಗಳು ಅಂಶಗಣಯುಕ್ತವಾದವುಗಳು ಎಂಬುದು ವಿಶೇಷ.

ಅವರ ಕಾಲದಲ್ಲಿ ಪ್ರಚಲಿತವಾಗಿದ್ದ ಭಾಮಿನಿಷಟ್ಪದಿಯನ್ನಾಗಲಿ, ಸಾಂಗತ್ಯವನ್ನಾಗಲಿ ಪುರಂದರದಾಸರು ಬಳಸಲಿಲ್ಲ. ಒಟ್ಟು ಹನ್ನೆರಡು ಕಂದಪದ್ಯಗಳಿದ್ದು ಹಾಗೂ ಹದಿನೈದರಷ್ಟು ದ್ವಿಪದೆಗಳಿದ್ದು ಯಾವುದೂ ಛಂದೋಬದ್ಧವಾಗಿಲ್ಲ. ಒಂದೇ ಒಂದು ಷಟ್ಪದಿಯನ್ನು ನಾಂದಿಯಲ್ಲಿ ಬಳಸಿದ್ದರೂ ಅದು ಕೂಡ ಯಾವುದೇ ಷಟ್ಪದಿಯ ಲಕ್ಷಣಕ್ಕೆ ಹೊಂದುವುದಿಲ್ಲ. ಆದುದರಿಂದ ಇದು ಕವಿಯ ಆರಂಭಿಕ ರಚನೆಯಾಗಿರಬಹುದು ಅಥವಾ ಲಿಪಿಕಾರರು ಮಾಡಿದ ಪ್ರಮಾದವಿರಲೂಬಹುದು!

ಈ ಕೃತಿಯಲ್ಲಿ ಪುರಂದರದಾಸರ ಪ್ರಸಿದ್ಧವಾದ ಮೂರು ಕೀರ್ತನೆಗಳು ಕಂಡುಬರುತ್ತವೆ. ಅವುಗಳಲ್ಲಿ ಒಂದು ಬಹಳ ಪ್ರಸಿದ್ಧವಾದ ‘ಏನು ಧನ್ಯಳೊ ಲಕುಮಿ ಎಂಥಾ ಮಾನ್ಯಳೊ’ ಎಂಬುದು. ಇದು ಕೃತಿಯ ಆರಂಭದಲ್ಲೇ ಕಂಡುಬರುತ್ತದೆ. ಎರಡನೆಯ ಕೀರ್ತನೆ ‘ಬಂದದ್ದೆಲ್ಲ ಬರಲಿ ಗೋವಿಂದನ ದಯ ನಮಗಿರಲಿ’ ಎಂಬುದು. ಮೂರನೆಯದು ‘ಅಕ್ರೂರಗೊಲಿದ ತ್ರಿವಿಕ್ರಮಗೆ’ ಎಂಬ ಮಂಗಳಪದ್ಯ. ಈ ಯಕ್ಷಗಾನಕೃತಿಯು ಆಧುನಿಕ ಪ್ರಸಂಗಗಳಂತೆ ರಚನೆಗೊಂಡಿಲ್ಲ. ಇದೇ ಅದರ ಪ್ರಾಚೀನತೆಗೆ ಸಾಕ್ಷಿ. ಇದು ಮೇಲ್ನೋಟಕ್ಕೆ ‘ಹರಿಕಥೆ’ಯ ಶೈಲಿಯಂತೆ ಕಂಡುಬರುತ್ತದೆ. ನಿರೂಪಣವಾಕ್ಯಗಳಲ್ಲಿ ಹೆಚ್ಚಿನ ಕಥೆ ಗದ್ಯರೂಪದಲ್ಲೇ ಸಾಗುತ್ತದೆ. ಯುದ್ಧ, ವನವಿಹಾರ, ಜಲಕ್ರೀಡೆ, ದೂತವಾಕ್ಯ ಮುಂತಾದವುಗಳಿಗೆ ಇಲ್ಲಿ ಅವಕಾಶವಿಲ್ಲ. ಆದರೆ ಕಥಾನಿರ್ವಹಣೆಗೆ ಬೇಕಾದ ಪಾತ್ರಸಂವಾದಗಳಿವೆ. ಆಧುನಿಕ ಪ್ರಸಂಗಗಳಲ್ಲಿ ಕಂಡುಬರುವ ಪ್ರಸಿದ್ಧ ರಾಗತಾಳ ಶೀರ್ಷಿಕೆಯ ಛಂದೋಬಂಧಗಳು ಇಲ್ಲಿ ಇಲ್ಲವೇ ಇಲ್ಲ. ಆದರೆ ಈ ಪದ್ಯಗಳನ್ನು ಬೇರೆ ಬೇರೆ ರಾಗತಾಳಗಳಲ್ಲಿ ಹಾಡುವುದು ಸಾಧ್ಯ. ಯಕ್ಷಗಾನ ಕಾವ್ಯರಚನೆಯ ಆರಂಭಿಕ ಕಾಲಘಟ್ಟದಲ್ಲಿ ಮೂಡಿಬಂದ ಕೃತಿ ಎಂಬುದನ್ನು ಪರಿಗಣಿಸಿದಾಗ ಇದರ ವಿಶೇಷತೆಗಳು ಗಮನಸೆಳೆಯುತ್ತವೆ.

ಸಾಂದರ್ಭಿಕ ಚಿತ್ರ

ಕಮಲಾಪುರದ ಶಾಸನ

ಪುರಂದರದಾಸರ ಕಾಲದ (1485-1565) ಕುರಿತಾಗಿ ಯಾವುದೇ ಸಂದೇಹಗಳಿಲ್ಲ. ಅವರ ಪುತ್ರ ಮಧ್ವಪತಿದಾಸರ ಪದವೊಂದರಿಂದ ಹಾಗೂ ವಿಜಯದಾಸರ ಸುಳಾದಿಯೊಂದರಿಂದ ಪುರಂದರರ ನಿಧನವನ್ನು ಕ್ರಿ.ಶ. 1565 ಎಂದು ಖಚಿತವಾಗಿ ನಿರ್ಣಯಿಸಲಾಗಿದೆ. ಶ್ರೀವ್ಯಾಸರಾಯರಿಗೆ ಶ್ರೀಕೃಷ್ಣದೇವರಾಯನು ಬೆಟ್ಟಕೊಂಡ ಗ್ರಾಮವನ್ನು ದತ್ತಿಯಾಗಿ ನೀಡಿದ ಕ್ರಿ.ಶ. 1526 ತೇದಿಯ ತಾಮ್ರಶಾಸನವೊಂದು (ಎಪಿಗ್ರಾಫಿಕಾ ಇಂಡಿಕಾ: ಸಂ.21, ಪುಟ 139) ಪುರಂದರದಾಸರ ಮೂವರು ಮಕ್ಕಳ ಹೆಸರನ್ನು ದಾಖಲಿಸಿದೆ. ಇದರಲ್ಲಿ ಅವರು ‘ವಸಿಷ್ಠಗೋತ್ರ ಸಂಭೂತ’ರೆಂದು ಹೇಳಲಾಗಿದೆ. ಹರಿದಾಸದೀಕ್ಷೆಯನ್ನು ಪಡೆಯುವುದರ ಮೊದಲಿಗೆ ಅವರ ‘ಶ್ರೀನಿವಾಸ ನಾಯಕ’ ಎಂಬ ಹೆಸರಿನಲ್ಲಿದ್ದ ‘ನಾಯಕ’ ಉಪನಾಮಕ್ಕೆ ‘ಚಿನ್ನಭಂಡಾರ’ ನಿರ್ವಹಣೆಯ ಪದನಾಮವೆಂದು ತಿಳಿಯುವುದಕ್ಕೆ ಇದು ಪೂರಕವಾಗಿದೆ. ಪುರಂದರರ ಹೆಂಡತಿಯ ‘ಮೂಗುತಿಯ ಪ್ರಕರಣ’ದ ಐತಿಹ್ಯವನ್ನು ಮಾತ್ರ ವಿಜೃಂಭಿಸಿ ಐತಿಹಾಸಿಕ ಸತ್ಯಗಳನ್ನು ಮರೆಮಾಚಿರುವುದು ಸೋಜಿಗವೆನಿಸುತ್ತದೆ.

ಜನ್ಮಸ್ಥಳ ಯಾವುದು?

ಪುರಂದರದಾಸರ ಹುಟ್ಟೂರನ್ನು ಪೂನಾ ಹತ್ತಿರದ ಪುರಂದರಗಡವೆಂದು ಶಾಲಾಪಠ್ಯದಲ್ಲೇ ಓದಿಕೊಂಡು ಬಂದಿದ್ದೇವೆ. ಆದರೆ ಅಲ್ಲಿ ಆ ಬಗೆಗಿನ ಯಾವುದೇ ಕುರುಹುಗಳಿಲ್ಲ. ಪುರಂದರದಾಸರು ದಾಸರಾಗುವ ಮೊದಲು ಚಿನ್ನದ ವ್ಯಾಪಾರವನ್ನು ಮಾಡುತ್ತಿದ್ದುದರಿಂದ ಅದು ಅಂತಹ ವ್ಯಾಪಾರಸ್ಥಳವೂ ಅಲ್ಲ. ಜೊತೆಗೆ ಅಲ್ಲಿ ಕರ್ನಾಟಕ ಸಂಗೀತವು ಜನಪ್ರಿಯವಾಗಿದ್ದ ಯಾವ ಲಕ್ಷಣಗಳೂ ಕಂಡುಬರುತ್ತಿಲ್ಲ. ಈಗ ಜನವಸತಿಯಿರದ ಪುರಂದರಗಡವು ಭಾರತ ಸರ್ಕಾರದ ಭೂಸೇನೆಯ ನೆಲೆಯಾಗಿದೆ. ಇತಿಹಾಸ ಸಂಶೋಧಕರಾದ ಶ್ರೀನಿವಾಸರಾವ್ ಕೊರಟಿಯವರು ಪುರಂದರರ ಜನ್ಮಸ್ಥಳವು ಮಲೆನಾಡಿನ ಮಡಿಲಿನಲ್ಲಿದ್ದ ‘ಪುರಂದರ ಅಗ್ರಹಾರ’ವೆಂದೂ, ಅದು ಈಗ ನಿರ್ನಾಮವಾಗಿರಬೇಕೆಂದೂ ಊಹಿಸಿದ್ದಾರೆ. ಅನಂತರ ಕಪಟರಾಳ ಕೃಷ್ಣರಾಯರೆಂಬ ವಿದ್ವಾಂಸರು ಪುರಂದರರ ಜನ್ಮಸ್ಥಳವನ್ನು ತೀರ್ಥಹಳ್ಳಿಯ ಆರಗದ ಸಮೀಪದ ‘ಪುರಂದರ’ ಎಂಬ ಹಳ್ಳಿಯೆಂದು ಹೇಳಿದುದುಂಟು. ಈ ಗೊಂದಲನಿವಾರಣೆಗಾಗಿ ಕರ್ನಾಟಕ ಸರ್ಕಾರವು ತಜ್ಞರ ಒಂದು ಸಮಿತಿಯನ್ನು ರಚಿಸಿ (2017) ಸತ್ಯಶೋಧನಾವರದಿಯನ್ನು ಸಲ್ಲಿಸುವಂತೆ ಆದೇಶಿಸಿತ್ತು.

ಆ ಸಮಿತಿಯು ನಾಲ್ಕಾರು ಬಾರಿ ಸಭೆ ಸೇರಿ ಅಂತಿಮ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿತ್ತು. ಆದರೆ ಅದರ ಬಗೆಗೆ ಸರ್ಕಾರದ ಉಪಕ್ರಮಗಳೇನು ಎಂಬುದು ಇದುವರೆಗೂ ತಿಳಿದುಬಂದಿಲ್ಲ. ಕರ್ನಾಟಕದ ಸಾಂಸ್ಕೃತಿಕ ಇತಿಹಾಸದಲ್ಲಿ ಪ್ರಮುಖರಾಗಿರುವ ಪುರಂದರದಾಸರ ಕುರಿತು ಅಧಿಕೃತತೆಯನ್ನು ದಾಖಲಿಸುವುದು ಎಲ್ಲರ ಹೊಣೆಯಾಗಬೇಕು. ಇತ್ತೀಚೆಗೆ ಪುರಂದರದಾಸರು ರಚಿಸಿದ ಯಕ್ಷಗಾನ ಕೃತಿ ಲಭಿಸಿರುವುದರಿಂದ ಅವರು ಕರ್ನಾಟಕದ ಮಲೆನಾಡು ಸೀಮೆಯವರೆನ್ನುವುದು ಇನ್ನಷ್ಟು ಸ್ಪಷ್ಟವಾಗಿದೆ. ಆದುದರಿಂದ ಸರ್ಕಾರವು ಈ ಬಗ್ಗೆ ನಿರ್ಣಾಯಕ ನಿಲುವನ್ನು ತಳೆಯುವುದು ಸೂಕ್ತ ಎನಿಸುತ್ತದೆ.

ಜಲಮೂಲ ಸಂರಕ್ಷಣೆ ಮಹಿಳೆಯರ ಕಾಯಕ

10ನೇ ಪುಟದಿಂದ..

ಆದರೆ ಕೋಲಾರ ಭಾಗದಲ್ಲಿ ಕೆರೆಗಳು ತುಂಬಿ ಕೋಡಿ ಬಿದ್ದಾಗ ದೀಪೋತ್ಸವ ನಡೆಯುತ್ತದೆ!

ಕೆಲವು ಮಹಿಳೆಯರ ಸಂಘಟಿತ ಪ್ರಯತ್ನದಿಂದ ಕೆರೆಗಳು, ಬಾವಿಗಳು, ಕಾಲುವೆಗಳಲ್ಲಿ ನೀರು ಕಾಣಿಸುತ್ತಿದೆ. ಹೀಗಿರುವಾಗ ಕೇವಲ ಪೂಜನೀಯ ಭಾವದಿಂದ ಕೆರೆಗಳನ್ನು ನೋಡಿದರೆ ಸಾಲು, ಜಲ ಮೂಲಗಳನ್ನು ಸಂರಕ್ಷಿಸುವ ಜವಾಬ್ದಾರಿಯನ್ನು ಎಲ್ಲರೂ ಹೊರಬೇಕಲ್ಲವೇ?

ರೈತರ ಜೊತೆ ನೀರಿನ ಸಂರಕ್ಷಣೆ ಕುರಿತು ಸಮಾಲೋಚನಾ ಸಭೆ

ಆರೋಹಣ ಸಂಸ್ಥೆ ಮಾಡುತ್ತಿರುವ ಕೆಲಸವೇನು?

ಮಕ್ಕಳ ಸರ್ವಾಂಗೀಣ ಅಭಿವೃದ್ಧಿ, ಮಹಿಳೆಯರ ಆರೋಗ್ಯ ಹಾಗೂ ಆರ್ಥಿಕ ಸಬಲೀಕರಣ, ಪರಿಸರ ಸಂರಕ್ಷಣೆ ಆರೋಹಣ ಗ್ರಾಮೀಣಾಭಿವೃದ್ಧಿ ಸಂಸ್ಥೆಯ ಧ್ಯೇಯ. ನೀರು, ಮಣ್ಣು, ಹಸಿರೀಕರಣಕ್ಕೆ ಒತ್ತು ನೀಡುತ್ತಿದೆ. ಸ್ಥಳೀಯ ಸಂಸ್ಥೆಗಳ ಸಹಭಾಗಿತ್ವದಲ್ಲಿ ಕೆಲಸ ಮಾಡುತ್ತಿದೆ.

ಗ್ರಾಮಗಳ ಕೆರೆಗಳ ಸುತ್ತ ನೂರಾರು ಗಿಡ ನೆಡಲಾಗಿದೆ. ವಿವಿಧ ಸ್ತ್ರೀಶಕ್ತಿ ಸಂಘಗಳ ಸುಮಾರು 520 ಮಹಿಳೆಯರಿಗೆ ಸಪೋಟ, ಸೀಬೆ, ತೆಂಗು ಸೇರಿದಂತೆ ವಿವಿಧ ಸಸಿ ವಿತರಿಸಿ ಪ್ರತಿ ಮನೆ ಮುಂದೆ ನೆಡಬೇಕೆಂಬ ಯೋಜನೆ ರೂಪಿಸಿದೆ. 50 ಹೆಣ್ಣು ಮಕ್ಕಳಿಗೆ ಆರ್ಥಿಕ ಸಹಾಯ ನೀಡಿ ಅವರನ್ನು ಓದಿಸುವ ಜವಾಬ್ದಾರಿಯನ್ನೂ ಹೊಂದಿದೆ.

ಸರ್ಕಾರಿ ಶಾಲಾ ಕಾಲೇಜುಗಳ ಅಭಿವೃದ್ಧಿಯಲ್ಲೂ ಸಂಸ್ಥೆ ತೊಡಗಿಸಿಕೊಂಡಿದೆ. ಮುಳಬಾಗಿಲು ತಾಲ್ಲೂಕಿನ ಆವಣಿ, ತಾಯಲೂರು ಸೇರಿದಂತೆ ಹಲವು ಶಾಲಾ ಕಾಲೇಜುಗಳಿಗೆ ಟೇಬಲ್, ಕುರ್ಚಿ, ಕಂಪ್ಯೂಟರ್, ಗ್ರಂಥಾಲಯಕ್ಕೆ ಪುಸ್ತಕ, ಹಸಿರು ಫಲಕ, ಕಲಿಕಾ ಸಾಮಗ್ರಿ ನೀಡಿದೆ. ಕಂಪ್ಯೂಟರ್ ಪ್ರಯೋಗಾಲಯ ನಿರ್ಮಿಸಿ ಕೊಟ್ಟಿದೆ. ಅಂಗನವಾಡಿಗಳಿಗೆ ಆಟದ ಸಾಮಗ್ರಿ ನೀಡಿದೆ. ಮಹಿಳೆಯರಿಗೆ ಟೈಲರಿಂಗ್ ಯಂತ್ರಗಳನ್ನು ಕೊಟ್ಟಿದೆ. ಆರ್ಥಿಕ ಸಾಕ್ಷರತೆ ಕಾರ್ಯಕ್ರಮ ಹಮ್ಮಿಕೊಂಡಿದೆ. ಯುವತಿಯರು, ಮಹಿಳೆಯರ ಆರೋಗ್ಯ ಕಾಳಜಿ ಸಂಬಂಧ ಶಿಬಿರಗಳನ್ನು ಆಯೋಜಿಸುತ್ತಿದೆ. ವಾರ್ಡ್ ಹಾಗೂ ಗ್ರಾಮ ಸಭೆಗಳಲ್ಲಿ ಪಾಲ್ಗೊಳ್ಳುವ ಮಹತ್ವ ತಿಳಿಸುತ್ತಿದೆ.

ಸ್ಮಶಾನದೊಳಗೆ ಉದ್ಯಾನವೋ..!

10ನೇ ಪುಟದಿಂದ

ಸ್ಮಶಾನದಲ್ಲಿ ಬೆಳೆದ ನುಗ್ಗೆಕಾಯಿ, ಹಣ್ಣುಗಳು ಊರಿನವರೇ ಬಂದು ತೆಗೆದುಕೊಂಡು ಹೋಗುತ್ತಾರೆ. ಸ್ಮಶಾನದ ತರಕಾರಿ ಅಂಥ ಹೆದರದೇ; ಕೆಲವರು ಅವುಗಳನ್ನು ಬಳಸಿ ಅಡುಗೆ ಮಾಡಿಕೊಂಡು ಊಟ ಮಾಡುತ್ತಾರೆ.

ಮುಕ್ತಿವನ ವೀಕ್ಷಣೆಗೆ ಸಚಿವರು, ಸ್ವಾಮೀಜಿಗಳು ಸೇರಿದಂತೆ ದೇಶ ವಿದೇಶಗಳ ವಿವಿಧ ಕ್ಷೇತ್ರಗಳ ಜನರು ಬಂದು ಹೋಗಿದ್ದಾರೆ. ಅಮೆರಿಕದ ವಾಷಿಂಗ್ಟನ್ ಡಿಸಿ ಹಾಗೂ ದೆಹಲಿ, ಕೇರಳ, ತಮಿಳುನಾಡು, ಆಂಧ್ರಪ್ರದೇಶ ಸೇರಿದಂತೆ ವಿವಿಧ ರಾಜ್ಯಗಳ ಐಎಎಸ್ ಅಧಿಕಾರಿಗಳು, ಅಲ್ಲಿನ ರಾಜ್ಯ ಸರ್ಕಾರಗಳ ಉನ್ನತ ಅಧಿಕಾರಿಗಳು ಮುಕ್ತಿವನಕ್ಕೆ ಭೇಟಿ ನೀಡಿದ್ದಾರೆ. ಕೊಪ್ಪಳದ ಗವಿಸಿದ್ಧೇಶ್ವರ ಸ್ವಾಮೀಜಿ ‘ಸತ್ತ ಮೇಲೆ ಮುಕ್ತಿಯಲ್ಲ; ಜೀವಂತ ಇರುವಾಗಲೇ ಮುಕ್ತಿಯ ಅನುಭವ ಬರುವ ಜೀವನ್ಮುಕ್ತಿಧಾಮ’ ಎಂದು ಅಭಿಪ್ರಾಯವನ್ನು ಅಲ್ಲಿ ಇಟ್ಟಿರುವ ಪುಸ್ತಕದಲ್ಲಿ ದಾಖಲಿಸಿದ್ದಾರೆ.

ಸ್ಮಶಾನ ಎಂದರೆ ಮುಳ್ಳುಕಂಟಿ ಬೆಳೆದು ಕಾಲಿಡಲು ಅಸಾಧ್ಯ ಎನ್ನುವಂತಹ ಸ್ಥಳ ಎನ್ನುವುದು ಬಹುತೇಕರ ನಂಬಿಕೆ. ಆದರೆ, ಇಲ್ಲಿನ ಮುಕ್ತಿವನ ಮಾತ್ರ ಇದಕ್ಕೆ ಅಪವಾದ ಮತ್ತು ಮಾದರಿಯೂ ಹೌದು.

ಶವಸಂಸ್ಕಾರಕ್ಕೆ ಬಂದ ಮುಸ್ಲಿಮರ ಪ್ರಾರ್ಥನಾ ಸ್ಥಳ

ಸಾಮಾಜಿಕ ಕಲ್ಪನೆಯೇ ಶ್ರೇಷ್ಠ

‘ಮುಕ್ತಿವನ ಕೇವಲ ಉದ್ಯಾನ ಮಾದರಿಯಲ್ಲಿದೆ ಎಂಬ ಕಾರಣಕ್ಕೆ ಮಾತ್ರ ಮಹತ್ವ ಪಡೆದಿಲ್ಲ. ಸರ್ವಧರ್ಮೀಯರು ಒಂದೇ ಕಡೆಯಲ್ಲಿ ಅಂತ್ಯಕ್ರಿಯೆ ಮಾಡುವ ಪದ್ಧತಿಯನ್ನು ನಮ್ಮ ಗ್ರಾಮದಲ್ಲಿ ಮೊದಲಿನಿಂದ ಹಾಕಿಕೊಂಡು ಬಂದಿದ್ದಾರೆ. ಈ ಸಾಮಾಜಿಕ ಕಲ್ಪನೆಯೇ ಶ್ರೇಷ್ಠ’ ಎನ್ನುತ್ತಾರೆ ಸಚಿವ ಎಚ್.ಕೆ.ಪಾಟೀಲ.

ನ್ಯಾಯಮೂರ್ತಿ ಎಂ.ಸಿ.ಜೈನ್ ಮುಕ್ತಿವನಕ್ಕೆ ಭೇಟಿ ನೀಡಿದ ಸಂದರ್ಭದಲ್ಲಿ, ‘ಇಲ್ಲಿನ ಸರ್ವಧರ್ಮದ ಪದ್ಧತಿ ನೋಡಿ ಭಾರತ ಪಾಠ ಕಲಿಯಬೇಕಿದೆ ಎಂದು ಹೇಳಿದ್ದರು’ ಎಂದು ನೆನಪಿಸಿಕೊಂಡರು.

‘ನ್ಯಾಯಾಧೀಶರು, ಸಚಿವರು, ಸ್ವಾಮೀಜಿಗಳು ಮುಕ್ತಿವನದ ಸಾಮಾಜಿಕ ಕಲ್ಪನೆ ಮೆಚ್ಚುತ್ತಾರೆ. ಆದರೆ, ಅದಕ್ಕೂ ಮೀರಿ ಯಾರು ತಮ್ಮವರನ್ನು ಕಳೆದುಕೊಂಡಿರುತ್ತಾರೋ ಅಥವಾ ಅಂತ್ಯಕ್ರಿಯೆ ಬಂದಿರುತ್ತಾರೋ ಅವರಿಗೆ ಸಮಾಧಾನ ಆಗುವ ರೀತಿಯಲ್ಲಿ ವ್ಯವಸ್ಥೆ ಇರಬೇಕಾದದ್ದು ಅತ್ಯಂತ ಅಗತ್ಯ’ ಎಂದು ಅವರು ಹೇಳಿದರು.

ನರೇಗಾ ಯೋಜನೆಯಡಿ ಅಭಿವೃದ್ಧಿ

‘ಮುಕ್ತಿವನ ಗ್ರಾಮಸ್ಥರ ಬಳಕೆಗೆ ಮಾತ್ರ ಲಭ್ಯ. ಆರಂಭದಲ್ಲಿ ಹುಲಕೋಟಿಯವರು ಶ್ರಮದಾನ ಹಾಗೂ ಯಂತ್ರೋಪಕರಣಗಳ ಬಳಕೆ ಮೂಲಕ ಒಂಬತ್ತು ಎಕರೆಯನ್ನು ಸುಂದರ ವನವನ್ನಾಗಿ ಮಾಡಿದರು. 2005 ರ ನಂತರ ಪ್ರತಿ ವರ್ಷ ಅಭಿವೃದ್ಧಿ ಕೆಲಸಗಳನ್ನು ಮಾಡಿಕೊಂಡು ಬರಲಾಗಿದೆ’ ಎಂದು ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಧನೇಶ್ ಡಿ. ಹೇಳಿದರು.

‘ನರೇಗಾ ಯೋಜನೆ ಹಾಗೂ ಸರ್ಕಾರ ಇತರೆ ಅನುದಾನ ಬಳಸಿ ರಸ್ತೆ, ಚರಂಡಿ ನಿರ್ಮಾಣ, ಉದ್ಯಾನದಲ್ಲಿ ಸಸಿ ನೆಡುವುದು ಹೀಗೆ ಪ್ರತಿವರ್ಷ ಒಂದಿಲ್ಲೊಂದು ಅಭಿವೃದ್ಧಿ ಕೆಲಸ ಕೈಗೊಳ್ಳಲಾಗಿದೆ’ ಎಂದು ತಿಳಿಸಿದರು.

‘ಮುಕ್ತಿವನ ಮಾಜಿ ಶಾಸಕ ಡಿ.ಆರ್.ಪಾಟೀಲ ಮತ್ತು ಸಚಿವ ಎಚ್.ಕೆ.ಪಾಟೀಲ ಅವರ ಪರಿಕಲ್ಪನೆ. ಅವರ ಮಾರ್ಗದರ್ಶನದಲ್ಲೇ ಊರಿನ ಹಿರಿಯರು, ಪಂಚಾಯಿತಿ ಅಧ್ಯಕ್ಷರು, ಸದಸ್ಯರು ಸ್ಮಶಾನವನ್ನು ಮುಕ್ತಿವನವನ್ನಾಗಿಸಿದ್ದಾರೆ. ಇದರ ನಿರ್ವಹಣೆಗೆ ಪ್ರತಿ ವರ್ಷ ₹1 ಲಕ್ಷದಿಂದ ₹1.50 ಲಕ್ಷ ವ್ಯಯಿಸುತ್ತೇವೆ’ ಎಂದು ಮಾಹಿತಿ ನೀಡಿದರು.

ಕಥೆ
ಶೇಖರ್ ಎಂ.ಬಿ. ಅವರ ದೆವ್ವ ಹಿಡಿದ ಹುಡುಗ
prajavani.net/short-story

ಕವನ
ಹೇಮಾ ನಾಯಕ ಅವರ ಗಾರೋ ಗುಡ್ಡ ಹತ್ತಿ
www.prajavani.net/poetry

ಸಾದರ ಸ್ವೀಕಾರ
ಹೊಸ ಪುಸ್ತಕಗಳ ಮಾಹಿತಿಗೆ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರತಿಕ್ರಿಯೆಗಳನ್ನು ಕಳಿಸಲು
bhanuvara@prajavani.co.in



ಮಾರುಕಟ್ಟೆಯಲ್ಲಿ ಲಭ್ಯ
ಹೊನ್ನ ಕಣಜ
ಪ್ರಜಾವಾಣಿ ದೀಪಾವಳಿ ಕಥಾಸ್ಪರ್ಧೆಯಲ್ಲಿ ಬಹುಮಾನ ಪಡೆದ ಸಣ್ಣ ಕಥೆಗಳ ಸಂಕಲನ
ಪ್ರತಿಗಳಿಗಾಗಿ ಸಂಪರ್ಕಿಸಿ
ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿಮಿಟೆಡ್
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ
ಬೆಂಗಳೂರು – 560001
ದೂರವಾಣಿ : 080 22161900/901/913/914
Shop Online www.navakarnataka.com

ಮೊದಲ ಓದು

ಚೇತೋಹಾರಿ ಚಿತ್ರ-ಕಥೆ



ಸಿನೆಮಾ ಬಂಡಿ
ಲೇ: ಬಸವರಾಜು ಮೇಗಲಕೇರಿ
ಪ್ರ: ಪಲ್ಲವ
ಸಂ: 8880087235

ಪತ್ರಕರ್ತರಾಗಿರುವ ಬಸವರಾಜು ಮೇಗಲಕೇರಿ ಅವರ ಸಿನಿಮಾ ಕುರಿತ ಬರಹಗಳ ಸಂಕಲನ ‘ಸಿನೆಮಾ ಬಂಡಿ’. 2008 ರಿಂದ 2025 ರ ವರೆಗೆ ವಿವಿಧ ಪತ್ರಿಕೆ, ವೆಬ್‌ಸೈಟ್‌ಗಳಲ್ಲಿ ಪ್ರಕಟವಾದ ಅವರ ಸಿನಿಮಾ ಬರಹಗಳು ವ್ಯಕ್ತಿಗಳು, ಚಿತ್ರಗಳು, ಬೆಳ್ಳಿ ಹೆಜ್ಜೆಗಳು ಎನ್ನುವ ಮೂರು ವಿಭಾಗಗಳಲ್ಲಿ ಹರಡಿಕೊಂಡಿವೆ. ವ್ಯಕ್ತಿಗಳ ವಿಭಾಗದಲ್ಲಿ ನಟರು, ನಿರ್ದೇಶಕರು, ನಿರ್ಮಾಪಕರ ಜತೆಗೆ ಛಾಯಾಚಿತ್ರಗ್ರಾಹಕ, ಹಾಡುಗಾರ, ಪೋಸ್ಟರ್ ಡಿಸೈನರ್ ಕೂಡ ಸ್ಥಾನ ಪಡೆದಿದ್ದಾರೆ. ಹಾಗೆಯೇ ಕನ್ನಡ ಸಿನಿಮಾವನ್ನು ಬೆಳೆಸಿದವರ ಜತೆಗೆ ಹಿಂದಿ, ತಮಿಳು, ಬಂಗಾಳಿ ಚಿತ್ರಗಳ ಸಾಧಕರ ಕಥೆಯೂ ಇದೆ. ಹಾಲಿವುಡ್ ನಟಿ ಎಲಿಜಬೆತ್ ಟೇಲರ್, ನಟ ಜೀನ್ ಹ್ಯಾಕ್‌ಮನ್ ಕುರಿತ ಆಸಕ್ತಿಕರ ಲೇಖನಗಳಿವೆ. ರಾಜ್‌ಕುಮಾರ್ ಅವರ ಸಾಧನೆಯನ್ನು ಬಣ್ಣಿಸಿದಷ್ಟೇ ಪ್ರೀತಿಯಿಂದ ಪಾರ್ವತಮ್ಮ ರಾಜ್‌ಕುಮಾರ್ ಅವರ ಮಹತ್ವ ಕುರಿತೂ ಲೇಖಕರು ಹೇಳಿದ್ದಾರೆ.

ಸಿನಿಮಾಗಳ ವಿಭಾಗದಲ್ಲಿ ಕನ್ನಡದ ‘ಕಸ್ತೂರಿ ನಿವಾಸ’, ‘ಕಬಡ್ಡಿ’ ಮುಂತಾದ ಚಿತ್ರಗಳಿರುವಂತೆ, ತಮಿಳಿನ ‘ವಾಗೈ ಸೂಡ ವಾ’, ಕುರ್ದಿಶ್ ಭಾಷೆಯ ‘ಬೇಕಾಸ್’, ಆಸ್ಕರ್ ವಿಜೇತ ‘ಆರ್ಟಿಸ್ಟ್’, ಕುರೋಸವಾನ ‘ಫಿಯರ್’, ಸ್ಟೀವನ್ ಸ್ಪೀಲ್‌ಬರ್ಗ್‌ನ ‘ಲಿಂಕನ್’, ಬ್ರೆಜಿಲ್‌ನ ‘ಮಿಸ್ ಯು ದೆಮ್’, ಡೇನಿಷ್ ಭಾಷೆಯ ‘ದ ಗರ್ಲ್‌ಫ್ರೆಂಡ್ ವಿಥ್ ದ ನೀಡಲ್’ ಹೀಗೆ ಪ್ರಪಂಚದ ವಿವಿಧ ದೇಶ, ವಿಭಿನ್ನ ಭಾಷೆಗಳ ಅತ್ಯುತ್ತಮ ಚಿತ್ರಗಳ ಪರಿಚಯವಿದೆ. ಕರ್ನಾಟಕ ಚಲನಚಿತ್ರ ಅಕಾಡೆಮಿಯು ನಡೆಸುತ್ತಿದ್ದ ‘ಬೆಳ್ಳಿಹೆಜ್ಜೆ’ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಬೇರೆ ಬೇರೆ ವಿಭಾಗಗಳ ಹಿರಿಯರ ಕುರಿತ ಲೇಖನಗಳು ಕೃತಿಯ ಮೂರನೇ ಭಾಗದಲ್ಲಿವೆ.

ಸಿನಿಮಾಗೆ ಸಂಬಂಧಿಸಿದ ಹಲವು ಭಾಷೆಗಳ, ವಿಭಿನ್ನ ವಿಭಾಗಗಳ ಸಾಧಕರ ಬದುಕನ್ನು ಲೇಖಕರು ವಿಶಿಷ್ಟ ಶೈಲಿಯಲ್ಲಿ ಕಂಡರಿಸಿದ್ದಾರೆ. ಲೇಖಕರು ಉಲ್ಲೇಖಿಸಿರುವ ಬಹುತೇಕ ಚಿತ್ರಗಳು, ವ್ಯಕ್ತಿಗಳು ಹೊಸ ತಲೆಮಾರಿನ ಹಲವರಿಗೆ ಅಷ್ಟಾಗಿ ಪರಿಚಯವಿಲ್ಲ. ಆದರೆ, ಸಿನಿಮಾ ಚರಿತ್ರೆಯ ಭಾಗವಾದ ಈ ಚಿತ್ರಗಳ, ವ್ಯಕ್ತಿಗಳ ಬಗೆಗಿನ ಕತೆಗಳು ಹಾಗೂ ಅವುಗಳ ಜತೆಯಲ್ಲಿ ಪ್ರಕಟವಾಗಿರುವ ಚಿತ್ರಗಳು ಚೇತೋಹಾರಿ ಅನುಭವ ನೀಡುತ್ತವೆ.

ಪುಟ: 312 ₹499

ಕೆನಡಾ ಯಾನ ಕಥನ



ಮೇಪಲ್ ನಾಡಿನಲ್ಲಿ
ಲೇ: ಎಚ್.ಪಿ. ಶೆಲ್ಲಿಕೇರಿ
ಪ್ರ: ತುಳಸಿ
ಸಂ: 8050204249

ಸುಂದರ ಹಾಗೂ ರಮಣೀಯ ಸೌಂದರ್ಯವನ್ನು ಹೊಂದಿರುವ ಕೆನಡಾ ರಾಷ್ಟ್ರವು ಭಾರತದಲ್ಲಿರುವ ಹಲವರ ವೃತ್ತಿ ಹಾಗೂ ಪ್ರವಾಸಿ ತಾಣವೂ ಹೌದು.

ಟೊರಾಂಟೊ, ಒಟಾವಾ, ಡಾಸನ್, ವ್ಯಾಂಕೋರ್ ನಗರಗಳು, ಒಂಟಾರಿಯೊ ಸರೋವರ, ಸೇಂಟ್ ಲಾರೆನ್ಸ್ ನದಿಯ ಸಾವಿರಕ್ಕೂ ಹೆಚ್ಚು ದ್ವೀಪಗಳು ಹೀಗೆ ಹಲವು ಸೌಂದರ್ಯಗಳನ್ನು ತನ್ನೊಡಲಲ್ಲಿ ಹೊಂದಿರುವ ರಾಷ್ಟ್ರವಿದು. ಆದರೆ ಕೆನಡಾ ನೈಸರ್ಗಿಕ ಸೊಬಗು ಅಡಗಿರುವುದು ಅಲ್ಲಿನ ಮೇಪಲ್ ಮರಗಳಲ್ಲಿ. ಸುಂದರ ಎಲೆಗಳನ್ನು ಹೊದ್ದ ಮೇಪಲ್ ಮರಗಳ ಸಾಲಿನಲ್ಲಿ ಸಾಗುವ ಅನುಭವದೊಂದಿಗೆ ಕೆನಡಾದ ಸೊಬಗನ್ನು ಲೇಖಕ ಎಚ್.ಪಿ.ಶೆಲ್ಲಿಕೇರಿ ‘ಮೇಪಲ್ ನಾಡಿನಲ್ಲಿ’ ಕೃತಿಯಲ್ಲಿ ಅಕ್ಷರರೂಪಕ್ಕೆ ಇಳಿಸಿದ್ದಾರೆ.

ಕೆನಡಾದ ಬಾಯ್ವಾರ್ಡ್ ಮಾರುಕಟ್ಟೆ, ಮೇಜರ್ಸ್ ಹಿಲ್ ಉದ್ಯಾನ, ಪಾರ್ಲಿಮೆಂಟ್ ಹಿಲ್, ರಿಡೋ ಕಾಲುವೆ, ಸಿಟಿ ಹಾಲ್, ಬಾಟಾ ಶೂ ಸಂಗ್ರಹಾಲಯ ಸೇರಿದಂತೆ ಹಲವು ಅಪರೂಪದ ಹಾಗೂ ಅಷ್ಟೇ ಸುಂದರ ತಾಣಗಳಿಗೆ ಲೇಖಕರು ಭೇಟಿ ನೀಡಿದ ಮಾಹಿತಿ ಇಲ್ಲಿ ಚಿತ್ರಸಹಿತ ದಾಖಲಾಗಿದೆ.

ಕೆನಡಾದ ಭೌತಿಕ ಲಕ್ಷಣ, ಹವಾಮಾನ, ಅಲ್ಲಿಯ ಚಳಿ, ಬಿಸಿಲು, ಜನರ ಸ್ವಭಾವ, ಗುಣಲಕ್ಷಣ ಇತ್ಯಾದಿಗಳನ್ನು ಹೇಳುತ್ತಾ, ಆ ರಾಷ್ಟ್ರದ ಒಂದು ಸಮಗ್ರ ಚಿತ್ರಣವನ್ನು ಲೇಖಕರು ಈ ಕೃತಿಯಲ್ಲಿ ಕಟ್ಟಿಕೊಟ್ಟಿದ್ದಾರೆ. ನಯಾಗರ ಜಲಪಾತವನ್ನು ಕೆನಡಾ ಕಡೆಯಿಂದ ಕಂಡಾಗ ಆಗುವ ಅನುಭವ, ಜತೆಗೆ ತಮ್ಮ ಇಡೀ ಪ್ರವಾಸದಲ್ಲಿ ಎದುರಾದ ಪ್ರಸಂಗಗಳನ್ನು ಶೆಲ್ಲಿಕೇರಿ ಅವರು ಸೊಗಸಾಗಿ ಕಟ್ಟಿಕೊಟ್ಟಿದ್ದಾರೆ.

ಪ್ರತಿಯೊಂದು ತಾಣಗಳ ವಿಶೇಷತೆ, ಇತಿಹಾಸ, ಈಗಿನ ಸ್ಥಿತಿ, ಅವುಗಳನ್ನು ನಿರ್ವಹಿಸುತ್ತಿರುವ ರೀತಿಯನ್ನು ಲೇಖಕ ಶೆಲ್ಲಿಕೇರಿ ಅವರು ರಚಿಸಿದ್ದಾರೆ.

ಪುಟ: 196 ₹200

ಪ್ರೀತಿ–ಪ್ರೇಮಗಳ ಸುಳಿಯಲ್ಲಿ



ಇಂತಿ ಪೂರ್ವಿ
ಲೇ: ಮಧು ವೈಎನ್
ಪ್ರ: ನೆಲಮುಗಿಲು
ಸಂ: 8310295027

ಪಿಯುಸಿ ಪಾಸಾದ ವಿದ್ಯಾರ್ಥಿಗಳು ತಮ್ಮ ಹದಿವಯಸ್ಸಿನ ಮಂಗಾಟ ಬಿಟ್ಟು ಭವಿಷ್ಯ ರೂಪಿಸಿಕೊಳ್ಳುವಾಗ ಪ್ರೀತಿ ಪ್ರೇಮಗಳ ಸುಳಿಯಲ್ಲಿ ಸಿಲುಕುತ್ತಾರೆ. ಇಬ್ಬರಿಗೂ ಅವರದ್ದೇ ಆದ ಅನಿವಾರ್ಯಗಳಿವೆ. ಸರ್ಕಾರಿ ವಸತಿ ಶಾಲೆಯಲ್ಲಿ ಓದಿದ ಬಡ ವಿದ್ಯಾರ್ಥಿನಿ, ಮಧ್ಯಮ ವರ್ಗದ ನಿರೀಕ್ಷೆಗಳ ಭಾರ ಹೊತ್ತ ವಿದ್ಯಾರ್ಥಿ ಇಬ್ಬರ ನಡುವಿನ ಸೆಳೆತ ಮತ್ತು ಎಳೆತವೇ ಕಾದಂಬರಿಯಾಗಿದೆ.

ಇಬ್ಬರಲ್ಲಿಯೂ ತಮ್ಮ ಪರಿಸ್ಥಿತಿಗಳಿಂದ ಮುಂದೆ ಬರಬೇಕು ಎನ್ನುವ ತುಡಿತವಿದೆ. ಆದರೆ ಸಮಾಜದ ಅಡೆತಡೆಗಳು, ವಾಸ್ತವದ ನೋವು, ನಲಿವುಗಳು, ಸಮವಯಸ್ಕರ ಅನುಕೂಲಗಳು ಇವರನ್ನು ಕಟ್ಟಿಹಾಕುತ್ತವೆ. ವೈದ್ಯಕೀಯ ಸೀಟು ತ್ಯಾಗ ಮಾಡಿ, ಎಂಜಿನಿಯರಿಂಗ್‌ಗೆ ಬರುವ ಪೂರ್ವಿ, ವೈದ್ಯಕೀಯ ಬಯಸಿದ್ದೂ ಅಂಕಗಳಿಲ್ಲದೆ ಎಂಜಿನಿಯರಿಂಗ್ ಓದಲು ಬರುವ ಶರತ್. ಯಾರು ಯಾರಿಗಾಗಿ ತ್ಯಾಗ ಮಾಡಿದರು? ಯಾರು ಯಾರಿಗೆ ಉಪಕಾರ ಮಾಡಿದರು? ನಮ್ಮ ಸಮಾಜದ ಜಾತಿ ಮತ್ತು ವರ್ಗಗಳ ಶ್ರೇಣಿಗಳಿಂದ ಅದ್ಹೇಗೆ ಬಸವಳಿದರು? ಶಿಕ್ಷಣ ವ್ಯವಸ್ಥೆಯಲ್ಲಿರುವ ಓರೆಕೋರೆಗಳು, ವಸತಿ ನಿಲಯಗಳಲ್ಲಿಯ ಸ್ಥಿತಿ ಧಾರ್ಮಿಕ ಕೇಂದ್ರದಲ್ಲಿರುವ ವಿದ್ಯಾರ್ಥಿಗಳ ಪರಿಸ್ಥಿತಿ ಮತ್ತು ಎಲ್ಲ ಕಡೆಯೂ ಊಟಕ್ಕೆ ಇರುವ ಪಡಿಪಾಟಲು ಎಲ್ಲವೂ ಚಿತ್ರಕಶಕ್ತಿಯ ಬರೆಹದಲ್ಲಿ ಕಂಡು ಬರುತ್ತವೆ.

ಮಕ್ಕಳ ಮೋಹ, ಅವರಿಂದಿರುವ ನಿರೀಕ್ಷೆ, ಔದಾರ್ಯ ತೋರುವಂತಿರುವವರ ಸ್ವಾರ್ಥ, ನಗರ ಬದುಕಿನಲ್ಲಿ ಸ್ವಕೇಂದ್ರಿತ ವ್ಯಕ್ತಿತ್ವಗಳ ಅನಾವರಣ, ಹೀಗೆ ಹಲವು ಆಯಾಮಗಳಲ್ಲಿ ಮನುಷ್ಯರ ಸಹಜಗುಣಗಳನ್ನೇ ಬಿಡಿಸುತ್ತ ಹೋಗುತ್ತದೆ ಈ ಕಾದಂಬರಿ. ಈ ಜಗತ್ತು ಇರುವುದೇ ಹೀಗೆ ಎಂಬ ಹತಾಶೆ ಮೂಡುವಾಗಲೇ ಕೆಲವು ಪಾತ್ರಗಳು ಈಗಲೂ ಮಾನವೀಯತೆ ಉಳಿದಿವೆ ಎಂಬುದನ್ನೂ ಹೇಳಿ ಹೋಗುತ್ತವೆ. ನಮ್ಮ ಸಮಾಜದ ಚೌಕಟ್ಟನ್ನು ಮೀರುವುದು ಹೇಗೆ? ಮೀರಿದ ನಂತರವೂ ಯಾವ ಬಂಧನದಲ್ಲಿದ್ದೇವೆ ಎಂಬುದು ಗೊತ್ತಾಗದ ಬಂಧಗಳೇ ಹೇಗೆ ಮೇಲುಗೈ ಸಾಧಿಸುತ್ತವೆ ಇವೆಲ್ಲವು ಪ್ರೀತಿ ಪ್ರೇಮಗಳೊಂದಿಗೆ ನಾವೂ ಇದ್ದೇವೆ ಎಂಬಂತೆ ಭಾಸವಾಗುತ್ತ ಹೋಗುತ್ತವೆ. ನಮ್ಮೊಳಗಿನ ಸಣ್ಣತನಕ್ಕೆ ಕನ್ನಡಿ ಹಿಡಿಯುತ್ತಲೇ, ಔದಾರ್ಯದ ಕೈದೀವಿಗೆ ಹಿಡಿಯುವಂತೆ ಮಾಡುತ್ತದೆ ಈ ಪುಸ್ತಕದ ಓದು.

ಪುಟ: 268 ₹300

ಬೆರಗಿನ ಬಿಲಂ ಗುಹೆ



ಆಂಧ್ರ ಪ್ರದೇಶದ ಶ್ರೀಶೈಲಂನಲ್ಲಿರುವ ಗುಹೆಗಳೊಳಗಿನ ಸುತ್ತಾಟ ಮಾಯಾಲೋಕದಲ್ಲಿ ಸಂಚರಿಸಿದ ಅನುಭವ ನೀಡುತ್ತದೆ. ಈ ವಿಸ್ಮಯಕಾರಿ ಗುಹೆಗಳು ಧಾರ್ಮಿಕವಾಗಿಯೂ ಮಹತ್ವವನ್ನು ಪಡೆದುಕೊಂಡಿವೆ. ಇವುಗಳೊಳಗಿನ ಹೆಜ್ಜೆಯನ್ನು ಲೇಖಕರು ಇಲ್ಲಿ ದಾಖಲಿಸಿದ್ದಾರೆ

ಗುಹೆಯೊಳಗೆ ಇಳಿಯಲು ಮೆಟ್ಟಿಲಿನ ವ್ಯವಸ್ಥೆ

• ಚಿತ್ರ-ಬರಹ: ಶೇಖರ್ ಗೌಳೇರ್

ಶ್ರೀಶೈಲಂನ ಅಕ್ಕಮಹಾದೇವಿ ಅಜ್ಞಾತ ಗುಹೆಗಳನ್ನು ನೋಡಲು ಹೊರಟೆ. ಹಾದಿಯುದ್ದಕ್ಕೂ ಪಚ್ಚೆ ಪೈರುಗಳು ನಳನಳಿಸುತ್ತಿದ್ದವು. ಬೆಟ್ಟ ಏರಿ ತಿರುವಿನಲ್ಲಿ ಅವಕು ಜಲಾಶಯ ದಾಟಿ, ಬಸ್ಸು ರಸ್ತೆ ಬದಿಯಲ್ಲಿ ನಿಂತಿತು. ಅಲ್ಲಿ ಕಮಾನಿನ ದೊಡ್ಡ ಬೋರ್ಡಿನ ಮೇಲೆ ಬಿಲಂ ಗುಹೆಗಳು ಎಂದು ಬರೆದಿತ್ತು.

ಗುಹೆ ನೋಡಲು ಯಾವ ಬೆಟ್ಟದ ಕಡೆ ಹೋಗಬೇಕೆನ್ನುವ ಅನುಮಾನ ಕಾಡಿತ್ತು. ಅಷ್ಟರಲ್ಲಿ 40 ಅಡಿ ಎತ್ತರದ ಬುದ್ಧನ ಶ್ವೇತ ಪ್ರತಿಮೆ ಸ್ವಾಗತಿಸಿತು. ತುಸು ದೂರದಲ್ಲಿ ಗಿಡ, ಮರ, ಉದ್ಯಾನ, ಕಚೇರಿ ಕಟ್ಟಡ ಎದುರಾದವು. ಅದು ವೃತ್ತಾಕಾರದ ಬಾವಿಯಂಥ ಜಾಗ. ಹತ್ತು ಮೀಟರ್ ಕೆಳಕ್ಕಿಳಿದು, ಏಣಿ ಮೂಲಕ ಬಾಯ್ದೆರದ ಸುರಂಗ ಪ್ರವೇಶಿಸಿದೆ. ಸ್ವಲ್ಪ ದೂರದಲ್ಲಿಯ ಸಂಶೋಧಕ ಗುಹಾ ವಿಜ್ಞಾನಿ ಗೇಬರ್ ಹೆಸರಿನ ಸಭಾಂಗಣ ದಾಟಿ ಮುನ್ನಡೆದೆ.

ಸುಣ್ಣದಕಲ್ಲು, ಪಾಟಿಕಲ್ಲು, ಗ್ರಾನೈಟ್‌ಗಳ ವೈವಿಧ್ಯಮಯ ಚಿತ್ತಾರಗಳು ಗುಹೆಯ ಗೋಡೆಗಳ ಮೇಲೆ ಗಮನ ಸೆಳೆಯುತ್ತಿದ್ದವು. ಅಲ್ಲಲ್ಲಿ ನೆಲ ತಗ್ಗು, ಉಬ್ಬಾಗಿತ್ತು. ಕೆಲವು ಕಡೆ ನೆಲಕ್ಕೆ ಹಾಸುಗಲ್ಲು ಹಾಕಿದ್ದರು. ಪುಟ್ಟ ಪುಟ್ಟ ಸೇತುವೆಯಂಥ ದಾಟು ಹಾದಿಗಳು, ಕಬ್ಬಿಣದ ಮೆಟ್ಟಿಲುಗಳಿದ್ದವು. ಅದು ಕತ್ತಲೆಯ ಗುಹೆಯಂತೂ ಅಲ್ಲ. ಎಲ್ಲಾ ಕಡೆ ಬಣ್ಣ ಬಣ್ಣದ ದೀಪಗಳನ್ನು ಅಳವಡಿಸಿದ್ದರಿಂದ ಕಿನ್ನರಲೋಕದಂತೆ ಶೋಭಿಸುತ್ತಿತ್ತು. ಒಳಗೆ 3 ಕಿ.ಮೀ. ಉದ್ದದ ಸುರಂಗವಿದ್ದರೂ ಪ್ರವಾಸಿಗರಿಗೆ ಅನುಮತಿ ಇದ್ದುದು ಒಂದೂವರೆ ಕಿ.ಮೀ. ವರೆಗೆ. ಅದನ್ನು ಪೂರ್ಣಗೊಳಿಸುವುದೇ ಸಾಹಸದ ಕೆಲಸ. ಸುಸ್ತಾದಾಗ ಕೆಲವು ಕಡೆ ವಿಶ್ರಮಿಸಲು ಜಾಗವಿತ್ತು. ಗುಹೆಯೊಳಗೆ ಎಣಿಸುತ್ತ ನಡೆದರೆ ಒಟ್ಟು ಹದಿನಾರು ಕಡೆ ಕವಲೊಡೆದ ಸುರಂಗಗಳಿದ್ದವು. ಸರಿಯಾದ ಮಾರ್ಗದರ್ಶನವಿಲ್ಲದಿದ್ದರೆ ಯಾವ ಸುರಂಗ ನೋಡಬೇಕು, ಯಾವುದನ್ನು ಬಿಡಬೇಕು ಎನ್ನುವ ಗೊಂದಲ ಸೃಷ್ಟಿ ಆಗುತ್ತದೆ. ಧ್ಯಾನ ಮಂದಿರ, ಬೆಕ್ಕಿನ ಕಿಂಡಿ, ಸಂತರ ಶಯ್ಯಾಗೃಹ, ಆಲದಮರದ ಬಿಳಲು, ಸಪ್ತ ಸ್ವರಾಲು, ಮನ ಮಂದಿರ, ಕೋಟಿ ಲಿಂಗ ಹಾಗೂ ಪಾತಾಳ ಗಂಗೆ ಇವು ಗುಹೆಯೊಳಗಿನ ವೈವಿಧ್ಯಮಯ ಚಿತ್ತಾರಗಳು.

ನೂರು ಚದರಡಿ ವಿಸ್ತಾರದ ಮಂಟಪ, ಮದುವೆ ಮನೆಯಂತೆ ಸಿಂಗಾರಗೊಂಡಿತ್ತು. ಗುಹೆಯ ಹೊರಗೆ ಗಾಳಿ ಯಂತ್ರಗಳಿದ್ದವು. ಅವುಗಳಿಂದ ಕೊಳವೆಗಳ ಮೂಲಕ ಗುಹೆಯೊಳಗೆ ಪ್ರಾಣವಾಯುವಿನ ಹವೆಯನ್ನು ಅಲ್ಲಲ್ಲಿ ಬಿಡಲಾಗುತ್ತಿತ್ತು. ಉಸಿರಾಟಕ್ಕೆ ಮತ್ತು ಸೆಕೆಯನ್ನು ತಡೆದುಕೊಳ್ಳಲು ಅವು ಸಹಾಯವಾಗುತ್ತವೆ.

ಕಿರಿದಾದ ಸುರಂಗದಲ್ಲಿ ನೆಲ ಕೆಸರುಮಯವಾಗಿತ್ತು. ಹೆಜ್ಜೆಗಳು ಜಾರುತ್ತಿದ್ದವು. ರಾಡಿ ಬಟ್ಟೆಗಳಿಗೆ ಸಿಡಿಯುತ್ತಿತ್ತು. ಶೂ ಕಳಚಿ ಅಲ್ಲಿಯೇ ಬಿಟ್ಟು ಮುನ್ನಡೆದೆ. ಅಂಟು ಜೇಡಿಮಣ್ಣಿನ ಕಪ್ಪು ಅರ್ಲು ದಾಟುವುದೇ ದುಸ್ತರವಾಗಿತ್ತು. ಕೈಯಲ್ಲಿ ಕ್ಯಾಮೆರಾ ಹಿಡಿದು ಮುಂದೆ ಸಾಗುವುದು ಸಾಧ್ಯವೇ ಇರಲಿಲ್ಲ. ಎದುರಿನಿಂದ ಬಂದ ಹುಡುಗರು 'ಮುಂದೆ ಭಾರೀ ಕೆಸರಿದೆ, ಹುಷಾರು' ಎಂದರು. ಅಂತೂ ದಾಟಿದೆ. ಎರಡು ಕಡೆ ಸುರಂಗಗಳು ಕವಲೊಡೆದವು. ಎಡಕ್ಕೆ ಮನ ಮಂದಿರ (ಕೋಟಿ ಲಿಂಗಾಲು) ಬಲಕ್ಕೆ ಪಾತಾಳ ಗಂಗೆಯ ಸುರಂಗಗಳು ಬಣ್ಣದ ದೀಪದ ಬೆಳಕಿನಲ್ಲಿ ತೆರೆದುಕೊಂಡಿದ್ದವು.

ಮನ ಮಂದಿರದ ಕಡೆ ನುಸುಳಿದೆ. ಕೆಲವು ಕಡೆ ಕತ್ತಲು, ರಾಡಿ, ಕಡಿಮೆ ಎತ್ತರದ ಸುರಂಗ. ಕುಳಿತು, ತೆವಳಿಕೊಂಡು ಮುಂದೆ ಹೋದೆ. ಕೈಯಲ್ಲಿ ಟಾರ್ಚು, ಹೆಡ್‌ಲೈಟ್ ಇತ್ತು. ಮುಂದಿನ ಹತ್ತು ನಿಮಿಷದಲ್ಲಿ ಮಾಯಾಲೋಕ ಎದುರಾಯಿತು. ಮೇಲ್ಛಾವಣಿಯಿಂದ ದ್ರಾಕ್ಷಿ ಗೊಂಚಲಿನಂಥ, ಕೊಬ್ಬರಿ ಗಿಟುಕದಂಥ ತೊಂಗಲು ಶಿಲೆಗಳು ನೇತು ಬಿದ್ದಿದ್ದವು. ಸೂಜಿ ಮೊನೆಯಂಥ ಅವುಗಳ ತುದಿಯಿಂದ ಬೂದು ಬಣ್ಣದ ಹಾಲಿನಂಥ ಹನಿ ತೊಟ್ಟಿಕ್ಕುತ್ತಿದ್ದವು. ಮತ್ತೊಂದು ಕಡೆ ಸ್ಟಲಾಗ್‌ಮೈಟ್ ತೊಂಗಲು ಶಿಲೆ ಸಾಲು ಕಂಬಗಳಂತೆ ಹುತ್ತದೋಪಾದಿಯಲ್ಲಿ ಬೆಳೆದು ನಿಂತಿದ್ದವು. ಅವುಗಳೇ ಸ್ಥಳೀಯರ ಪ್ರಕಾರ ಕೋಟಿ ಲಿಂಗಾಲು.

ಗುಹೆಗಳ ಪ್ರವೇಶ ದ್ವಾರದ ಸಮೀಪವಿರುವ ಬುದ್ಧನ ಪ್ರತಿಮೆ

ಬಣ್ಣದ ದೀಪಗಳ ಬೆಳಕಿನಲ್ಲಿ ತೆರೆದುಕೊಳ್ಳುವ ಮಾಯಾಲೋಕ

ಪಾತಾಳ ಗಂಗೆ

ಬಿಲಂ ಗುಹೆಯ ಅಂತಿಮ ಭಾಗವೇ ಪಾತಾಳ ಗಂಗೆ. ಗುಹೆಯು ಅತಿ ತಗ್ಗಾದ 30 ಮೀಟರ್ ಆಳದ ಪ್ರದೇಶದಲ್ಲಿದೆ. ಅಲ್ಲಿಗೆ ಹೋಗುವುದಂತೂ ಕಠಿಣ. ಹೊಲ-ಗದ್ದೆಗಳಲ್ಲಿ ಕೆಸರು ತುಳಿದು ಅಭ್ಯಾಸವಿದ್ದವರು, ಗುಡ್ಡ-ಬೆಟ್ಟ ಹತ್ತುವ ಚಾರಣಿಗರಿಗೆ ಇದೇನು ಕಷ್ಟದ ಕೆಲಸವಲ್ಲ. ಸಹಜವಾಗಿಯೇ ನೀರು ತಗ್ಗಿನ ಕಡೆ ಜಿನುಗುತ್ತದೆ. ಹೆಸರೇ ಹೇಳುವಂತೆ ಪಾತಾಳ ಗಂಗೆಯಲ್ಲಿ ಚಿಕ್ಕ ತಾಜಾ ಸಿಹಿನೀರಿನ ತೊರೆ, ಜಲಪಾತ ಕಾಣುತ್ತದೆ. ಅಸಾಧ್ಯ ಕತ್ತಲ ಸಾಮ್ರಾಜ್ಯವದು. ಅಲ್ಲಿ ಹೆಚ್ಚು ಸಮಯ ಇರಲು ಅಸಾಧ್ಯ. ಹೀಗೆ ಸತತ ಎರಡು ಗಂಟೆ ಬಿಲಂ ಗುಹೆಗಳ ಮಾಯಾಲೋಕದಲ್ಲಿ ಕಳೆದು ಹೋದ ಸಮಯವನ್ನು ನೆನಪಿಸಿಕೊಂಡರೆ ರೋಮಾಂಚನವಾಗುತ್ತದೆ.

ಅವಕು ಜಲಾಶಯವಿರುವ ಸುತ್ತ ಎರ್ರಮಲ್ಲೈ ಬೆಟ್ಟಗಳ ಸರಣಿ. ಸಂಪೂರ್ಣ ಸುಣ್ಣದ ಕಲ್ಲಿನ ಪ್ರದೇಶ. ಅಲ್ಲಿ ಚಿತ್ರಾವತಿ ನದಿಯ ಉಪನದಿ ಪೆನ್ನಾರ್ ಹರಿಯುತ್ತಿತ್ತು. ಒಮ್ಮೆ ಪೆನ್ನಾರ್ ನದಿಯ ನೀರು ಬಿಲಂ ಗುಹಾ ಪ್ರದೇಶಕ್ಕೆ ನುಗ್ಗಿ ಗುಹೆಗಳು ನಿರ್ಮಾಣವಾದವೆಂದು ಭೂಗರ್ಭ ವಿಜ್ಞಾನಿಗಳು ಹೇಳುತ್ತಾರೆ.

ಸುಣ್ಣದ ಕಲ್ಲುಗಳಿಗೆ ನೀರು ಹಾಕಿದಾಗ ಅವು ಕರಗಿ ಗುಳ್ಳೆ ಬರುವುದನ್ನು ನೋಡಿದ್ದೇವೆ. ಅದೇ ರೀತಿ ಇಂಗಾಲ ಸಂಯುಕ್ತದ ನೀರು ಸುಣ್ಣದ ಕಲ್ಲಿನ ಪ್ರದೇಶಕ್ಕೆ ನುಗ್ಗಿದಾಗ ಶಿಲೆಗಳು ಕರಗಿ ಹೋಗುತ್ತವೆ. ಬೆಣಚು, ಬಸಾಲ್ಟ್ ಹಾಗೂ ಗ್ರಾನೈಟ್ ಕಲ್ಲು ಮಾತ್ರ ಕರಗದೆ ಗುಹೆಗಳಿಗೆ ಛಾವಣಿಯಾಗಿ ರಕ್ಷಣೆ ಒದಗಿಸುತ್ತವೆ. ಸಂಸ್ಕೃತ-ತೆಲುಗು ಭಾಷೆಯಲ್ಲಿ ಬಿಲಂ ಎಂದರೆ ಬಿಲ. ಇಲಿ, ಹೆಗ್ಗಣ, ಹಾವು ವಾಸಿಸುವ ಬಿಲಗಳ ಹೆಸರನ್ನು ನಾವು ಕೇಳಿದ್ದೇವೆ. ಅದೇ ಅರ್ಥದಲ್ಲಿ ಬಿಲಂ ಗುಹೆ ಹೆಸರು ಪಡೆದುಕೊಂಡಿದೆ. ಹತ್ತಿರದಲ್ಲಿ ಬಿಲಂ ಎಂಬ ಗ್ರಾಮವೂ ಇದೆ.

ಧಾರ್ಮಿಕ ಮಹತ್ವ

ವಿಸ್ಮಯಕಾರಿ ಬಿಲಂ ಗುಹೆಗಳು ಧಾರ್ಮಿಕವಾಗಿಯೂ ಮಹತ್ವ ಪಡೆದುಕೊಂಡಿವೆ. ಸಾವಿರಾರು ವರ್ಷಗಳ ಹಿಂದೆ ಈ ಗುಹೆಗಳಲ್ಲಿ ಬೌದ್ಧ, ಜೈನ ಮುನಿಗಳು ತಪಸ್ಸು ಮಾಡಿದ್ದರೆಂದು ಜನರ ನಂಬಿಕೆ. ಮಡಕೆ ಚೂರುಗಳಂಥ ಪಳೆಯುಳಿಕೆಗಳು ಅಲ್ಲಿ ದೊರೆತಿದ್ದರಿಂದ ಅಲ್ಲಿ ಮನುಷ್ಯರೂ ವಾಸವಾಗಿದ್ದರೆಂದು ಹೇಳಲಾಗುತ್ತದೆ. ಆಧುನಿಕವಾಗಿ ಈ ಗುಹೆಗಳನ್ನು 1884ರಲ್ಲಿ ಬ್ರಿಟಿಷ್ ಭೂಗರ್ಭ ವಿಜ್ಞಾನಿ ಹಾಗೂ ಪ್ರಾಚ್ಯಶಾಸ್ತ್ರಜ್ಞ ರಾಬರ್ಟ್ ಬ್ರೂಸ್ ಫೂಟೆಯವರು ಖನಿಜಗಳನ್ನು ಹುಡುಕುತ್ತಿದ್ದಾಗ ಪತ್ತೆ ಮಾಡಿದರು. ಹಳ್ಳಿಯ ಜನರಿಗೆ ಹಿಂದೆ ಗುಹೆಗಳು ಕಣ್ಣಿಗೆ ಬಿದ್ದಿದ್ದವು. ಅವರು ಆ ಗುಹೆಗಳ ಪಾತಾಳ ಗುಂಡಿಗಳನ್ನು ದೇವತೆಗಳ ವಾಸಸ್ಥಾನವೆಂದು ತಿಳಿದಿದ್ದರು.

ಒಂದು ಶತಮಾನದ ನಂತರ 1982-84ರಲ್ಲಿ ಜರ್ಮನಿಯ ವಿಜ್ಞಾನಿ ಡ್ಯಾನಿಯಲ್ ಗೇಬರ್ ತನ್ನ ತಂಡದೊಂದಿಗೆ ಬಂದು ಸಂಪೂರ್ಣ ಅಧ್ಯಯನಕ್ಕಾಗಿ ಸರ್ವೆ ನಡೆಸಿದರು. ಅದೇ ಸಂದರ್ಭದಲ್ಲಿ ಸ್ಥಳೀಯರು ಡ್ಯಾನಿಯಲ್ ತಂಡದವರೊಂದಿಗೆ ಕೈಜೋಡಿಸಿ, ತಿಪ್ಪೆ ಗುಂಡಿಯಾಗಿದ್ದ ಗುಹೆಗಳನ್ನು ಅಭಿವೃದ್ಧಿಗೊಳಿಸಿದರು.

1988ರಲ್ಲಿ ಆಂಧ್ರ ಪ್ರದೇಶ ಸರ್ಕಾರ ಗುಹಾ ಸಂಕೀರ್ಣವನ್ನು ಸಂರಕ್ಷಿತ ಪ್ರದೇಶವೆಂದು ಘೋಷಿಸಿತು. 1999ರಲ್ಲಿ ಗುಹೆಗಳಿಗೆ ಹೊಸರೂಪ ನೀಡಿತು. 2003ರಲ್ಲಿ ಬಿಲಂ ಗುಹೆಗಳು ಪ್ರವಾಸಿಗರಿಗೆ ನೋಡಲು ಮುಕ್ತವಾದವು. ರಾಷ್ಟ್ರೀಯ ಪ್ರಾಚ್ಯವಸ್ತು ಸಂಗ್ರಹಾಲಯ ಹಾಗೂ ಪುರಾತತ್ವ ಇಲಾಖೆಗಳು ಬಿಲಂ ಗುಹೆಗಳ ಉಸ್ತುವಾರಿ ವಹಿಸಿಕೊಂಡ ಮೇಲೆ ಅವು ದೇಶದಲ್ಲಿಯೇ ಅತ್ಯುತ್ತಮ ಗುಹಾ ಸಂಕೀರ್ಣವೆಂದು ಹೆಸರು ಪಡೆದಿವೆ.

ಮೇಘಾಲಯದ ಜಯಂತಿಯಾ ಬೆಟ್ಟದ ಕ್ರೆಮ್ ಲಿಯಾತ್ ಪ್ರಾಹ್ ಗುಹೆಗಳು 30 ಕಿ.ಮೀ. ಉದ್ದವಿದ್ದು, ದೇಶದಲ್ಲಿಯೇ ದೊಡ್ಡ ಗುಹೆ ಎನಿಸಿಕೊಂಡಿವೆ. ಅದೇ ರೀತಿ ಬಿಲಂ ಗುಹೆಗಳು ದೇಶದಲ್ಲಿಯೇ 2ನೇ ಅತೀ ಉದ್ದವಾದ ಗುಹೆ ಎನಿಸಿಕೊಂಡಿರುವುದು ಹೆಮ್ಮೆಯ ಸಂಗತಿ.

ಯಶಸ್ಸಿನ ರಹದಾರಿ ಈ ಕೋಲುದಾರಿ

10ನೇ ಪುಟದಿಂದ..

ಪುರುಷನ ಅಹಂಕಾರ ಅಭಿಮಾನವಾಗಿ ಬದಲಾದಾಗ ಮಾತ್ರ ಸಂಗಾತಿಯ ಯಶಸ್ಸನ್ನೂ ಸಂಭ್ರಮಿಸಬಹುದು ಎಂದು ಅವರು ಹೇಳುತ್ತಾರೆ. ಶ್ರೀದೇವಿ ಅವರು ಬಾಲ್ಯದಲ್ಲಿಯೇ ಪೋಲಿಯೋದಿಂದಾಗಿ ನಡೆಯುವ ಚೈತನ್ಯ ಕಳೆದುಕೊಂಡಿದ್ದರು.

'ಕುಂದುಕೊರತೆ ಕೇಳಲಿಲ್ಲ. ನಮ್ಮಿಬ್ಬರ ನಡುವೆ ನಮ್ಮ ವೈಕಲ್ಯ ಬರಲೇ ಇಲ್ಲ. ಮಾತನಾಡಲು ಆರಂಭಿಸಿದ ಮೂವತ್ತು ದಿನಗಳಲ್ಲಿ ಇಬ್ಬರೂ ಜೀವನ ಸಂಗಾತಿಯಾಗುವ ತೀರ್ಮಾನಕ್ಕೆ ಬಂದಿದ್ದೆವು. ನಮ್ಮ ಪ್ರೇಮಕತೆಯೇ ಚಂದ. ಅದನ್ನು ಆತ್ಮಕತೆಯಲ್ಲಿ ವಿವರವಾಗಿ ಬರೆದಿರುವೆ. ಫೋನ್ ಕರೆಯಿಂದ ಆರಂಭವಾಗಿದ್ದು, ಅವರೆನ್ನ ಜ್ಯೋತಿಯಾಗಿ ಬದಲಾಗಿದ್ದು ಬರಿಯ ಮಾತುಗಳಿಂದಲ್ಲ, ಅದೊಂದು ಅನುಭೂತಿ. ಎಲ್ಲ ಸಾಂಗತ್ಯದಲ್ಲಿಯೂ ಆ ಅನುಭೂತಿ ಇರಬೇಕು. ದೈಹಿಕ ವೈಕಲ್ಯಗಳು ನೇಪಥ್ಯಕ್ಕೆ ಸರಿದು, ಸದೃಢ ಬಾಂಧವ್ಯ ಬೆಳೆಯುತ್ತದೆ. ಇಲ್ಲದಿದ್ದಲ್ಲಿ ನಾವೆಷ್ಟೇ ಗಟ್ಟಿಯಾಗಿದ್ದರೂ ಸಾಂಗತ್ಯದಲ್ಲಿ ಕೊರತೆಗಳು ತುಂಬಿಕೊಳ್ಳುತ್ತವೆ' ಎನ್ನುತ್ತಾರೆ ಸಿದ್ದೇಶ್.

ಇದೀಗ ಗಜೇಂದ್ರಗಡದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಇವರಿಬ್ಬರ ದೃಢಚಿತ್ತದ ಮುಂದೆ ಯಾವ ದೌರ್ಬಲ್ಯದ ಆಟವೂ ನಡೆಯಲಿಲ್ಲ. ಒಲವಿನಲ್ಲಿ ಒಂದಾದವರು ಇದೀಗ ವೈಕಲ್ಯವೆಂಬುದು ದೈಹಿಕ ಮಾತ್ರ. ಚೈತನ್ಯಕ್ಕೆ ವೈಕಲ್ಯವು ಒಂದಿನಿತೂ ವ್ಯತ್ಯಾಸ ಮಾಡುವುದಿಲ್ಲ. ಆಂತರ್ಯದ ಶಕ್ತಿ ಜಾಗೃತಗೊಳಿಸಿಕೊಳ್ಳಬೇಕು, ಅಷ್ಟೆ.

ಸಿದ್ದೇಶ್ 'ಕೋಲುದಾರಿ' ಎಂಬ ಆತ್ಮಕತೆಯನ್ನು ಬರೆದಿದ್ದಾರೆ. ಇದರಲ್ಲಿ ಎಲ್ಲ ಅಡೆತಡೆಗಳನ್ನೂ ಮೀರಿ, ಸ್ವಾವಲಂಬಿಯಾಗಿ ಬದುಕುವ ತುಡಿತ ಹೇಗೆ ಗೆದ್ದಿತು ಎಂಬ ವಿವರಗಳಿವೆ.

ಬಿಸಿಲು ಕೋಲಲ್ಲ, ಬೆಳಕಿನ ಕೋಲು

ಜೀವನ ಮೇಲಿಂದ ಮೇಲೆ ಪೆಟ್ಟುಗಳನ್ನು ಕೊಡುತ್ತದೆ. ಮೊದಲು ದೃಷ್ಟಿ ಕಸಿಯಿತು. ಆಮೇಲೆ ಅವಕಾಶಗಳನ್ನು ಕಸಿಯಿತು. ಆದರೆ ಯಾವ ಕೆಲಸವನ್ನೂ ಸಣ್ಣದೆನ್ನದೆ ಶ್ರದ್ಧೆಯಿಂದ ಮಾಡತೊಡಗಿದೆ. ಪ್ರತಿ ತೊಡಕೂ, ಪ್ರತಿ ಅಡೆತಡೆ ಬಂದಾಗ ಮುಂದಿನ ದಾರಿ ಸುಗಮವಾಗುವುದು ಎಂಬ ಆಶಾಭಾವವನ್ನು ಅಮ್ಮ ತುಂಬುತ್ತಿದ್ದಳು. ಈ ಕ್ಷಣದ ನೋವನ್ನು ಮರೆಯಲು ಎಲ್ಲಿಯಾದರೂ ತೊಡಗಿಸಿಕೊಳ್ಳಬೇಕಿತ್ತು. ಅದಕ್ಕಾಗಿ ನಿರಂತರ ಅಧ್ಯಯನವನ್ನೇ ಅವಲಂಬಿಸಿದೆ. ಓದು ನಮ್ಮನ್ನು ಎಲ್ಲದರಿಂದಲೂ ಬಿಡುಗಡೆಗೊಳಿಸುತ್ತದೆ. ಕೆಲವೊಮ್ಮೆ ನಮಗೆ ಬಂಧಿಸಿರುವುದೇನು ಎಂಬುದೂ ಅರಿವಿರುವುದಿಲ್ಲ, ಬಿಡುಗಡೆಗೆ ಹಾತೊರೆಯುತ್ತೇವೆ. ಅಂಥ ಬಿಡುಗಡೆ ಈ ಓದಿನಿಂದ ಸಾಧ್ಯ ಎಂಬುದು ಅರ್ಥವಾಯಿತು. ಕೈಗೆ ಸಿಗದ ಬಿಸಿಲು ಕೋಲಲ್ಲ, ಬೆಳಕಿನ ಕೋಲೆಂದು ಭಾವಿಸಿ ಮುನ್ನಡೆದೆ.

–ಸಿದ್ದೇಶ್ ಕೆ

ಮಜ ಮಜ ಮಜಕೂರ

ಎಂ.ಎಸ್.ಪೂಜಾರ

ಬೆಳೆದ ಮಣ್ಣಿನ ಕುಂಡ!

majakoora@prajavani.co.in

ಜಾಣಪದ ಆಟ

1.ಇಲ್ಲಿ ಕೊಟ್ಟಿರುವ ಅನುಸ್ವಾರಕ್ಕೆ ಹೊಂದಿಕೆಯಾಗುವಂತೆ ಕೆಲವು ಅಕ್ಷರ ಸೇರಿಸಿ ಕನ್ನಡ ನಾಡಿನ ಕೆಲವು ಪ್ರಸಿದ್ಧ ಸಾಹಿತಿಗಳ ಹೆಸರನ್ನು ಬರೆಯಲು ಪ್ರಯತ್ನಿಸಿ. ಸುಳಿವು ನೋಡಿ.

									ಸುಳಿವು
1							ಂ		ಯಕ್ಷಗಾನದ ನಂಟು
2		ಂ							ಧಾರವಾಡದವರು
3			ಂ						ಯುಗದ ಕವಿ
4					ಂ				ಸಂಸ್ಕಾರ ಸಿನಿಮಾ ನೆನಪಿಸಿಕೊಳ್ಳಿ
5			ಂ						ರಾಷ್ಟ್ರ ಕವಿ ಬಿರುದು
6						ಂ			ನಾಟಕಕಾರ
7				ಂ					ಕಗ್ಗದ ಕರ್ತೃ

2.ಇಲ್ಲಿ ಕೊಟ್ಟಿರುವ 'ಪ್ರತಿ' ಎಂಬ ಪದಕ್ಕೆ ಅಕ್ಷರ ಪಟ್ಟಿಯಿಂದ ಇನ್ನೆರಡಕ್ಷರ ಸೇರಿಸಿ ನಾಲ್ಕಕ್ಷರದ ಅರ್ಥಬದ್ಧ ಪದ ರಚಿಸಿ.

1	ಪ್ರ	ತಿ			=	
2	ಪ್ರ	ತಿ			=	
3	ಪ್ರ	ತಿ			=	
4	ಪ್ರ	ತಿ			=	
5	ಪ್ರ	ತಿ			=	

ಅಕ್ಷರ ಪಟ್ಟಿ					
	ಬ	ಷ್ಠಿ	ಪ	ವಾ	ಧ
	ರೋ	ದ	ರೂ	ತ	ಬಿಂ

ಡಣ್ಣ ಚಕ್ಕು ಕೀಶ್ರ ಸ್ಪೃ ಕಥೆಯ

ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು

ಗುಂಡ ನರ್ಸರಿಯಿಂದ ಮಾವಿನ ಗಿಡವೊಂದನ್ನು ತಂದು ಸಣ್ಣ ಮಣ್ಣಿನ ಕುಂಡವೊಂದರಲ್ಲಿ ನೆಟ್ಟ. ದಿನವೂ ಅದಕ್ಕೆ ನೀರುಣಿಸುತ್ತಿದ್ದ. ದಿನ ಉರುಳಿತು. ನೆಟ್ಟ ಗಿಡ ಬೆಳೆಯಲೇ ಇಲ್ಲ. ಬದಲಾಗಿ ಮಣ್ಣಿನ ಕುಂಡವೇ ದೊಡ್ಡದಾಗುತ್ತಿತ್ತು. ಇದನ್ನು ಕಂಡು ಗುಂಡ ಅವಾಕ್ಕಾದ.



ನಿಮ್ಮ GK ಎಷ್ಟು OK?

ಸಂಖ್ಯೆಗಳಲ್ಲಿ ಸಾಮಾನ್ಯ ಜ್ಞಾನ

1. ಡೈಮಂಡ್ ಜುಬಲಿ ಎಷ್ಟು ವರ್ಷಕ್ಕೆ ಆಚರಿಸುತ್ತಾರೆ?
2. ವಾಲಿಬಾಲ್ ಆಟಗಾರರ ಒಟ್ಟು ಸಂಖ್ಯೆ ಎಷ್ಟು?
3. ಕೀಟಗಳಿಗೆ ಎಷ್ಟು ಕಾಲಗಳಿರುತ್ತವೆ?
4. ವೇದಗಳು ಎಷ್ಟು?
5. ಶುದ್ಧ ಬಂಗಾರವನ್ನು ಎಷ್ಟು ಕ್ಯಾರಟ್‌ನಲ್ಲಿ ಅಳೆಯುತ್ತಾರೆ?
6. ಗಡಿಯಾರದಲ್ಲಿ ಗಂಟೆ 3 ಆದಾಗ ಎರಡು ಮುಳ್ಳುಗಳ ನಡುವೆ ಎಷ್ಟು ಅಂಶದ ಕೋನ ಉಂಟಾಗಿರುತ್ತದೆ?
7. ಈಗ ಕನ್ನಡ ಭಾಷೆಗೆ ಮೂಲಾಕ್ಷರಗಳೆಷ್ಟು?
8. ₹2000 ಆಗಬೇಕಾದರೆ ₹50ರ ನೋಟುಗಳು ಎಷ್ಟು ಬೇಕಾಗುತ್ತವೆ?
9. ಒಂದು ದಶಕದಲ್ಲಿ ಎಷ್ಟು ವರ್ಷಗಳಿರುತ್ತವೆ?
10. ಆಹಾರದಲ್ಲಿ ಎಷ್ಟು ರಸಗಳಿವೆ?

ಸರಿ ಉತ್ತರ ಮುಂದಿನ ವಾರ..

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರವನ್ನು ಮೇಲಿರುವ ಇಮೇಲ್‌ಗೆ ಕಳುಹಿಸಿ...

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು

ಯಜತ್ ಎಚ್.ಆರ್.
ಹೊಸಕೋಟೆ

ಮುದ್ದು
ಮೈಸೂರು

ಅಲೀಜಾ ಅಫ್ತಾಬ್ ಮೋಮಿನ್, ಬಾಗಲಕೋಟೆ

ಸಾಧ್ವಿ ಹಳ್ಳೂರ
ಬೆಂಗಳೂರು

ಭುವಿ ಪಿ.ಜೆ.
ದಾವಣಗೆರೆ

ಅಭಿಷೇಕ್ ಎಂ.
ಪುತ್ತೂರು

ಗಣಿತದಲ್ಲಿ ಗರ್ದಿ ಗಮ್ಮತ್ತು

ವಿಲೋಮ ಸಂಖ್ಯಾ ವಿನೋದ

ಇಲ್ಲಿರುವ ಸಂಖ್ಯೆಗಳಿಗೆ 18 ಕೂಡಿಸಿದರೆ ಮೂಲ ಸಂಖ್ಯೆಯ ವಿಲೋಮ ಸಂಖ್ಯೆ ಸಿಗುತ್ತದೆ.

1	02	+	18	=	20
2	13	+	18	=	31
3	24	+	18	=	42
4	35	+	18	=	53
5	46	+	18	=	64
6	57	+	18	=	75
7	68	+	18	=	86
8	79	+	18	=	97

ಇಂಥ ಕೆಲವು ಸಂಖ್ಯೆಗಳನ್ನು ನೀವೂ ಹುಡುಕಿ

ಪದ-ಬದಲಾಟ

ಇಲ್ಲಿರುವ ಪದದ ಅಕ್ಷರಗಳನ್ನೇ ಬಳಸಿಕೊಂಡು ಬೇರೊಂದು ಪದ ಮಾಡಿ

ನೋಟಿನ ಆಟ

ಗೋಜು-ಮೋಜು

ಇಲ್ಲಿರುವ ಅಂಕಿಗಳ ಮಧ್ಯೆ ಗಣಿತದ ಯಾವ ಚಿಹ್ನೆ ಬಳಸಿ 5ಕ್ಕಿಂತ 4ನ್ನು ದೊಡ್ಡದಾಗಿ ಮಾಡಬಹುದು.

4 5

ಶಬ್ದಾಟ

ಇಲ್ಲಿರುವ ಪದಕ್ಕೆ ಕೊಟ್ಟಿರುವ ಅಕ್ಷರ ಜೋಡಿಸಿ ಬೇರೆ ಪದ ಮಾಡಿ

ಕಳೆಬೇಡ + ಲೆ =

ಪದ ಸಂಕಲನ

ಇಲ್ಲಿ ಕೊಟ್ಟಿರುವ ಎರಡು ಪದ ಹಾಗೂ ಒಂದು ಅಕ್ಷರವನ್ನು ಕೂಡಿಸಿ ಅರ್ಥಬದ್ಧ ಒಂದೇ ಪದ ಮಾಡಿರಿ.

1	ಹರ	+	ಕಾಲ	+	ಣ	=	
2	ಕೆಲ	+	ಕರ	+	ಟೆ	=	
3	ಕೋವಿ	+	ಸಾರ	+	ಟಿ	=	
4	ನೆಲ	+	ಪಾಶು	+	ಪ	=	
5	ಜಡಿ	+	ನಗೆ	+	ರಾ	=	

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದಸಂಕಲನ: 1.ಆಕಳಚರ್ಮ 2.ಉನ್ನತಗುರಿ 3.ಸಮಾಜಮುಖಿ 4.ಗಾಯನಮಾಡು 5.ಕಾಲಹರಣ

ಜಾಣಪದ ಆಟ: 1.ಗಣಾಚಾರಿ 2.ಗೂಢಚಾರಿ 3.ಬ್ರಹ್ಮಚಾರಿ 4.ಕರ್ಮಚಾರಿ 5.ಪಾದಚಾರಿ 6.ಅನಾಚಾರಿ 7.ಶಿವದಾರ 8.ಉಡದಾರ 9.ಅನಾದಾರ 10.ಜಮಾದಾರ 11.ದೂರುದಾರ 12.ಸರದಾರ

ಶಬ್ದಾಟ: ತೊಗರಿಬೇಳೆ

ರೋಹಿತ್, ಕೊಹ್ಲಿ ಆಟಕ್ಕೆ ರಾಂಚಿ ಸಿದ್ಧ

ಭಾರತ–ದ.ಆಫ್ರಿಕಾ ಏಕದಿನ ಪಂದ್ಯ ಇಂದು
ಆತಿಥೇಯ ತಂಡಕ್ಕೆ ರಾಹುಲ್ ನಾಯಕ

ತಾಲೀಮು ನಡೆಸಿದ ಭಾರತ ತಂಡದ ಆಟಗಾರರಾದ ಯಶಸ್ವಿ ಜೈಸ್ವಾಲ್, ರೋಹಿತ್ ಶರ್ಮಾ, ಕುಲದೀಪ್ ಯಾದವ್ ಮತ್ತು ಅರ್ಷದೀಪ್ ಸಿಂಗ್ ಪಿಟಿಐ ಚಿತ್ರಗಳು

ರಾಂಚಿ (ಪಿಟಿಐ): ಕನ್ನಡಿಗ ಕೆ.ಎಲ್. ರಾಹುಲ್ ನಾಯಕತ್ವದಲ್ಲಿ ಭಾರತ ತಂಡವು ಭಾನುವಾರ ದಕ್ಷಿಣ ಆಫ್ರಿಕಾ ಎದುರಿನ ಏಕದಿನ ಸರಣಿಯ ಮೊದಲ ಪಂದ್ಯದಲ್ಲಿ ಕಣಕ್ಕಿಳಿಯಲಿದೆ. ‘ಸೂಪರ್ ಸ್ಟಾರ್’ ಆಟಗಾರರಾದ ರೋಹಿತ್ ಶರ್ಮಾ ಮತ್ತು ವಿರಾಟ್ ಕೊಹ್ಲಿ ಅವರು ಆಡಲಿರುವುದು ತಂಡದ ಬಲ ಹೆಚ್ಚಿಸಿದೆ.

ಬ್ಯಾಟಿಂಗ್ ಅಭ್ಯಾಸದಲ್ಲಿ ವಿರಾಟ್ ಕೊಹ್ಲಿ

2027ರಲ್ಲಿ ನಡೆಯಲಿರುವ ಏಕದಿನ ವಿಶ್ವಕಪ್ ಕ್ರಿಕೆಟ್ ಟೂರ್ನಿಗೆ ತಂಡದ ಪೂರ್ವಸಿದ್ಧತೆಯ ಭಾಗವಾಗಿ ಈ ಟೂರ್ನಿಯನ್ನು ನೋಡಲಾಗುತ್ತಿದೆ. ಮುಂದಿನ ಎರಡು ತಿಂಗಳ ಅವಧಿಯಲ್ಲಿ ಭಾರತ ತಂಡವು ಒಟ್ಟು ಆರು ಏಕದಿನ ಪಂದ್ಯಗಳಲ್ಲಿ ಆಡಲಿದೆ. ದಕ್ಷಿಣ ಆಫ್ರಿಕಾ ಎದುರಿನ ಸರಣಿ ಮತ್ತು ನ್ಯೂಜಿಲೆಂಡ್ ವಿರುದ್ಧ ಮೂರು ಪಂದ್ಯಗಳನ್ನು ಜನವರಿಯಲ್ಲಿ ಆಡಲಿದೆ.

ಟೆಸ್ಟ್ ಕ್ರಿಕೆಟ್ ಸರಣಿಯಲ್ಲಿ ತೆಂಬಾ ಬವುಮಾ ಬಳಗದ ಎದುರು ಆತಿಥೇಯ ತಂಡವು ಹೀನಾಯ ಸೋಲು ಅನುಭವಿಸಿತ್ತು. ಗಾಯದಿಂದಾಗಿ ಶುಭಮನ್ ಗಿಲ್ ಅವರು ಸರಣಿಯ ಮಧ್ಯದಲ್ಲಿಯೇ ನಿರ್ಗಮಿಸಿದ್ದರು. ಈ ಸರಣಿಯಲ್ಲಿಯೂ ಆಡುತ್ತಿಲ್ಲ. ಆದ್ದರಿಂದ ನಾಯಕತ್ವದ ಹೊಣೆ ರಾಹುಲ್ ಅವರ ಹೆಗಲಿಗೇರಿದೆ. ಅವರಿಗೆ ತಮ್ಮ ಬ್ಯಾಟಿಂಗ್ ಲಯವನ್ನೂ ಕಂಡುಕೊಳ್ಳುವ ಸವಾಲು ಇದೆ.

ರೋಹಿತ್ ನೆಚ್ಚಿನ ಮೈದಾನ: ರಾಂಚಿಯ ಜಾರ್ಖಂಡ್ ರಾಜ್ಯ ಕ್ರಿಕೆಟ್ ಸಂಸ್ಥೆ (ಜೆಎಸ್‌ಸಿಎ) ಮೈದಾನವು ರೋಹಿತ್ ಅವರಿಗೆ ವಿಶೇಷವಾದದ್ದು. 2013ರಲ್ಲಿ ರೋಹಿತ್ ಅವರು ಪೂರ್ಣಾವಧಿ ಆರಂಭಿಕ ಬ್ಯಾಟರ್ ಆಗಿ ಆಟವಾಡಿದ ಕ್ರೀಡಾಂಗಣ ಇದು. 37 ವರ್ಷದ ರೋಹಿತ್ ಮತ್ತೆ ಈ ಕ್ರೀಡಾಂಗಣದಲ್ಲಿ ತಮ್ಮ ಭುಜಬಲ ಪರಾಕ್ರಮ ಮೆರೆಯುವ ಛಲದಲ್ಲಿದ್ದಾರೆ. ಶುಭಮನ್ ಗಿಲ್ ಮತ್ತು ಶ್ರೇಯಸ್ ಅಯ್ಯರ್ ಅವರಿಬ್ಬರೂ ಇಲ್ಲದ ಕಾರಣ ಹನ್ನೊಂದರ ಬಳಗದ ಆಯ್ಕೆಯು ಮುಖ್ಯಕೋಚ್ ಗೌತಮ್ ಗಂಭೀರ್ ಅವರಿಗೆ ತುಸು ಸವಾಲಾಗಬಹುದು. ಸ್ಪಿನ್ ಆಲ್‌ರೌಂಡರ್ ವಾಷಿಂಗ್ಟನ್ ಸುಂದರ್, ಮಧ್ಯಮವೇಗಿ–ಆಲ್‌ರೌಂಡರ್ ನಿತೀಶ್ ಕುಮಾರ್ ರೆಡ್ಡಿ ಅವರು ಮಧ್ಯಮ ಕ್ರಮಾಂಕಕ್ಕೆ ಬಲ ತುಂಬುವ ಭರವಸೆ ಇದೆ. ತಿಲಕ್ ವರ್ಮಾ, ರಿಷಭ್ ಪಂತ್ ಮತ್ತು ನಾಯಕ ರಾಹುಲ್ ಅವರ ಆಟವೂ ಮುಖ್ಯವಾಗಲಿದೆ.

ರೋಹಿತ್ ಮತ್ತು ಜೈಸ್ವಾಲ್ ಅವರು ಇನಿಂಗ್ಸ್ ಆರಂಭಿಸುವುದು ಖಚಿತ. ಮೂರನೇ ಕ್ರಮಾಂಕದಲ್ಲಿ ವಿರಾಟ್ ಕೊಹ್ಲಿ ಆಟ ನೋಡುವ ಅವಕಾಶ ಅಭಿಮಾನಿಗಳಿಗೆ ಸಿಗಲಿದೆ.

ಬೌಲಿಂಗ್ ವಿಭಾಗವು ವೇಗಿಗಳಾದ ಪ್ರಸಿದ್ಧ ಕೃಷ್ಣ, ಅರ್ಷದೀಪ್ ಸಿಂಗ್, ಹರ್ಷಿತ್ ರಾಣಾ ಮತ್ತು ಸ್ಪಿನ್ನರ್ ಕುಲದೀಪ್ ಯಾದವ್ ಅವರ ಮೇಲೆ ಅವಲಂಬಿತವಾಗಿದೆ. ಜಸ್‌ಪ್ರೀತ್ ಬೂಮ್ರಾ ಮತ್ತು ಮೊಹಮ್ಮದ್ ಸಿರಾಜ್ ಅವರ ಗೈರಿನಲ್ಲಿ ಉಳಿದ ಬೌಲರ್‌ಗಳ ಹೊಣೆ ಹೆಚ್ಚಿದೆ.

ಟೆಸ್ಟ್ ಸರಣಿ ಗೆದ್ದು ಆತ್ಮವಿಶ್ವಾಸದಲ್ಲಿರುವ ಪ್ರವಾಸಿ ಬಳಗವು ಇನ್ನೊಂದು ಜಯದ ಛಲದಲ್ಲಿದೆ. ಏಡನ್ ಮರ್ಕರಂ, ಕ್ವಿಂಟನ್ ಡಿಕಾಕ್, ತೆಂಬಾ ಹಾಗೂ ಡೆವಾಲ್ಡ್ ಬ್ರೆವಿಸ್ ಅವರು ಬ್ಯಾಟಿಂಗ್ ಶಕ್ತಿಯಾಗಿದ್ದಾರೆ. ಮಾರ್ಕೊ ಯಾನ್ಸೆನ್, ಲುಂಗಿ ಎನ್‌ಗಿಡಿ ಮತ್ತು ಕಗಿಸೊ ರಬಾಡ ಅವರಿಗೆ ಭಾರತದ ಪಿಚ್‌ಗಳ ಪರಿಚಯ ಇರುವುದರಿಂದ ಕಠಿಣ ಸವಾಲೊಡ್ಡುವ ಸಾಧ್ಯತೆಗಳು ಹೆಚ್ಚಿವೆ.

ಪಂದ್ಯ ಆರಂಭ: ಮಧ್ಯಾಹ್ನ 1.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್

‘ಸ್ಪಿನ್ ಎದುರು ವೈಫಲ್ಯ: ನಿಖರ ಉತ್ತರ ಗೊತ್ತಿಲ್ಲ’

ರಾಂಚಿ (ಪಿಟಿಐ): ಭಾರತ ತಂಡವು ಟೆಸ್ಟ್ ಕ್ರಿಕೆಟ್‌ನಲ್ಲಿ ಸ್ಪಿನ್ ಬೌಲಿಂಗ್ ಎದುರು ಚೆನ್ನಾಗಿ ಆಡದಿರುವುದಕ್ಕೆ ‘ನಿಖರ ಉತ್ತರ’ ತಮ್ಮ ಬಳಿ ಇಲ್ಲ ಎಂದು ಭಾರತ ಏಕದಿನ ಕ್ರಿಕೆಟ್ ತಂಡದ ಹಂಗಾಮಿ ನಾಯಕ ಕೆ.ಎಲ್. ರಾಹುಲ್ ಹೇಳಿದ್ದಾರೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಕಳೆದ ಕೆಲವು ಋತುಗಳಲ್ಲಿ ನಾವು ಸ್ಪಿನ್ ಎದುರು ಉತ್ತಮವಾಗಿ ಆಡಿಲ್ಲ. ಇದಕ್ಕಿಂತ ಮೊದಲು ನಾವು ಸ್ಪಿನ್ ಎದುರು ಚೆನ್ನಾಗಿ ಆಡಿದ್ದೇವೆ. ಈಗ ಏಕೆ ಅಂತಹ ಫಲಿತಾಂಶ ಸಿಗುತ್ತಿಲ್ಲ. ಇದಕ್ಕೆ ನಿಖರವಾದ ಕಾರಣ ನನಗೆ ಗೊತ್ತಿಲ್ಲ. ಆದರೆ ಭವಿಷ್ಯದಲ್ಲಿ ಈ ಲೋಪವನ್ನು ತಿದ್ದಿಕೊಂಡು ಮುಂದುವರಿಯುವತ್ತ ನಮ್ಮ ಚಿತ್ತ ಇದೆ’ ಎಂದರು.

‘ಸ್ಪಿನ್ ಎದುರು ಆಡಲು ಬ್ಯಾಟರ್‌ಗಳು ತಾಂತ್ರಿಕ ಕೌಶಲಗಳನ್ನು ಸುಧಾರಿಸಿಕೊಳ್ಳಬೇಕು. ಇಂತಹ ಸುಧಾರಣೆಯು ರಾತ್ರಿ ಬೆಳಗಾಗುವುದರೊಳಗೆ ಆಗುವುದಿಲ್ಲ. ಶ್ರೀಲಂಕಾ ಮತ್ತು ಆಸ್ಟ್ರೇಲಿಯಾ ಎದುರಿನ ಸರಣಿಗಳ ಹೊತ್ತಿಗೆ ನಾವೂ ಪೂರ್ಣ ಬಲ ಸಾಧಿಸುತ್ತೇವೆ’ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸುಲ್ತಾನ್ ಅಜ್ಲಾನ್ ಶಾ ಹಾಕಿ: ಕೆನಡಾ ವಿರುದ್ಧ ಜಯ
ಫೈನಲ್ ಪ್ರವೇಶಿಸಿದ ಭಾರತ

ಜುಗರಾಜ್ ಸಿಂಗ್ (ಬಲ) ಚೆಂಡಿನ ಮೇಲೆ ನಿಯಂತ್ರಣ ಸಾಧಿಸಲು ಯತ್ನಿಸಿದರು ಎಕ್ಸ್ ಚಿತ್ರ

ಇಪೊ, ಮಲೇಷ್ಯಾ (ಪಿಟಿಐ): ಭಾರತ ಪುರುಷರ ತಂಡ, ಸುಲ್ತಾನ್ ಅಜ್ಲಾನ್ ಶಾ ಕಪ್ ಹಾಕಿ ಟೂರ್ನಿಯ ಅಂತಿಮ ಲೀಗ್ ಪಂದ್ಯದಲ್ಲಿ ಶನಿವಾರ ಕೆನಡಾ ತಂಡವನ್ನು 14–3 ಗೋಲುಗಳಿಂದ ನಿರಾಯಾಸವಾಗಿ ಸೋಲಿಸಿತು. ಈ ಭರ್ಜರಿ ಗೆಲುವಿನೊಡನೆ ಭಾರತ ಫೈನಲ್ ಪ್ರವೇಶಿಸಿತು.

ಜುಗರಾಜ್ ಸಿಂಗ್ ನಾಲ್ಕು ಗೋಲುಗಳನ್ನು ಹೊಡೆದು ಭಾರತದ ಗೆಲುವಿನಲ್ಲಿ ಗಮನ ಸೆಳೆದರು.

ಭಾರತ ಈ ಟೂರ್ನಿಯ ಮೊದಲ ಪಂದ್ಯದಲ್ಲಿ ಪ್ರಬಲ ಬೆಲ್ಜಿಯಂ ತಂಡಕ್ಕೆ ಮಣಿದಿತ್ತು. ಆದರೆ, ನಂತರ ಉಳಿದೆಲ್ಲಾ ಪಂದ್ಯಗಳನ್ನು ಗೆದ್ದುಕೊಂಡಿತು.

ವಿಶ್ವ ಕ್ರಮಾಂಕದಲ್ಲಿ ಏಳನೇ ಸ್ಥಾನದಲ್ಲಿರುವ ಭಾರತ ತಂಡವು ಭಾನುವಾರ ನಡೆಯುವ ಫೈನಲ್ ಪಂದ್ಯದಲ್ಲಿ ಮೂರನೇ ಕ್ರಮಾಂಕದ ಬೆಲ್ಜಿಯಂ ತಂಡವನ್ನು ಎದುರಿಸಲಿದೆ.

ನೀಲಕಂಠ ಶರ್ಮಾ (4ನೇ ನಿಮಿಷ), ರಾಜಿಂದರ್ ಸಿಂಗ್, (10ನೇ, 24ನೇ), ಜುಗರಾಜ್ ಸಿಂಗ್ (12, 26, 39 ಮತ್ತು 50ನೇ ನಿಮಿಷ), ಅಮಿತ್ ರೋಹಿದಾಸ್ (15, 46ನೇ), ದಿಲ್‌ಪ್ರೀತ್ (25ನೇ ನಿಮಿಷ), ಸೆಲ್ವಂ ಕಾರ್ತಿ (43ನೇ ನಿಮಿಷ), ಸಂಜಯ್ (56ನೇ), ಅಭಿಷೇಕ್ (57, 59ನೇ ನಿಮಿಷ) ಅವರು ಭಾರತದ ಪರ ಗೋಲು ಗಳಿಸಿದರು. ಅಭಿಷೇಕ್ ಅವರು ಅಂತರರಾಷ್ಟ್ರೀಯ ಹಾಕಿಯಲ್ಲಿ 50 ಗೋಲುಗಳ ಮೈಲಿಗಲ್ಲು ದಾಟಿದರು.

ವಿಶ್ವ ಕ್ರಮಾಂಕದಲ್ಲಿ 20ನೇ ಸ್ಥಾನದಲ್ಲಿರುವ ಕೆನಡಾ ಪರ ಬ್ರೆಂಡರ್ ಗುರಾಲಿಕ್ (11ನೇ), ಮ್ಯಾಥ್ಯೂ ಸರ್ಮೆಂಟೊ (35ನೇ), ಜ್ಯೋತಿ ಸ್ವರೂಪ್ ಸಿಧು (53ನೇ ನಿಮಿಷ) ಗೋಲು ಗಳಿಸಿದರು.

ಡೆಲ್ಲಿ ಪಬ್ಲಿಕ್ ಸ್ಕೂಲ್‌ಗೆ ಪಿಸಿಎಲ್ ಪ್ರಶಸ್ತಿ

ಬೆಂಗಳೂರು: ಡೆಲ್ಲಿ ಪಬ್ಲಿಕ್ ಸ್ಕೂಲ್ (ಉತ್ತರ) ತಂಡವು ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಶನಿವಾರ ಮುಕ್ತಾಯಗೊಂಡ ಪರಿಕ್ರಮ ಚಾಂಪಿಯನ್ಸ್ ಲೀಗ್‌ನ (ಪಿಸಿಎಲ್) 13ನೇ ಆವೃತ್ತಿಯಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿತು.

ಫೈನಲ್ ಹಣಾಹಣಿಯಲ್ಲಿ 4–0 ಗೋಲುಗಳಿಂದ ಪಾಟರಿ ಟೌನ್ ಶಾಲಾ ತಂಡವನ್ನು ಮಣಿಸಿ ಸಮಾನತೆಯ ಕಪ್ ಅನ್ನು ತನ್ನದಾಗಿಸಿಕೊಂಡಿತು.

ಮೂರನೇ ಸ್ಥಾನಕ್ಕಾಗಿ ನಡೆದ ಹಣಾಹಣಿಯಲ್ಲಿ ಭುವನೇಶ್ವರದ ಕಳಿಂಗ ಇನ್‌ಸ್ಟಿಟ್ಯೂಟ್ ತಂಡವು 3–0 ಗೋಲುಗಳಿಂದ ಗ್ರೀನ್‌ವುಡ್ ಹೈಸ್ಕೂಲ್ ತಂಡದ ವಿರುದ್ಧ ಗೆಲುವು ಸಾಧಿಸಿತು. ಹೆಡ್ ಸ್ಟಾರ್ಟ್ ಶೈಕ್ಷಣಿಕ ಅಕಾಡೆಮಿ ತಂಡವು ಸಮಾನತೆ ಫಲಕವನ್ನು ಗೆದ್ದುಕೊಂಡಿತು.

ಕೆಎಸ್‌ಸಿಎ ಚುನಾವಣೆ: ಶಾಂತಕುಮಾರ್ ಅರ್ಜಿ ಪುರಸ್ಕೃತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ (ಕೆಎಸ್‌ಸಿಎ) ಅಧ್ಯಕ್ಷ ಸ್ಥಾನದ ಆಕಾಂಕ್ಷಿಯಾದ ಕೆ.ಎನ್.ಶಾಂತಕುಮಾರ್ ಅವರನ್ನು ಚುನಾವಣೆಯಲ್ಲಿ ಮಾನ್ಯ ಅಭ್ಯರ್ಥಿಯಾಗಿ ಘೋಷಿಸಿ’ ಎಂದು ಹೈಕೋರ್ಟ್, ಚುನಾವಣಾ ಅಧಿಕಾರಿಗೆ ನಿರ್ದೇಶಿಸಿದೆ.

‘ಕೆಎಸ್‌ಸಿಎ ಅಧ್ಯಕ್ಷ ಸ್ಥಾನಕ್ಕೆ ನಡೆಯುತ್ತಿರುವ ಚುನಾವಣೆಯ ಕಣದಲ್ಲಿ ನನ್ನನ್ನೂ ಅಭ್ಯರ್ಥಿಯನ್ನಾಗಿ ಪರಿಗಣಿಸಲು ನಿರ್ದೇಶಿಸಬೇಕು’ ಎಂದು ಕೋರಿ ಕೆ.ಎನ್.ಶಾಂತಕುಮಾರ್ ಅವರು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಮಾನ್ಯ ಮಾಡಿರುವ ನ್ಯಾಯಮೂರ್ತಿ ಸೂರಜ್ ಗೋವಿಂದರಾಜು ಅವರಿದ್ದ ಏಕಸದಸ್ಯ ನ್ಯಾಯಪೀಠ ಶನಿವಾರ ಈ ಕುರಿತಂತೆ ಆದೇಶಿಸಿದೆ.

‘ಚುನಾವಣೆಯನ್ನು ಈಗಾಗಲೇ ನಿಗದಿಪಡಿಸಿರುವ ಕ್ಯಾಲೆಂಡರ್ ಅನುಸಾರವೇ ನಡೆಸಬೇಕು’ ಎಂದು ನ್ಯಾಯಪೀಠ ಆದೇಶಿಸಿದೆ. ಡಿಸೆಂಬರ್ 7ರಂದು ಚುನಾವಣೆ ನಡೆಯಲಿದೆ.

‘ನ್ಯಾಯಾಲಯದ ತೀರ್ಪನ್ನು ಸ್ವಾಗತಿಸುತ್ತೇನೆ. ನಮ್ಮ ತಂಡವು ಚುನಾವಣೆಗೆ ಬೇಕಿರುವ ಅಗತ್ಯ ಸಿದ್ಧತೆಗಳನ್ನು ಮಾಡಿಕೊಂಡು ಕಾರ್ಯೋನ್ಮುಖವಾಗುತ್ತಿದೆ’ ಎಂದು ಟೀಂ ಬ್ರಿಜೇಶ್ ಬಣವನ್ನು ಪ್ರತಿನಿಧಿಸುತ್ತಿರುವ ಶಾಂತಕುಮಾರ್ ಹೇಳಿದ್ದಾರೆ.

ಟೀಮ್ ಗೇಮ್ ಚೇಂಜರ್ಸ್ ಬಣದಿಂದ ಅಧ್ಯಕ್ಷ ಸ್ಥಾನದ ಅಭ್ಯರ್ಥಿಯಾಗಿರುವ ಬಿ.ಕೆ. ವೆಂಕಟೇಶ್ ಪ್ರಸಾದ್, ‘ಹೈಕೋರ್ಟ್ ತೀರ್ಮಾನವನ್ನು ಸ್ವಾಗತಿಸುತ್ತೇನೆ’ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಕಿ ಪೂಣಚ್ಚಗೆ ₹1 ಲಕ್ಷ ಬಹುಮಾನ

ಬೆಂಗಳೂರು: ಚೀನಾದ ಚೆಂಗ್ದುವಿನಲ್ಲಿ ನಡೆದ ಏಷ್ಯಾ–ಪೆಸಿಫಿಕ್ ವೈಲ್ಡ್‌ಕಾರ್ಡ್ ಪ್ಲೇ ಆಫ್ ಟೂರ್ನಿಯಲ್ಲಿ ಡಬಲ್ಸ್ ಪ್ರಶಸ್ತಿ ಗೆದ್ದು, 2026ರ ಆಸ್ಟ್ರೇಲಿಯನ್ ಓಪನ್ ಟೂರ್ನಿಯಲ್ಲಿ ಆಡುವ ಅವಕಾಶ ಪಡೆದ ನಿಕಿ ಕಲಿಯಂಡ ಪೂಣಚ್ಚ ಅವರಿಗೆ ಕರ್ನಾಟಕ ರಾಜ್ಯ ಲಾನ್ ಟೆನಿಸ್ ಸಂಸ್ಥೆ (ಕೆಎಸ್‌ಎಲ್‌ಟಿಎ) ₹1 ಲಕ್ಷ ನಗದು ಬಹುಮಾನ ಘೋಷಿಸಿದೆ.

ಅವರು ಥಾಯ್ಲೆಂಡ್‌ನ ಪ್ರುಚ್ಯಾ ಇಸಾರೊ ಜೊತೆ ಆಡಿ ಶುಕ್ರವಾರ ನಡೆದ ಫೈನಲ್‌ನಲ್ಲಿ 6–4, 6–3 ರಿಂದ ಜಪಾನ್‌ನ ಸೀಯಿತ ಕುಸುಹಾರ–ಕಟ್ಸುಕಿ ನಕಾಗಾವ ಜೋಡಿಯನ್ನು ಸೋಲಿಸಿದ್ದರು.

ಕೊಡಗು ಮೂಲದ ನಿಕಿ ಪೂಣಚ್ಚ ಇದೇ ಮೊದಲ ಬಾರಿ ಗ್ರ್ಯಾನ್‌ಸ್ಲಾಮ್ ಟೂರ್ನಿಯಲ್ಲಿ ಆಡುವ ಅರ್ಹತೆ ಪಡೆದಿದ್ದಾರೆ.

‘ಚೆಂಗ್ದುವಿನಲ್ಲಿ ನಿಕಿ ಅವರ ಸಾಧನೆ ನಮಗೆಲ್ಲಾ ಸಂತಸ ಮೂಡಿಸಿದೆ. ಆಸ್ಟ್ರೇಲಿಯನ್ ಓಪನ್‌ನಲ್ಲಿ ಆಡಲಿರುವ ಅವರು ದೇಶ ಹೆಮ್ಮೆಪಡುವ ರೀತಿ ಆಡಲಿದ್ದಾರೆ ಎಂಬ ಭರವಸೆಯಿದೆ’ ಎಂದು ಕೆಎಸ್‌ಎಲ್‌ಟಿಎ ಕಾರ್ಯದರ್ಶಿ ಮಹೇಶ್ವರ ರಾವ್ ತಿಳಿಸಿದ್ದಾರೆ.

ಜ.9ರಿಂದ ಮಹಿಳಾ ಪ್ರೀಮಿಯರ್ ಲೀಗ್: ಫೆ.5ಕ್ಕೆ ವಡೋದರದಲ್ಲಿ ಫೈನಲ್
ಉದ್ಘಾಟನಾ ಪಂದ್ಯದಲ್ಲಿ ಮುಂಬೈ–ಆರ್‌ಸಿಬಿ ಸೆಣಸು

ಮುಂಬೈ (ಪಿಟಿಐ): ಹರ್ಮನ್‌ಪ್ರೀತ್ ಕೌರ್ ನೇತೃತ್ವದ ಹಾಲಿ ಚಾಂಪಿಯನ್ ಮುಂಬೈ ಇಂಡಿಯನ್ಸ್ ತಂಡವು, ಮಹಿಳಾ ಪ್ರೀಮಿಯರ್ ಲೀಗ್ ನಾಲ್ಕನೇ ಆವೃತ್ತಿಯ ಉದ್ಘಾಟನಾ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ಎದುರಿಸಲಿದೆ. ನವಿ ಮುಂಬೈನ ಡಿ.ವೈ.ಪಾಟೀಲ ಕ್ರೀಡಾಂಗಣದಲ್ಲಿ ಜ. 9ರಂದು ಈ ಪಂದ್ಯ ನಡೆಯಲಿದೆ.

ವಡೋದರ ಮತ್ತು ನವಿ ಮುಂಬೈನಲ್ಲಿ 28 ದಿನಗಳ ಅವಧಿಯಲ್ಲಿ ನಡೆಯುವ ಡಬ್ಲ್ಯುಪಿಎಲ್‌ನಲ್ಲಿ 22 ಪಂದ್ಯಗಳು ಇವೆ. ಶನಿವಾರ ವೇಳಾಪಟ್ಟಿ ಪ್ರಕಟಿಸಲಾಯಿತು.

ಟೂರ್ನಿಯ ಇತಿಹಾಸದಲ್ಲಿ ಇದೇ ಮೊದಲ ಬಾರಿ, ಫೈನಲ್ ಪಂದ್ಯವು ವಾರಾಂತ್ಯದಲ್ಲಿ ನಡೆಯುತ್ತಿಲ್ಲ. ಬದಲು ಗುರುವಾರ (ಫೆಬ್ರುವರಿ 5ರಂದು) ನಡೆಯಲಿದೆ. ಪುರುಷರ ಟಿ20 ವಿಶ್ವಕಪ್ ಪಂದ್ಯ ಅದೇ ಹೊತ್ತಿನಲ್ಲಿ ಇರುವ ಕಾರಣ ಈ ನಿರ್ಧಾರಕ್ಕೆ ಬರಲಾಗಿದೆ. ವಿಶ್ವಕಪ್ ಟೂರ್ನಿಯ ಮೊದಲ ಪಂದ್ಯ ಫೆಬ್ರುವರಿ 7ರಂದು (ಶನಿವಾರ) ಪಾಕಿಸ್ತಾನ– ನೆದರ್ಲೆಂಡ್ಸ್ ನಡುವಣ ಪಂದ್ಯದೊಡನೆ ಆರಂಭವಾಗಲಿದೆ.

ಡಿ.ವೈ. ಪಾಟೀಲ ಕ್ರೀಡಾಂಗಣದಲ್ಲಿ ಈ ತಿಂಗಳ ಆರಂಭದಲ್ಲಿ ಭಾರತ ಮಹಿಳಾ ತಂಡ ಏಕದಿನ ವಿಶ್ವಕಪ್ ಮೂಲಕ ತನ್ನ ಮೊದಲ ಪ್ರಮುಖ ಐಸಿಸಿ ಪ್ರಶಸ್ತಿ ಗೆದ್ದುಕೊಂಡಿತ್ತು. ಇದೇ ಕ್ರೀಡಾಂಗಣವು ಎರಡು ಡಬಲ್ ಹೆಡರ್ ಸೇರಿ ಮೊದಲ 11 ಪಂದ್ಯಗಳಿಗೆ ಆತಿಥ್ಯ ವಹಿಸಲಿದೆ. ಎಲಿಮಿನೇಟರ್ (ಫೆ 2) ಮತ್ತು ಫೈನಲ್ ಪಂದ್ಯ (ಫೆ. 5) ಸೇರಿ ಉಳಿದೆಲ್ಲಾ ಪಂದ್ಯಗಳು ವಡೋದರದ ಕೋತಂಬಿ ಕ್ರೀಡಾಂಗಣದಲ್ಲಿ ನಡೆಯಲಿವೆ.

4ನೇ ಆವೃತ್ತಿಯ ಡಬ್ಲ್ಯುಪಿಎಲ್ ವೇಳಾಪಟ್ಟಿ (ನವಿ ಮುಂಬೈನಲ್ಲಿ)	
ಜ.9	ಮುಂಬೈ ಇಂಡಿಯನ್ಸ್– ಆರ್‌ಸಿಬಿ
ಜ.10	ಯುಪಿ ವಾರಿಯರ್ಸ್– ಗುಜರಾತ್ ಜೈಂಟ್ಸ್
ಜ.10	ಮುಂಬೈ ಇಂಡಿಯನ್ಸ್– ಡೆಲ್ಲಿ ಕ್ಯಾಪಿಟಲ್ಸ್
ಜ.11	ಡೆಲ್ಲಿ ಕ್ಯಾಪಿಟಲ್ಸ್– ಗುಜರಾತ್ ಜೈಂಟ್ಸ್
ಜ.12	ಆರ್‌ಸಿಬಿ– ಯುಪಿ ವಾರಿಯರ್ಸ್
ಜ.13	ಮುಂಬೈ ಇಂಡಿಯನ್ಸ್– ಗುಜರಾತ್ ಜೈಂಟ್ಸ್
ಜ.14	ಯುಪಿ ವಾರಿಯರ್ಸ್– ಡೆಲ್ಲಿ ಕ್ಯಾಪಿಟಲ್ಸ್
ಜ.15	ಮುಂಬೈ ಇಂಡಿಯನ್ಸ್– ಯುಪಿ ವಾರಿಯರ್ಸ್
ಜ.16	ಆರ್‌ಸಿಬಿ– ಗುಜರಾತ್ ಜೈಂಟ್ಸ್
ಜ.17	ಯುಪಿ ವಾರಿಯರ್ಸ್–ಮುಂಬೈ ಇಂಡಿಯನ್ಸ್
ಜ.17	ಡೆಲ್ಲಿ ಕ್ಯಾಪಿಟಲ್ಸ್– ಆರ್‌ಸಿಬಿ

(ವಡೋದರದಲ್ಲಿ)	
ಜ.19	ಗುಜರಾತ್ ಜೈಂಟ್ಸ್– ಆರ್‌ಸಿಬಿ
ಜ.20	ಡೆಲ್ಲಿ ಕ್ಯಾಪಿಟಲ್ಸ್– ಮುಂಬೈ ಇಂಡಿಯನ್ಸ್
ಜ.22	ಗುಜರಾತ್ ಜೈಂಟ್ಸ್– ಯುಪಿ ವಾರಿಯರ್ಸ್
ಜ.24	ಆರ್‌ಸಿಬಿ– ಡೆಲ್ಲಿ ಕ್ಯಾಪಿಟಲ್ಸ್
ಜ.26	ಆರ್‌ಸಿಬಿ– ಮುಂಬೈ ಇಂಡಿಯನ್ಸ್
ಜ.27	ಗುಜರಾತ್ ಜೈಂಟ್ಸ್– ಡೆಲ್ಲಿ ಕ್ಯಾಪಿಟಲ್ಸ್
ಜ.29	ಯುಪಿ ವಾರಿಯರ್ಸ್– ಆರ್‌ಸಿಬಿ
ಜ.30	ಗುಜರಾತ್ ಜೈಂಟ್ಸ್– ಮುಂಬೈ ಇಂಡಿಯನ್ಸ್
ಫೆ.1	ಡೆಲ್ಲಿ ಕ್ಯಾಪಿಟಲ್ಸ್– ಯುಪಿ ವಾರಿಯರ್ಸ್
ಫೆ.3	ಎಲಿಮಿನೇಟರ್ ಪಂದ್ಯ
ಫೆ.5	ಫೈನಲ್ ಪಂದ್ಯ

ಮೊದಲ ಬಾರಿ ಡಬ್ಲ್ಯುಪಿಎಲ್, ಜನವರಿ–ಫೆಬ್ರುವರಿ ತಿಂಗಳಲ್ಲಿ ನಡೆಯಲಿದೆ. ಈ ಹಿಂದೆ ಮಹಿಳಾ ಲೀಗ್, ಐಪಿಎಲ್‌ಗೆ ಮೊದಲು, ಫೆಬ್ರುವರಿ– ಮಾರ್ಚ್ ತಿಂಗಳಲ್ಲಿ ನಡೆಯುತ್ತಿತ್ತು.

ಈ ಬಾರಿಯೂ ಐದು ತಂಡಗಳು ಭಾಗವಹಿಸುತ್ತಿವೆ. ರೌಂಡ್‌ರಾಬಿನ್ ಮಾದರಿಯಲ್ಲಿ ತಲಾ ಎರಡು ಬಾರಿ ಮುಖಾಮುಖಿಯಾಗಲಿವೆ. ಅಗ್ರಸ್ಥಾನ ಪಡೆದ ತಂಡ ನೇರವಾಗಿ ಫೈನಲ್ ತಲುಪಲಿದೆ. ಎರಡು ಮತ್ತು ಮೂರನೇ ಸ್ಥಾನ ಪಡೆದ ತಂಡಗಳು ಎಲಿಮಿನೇಟರ್ ಆಡಲಿದ್ದು, ಗೆದ್ದ ತಂಡ ಫೈನಲ್‌ನಲ್ಲಿ ಆಡಲಿದೆ.

ಡಬ್ಲ್ಯುಪಿಎಲ್ ಮುಗಿದು ಹತ್ತು ದಿನಗಳ ನಂತರ ಭಾರತ ತಂಡವು, ಆಸ್ಟ್ರೇಲಿಯಾ ಪ್ರವಾಸ ಕೈಗೊಳ್ಳಲಿದೆ. ಅಲ್ಲಿ ಫೆ. 15 ರಿಂದ ಮಾರ್ಚ್ 9ರವರೆಗಿನ ಅವಧಿಯಲ್ಲಿ ಮೂರು ಟಿ20, ಮೂರು ಏಕದಿನ ಮತ್ತು ಒಂದು ಟೆಸ್ಟ್ ಪಂದ್ಯ ಆಡಲಿದೆ.

ಜೂನಿಯರ್ ವಿಶ್ವಕಪ್: 17–0ಯಿಂದ ಸೋತ ಒಮಾನ್
ಭಾರತಕ್ಕೆ ಸತತ ಎರಡನೇ ಗೆಲುವು

ಗೋಲು ಗಳಿಸಿದ ಸಂಭ್ರಮದಲ್ಲಿ ಭಾರತದ ಆಟಗಾರರು ಪಿಟಿಐ ಚಿತ್ರ

ಚೆನ್ನೈ (ಪಿಟಿಐ): ಗೋಲುಗಳ ಮಳೆಗರೆದ ಭಾರತ ತಂಡ, ಜೂನಿಯರ್ ಪುರುಷರ ವಿಶ್ವಕಪ್ ಹಾಕಿ ಟೂರ್ನಿಯ ತನ್ನ ಎರಡನೇ ಪಂದ್ಯದಲ್ಲಿ ಶನಿವಾರ ದುರ್ಬಲ ಒಮಾನ್ ತಂಡವನ್ನು 17–0 ಗೋಲುಗಳಿಂದ ಸದೆಬಡಿದು ಸತತ ಎರಡನೇ ಗೆಲುವನ್ನು ದಾಖಲಿಸಿತು.

ಬಿ ಗುಂಪಿನ ಮೊದಲ ಪಂದ್ಯದಲ್ಲಿ ಚಿಲಿ ತಂಡವನ್ನು 7–0 ಗೋಲುಗಳಿಂದ ಸೋಲಿಸಿ ಶುಭಾರಂಭ ಮಾಡಿದ್ದ ಆತಿಥೇಯ ತಂಡವು ಎರಡನೇ ಪಂದ್ಯದಲ್ಲೂ ಸಂಪೂರ್ಣ ಪ್ರಾಬಲ್ಯ ಮೆರೆದು ಗುಂಪಿನಲ್ಲಿ ಅಗ್ರಸ್ಥಾನಕ್ಕೇರಿತು. ಭದ್ರತೆ ಕಾರಣಗಳಿಂದ ಪಾಕಿಸ್ತಾನ ಹಿಂದೆಸರಿದ ಪರಿಣಾಮ ಈ ಟೂರ್ನಿಯಲ್ಲಿ ಆಡುವ ಅವಕಾಶ ಪಡೆದ ಒಮಾನ್ ಪ್ರತಿರೋಧ ಒಡ್ಡಲಿಲ್ಲ.

ದಿಲ್‌ರಾಜ್ ಸಿಂಗ್ ನಾಲ್ಕು ಗೋಲು ಗಳಿಸಿದರೆ, ಮನ್‌ಮೀತ್ ಸಿಂಗ್, ಅರ್ಷದೀಪ್ ಸಿಂಗ್ ತಲಾ ಮೂರು ಗೋಲುಗಳ ಕಾಣಿಕೆ ನೀಡಿದರು, ಅಜೀತ್ ಯಾದವ್, ಗುರ್ಜೋತ್ ಸಿಂಗ್ ತಲಾ ಎರಡು ಗೋಲು ಹೊಡೆದರು. ಅನ್ಮೋಲ್ ಎಕ್ಕಾ, ಲುವಾನ್ ಇಂಗಲೆಂಬ ಮತ್ತು ಶಾರದಾನಂದ ತಿವಾರಿ ಒಂದೊಂದು ಗೋಲಿನ ಕಾಣಿಕೆ ನೀಡಿದರು.

ಮೇಯರ್ ರಾಧಾಕೃಷ್ಣನ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ವಿರಾಮದ ಮೇಲೆ ಭಾರತ 5–0 ಗೋಲುಗಳಿಂದ ಮುಂದಿತ್ತು. ವಿರಾಮದ ನಂತರ 12 ಗೋಲುಗಳನ್ನು ಗಳಿಸಿತು. ಮೂರನೇ ಕ್ವಾರ್ಟರ್ ಒಂದಲ್ಲೇ ಎಂಟು ಗೋಲುಗಳನ್ನು ಗಳಿಸಿದ್ದು ನೋಡಿದರೆ ಭಾರತದ ಮೇಲುಗೈ ಊಹಿಸಬಹುದು.

ಭಾರತ ತಂಡ ಮಂಗಳವಾರ ನಡೆಯುವ ಗುಂಪಿನ ಕೊನೆಯ ಪಂದ್ಯದಲ್ಲಿ ಸ್ವಿಜರ್ಲೆಂಡ್ ವಿರುದ್ಧ ಆಡಲಿದೆ.

ರಾಜ್ಯ ಅಸೋಸಿಯೇಷನ್ ಕಪ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಗೆದ್ದ ಯಂಗ್ ಓರಿಯನ್ಸ್ ಪುರುಷರ ತಂಡ. (ನಿಂತವರು) ಎಡದಿಂದ; ಸೂರಜ್, ಶಶಾಂಕ್, ಸಹಾಯಕ ಕೋಚ್ ರವಿ ಕುಮಾರ್, ಕಾರ್ಯದರ್ಶಿ ಗುಣಶೇಖರ್, ಮುಖ್ಯ ಕೋಚ್ ಪುನೀತ್ ಸುರೇಶ್, ಶ್ರೇಯಸ್, ಗೌತಮ್, ಅಭಿಷೇಕ್ ಗೌಡ; (ಮಂಡಿಯೂರಿದವರು) ನಾಥನ್, ಅರ್ಜುನ್ ಯಾದವ್, ಧೀರಜ್ ರೆಡ್ಡಿ ಮತ್ತು ಸುಮಂತ್ ಪ್ರಜಾವಾಣಿ ಚಿತ್ರ: ಬಿ.ಕೆ. ಜನಾರ್ದನ್

ಓರಿಯನ್ಸ್, ನೈರುತ್ಯ ರೈಲ್ವೆಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಯಂಗ್ ಓರಿಯನ್ಸ್ ಸ್ಪೋರ್ಟ್ಸ್ ಕ್ಲಬ್ ಮತ್ತು ನೈಋತ್ಯ ರೈಲ್ವೆ ತಂಡಗಳು ರಾಜ್ಯ ಅಸೋಸಿಯೇಷನ್ ಕಪ್ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಪುರುಷರ ಮತ್ತು ಮಹಿಳೆಯರ ಪ್ರಶಸ್ತಿಯನ್ನು ಗೆದ್ದುಕೊಂಡವು.

ಪುರುಷರ ವಿಭಾಗದಲ್ಲಿ ಬ್ಯಾಂಕ್ ಆಫ್ ಬರೋಡಾ ತಂಡ ರನ್ನರ್ಸ್ ಅಪ್ ಆಯಿತು. ಡಿವೈಇಎಸ್ ಬೆಂಗಳೂರು ಮೂರನೇ ಸ್ಥಾನ ಗಳಿಸಿತು. ಮಹಿಳೆಯರ ವಿಭಾಗದಲ್ಲಿ ಬೀಗಲ್ಸ್ ಬಿ.ಸಿ ತಂಡವು ರನ್ನರ್ಸ್ ಅಪ್ ಆದರೆ, ಮೌಂಟ್ಸ್ ಕ್ಲಬ್ ತಂಡ ಮೂರನೇ ಸ್ಥಾನ ಪಡೆಯಿತು.

ಎರಡು ವಿಭಾಗಗಳ ವಿಜೇತ ತಂಡಗಳು ₹50 ಸಾವಿರ, ರನ್ನರ್ಸ್ ಅಪ್ ತಂಡಗಳು ₹25 ಸಾವಿರ ಮತ್ತು ಮೂರನೇ ಸ್ಥಾನ ಪಡೆದ ತಂಡಗಳು ₹ 15 ಸಾವಿರ ಬಹುಮಾನ ಪಡೆದವು. ಫಿಬಾ ಏಷ್ಯಾ ಮತ್ತು ಕರ್ನಾಟಕ ಒಲಿಂಪಿಕ್ ಸಂಸ್ಥೆ ಅಧ್ಯಕ್ಷ ಕೆ.ಗೋವಿಂದರಾಜ್, ಡಿವೈಇಎಸ್ ಆಯುಕ್ತ ಆರ್.ಚೇತನ್, ಕರ್ನಾಟಕ ರಾಜ್ಯ ಬ್ಯಾಸ್ಕೆಟ್‌ಬಾಲ್ ಸಂಸ್ಥೆಯ ಉಪಾಧ್ಯಕ್ಷರಾದ ಆರ್.ರಾಜನ್, ಎಸ್. ಗುಣಶೇಖರ್ ವಿಜೇತ ತಂಡಗಳಿಗೆ ಬಹುಮಾನ ವಿತರಿಸಿದರು.

ಕಂಠೀರವ ಒಳಾಂಗಣ ಕ್ರೀಡಾಂಗಣದ ಬ್ಯಾಸ್ಕೆಟ್‌ಬಾಲ್ ಕೋರ್ಟ್‌ನಲ್ಲಿ ಶನಿವಾರ ನಡೆದ ಪುರುಷರ ಫೈನಲ್ ಲೀಗ್ ಪಂದ್ಯದಲ್ಲಿ ಓರಿಯನ್ಸ್ 68–43ರಿಂದ ಡಿವೈಇಎಸ್ ಬೆಂಗಳೂರು ತಂಡವನ್ನು ಮಣಿಸಿತು. ಮಹಿಳೆಯರ ಫೈನಲ್ ಲೀಗ್‌ನ ಪಂದ್ಯದಲ್ಲಿ ನೈರುತ್ಯ ರೈಲ್ವೆ ತಂಡವು 76–74ರಿಂದ ಬೀಗಲ್ಸ್ ಬಿ.ಸಿ ತಂಡವನ್ನು ಸೋಲಿಸಿತು.

ಸೈಯದ್ ಮೋದಿ ಅಂತರರಾಷ್ಟ್ರೀಯ ಬ್ಯಾಡ್ಮಿಂಟನ್ ಟೂರ್ನಿ
ಫೈನಲ್‌ಗೆ ಶ್ರೀಕಾಂತ್, ಟ್ರೀಸಾ–ಗಾಯತ್ರಿ

ಲಖನೌ (ಪಿಟಿಐ): ಮಾಜಿ ಚಾಂಪಿಯನ್ ಕಿದಂಬಿ ಶ್ರೀಕಾಂತ್ ಅವರು ಮೂರು ಗೇಮ್‌ಗಳ ಸೆಣಸಾಟದಲ್ಲಿ ಕನ್ನಡಿಗ ಮಿಥುನ್ ಮಂಜುನಾಥ್ ಅವರನ್ನು ಸೋಲಿಸಿ ಸೈಯದ್ ಮೋದಿ ಅಂತರರಾಷ್ಟ್ರೀಯ ಬ್ಯಾಡ್ಮಿಂಟನ್ ಟೂರ್ನಿಯ ಫೈನಲ್ ತಲುಪಿದರು. ಮಹಿಳೆಯರ ವಿಭಾಗದ ಡಬಲ್ಸ್‌ನಲ್ಲಿ ಹಾಲಿ ಚಾಂಪಿಯನ್ ಟ್ರೀಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್ ಜೋಡಿ ಪ್ರಶಸ್ತಿ ಸುತ್ತಿಗೆ ಲಗ್ಗೆಯಿಟ್ಟಿತು.

ಮಿಥುನ್ ಮಂಜುನಾಥ್ ಎದುರಿನ ಪಂದ್ಯದಲ್ಲಿ ಶಟ್ಲ್ ಹಿಂತಿರುಗಿಸಿದ ಕಿದಂಬಿ ಶ್ರೀಕಾಂತ್ ಪಿಟಿಐ ಚಿತ್ರ

32 ವರ್ಷ ವಯಸ್ಸಿನ ಶ್ರೀಕಾಂತ್ ಶನಿವಾರ ನಡೆದ ಸಿಂಗಲ್ಸ್ ಸೆಮಿಫೈನಲ್ ಪಂದ್ಯದಲ್ಲಿ, 2023ರ ರಾಷ್ಟ್ರೀಯ ಚಾಂಪಿಯನ್ ಮಿಥುನ್ ಅವರ ಸ್ಫೂರ್ತಿಯುತ ಸವಾಲನ್ನು 21–15, 19–21, 21–13 ರಲ್ಲಿ ಬದಿಗೊತ್ತಿದರು. ಶ್ರೀಕಾಂತ್ 2016ರಲ್ಲಿ ಈ ಟೂರ್ನಿಯಲ್ಲಿ ಚಾಂಪಿಯನ್ ಆಗಿದ್ದರು.

‘ಉತ್ತಮ ಆರಂಭ ಪಡೆದು, ತಪ್ಪುಗಳನ್ನು ಕಡಿಮೆಯಾಗುವಂತೆ ನೋಡಿಕೊಳ್ಳುವುದು ಮುಖ್ಯವಾಗಿತ್ತು. ನನ್ನ ಎದುರು ಅವರು (ಮಿಥುನ್) ಇದುವರೆಗಿನ ಪಂದ್ಯಗಳಲ್ಲಿ ಉತ್ತಮವಾಗಿ ಆಡಿದ್ದಾರೆ. ಹೀಗಾಗಿ ನನ್ನ ಆಟದಿಂದ ಸಂತೃಪ್ತಿಯಾಗಿದೆ’ ಎಂದು ಶ್ರೀಕಾಂತ್ ಪ್ರತಿಕ್ರಿಯಿಸಿದರು.

ಈ ವರ್ಷ ಮಲೇಷ್ಯಾ ಮಾಸ್ಟರ್ಸ್ ಫೈನಲ್ ತಲುಪಿದ್ದ ಶ್ರೀಕಾಂತ್ ಅವರು ಫೈನಲ್‌ನಲ್ಲಿ ಹಾಂಗ್‌ಕಾಂಗ್‌ನ ಜೇಸನ್ ಗುನವಾನ್ ಅವರನ್ನು ಎದುರಿಸಲಿದ್ದಾರೆ.

ವಿಶ್ವ ಕ್ರಮಾಂಕದಲ್ಲಿ 14ನೇ ಸ್ಥಾನದಲ್ಲಿರುವ ಟ್ರೀಸಾ– ಗಾಯತ್ರಿ ಜೋಡಿ ಡಬಲ್ಸ್ ಸೆಮಿಫೈನಲ್‌ನಲ್ಲಿ ತಂತ್ರಗಾರಿಕೆ ಮತ್ತು ಉತ್ತಮ ನಿಯಂತ್ರಣ ದೊಡನೆ ಆಡಿ ಮಲೇಷ್ಯಾದ ಒಂಗ್ ಕ್ಸಿನ್ ಯೀ–ಕಾರ್ಮೆನ್ ತಿಂಗ್ ಜೋಡಿಯನ್ನು ಮಣಿಸಿತು. ಮಲೇಷ್ಯಾದ ಜೋಡಿ 33ನೇ ಕ್ರಮಾಂಕ ಪಡೆದಿದೆ.

ಭುಜದ ನೋವಿಗಾಗಿ ಐದು ತಿಂಗಳು ವಿಶ್ರಾಂತಿಯಲ್ಲಿದ್ದ ಗಾಯತ್ರಿ, ಪುನರಾಗಮನದ ಬಳಿಕ ಆಡುತ್ತಿರುವ ಎರಡನೇ ಟೂರ್ನಿ ಇದಾಗಿದೆ. ಟ್ರೀಸಾ–ಗಾಯತ್ರಿ ಜೋಡಿ ಭಾನುವಾರ ನಡೆಯುವ ಫೈನಲ್ ಪಂದ್ಯದಲ್ಲಿ ಎಂಟನೇ ಶ್ರೇಯಾಂಕದ ಕಾಹೊ ಒಸಾವ– ಮಾಯಿ ತನಾಬೆ ಜೋಡಿಯನ್ನು ಎದುರಿಸಲಿದೆ.

‘ದೀರ್ಘಕಾಲದ ನಂತರ ಮರಳಿರುವುದು ಸಂತಸ ಮೂಡಿಸಿದೆ. ನಾವು ಇಲ್ಲಿ ಹಾಲಿ ಚಾಂಪಿಯನ್ ಆಗಿದ್ದು, ನಾಳೆ ಫೈನಲ್ ಆಡುತ್ತಿರುವುದು ಖುಷಿ ಉಂಟುಮಾಡಿದೆ’ ಎಂದು ಗಾಯತ್ರಿ ಪ್ರತಿಕ್ರಿಯಿಸಿದರು.

‘ಪಂದ್ಯ ನಮ್ಮ ನಿಯಂತ್ರಣದಲ್ಲಿತ್ತು. ನಾವು ಸಂಯಮದಿಂದ ಆಡಿದೆವು’ ಎಂದು ಟ್ರೀಸಾ ಹೇಳಿದರು.

ಸವಾಲು ಅಂತ್ಯ: ಆದರೆ ಮಹಿಳೆಯರ ಸಿಂಗಲ್ಸ್‌ನಲ್ಲಿ ಆತಿಥೇಯ ದೇಶದ ಸವಾಲು ಅಂತ್ಯಗೊಂಡಿತು. ತನ್ವಿ ಶರ್ಮಾ ಮತ್ತು ಉನ್ನತಿ ಹೂಡಾ ಇಬ್ಬರೂ ಸೆಮಿಫೈನಲ್‌ನಲ್ಲಿ ನೇರ ಗೇಮ್‌ಗಳಲ್ಲಿ ಸೋಲನುಭವಿಸಿದರು.

ಉನ್ನತಿ 15–21, 10–21 ರಲ್ಲಿ ಟರ್ಕಿಯ ನೆಸ್ಲಿಹಾನ್ ಅರಿನ್ ಅವರಿಗೆ ಮಣಿದರು. ಇದೇ ಟೂರ್ನಿಯಲ್ಲಿ ಮಾಜಿ ವಿಶ್ವಚಾಂಪಿಯನ್ ನೊಝೊಮಿ ಒಕುಹಾರಾ ಅವರನ್ನು ಸೋಲಿಸಿದ್ದ ತನ್ವಿ 17–21, 16–21 ರಲ್ಲಿ ಜಪಾನ್‌ನ ಹಿನಾ ಅಕೆಚಿ ಅವರೆದುರು ಪರಾಭವ ಅನುಭವಿಸಿದರು.

ಕ್ರಿಕೆಟ್: ಕರ್ನಾಟಕ ವನಿತೆಯರಿಗೆ ಜಯ

ಗುರುಗ್ರಾಮ: ಅಮೋಘ ಆಟವಾಡಿದ ಬಿ.ಜಿ. ತೇಜಸ್ವಿನಿ (19ಕ್ಕೆ2) ಮತ್ತು ನಿಕಿಪ್ರಸಾದ್ (ಔಟಾಗದೇ 46) ಅವರ ನೆರವಿನಿಂದ ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆಯ 23 ವರ್ಷದೊಳಗಿನ ಮಹಿಳೆಯರ ತಂಡವು ಜಯಿಸಿತು.

ಶನಿವಾರ ಗುರುಗ್ರಾಮ ಮೈದಾನದಲ್ಲಿ ನಡೆದ ಬಿಸಿಸಿಐ 23 ವರ್ಷದೊಳಗಿನ ಟಿ20 ಟ್ರೋಫಿ ಕ್ರಿಕೆಟ್ ಟೂರ್ನಿಯ ಮಹಿಳೆಯರ ಪಂದ್ಯದಲ್ಲಿ ಕರ್ನಾಟಕ ತಂಡವು ತ್ರಿಪುರ ಎದುರು 10 ವಿಕೆಟ್‌ಗಳ ಜಯ ಸಾಧಿಸಿತು.

ಮೊದಲು ಬ್ಯಾಟಿಂಗ್ ಮಾಡಿದ ತ್ರಿಪುರ ತಂಡವು 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 83 ರನ್ ಗಳಿಸಿತು. ಗುರಿ ಬೆನ್ನಟ್ಟಿದ ಕರ್ನಾಟಕ ತಂಡವನ್ನು ಆರಂಭಿಕ ಜೋಡಿ ನಿಕಿ ಪ್ರಸಾದ್ ಮತ್ತು ರಚಿತಾ ಹತ್ವಾರ್ (ಔಟಾಗದೇ 37) ಜಯದತ್ತ ಮುನ್ನಡೆಸಿದರು. ಕೇವಲ 9.2 ಓವರ್‌ಗಳಲ್ಲಿ ಗುರಿ ಮುಟ್ಟಿದರು.

ಸಂಕ್ಷಿಪ್ತ ಸ್ಕೋರು: ತ್ರಿಪುರ: 20 ಓವರ್‌ಗಳಲ್ಲಿ 7ಕ್ಕೆ83 (ಅಂಬೇಶಾ ದಾಸ್ 21, ಬಿ.ಜಿ. ತೇಜಸ್ವಿನಿ 19ಕ್ಕೆ2) ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ: 9.2 ಓವರ್‌ಗಳಲ್ಲಿ ವಿಕೆಟ್ ನಷ್ಟವಿಲ್ಲದೇ 84 (ನಿಕಿ ಪ್ರಸಾದ್ ಔಟಾಗದೇ 46, ರಚಿತಾ ಹತ್ವಾರ್ ಔಟಾಗದೇ 37)

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ: 080-45557160/ 162/ 163/ 164/ 9845114560 / 9731810277/ 9886213331

BGS Badavane

ನೆಲಮಂಗಲದಲ್ಲಿ ಮನೆ ನಿರ್ಮಾಣಕ್ಕೆ ಸೂಕ್ತವಾದ ನಿವೇಶನಗಳ ಮೇಲೆ ಹೂಡಿಕೆ ಮಾಡಿ, ಹೆಚ್ಚಿನ ಲಾಭಗಳಿಸಿ

BMRDA /NPA APPROVED

BMRDA / NPA APPROVED

ನೆಲಮಂಗಲ ಯೋಜನಾ ಪ್ರಾಧಿಕಾರದಿಂದ

ಅನುಮೋದನೆ ಆದ ಪ್ರಿಮೀಯಂ ನಿವೇಶನಗಳು

ನೆಲಮಂಗಲ

ಅರಿಶಿನ ಕುಂಟೆ, ಬಿಜಿಎಸ್ ಸ್ಕೂಲ್ ಹತ್ತಿರ

•ನೋಂದಣಿಗೆ ಸಿದ್ಧವಾಗಿದೆ •ಮನೆ ಕಟ್ಟಲು ಎಲ್ಲಾ ಸೌಲಭ್ಯ ಹೊಂದಿದೆ
•ನಿವೇಶನ ಖರೀದಿಸಲು ಬ್ಯಾಂಕಿನಿಂದ ಸಾಲ ಸೌಲಭ್ಯವಿದೆ •ಲೇಔಟ್ ಅಭಿವೃದ್ಧಿಗೊಂಡಿದೆ

ಸೌಕರ್ಯಗಳು: ಬೀದಿ ದೀಪದೊಂದಿಗೆ ವಿದ್ಯುತ್ ಕಂಬಗಳು, ಡಾಂಬರ್ ರಸ್ತೆಗಳು, ಪ್ರತ್ಯೇಕ ನೀರಿನ ಸಂಪರ್ಕ, ರಸ್ತೆ ಬದಿ ಮರಗಳು, ಒಳಚರಂಡಿ ವ್ಯವಸ್ಥೆ.

SITE MEASUREMENTS
30x40, 30x50

ಹೆಚ್ಚಿನ ವಿವರಗಳಿಗಾಗಿ ಕರೆ ಮಾಡಿ **9606 442856**

RK ENTERPRISES

The California Holiday Village

Residential

DTCP APPROVED Sites

DTCP APPROVED

E-KHATA SITES

ದೇವನಹಳ್ಳಿ

ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಿಂದ
45 ನಿಮಿಷಗಳ ಪ್ರಯಾಣ

ಈಶಾ ಫೌಂಡೇಶನ್‌ನಿಂದ ಕೇವಲ 25 ನಿಮಿಷಗಳ ಪ್ರಯಾಣ

OFFER PRICE Rs.599 per sq ft Onwards

• ಸೈಟುಗಳು ನೋಂದಣಿ ಮತ್ತು ಮನೆ ನಿರ್ಮಾಣಕ್ಕೆ ಸಿದ್ಧವಾಗಿದೆ. • 100% ಕಾನೂನಾತ್ಮಕ ದಾಖಲೆ ಪತ್ರಗಳು
• ಅಭಿವೃದ್ಧಿಪಡಿಸಿದ ಲೇಔಟ್ • ನಿವೇಶನ ಖರೀದಿಸಲು ಬ್ಯಾಂಕ್ ಸಾಲ ಸೌಲಭ್ಯವಿದೆ

ಸೌಲಭ್ಯಗಳು : •ನೀರು •ಬೀದಿ ದೀಪ •ರಸ್ತೆಗಳು •ಪಾರ್ಕ್ •ವಿದ್ಯುತ್ •ಅಂಡರ್ ಗ್ರೌಂಡ್ ವಾಟರ್ ಲೈನ್ಸ್

Site dimension: 30x40 onwards

www.rkcalifornia.com

ಸೈಟ್ ಭೇಟಿಗಾಗಿ ಕರೆ ಮಾಡಿ : **8880665577**

TOLET 1950 SQFT READY NEW OFFICE

with Luxurious Interiors Plug & Play Suitable For Office with all Infrastructures

Suitability: Perfect For Corporate Offices, Startup Offices, IT/TES, Consulting & More

*Refundable Advance 5Lakhs,
*Rent 70K + Maintenance,
*Nonrefundable Interiors Amt 25Lakh

Prime Location Opp to RR Nagar Gopalan Arcade Mall, SS Plaza 3rd Floor Close to Metro, Bus Stand.

More Details Contact: 9741433444

AVAILABLE SPACE FOR RENTAL

Office / Showroom / Godown

8000 sqft

Ground Floor & Basement in Basavanagudi

Very near to Gandhibazar, Chamarajpet, Hanumanthnagar, Mysore Road.

Contct Details:
9448059477, 9844557065

REAL ESTATE SELLING

Sites

Anjanapura

40X60 BDA-SITES For_Sale Anjanapura 8th_Block West Facing 40feet Road Excellent_Location Call:9845665618

SALE BDA 30x40 Anjanapura 5th G-block south facing 40x60 west facing commercial site 2nd block. 9620041313, 9945373839

Airport Road

"SALE SITE 40x60 BIAAPA_approved before International_Airport close to Defence & Aero park Rs.5900/_Sft. 9845286505"

Banashankari

BANASHANKARI 6TH Stage, 9th Block, 50x80, East opposite to School Rs. 8500/- Sqft. Owner:- 9886052148.

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

BANASHANKARI 3RD-STAGE Sale_40x60 Prime Residential Site Livable Duplex-House Near_Water_Tank Rs.30K Per Sft Negotiable SHIVU: 9880004149.

AVAILABLE 40X60 West Facing Site Sale, 10th Block, 40 Feet Road. Contact: DEVARAJ. 9993959099, 9799099699.

SALE BSK 6th stage 4th B block 40x60 west facing 2Cr also 40x60 south facing 6th block 2.10Cr, owners 9945373839, 9620041313

AVAILABLE 30X40 North Facing Site Sale, 10th Block, 100 Feet Road Near, Contact: DEVARAJ 9993959099, 9799099699.

BTM Layout

SITE FOR sale 30×40,40×60 East and North Facing For sale BTM 2nd Stage Contact:9945377119 /9844099557

Bannerghatta Road

AKSHAYANAGARA 3562 SQFT A KATHA 11000/- NANDANAVANA 30x40, 40x60 3500/- NISARGA LAYOUT 50x80 5000/- 9449655947

Hennur

KANAKASHREE LAYOUT BDA Approved site 40x60 Corner 50 feet Road and 40feet Road Rs:15500/= Call:7349322223

Hoskote

"CONTACT FOR Selling/ Buying BMRDA Approved Sites Near Hoskote, Malur, ChikkaTirupathi Surroundings Areas. Call: 9845178335"

J P Nagar

4TH PHASE Dollers Colony 50X80 East Facing Excellent Location, Price 32000/- sft Settler: 9880225333/ 9845035333

Kempegowda Layout

NADAPRABHU KEMPEGOWDA LAYOUT BDA SITES SELLING/ BUYING 20x30, 30x40, 40x60, 50x80. Genuine Buyers Call: 9632146784, 9731162167.

BDA SITE 40x60 E/F BDA 40ft Road Rs 8500/- Negotiable Nada Prabhu kempegowda Layout Near Metro Station 6366711598

AVAILABLE FOR RENT

On St. Marks Road (MANANDI PLAZA), 3000 sq.ft Fully furnished Brand New office space with 60 to 70 workstations, Cabins, Lounge Area, Terrace Cafeteria. Immediate occupation Contact Owner 98450 48332

CONSTRUCTION MATERIALS FOR SALE

Large quantity of used construction materials in good conditions. Such as Shuttering Plate, Jacks, Spans, Cuplock scafolding & Machinery such as 1Bag, 2, 3&4 Bag Mixers, and Tractor Mounted 16 KVA D.G, Material hoist Electrical & Diesal 30 & 40 mts height, Cutting & Bar Bending Mechines (Electrical) for sale.

Contact: 6360605636 / 8431164733

KEMPEGOWDA LAYOUT, Commercial/ Residential BDA Site for Sale 20x30, 30x40, 40x60, 50x80. Contact Kumar 9945119449

Nagarabhavi

"NAGARBHAVI/ VISHVESHWARAIAH / KEMPEGOWDA LAYOUT 30x40,40x60 OR ANY MEASUREMENT SITES REQUIRED`& AVAILABLE PREFERABLY OWNER/`ALLOTTE SITES. 9845268611"

"MPM 40X60, Vishveshwaraiah 6th 50X80 80'feet Road, Railway 2nd Stage 40x60 East. 9448733456/ 7259675150"

BDA SITE 40X60 FOR SALE in Nagarbhavi, 10th Block 3rd cross South face Site no: 63 Contact: Muthu:- 9880780002

Nelamangala

SITE FOR_SALE 70x40 measuring East facing corner_site at M.S.Ramaiah Green City at Nelamangala, Near Railway Station. Contact: 9611946333

Vijayanagar

SITE FOR SALE: 60X90 WEST FACING WOC ROAD RPC LAYOUT ONLY GENUINE BUYERS: 6363250343/ 9845038343

BALDWIN BOYS' HIGH SCHOOL

145 GLORIOUS YEARS (1880 - 2025)

ESTD - 1880

[A Unit of Baldwin Methodist Educational Society]
Affiliated to CISCE (KA002)

Shaping Children & Building Futures

SCAN FOR WEBSITE   SCAN FOR FORM

ADMISSIONS OPEN FOR AY 2026-27

8147883880 / 8147923880
080 - 49363866

Core Strength

- Heritage of 145 years of Excellence
- Qualified and dedicated teachers
- Student - Centered learning approach
- Safe and secure campus
- Modern Infrastructure
- NCC
- Scouts and Guides
- Olympiad
- Robotics & Language Lab
- Swimming Pool
- Co-Curricular Activities
- Boarding Facility
- Transportation Services

admission@baldwinboyshighschool.edu.in

#14,Hosur Road, Richmond Town, Bengaluru - 560 025.

ಪ್ರಜಾವಾಣಿ
ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

REAL ESTATE SELLING

Sites

Vijayanagar

VIJAYNAGAR 40X60 West, 30x51 South, 35x51 North, 35x51 South, Vijaynagar Extn 30x40 House Duplex. 9448411596.

Vishweshwariah Layout

BUYING/ SELLING 20x30, 30x40, 40x60, 50x80 BDA Sites VISHVESHWARAIAH LAYOUT, KEMPEGOWDA LAYOUT, Contact: 9035470616

BDA SITE SALE VISHWESHWARAIAH LAYOUT 2ND BLOCK 40X60 NORTH FACE NEAR 100FT ROAD GOOD LOCATION CONTACT: 8892901567

"VISVESHWARAIAH 1ST BLOCK 30x40 West facing Good location, opposite park, Genuine buyers only Contact: 9916140866"

BDA SITE SALE VISHWESHWARAIAH LAYOUT 6TH BLOCK 30X40 WEST NEAR OXFORD COLLEGE 40X60 NEAR KLE COLLEGE: 8892901567

DIRECT OWNER 40x60 N/F VISHVESHWARAIAH LAYOUT 2nd Block, close to 100ft Road. Contact: 9742681666, 9886634578

BDA SITE Sale 30x40 South Facing Rs 2Cr Negotiable Vishweshwaraiah Layout 8th Block Contact: 9611577666

"VISVESHWARAIAH LAYOUT 1st Block 40x60 East facing site for sale. "Anugraha"- 9886294610 (Brokers Excuse)"

30X40 E/F BDA Site Sale 40ft Road 6th Block Vishweshwaraiah Layout direct Owner meeting KLE Law College opp 100ft Road Back Side Contact Balaji: 8310003509

PRM/KA/RERA/1251/310/PR/150223/005721
DS-MAX SAMYAK
SUPER LUXURIOUS
2 & 3-BHK APARTMENTS
DS MAX
MYSORE RD.
NEAR CHALLAGHATTA METRO
2-BHK HOMES STARTS @
₹ 62 L*
BDA APPROVED | G+14 FLOORS
*T & C Apply

CREDAI BENGALURU
8880 003 003
www.dsmaxproperties.com

'DIRECT OWNER' 20x30 N/F Vishveswaraiah Layout 2nd Block, Near Kommagatta, Full Developed Area: 8496030007/ 8310885235

BDA 40X60 Site E/F Vishweshwaraiah Layout 40ft Road Near KLE Law College Brokers Excuse: 9980409820

BDA SITE for Sale 30×40 East facing Builder Location Vishweshwaraiah Layout Near BDA Complex & 100 ft Ring Road Rs.13,500/- negotiable Contact: 8970306030

Vidyaranyapura

INDEPENDENT 60'X40' BEL 2 Block Prime Location (Ready to move 4 BHK) 16000/- S/F: 9844264852

SALE SITE 1200 SQFT RS 8000 PSQFT EAST FACING CLEAR TITLES VACANT POSITION CALL 9035883017

Yelahanka

SITE FOR SALE 30X40 East Facing Site for Sale at BDA approved layout BDA 'A' Khatha at Yelahanka. Price 13,500 per sft, negotiable. Genuine buyers can contact 9611946333

House

Jayanagar

SALE 40X60 Jayanagar 5th Block With 3BHK Ground Floor & 3BHK 1st Floor Excellent Location Ct: 9844134068

J P Nagar

J.P.NAGAR 3RD, near Mini_Forest, Jayadev Metro, 60' Road, suitable Residential/ Semi-commercial, 45x75, 10,50,00000/- 9739995042

J.P.NAGAR_7TH, BOB Layout_Near Brigade Millenium 40x56`East, 3 BHK Duplex & 4`Units 1 BHK_house, 4,50,00000/- 9739995042

Nagarabhavi

NAGARABHAVI RENT Independent Triplex 4BHK Luxurious House Lift. 4-Car-Parks Borewell Master Bedrooms 1.1 Lakhs: 9036207777

600 SQFT G+3 floors (1 BHK 5 Houses, 2BHK 1 House) SVG Nagara, Moodalapalya, Nagarabhavi, @99Lakhs Owner 9740073482

HOUSE FOR sale 30X45 at RHCS Layout Nagarbhavi Rate 1.95 CR Contact: 9108133156/ 9845896099

Vidyaranyapura

4-STORY HOUSE FOR SALE in Ramchandrapura, Jalahalli (Post) Bangalore 13. Size: 20X30. Built area 2700 Sqft: 1,75,00,000/- 9880450523.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

Bannerghatta Road

BANNERGHATTA ROAD, Kodichikkana Halli, Abbiyappa Layout 20x34, East, A/E-Katha, unfinished 2 unit House 1,40,00,000/- 9739995042

Flat

Banashankari

READY to OCCUPY

RERA No : PRM/KA/RERA/ 1251/310/PR/220722/005096
MARS PLANET 2, 2.5, 3 BHK Flats Located @ BSK 3rd Stage, opp to Tata Promont, 8792155802, 9972399993 & 9880625336

Kanakapura Road

HIGH RENTAL INCOME PROPERTIES FOR SALE NEAR METRO STATIONS ON KANAKAPURA ROAD. SARAKKI HOMES: 9663676464

Nagarabhavi

FLATS FOR-SALE @ Nagarabhavi Chandra Layout 2 & 3BHK Ready to Move In Good Location Call:9538472420 9845066608

Agricultural Land

Kanakapura Road

AGRICULTURE LAND and Industrial Land for SALE, Kanakapura and Harohalli, Sathanuru, Halaguru, Near. Call: 9741785136.

Agricultural Land Converted

Kengeri

FOR SALE- Converted Betterment Paid Land extent 35000 sqft A Khata. E Khata available. Opp to Kengeri Satellite Bus Stop Rs. 12000 per sqft. Brokers Excuse. Contact: 9880459141.

Commerical

Koramangala

OFFICE SPACE AVAILABLE for SALE at.No.U0227, 2nd`Floor Raheja Arcade, No.1/1.Koramangala Industrial Layout, Bangalore 560034 Measuring 595.Sqft. Super Builtup`area. For More Details Contact: Tushar Shand, 9342209497 9379075401.

M G Road And Around

OFFICE SPACE AVAILABLE for SALE at.No.303, 3rd`Floor Infantry Court, Infantry Road Bangalore 560001 Measuring 597.Sqft. Super Builtup`area with Furnished.For more,`details Contact: Deshana Finlease Services Ltd. 9342209497 9379075401.

3 BHK LUXURY FLATS FOR SALE
DREAMVILLE HOME

Amenities
GYM
Waking Track
Club House
Library
Kids Play area
Party Hall
SBI
ICICI Bank
AXIS BANK
HDFC BANK
BBMP APPROVED
RERA APPROVED
PRM/KA/ RERA/1251/446/PR/220622/005013
8073977742 / 9901834205
promaxdreamvillehome.com
Kothanur, Hennur Main Road Bangalore. 77

DH DECCAN HERALD
Classifieds
More value, more impact
ಪ್ರಜಾವಾಣಿ
REAL ESTATE
BOOK YOUR REAL ESTATE ADS IN
DH ALL KARNATAKA +
PRAJAVANI BENGALURU CITY
ON SATURDAY + SUNDAY
@ 2481/-*
FOR 15 WORDS

www.dhclassifieds.com
BOOK NOW
Book your ad with us now! For more details contact:
+91 9845114560 | +91 9886213331
+91 9731810277 | +91 9900428036 | 080-45557163/164
*Conditions apply

DH DECCAN HERALD
Classifieds
More value, more impact
ಪ್ರಜಾವಾಣಿ
EDUCATION

Book your Educational Related Ads in DH All Karnataka + Prajavani Bengaluru City
www.dhclassifieds.com
BOOK NOW
For more details contact:
9731810277 | 9886213331
9845114560 | 9900428036
080- 45557163/164
*Conditions apply

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331

ಪ್ರತಿಯೊಬ್ಬರಿಗೂ ಉಪಯುಕ್ತ

ಪ್ರಜಾವಾಣಿ
ಕ್ಲಾಸಿಫೈಡ್ಸ್

REAL ESTATE SELLING

AVAILABLE SITES in 100 Feet Road Banashankari 6th Stage 4th and 7th Block for Rent. Call 9880022644

Industrial & Factory

Industrial And Factory

Mysore Road

SALE 112 Acres Land Commercial, Residencial, Yellow Zone, Bidadi Mysore Express Highway Facing. 9141326819, 9972636255

FOR RENT OR BUILD TO SUIT 35000SQFT VACANT INDUSTRIAL CONVERTED LAND FACING BANGALORE MYSORE ROAD, RAMANAGARA TOWN 7019708767 / 9844125465

REAL ESTATE BUYING

Godown

GODOWN SPACE 1200 sqft, AVAILABLE for RENT, 4th Main, New Tharagupet, Prakash Cafe. BENGALURU. 9590223223

Sites

Banashankari

BDA SITES WANTED ARKAVATHY ANJANAPURA BANASHANKARI 6TH STAGE VISHWESHWARAIAH KEMPEGOWDA ANY BDA LAYOUT: 9845062822/ 8660751654

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th- stage. Contact: 9844533371/ 9341733480

West

PROPERTY WANTED
Wanted 3,000 to 5,000 Sqft of Land / Site / Shed / Building around West of Chord Road, Rajajinagar, Vijaynagar - BANGALORE
Owners please contact
S.S.K CO-OPERATIVE SOCIETY LIMITED
No. 43, G.K. Temple Street, Chickpet Cross, Bangalore 560 053
080-41222054 / 9481691699

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Commercial

COLES ROAD 633 sqft, Residency Road 425 sqft, both fully furnished offices available for rent Contact 8880762016, 9036112458

ST.FRANCIS COLLEGE | BENGALURU
Accredited 'B++' Grade by NAAC | Affiliated to Bengaluru City University
P.B.No. 3417, 3rd Block, 8th Main, Koramangala, Bengaluru-560034.
Tel: 080-25531037/38, Cell Ph: 9481857854 / 9449260409
Website: www.stfranciscollege.edu.in
FACULTY RECRUITMENT
Applications are invited for the post of **Associate / Assistant Professors** in the following Departments.

Management & Commerce	Computer Science
Qualification & Specialization	
M.B.A. / M.Com, Specialization in Finance and Analytics	M.C.A / M.Sc. (Preference for AI & ML specialization)

Eligibility and Experience
NET/SLET/Ph.D with minimum of 55% marks is required at PG level, and Above 3 Years of experience.
Job Location : Koramangala, Bengaluru
Interested and Eligible Candidates may send their resume along with recent passport size photograph, copies of qualification and experience certificate to the
Email-ID:
admin@stfranciscollege.edu.in / director@stfranciscollege.edu.in
by mentioning the post and department applying for in the subject line within 10 days.

JOB OPPORTUNITIES

Accounts & Finance

JOB VACANCY
CHIEF ACCOUNTS OFFICER / ACCOUNTS ASSISTANT
For A Corporate Office At Baiyappanahalli. Required Qualified Candidate With Knowledge Of Tally (latest Version) Gst, Excel, Ms.Word And Good Command Over English And Computer Knowledge Preferred Healthy Retired Person.
LAB ASSISTANT
Qualification, B.sc. (chemistry) For A Reputed Steel Industry At Jigani
Send Cv To Mail Id:
rcdv1968@gmail.com
srikumardv@gmail.com

WANTED HIGHLY Qualified Graduate ACCOUNTANT with morethan 10 years of Experience and Graduate ACCOUNTS ASSISTANT for a Reputed Construction Company who can handle Company Accounts Independently. Age lessthan 45 years. Interested candidates forward resume to: enquiries@farahgroup.in.

WANTED ACCOUNTS Officer for a Private Limited Company in Prakash Nagar, Bangalore: 9448481947/ 9448376584: magraa@magraa.in

General

WANTED OFFICE Assistant with two wheeler. Attractive salary will be given based on candidate experience. Contact: 8431046669/ 7090256266

Teachers/ Professors

VELAMMAL NEXUS
WALK IN INTERVIEW
on 06th December 2025
between 10.00 am & 3.00 pm
CAREER OPPORTUNITIES FOR TEACHING & NON - TEACHING
We invite highly qualified, dynamic and passionate educators and staff for our new CBSE schools commencing from Academic year 2026-27.
KINDERGARTEN - KGT (PRE-KG to UKG)
Montessori Certified Minimum of 2 to 5 years of experience
PRIMARY - PRT (CLASSES I to V)
Graduate with B.Ed, Minimum of 2 to 5 years of experience
MIDDLE SCHOOL - SGT (CLASSES VI & VII)
Graduate with B.Ed, Minimum of 2 to 5 years of experience
ENGLISH | KANNADA | HINDI
MATHS | PHYSICS | CHEMISTRY
BIOLOGY | HISTORY & GEOGRAPHY
COMPUTER SCIENCE | LIBRARIAN
PET | MUSIC | DANCE
NON TEACHING POSITIONS
PRO | STAFF NURSE | OFFICE ASSISTANT
COMPUTER OPERATOR
LAB ASSISTANT | SECURITY GUARD
DRIVERS & CONDUCTORS
VENUE
VELAMMAL VIDYALAYA
No. 78/1 Singanayakanahalli, Yelahanka Hobli, Bengaluru 560 064.
hr@velammalnexus.com
FOR MORE DETAILS
89259 93076

ST JOSEPH'S BOYS' HIGH SCHOOL
Museum Road, Bengaluru
Teachers wanted for the Academic Year 2026-27 for the following sections:
ISC (PG with B Ed)
ICSE (PG/UG with B Ed)
For all Subjects
Primary (UG with D Ed/ B Ed)
Pre-Primary (UG with ECCE or PPTT)
Please send an email with your latest CV and a recent photograph mentioning the post applied for in the subject line. Also, submit a hard copy of your resume to the school office by the **05th of December 2025.**
#27, Museum Road, Bengaluru-560025
Ph: 080 - 22214416/ 8884200548 / 9
Email: recruitment@sjbhs.edu.in /
Website: www.sjbhs.edu.in

WANTED HEAD Mistress, Lower Primary Teachers, PT, Clerk. Primary, High School. J.P.Nagar. Bangalore- 9845042249, 9008142495.

Engg/ Production Technical

POWERCARE SOLUTIONS PVT.LTD., (Manufacturer of Diesel Generator) URGENTLY REQUIRE: For INDIA/ABROAD, BDM, AREA SALES MANAGER, (Experience: Min 3-yrs. Salary-30K+Incentive) WANTED:Fresh/Exp- ITI/DIPLOMA/ENGG (MECH,EEE). CALL:8056128081, 8925889596, 7871932890.

Drivers

EXPERIENCED PERSONAL DRIVER for SUV, Sedan car, disciplined, familiar with Bangalore roads for East Bangalore- 560037. 9036051188.

AUTOMOTIVE

Four Wheelers Buying

Others

WANTED SPARINGLY used reasonably priced, small/ mid size manual/ automatic Electric car. Contact: 9620901776/ 9620204637.

BUSINESS

Business to Business

Finance

WE ARRANGE LOANS for Mortgage of Site, Buildings, Construction, Completion, Takeover of Loans in Co-op Banks and NBFC. Contact: 9353705002.

ALL LOANS AVAILABLE @4% YEARLY INTEREST PERSONAL BUSINESS PROJECT TAKEOVER MORTGAGE MINIMUM DOCUMENTATION QUICK DISBURSEMENT MAHALAKSHMI FINANCE 9984823862

Business Offers

Business For Sale

SALE. NEAR Bangalore. Ayurveda college and Hospital with International Wellness Centre and Panchakarma, Rejuvenation and Herbal_Garden with Research institute. Arun 9845077299.

Machinery & Tools

WANTED GENERATORS, 3 Phase, 1250 KVA, 1000 KVA, 650 KVA. Diesel Generator. Contact: 9567242270

PUBLIC NOTICE

manipalhospitals
NOTICE
Medical Records of Patients from July 2017 to December 2020 will be disposed on 01-01-2026. Patients interested in collecting the medical records for the same period should personally visit the Hospital with identity proof between 9am to 4pm on working days before 30/12/2025 for further guidance.
Sd/- Abdul Hafeez
Hospital Director
Manipal Northside Hospital
#71, 11th Main, Opp Malleshwaram Railway Station Malleshwaram, Bengaluru 560003
Ph: 080-49007084

MATRIMONIAL

Brides Wanted

Brahmin

WELL SETTLED Iyengar groom 45 yrs, divorced, working in Bangalore seeks compatible match from any Brahmins. Please contact Prof Acharya 9019912991

Hindu

BRIDE WANTED
31 years, Ht- 5.4 ft, Advocate. Has own practice in Bangalore. Cosmopolitan outlook, born and brought up in Bangalore by single mom and grandparents. Looking for simple, educated working woman (28-33 years) who appreciates family and relationships. Community/caste/family status no bar.
Please send your interest Mail Id :
aroona.204@gmail.com

Grooms Wanted

Brahmin

SEEKING WELL educated Brahmin groom in early 30's for daughter, 163 cms, PostGraduate, fair, with strong family values. DOB:15/06/1994 Star: Maka, Rashi: Simha, Father Hebbar Iyengar Brahmin, Surgeon, Mother Bengali Brahmin. Please respond at 9868155505.

PERSONAL

Change of Name

CHANGE OF NAME
I, **RAFEEQ PASHA SABHULAL,** S/o Sabhulal, residing at #24, 8th Cross, Masjid-e-Ali Road, Rachenahalli, Shivarama Karanth Nagar, Bengaluru - 560077 have changed my name to **RAFEEQ PASHA** vide affidavit dated: 28-11-2025 before notary L.Gopalakrishna, Bengaluru. Henceforth, I shall be called as **RAFEEQ PASHA** only.

I, NIRARAMBHAM SREENIVASA RAO CHANDRASEKHAR S/o.Sreenivasa Rao R/a#31 Flat.No.001 Ground Floor, Mysore`Bank Colony, BSK,1st`Stage Bengaluru 560050 have`changed my`Name to NEERARAMBHAM SREENIVASA RAO CHANDRASEKHAR vide`affidavit dated: 28.11.2025 before`Notary B.Gopalakrishna Bangalore.

CHANGE OF NAME
I, **Seema C Joshi,** residing at No.21/1, GF3 R.K. Garden, 7th Main, B.S.K. 3rd Stage, Bengaluru-560085, have changed my name to **SEEMA G BIJAPUR** vide affidavit dated 23.10.2025 before notary G. Dayananda, Bengaluru. Henceforth I shall be called **SEEMA G BIJAPUR** only

I, MANJUNATH Bodanahosahalli Shivanna S/o Shivanna, aged about 40 years, residing at #95, Bodanahosahalli, near Anjaneya Temple.Bodanahosahalli,Samethnanahalli Village and Post, Bangalore 560067. Have Changed my name to Manjunatha B S vide affidavit dated 28.11.2025 before Notary Veena J Bangalore. Henceforth I shall be called as Manjunatha B S only.

CHANGE OF NAME
I, **Ravi Prakash Bharathi,** residing at No. 206, 2nd Floor, Rajarajeshwari Citadel, Pattanagere, Near Govt School, Rajarajeshwarinagar, Bengaluru-560098, have changed my name to **R BHARATHI** vide affidavit dated 17.11.2025 before notary K.V. Prema Kumari, Bengaluru.

DH | ಪ್ರಜಾವಾಣಿ
https://dhclassifieds.com
Book your Ad in 4 Easy Steps --Select Category-- Book ad
1 Select Category 2 Publication & Date 3 Compose Your Ad 4 Payment

ಖರೀದಿಸಿ ಅಥವಾ ಮಾರಾಟ ಮಾಡಿ
ಯಾವುದೇ ಸಮಯದಲ್ಲಿ, ಯಾವುದೇ ಸ್ಥಳದಿಂದ ಕೇವಲ ನಾಲ್ಕೇ ಕ್ಲಿಕ್ ಗಳಲ್ಲಿ
ಸುಲಭವಾಗಿ ಖರೀದಿಸಿ, ಮಾರಾಟ ಮಾಡಿ ಅಥವಾ ಉದ್ಯೋಗ ನೇಮಕಾತಿ ಮಾಡಿಕೊಳ್ಳಿ! ಯಾವುದೇ ಸೇವೆ ಪಡೆಯಬೇಕೆ, ವಸ್ತು ಖರೀದಿಸಬೇಕೆ, ಆಸ್ತಿ ಮಾರಾಟ ಮಾಡಬೇಕೆ ಅಥವಾ ಸೂಕ್ತ ಅಭ್ಯರ್ಥಿಗಳೊಂದಿಗೆ ಸಂಪರ್ಕ ಸಾಧಿಸಬೇಕೆ?
ಕರ್ನಾಟಕದ ಅತ್ಯಂತ ವಿಶ್ವಾಸಾರ್ಹ ದಿನಪತ್ರಿಕೆಗಳಾದ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿಯಲ್ಲಿ ವರ್ಗೀಕೃತ ಜಾಹೀರಾತು ನೀಡುವ ಮೂಲಕ ಖರೀದಿದಾರರು, ಸೇವೆಗಳು ಅಥವಾ ಪ್ರತಿಭಾವಂತರೊಂದಿಗೆ ಸುಲಲಿತವಾಗಿ ಸಂಪರ್ಕ ಹೊಂದಿರಿ. ರಾಜ್ಯದಾದ್ಯಂತ ಸೂಕ್ತರಾದವರೊಂದಿಗೆ ಸಂಪರ್ಕ ಸಾಧಿಸಲು ಸಮರ್ಥ ವೇದಿಕೆ ಡೆಕ್ಕನ್ ಹೆರಾಲ್ಡ್ & ಪ್ರಜಾವಾಣಿ ವರ್ಗೀಕೃತ ಜಾಹೀರಾತು!
• ತಕ್ಷಣವೇ ಜಾಹೀರಾತು ಪ್ರಕಟಣೆ ಹಾಗೂ ಸರಾಗ ಬ್ರೌಸಿಂಗ್
• ಯಾವುದೇ ಸ್ಥಳದಿಂದ ಯಾವುದೇ ಸಮಯದಲ್ಲಿ ಖರೀದಿ ಹಾಗೂ ಮಾರಾಟ
• ಸರಳ, ಸುರಕ್ಷಿತ ಹಾಗೂ ಸುಗಮ ಪ್ರಕ್ರಿಯೆ
• ಕರ್ನಾಟಕದಾದ್ಯಂತ ಸೂಕ್ತರಾದವರನ್ನು ತಲುಪಿ
ಈಗ ಬುಕ್ ಮಾಡಿ. ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ ಹಾಗೂ ಅತ್ಯುತ್ತಮ ವ್ಯವಹಾರವನ್ನು ಇಂದೇ ನಿಮ್ಮದಾಗಿಸಿಕೊಳ್ಳಿ!
COLLATERAL

DH Classifieds More value, more impact
ಪ್ರಜಾವಾಣಿ
PUBLIC NOTICE
BOOK YOUR PUBLIC NOTICE ADS IN DH ALL + PRAJAVANI BENGALURU CITY, ON ALL DAYS

www.dhclassifieds.com
@550/-* PER SQCM
BOOK NOW
For more details contact:
+91 9886213331 | +91 9731810277
+91 9845114560 | +91 9900428036
080- 45557163 /164
*Conditions apply

DH Classifieds More value, more impact
ಪ್ರಜಾವಾಣಿ
RECRUITMENT
BOOK YOUR JOB ADS IN DH ALL KARNATAKA + PRAJAVANI BENGALURU CITY ON WEDNESDAY + SUNDAY
@ 825/-* PER SQCM

SINGLE / DOUBLE / MULTIPLE COLUMN
www.dhclassifieds.com
BOOK NOW
For more details contact:
+91 9845114560 | +91 9900428036
+91 9731810277 | +91 9886213331
080- 45557163/164
* Conditions apply

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080-45557160/ 162/ 163/ 164/
9845114560 / 9731810277/ 9886213331